بِسۡمِ اللّٰہِ الرَّحۡمٰنِ الرَّحِیۡمِ نَحۡمَدُہٗ وَنُصَلِّیۡ عَلٰی رَسُوۡلِہِ الۡکَرِیۡمِ وَعَلٰی عَبۡدِہِ الۡمَسِیۡحِ الۡمَوۡعُوۡد


ದೇವನ ಅಸ್ತಿತ್ವ

وَلَقَدۡ نَصَرَکُمُ اللّٰہُ بِبَدۡرٍ وَّاَنۡتُمۡ اَذِلَّۃٌ

ವರ್ಷ: 01

ವಾರ್ಷಿಕ ಶುಲ್ಕ: ರೂ.500/-


# ಕನ್ನಡ ಬದರ್ ವಾರ ಪತ್ರಿಕೆ

Weekly **BADAR** Qadian KANNADA

ಸಂಚಿಕೆ: 50-51


ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

**Postal Reg. No: 3000039689/2020-22** 24-31 ಡಿಸೆಂಬರ್ 2020, 24-31 ಫತಹ್ 1399 ಹಿಜರಿ ಶಮ್ಸಿ, 08-15 ಜಮಾದಿಉಲ್ ಅವ್ವಲ್ 1442 ಹಿಜರಿ ಖಮರಿ.

قُلِ ادۡعُوا اللّٰہَ اَوِ ادۡعُوا الرَّحۡمٰنَ ؕ اَیًّا مَّا تَدۡعُوۡا فَلَہُ الۡاَسۡمَآءُ الۡحُسۡنٰی (الاسراء:111)

'ನೀವು ಅಲ್ಲಾಹ್ ಎಂದು ಕರೆಯಿರಿ ಅಥವಾ ರಹ್ಮಾನ್ ಎಂದು ಕರೆಯಿರಿ. ನೀವು ಯಾವ ಹೆಸರಿನಿಂದ ಕರೆದರೂ ಅತ್ಯುತ್ತಮವಾದ ನಾಮಗಳು ಅವನಿಗಿವೆ.'






ದಿನಾಂಕ 09–08–2020ರಂದು ಆಯೋಜಿಸಲಾದ ಜಲ್ಸ ಸಾಲಾನ ಬ್ರಿಟನ್ ಸಂದರ್ಭದಲ್ಲಿ ಹುಝೂರ್(ಅತಬಅ)ರವರು
ವೇದಿಕೆ ಮೇಲೆ ಆಸೀನರಾಗಿರುವುದು ಹಾಗೂ ದುಆ ನಿರ್ವಹಿಸುತ್ತಿರುವುದು



ದಿನಾಂಕ 09–08–2020ರಂದು ಆಯೋಜಿಸಲಾದ ಜಲ್ಸ ಸಾಲಾನ ಬ್ರಿಟನ್ ಸಂದರ್ಭದಲ್ಲಿ ಹುಝೂರ್(ಅತಬಅ)ರವರ ಸಂಬೋಧನೆ



ದಿನಾಂಕ 15–12–2020ರಂದು ಲಂಡನ್‌ನ ಜಾಮಿಅ ಅಹ್ಮದಿಯಾದ
ವಿದ್ಯಾರ್ಥಿಗಳೊಂದಿಗೆ ಹುಝೂರ್(ಅತಬಅ)ರವರ ವಿಶೇಶ ಸಭೆ



ದಿನಾಂಕ 31–10–2020ರಂದು ಇಂಡೋನೇಶಿಯದ ಜಾಮಿಅ ಅಹ್ಮದಿಯಾದ
ವಿದ್ಯಾರ್ಥಿಗಳೊಂದಿಗೆ ಹುಝೂರ್(ಅತಬಅ)ರವರ ಆನ್‌ಲೈನ್ ಕ್ಲಾಸ್



ದಿನಾಂಕ 12–09–2020ರಂದು ಆಸ್ಟ್ರೇಲಿಯಾದ ಮಜ್‌ಲಿಸ್ ಆಮಿಲ ಸದಸ್ಯರು ಹಾಗೂ
ಖುದ್ದಾಮುಲ್ ಅಹ್ಮದಿಯದ ಖಾಯಿದ್‌ಗಳೊಂದಿಗೆ ಹುಝೂರ್(ಅತಬಅ)ರವರ ಆನ್‌ಲೈನ್ ಮೀಟಿಂಗ್



ದಿನಾಂಕ 25–10–2020ರಂದು ಮುರಬ್ಬಿ, ರಾಷ್ಟ್ರೀಯ ಸಮಿತಿ ಸದಸ್ಯರು ಹಾಗೂ
ಉಪವಿಭಾಗಗಳ ಸದಸ್ಯರೊಂದಿಗೆ ಹುಝೂರ್(ಅತಬಅ)ರವರ ಆನ್‌ಲೈನ್ ಮೀಟಿಂಗ್

بسم الله الرحمن الرحيم
نحمده و نصلي على رسوله الكريم
وعلى عبده المسيح الموعود
خدا کے فضل اور رحم کے ساتھ
ھو الناصر

اسلام آباد ٹلفورڈ
MA 30-11-2020

**ಇಂದಿನ ಲೋಕವು ಭೌತಿಕತೆಗೆ ಮನಸೋತಿದೆ. ಧರ್ಮದಿಂದ ದೂರವಾಗಿ ತನ್ನ ಸೃಷ್ಟಿಕರ್ತನನ್ನು ಮರೆತುಬಿಟ್ಟಿದೆ. ಇಂತಹ ಪರಿಸ್ಥಿತಿಗಳಲ್ಲಿ ಪ್ರತಿಯೊಬ್ಬ ಅಹ್ಮದಿಯ ಕರ್ತವ್ಯವಾಗಿದೆ- ದೇವಾಸ್ತಿತ್ವದ ಸಾಕ್ಷಿಗಳನ್ನು ಅರಿತುಕೊಳ್ಳಬೇಕು. ದೇವಸಂಬಂಧದಲ್ಲಿ ಪ್ರಗತಿ ಸಾಧಿಸಬೇಕು ಮತ್ತು ಇಡೀ ಲೋಕವನ್ನು ಈ ಜೀವಂತ ವಾಸ್ತವದ ಅರಿವನ್ನು ಮೂಡಿಸಬೇಕು. ಅಲ್ಲಾಹನು ಆ ಭಾಗ್ಯ ನಿಮಗೆ ಕರುಣಿಸಲಿ. ಆಮೀನ್**

## ಬದರ್ ಓದುಗರಿಗೆ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಅ) ರವರ ಪ್ರೀತಿಯಿಂದ ತುಂಬಿರುವ ಸಂದೇಶ

ಪ್ರೀತಿಯ ಓದುಗರೇ!

**ಅಸ್ಸಲಾಮು ಅಲೈಕುಮ್ ವ ರಹ್ಮತುಲ್ಲಾಹಿ ವಬರಕಾತಹು**

ಬದರ್ ವಾರಪತ್ರಿಕೆಯು "ದೇವ ಅಸ್ತಿತ್ವ" ಶೀರ್ಷಿಕೆ ಅಡಿಯಲ್ಲಿ ಒಂದು ವಿಶೇಷಾಂಕವನ್ನು ಪ್ರಕಟಪಡಿಸುತ್ತಿರುವ ಭಾಗ್ಯ ಪಡೆಯುತ್ತಿದೆ ಎಂಬ ಸುದ್ಧಿ ಕೇಳಿ ನನಗೆ ಬಹಳ ಸಂತೋಷವಾಯಿತು. ಅಲ್ಲಾಹನು ಅದನ್ನು ಎಲ್ಲಾ ರೀತಿಯಿಂದಲೂ ಅನುಗ್ರಹಪೂರ್ಣಗೊಳಿಸಲಿ. ಆಮೀನ್

ಈ ಸಂದರ್ಭದಲ್ಲಿ ನನ್ನಿಂದ ಒಂದು ಸಂದೇಶವನ್ನು ಕಳುಹಿಸಲು ಕೋರಲಾಗಿದೆ. ನನ್ನ ಸಂದೇಶವೇನೆಂದರೆ ನಾವು ತುಂಬ ಭಾಗ್ಯಶಾಲಿಗಳಾಗಿದ್ದೇವೆ ಏಕೆಂದರೆ ಅಲ್ಲಾಹನು ನಮಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರನ್ನು ನಂಬುವ ಭಾಗ್ಯ ದಯಪಾಲಿಸಿದ್ದಾನೆ. ಅವರು ತನ್ನ ಗ್ರಂಥಗಳಲ್ಲಿ ಅಲ್ಲಾಹನ ಕಡೆಯಿಂದ ಅವರ ಪರವಾನಗಿ ಗೋಚರಿಸಿದ ದೃಷ್ಟಾಂತಗಳು ಮತ್ತು ಸಾಕ್ಷ್ಯಗಳ ಜೊತೆ ಜೊತೆಯಲ್ಲಿ ದೇವ ಅಸ್ತಿತ್ವವನ್ನು ಸಾಬೀತುಗೊಳಿಸಿದ್ದಾರೆ.

ಅವರು ತಮ್ಮ ಗ್ರಂಥ "ಕಿಶ್ತಿ ಎ ನೂಹ್" ನಲ್ಲಿ ಹೀಗೆ ಹೇಳಿದ್ದಾರೆ:

"ನಮ್ಮ ದೇವನೇ ನಮ್ಮ ಸ್ವರ್ಗ. ನಮ್ಮ ಅತ್ಯುನ್ನತ ಸಂತೋಷಗಳು ನಮ್ಮ ದೇವನಲ್ಲಿವೆ. ಏಕೆಂದರೆ ನಾವು ಅವನನ್ನು ನೋಡಿರುವೆವು ಮತ್ತು ಪ್ರತಿಯೊಂದು ಸೌಂದರ್ಯವನ್ನು ನಾವು ಅವನಲ್ಲಿ ಕಂಡಿರುವೆವು. ಜೀವವನ್ನು ಬಲಿಯರ್ಪಿಸುವುದರಿಂದ (ದೇವನೆಂಬ) ಈ ಸಂಪತ್ತು ಸಿಗಬಹುದಾದರೆ ಹಾಗೆ ಪಡೆಯಲು ಅದು (ಆ ಸಂಪತ್ತು) ಅರ್ಹವಾಗಿದೆ. ಒಬ್ಬನು ತನ್ನ ಅಸ್ತಿತ್ವವನ್ನೇ ಕಳೆದುಕೊಳ್ಳುವುದರಿಂದ ಪಡೆಯಬಹುದಾಗಿದ್ದರೆ ಹಾಗೆ ಖರೀದಿಸಲು ಯೋಗ್ಯವಾದ ಮಾಣಿಕ್ಯ ಇದಾಗಿದೆ. ಎಲೈ ಭಾಗ್ಯಹೀನರೇ, ನೀವು ಈ ಕಾರಂಜಿಯ ಕಡೆಗೆ ಓಡಿ ಬನ್ನಿರಿ. ಇದು ನಿಮ್ಮ ಬಾಯಾರಿಕೆಯನ್ನು ನೀಗಿಸುವುದು. ಇದು ನಿಮ್ಮನ್ನು ರಕ್ಷಿಸುವಂತಹ ಜೀವಜಲವನ್ನೀಯುವ ಕಾರಂಜಿಯಾಗಿದೆ. ನಾನೇನು ಮಾಡಲಿ? ಈ ಶುಭವಾರ್ತೆಯನ್ನು ಜನಹೃದಯಗಳಲ್ಲಿ ಹೇಗೆ ನೆಲೆವೂರುವಂತೆ ಮಾಡಲಿ? ಇವನೇ ನಿಮ್ಮ ದೇವನು ಎಂದು ಜನರು ಆಲಿಸುವಂತೆ ಮಾಡಲು ಯಾವ ಡೋಲು ಬಾರಿಸಿ ಪೇಟೆಗಳಲ್ಲಿ ಡಂಗುರ ಸಾರಲಿ? ಜನರು ಕಿವಿಗೊಟ್ಟು ಕೇಳುವಂತೆ ಮಾಡಲು ನಾನು ಯಾವ ಮದ್ದಿನಿಂದ ಚಿಕಿತ್ಸೆ ನಡೆಸಲಿ? ನೀವು ದೇವನಿಗೆ ಸೇರಿದವರಾಗುವಿರಾದರೆ, ದೇವನು ನಿಮ್ಮವನೇ ಆಗುವನು ಎಂದು ದೃಢವಾಗಿ ಅರಿತುಕೊಳ್ಳಿರಿ." (ರೂಹಾನಿ ಕಝಾಈನ್, ಸಂಪುಟ-19, ಪುಟ-21-22)

ನಮ್ಮ ಜಮಾಅತ್ತಿನ ಸಾಹಿತ್ಯದಲ್ಲಿ "ದೇವನ ಅಸ್ತಿತ್ವ"ದ ಕುರಿತು ಬೇಕಾದಷ್ಟು ವಿಷಯ ಸಂಗ್ರಹವಿದೆ. ಹಝ್ರತ್ ಮುಸ್ಲಿಹ್ ಮೌಊದ್(ರ) ಅವರ ಒಂದು ಗ್ರಂಥ "ದೇವಾಸ್ತಿತ್ವ" ಶೀರ್ಷಿಕೆಯಡಿಯಲ್ಲಿ ಪ್ರಕಟಗೊಂಡಿರುತ್ತದೆ. ಅದೇ ರೀತಿ ಅವರ ಇನ್ನೊಂದು ಗ್ರಂಥ "ದೇವಾಸ್ತಿತ್ವಕ್ಕೆ ಹತ್ತು ಸಾಕ್ಷಿಗಳು" ಅದರಲ್ಲಿ ಸಂಕ್ಷಿಪ್ತ ರೂಪದಲ್ಲಿ ವ್ಯಕ್ತವಾದ ಭಾವರೂಪ ಇಲ್ಲಿ ಪ್ರಸ್ತಾಪಿಸಲಾಗಿದೆ.

ಅವರು ಹೇಳುತ್ತಾರೆ: ಮನುಷ್ಯನು ವಿವಿಧ ವಸ್ತುಗಳನ್ನು ವಿವಿಧ ಇಂದ್ರಿಯಗಳ ಮೂಲಕ ಗುರುತಿಸುತ್ತಾನೆ. ಒಂದು ವಸ್ತುವನ್ನು ನೋಡಿ, ಒಂದನ್ನು ಸ್ಪರ್ಶಿಸಿ, ಒಂದನ್ನು ಮೂಸಿ, ಒಂದನ್ನು ಕೇಳಿ, ಒಂದನ್ನು ರುಚಿಸಿ ಹೀಗೆ ಹಲವು ವಸ್ತುಗಳು ಈ ರೀತಿ ಇವೆ ಅದರ ಜ್ಞಾನ ಈ ಐದು ಇಂದ್ರಿಯಗಳಿಂದಲೂ ಭಾವಿಸಲು ಸಾಧ್ಯವಾಗುವುದಿಲ್ಲ. ಬದಲು ಅವುಗಳನ್ನು ಗುರುತಿಸಲು ಬೇರೆಯೇ ಮಾರ್ಗಗಳಿವೆ. ಉದಾಹರಣೆಗೆ ಬುದ್ಧಿವಂತಿಕೆ ಅಥವಾ ನೆನಪಿನ ಶಕ್ತಿ ಅಥವಾ ಅರಿವು, ಈ ವಸ್ತುಗಳು ಹೇಗಿವೆ ಎಂದರೆ. ಲೋಕದಲ್ಲಿ ಯಾರು ಸಹ ಅದರ ಅಸ್ತಿತ್ವವನ್ನು ನಿರಾಕರಿಸುವಂತಿಲ್ಲ. ಆದರೆ ಯಾರನ್ನಾದರೂ ಈ ವರೆಗೆ ಬುದ್ಧಿಯನ್ನು ನೋಡಿದವರು ಇದ್ದಾರೆಯೇ ಅಥವಾ ಆಲಿಸಿದ್ದಾರೆಯೇ ಅಥವಾ ಮೂಸಿ ಗುರುತಿಸಿದ್ದಾರೆಯೇ ಅಥವಾ ಸ್ಪರ್ಶಿಸಿ ಗುರುತಿಸಿದ್ದಾರೆಯೇ.

ಅಲ್ಲಾಹನು ಅತೀ ಸೂಕ್ಷ್ಮನೂ ಅವನ್ನು ಕಾಣಬಹುದು ಆದರೆ ಅವನಿಗೆ ಕಾಣುವ ದೃಷ್ಟಿ ಬೇರೆ ಇದೆ. ಅವನಿಗೆ ನೋಡಬಯಸುವುದಾದರೆ ಅವನ ನಿಸರ್ಗ ಮತ್ತು ದೈವಿಕಶಕ್ತಿಗಳು ಲೋಕದ ಮುಂದೆ ಇದೆ. ಅವನು ಗೌಪ್ಯವಾಗಿದ್ದರು ಸಹ ಎಲ್ಲರಿಗಿಂತ ಅಧಿಕ ಗೋಚರಿಸಲ್ಪಡುವವನಾಗಿದ್ದಾನೆ. ಇದರ ಬಗ್ಗೆ ಅಲ್ಲಾಹನು ಪವಿತ್ರ ಖುರ್ಆನಿನಲ್ಲಿ ಹೀಗೆ ನುಡಿದಿರುವನು: **ಲಾ ತುದ್ರಿಕುಹುಲ್ ಅಬ್ಸಾರ್ ವಹುವ ಯುದ್ರಿಕುಲ್ ಅಬ್ಸಾರ್ ವಹುವ ಲತೀಫುಲ್ ಖಬೀರ್** (ಅಲ್‌ಅನ್‌ಆಮ್: 104) ಅಂದರೆ ದೃಷ್ಟಿಗಳು ಅವನನ್ನು ತಲುಪಲಾರವು. ಆದರೆ ಅವನು ದೃಷ್ಟಿಗಳನ್ನು ತಲುಪುತ್ತಾನೆ. ಅವನು ಅತೀಸೂಕ್ಷ್ಮನೂ ಎಲ್ಲ ಬಲ್ಲವನೂ ಆಗಿರುತ್ತಾನೆ.

ದೇವಾಸ್ತಿತ್ವ ಕುರಿತು ಇನ್ನೊಂದು ಪ್ರಬಲ ಸಾಕ್ಷ್ಯವೆಂದರೆ ಎಲ್ಲ ಧರ್ಮಗಳು ದೇವನಿದ್ದಾನೆ ಎಂದು ವಿಶ್ವಾಸ ಹೊಂದಿವೆ ಆದುದರಿಂದ ನಾವು ಕಾಣುತ್ತಿದ್ದೇವೆ ಎಷ್ಟೆಲ್ಲ ಸತ್ಕರ್ಮಗಳನ್ನು ಮತ್ತು ನೀತಿಪಾಠ ಮಾಡುವವರು ಅಗಲಿದ್ದಾರೆ ಅವರು ತಮ್ಮ ಸತ್ಕರ್ಮಗಳಿಂದ ಮತ್ತು ಸತ್ಯವಂತಿಕೆಯ ಛಾಪು ಲೋಕದಲ್ಲಿ ಸ್ಥಾಪಿಸಿ ಹೋಗಿದ್ದಾರೆ. ಅವರೆಲ್ಲರೂ ಈ ಮಾತಿಗೆ ಸಾಕ್ಷ್ಯವಹಿಸಿದವರಾಗಿದ್ದಾರೆ. ಒಂದು ಅಗೋಚರ ಶಕ್ತಿ ಇದೆ ಅದನ್ನು ವಿವಿಧ ಭಾಷೆಗಳಲ್ಲಿ- ಅಲ್ಲಾಹ್ ಅಥವಾ GOD ಅಥವಾ ಪರಮೇಶ್ವರ ಎಂದು ಹೇಳಲಾಗಿದೆ. ಭಾರತದ ಸತ್ಯವಾದಿ ಶ್ರೀ ರಾಮವಂದ್ರ ಜೀ, ಕೃಷ್ಣ ಜೀ, ಇರಾನಿನ ಸತ್ಯವಾದಿ ಝುರ್‌ತುಶ್ತ್, ಮಿಸರ್‌ನ ಸತ್ಯವಾದಿ ಮೂಸಾ, ನಾಸಿರದ ಸತ್ಯವಾದಿ ಮಸೀಹ್,

ಪಂಜಾಬಿನ ಓರ್ವ ಸತ್ಯವಾದಿ ನಾನಕರು ಮತ್ತೆ ಎಲ್ಲಾ ಸತ್ಯವಾದಿಗಳ ಸರದಾರರಾದ ಅರಬಿನ ಪ್ರಕಾಶ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿವಸಲ್ಲಮ್. ಅವರುಗಳಲ್ಲದೆ ಸಾವಿರಾರು ಸತ್ಯವಾದಿಗಳು ಸಮಯ ಸಮಯಕ್ಕೆ ಲೋಕದಲ್ಲಿ ಆಗಮಿಸಿರುತ್ತಾರೆ, ಅವರೆಲ್ಲರೂ ಏಕಕಂಠದಿಂದ ದೇವನೊಬ್ಬನೆಂದು ಸಾರಿದವರಾಗಿದ್ದಾರೆ. ಅಷ್ಟೆ ಅಲ್ಲ ನಾವು ಅವನನ್ನು ಕಂಡಿದ್ದೇವೆ ಮತ್ತು ಅವನ ಮಾತುಗಳನ್ನು ಆಲಿಸಿದ್ದೇವು ಎನ್ನುತ್ತಾರೆ.

ಅದೇ ರೀತಿ ಪವಿತ್ರ ಖುರ್‌ಆನಿನಿಂದ ತಿಳಿದುಬರುತ್ತದೆ– ಮನುಷ್ಯನ ಪ್ರಕೃತಿಯೇ ದೇವಾಸ್ತಿತ್ವದ ಮೇಲೆ ಒಂದು ಸಾಕ್ಷ್ಯವಾಗಿದೆ. ಏಕೆಂದರೆ ಕೆಲವು ಇಂತಹ ಪಾಪಗಳಿವೆ ಅದನ್ನು ಮನುಷ್ಯ ಪ್ರಕೃತಿ ಖಡಖಂಡಿತವಾಗಿ ಮೆಚ್ಚುವುದಿಲ್ಲ– ತಾಯಿ ಸಹೋದರಿಯೊಡನೆ ವ್ಯಭಿಚಾರ ದುರ್ಗಂಧನೊಡನೆ ಸಂಬಂಧ ಮತ್ತು ಸುಳ್ಳನ್ನು ಒಬ್ಬ ನಾಸ್ತಿಕನೂ ಸಹ ಮೆಚ್ಚುವುದಿಲ್ಲ. ಏಕೆ? ಪಾಪಗಳಿಂದ ದ್ವೇಷ ಅಥವಾ ಅದನ್ನು ವ್ಯಕ್ತ ಪಡಿಸಲು ಹಿಂಜರಿಕೆ ಅದಕ್ಕೆ ಒಂದು ಸಾಕ್ಷ್ಯವಾಗಿದೆ ಯಾವುದೇ ಒಂದು ಶಕ್ತಿಯ ಉತ್ತರದಾಯಿತ್ವದ ಭಯ ಆವರಿಸಿಕೊಂಡಿದೆ. ಅದಾಗ್ಯೂ ಅವನು ಅವನ ಅಸ್ತಿತ್ವವನ್ನೇ ನಿರಾಕರಿಸುತ್ತಾನೆ.

ದೇವಾಸ್ತಿತ್ವಕ್ಕೆ ಇನ್ನೊಂದು ಪುರಾವೆ– ಪ್ರತಿಯೊಂದು ಕರ್ಮಕ್ಕೆ ಓರ್ವ ಕರ್ತೃ ಅನಿವಾರ್ಯವಾಗಿರುತ್ತದೆ. ಹೇಳುತ್ತಾರೆ ವ್ಯಕ್ತಿಯೊಬ್ಬ ಒಬ್ಬ ಹಳ್ಳಿಯವನೊಂದಿಗೆ ಪ್ರಶ್ನಿಸಿದ: ನಿನ್ನ ಬಳಿ ದೇವನಿದ್ದಾನೆ ಎಂದು ಏನು ಸಾಕ್ಷಿ ಇದೆ? ಅದಕ್ಕೆ ಆ ಹಳ್ಳಿಗನು ಹೀಗೆ ಹೇಳಿದನು: ಅರಣ್ಯದಲ್ಲಿ ಒಂದು ಒಂಟೆಯ ಹೆಕ್ಕಳು ಬಿದ್ದಿದ್ದನ್ನು ಕಂಡು ನಾವು ಹೇಳಬಹುದು ಇಲ್ಲಿಂದ ಒಂಟೆ ನಡೆದುಕೊಂಡು ಹೋಗಿದೆ ಎಂದು. ಹಾಗಿದ್ದರೆ ಇಷ್ಟೊಂದು ಬೃಹತ್ ಸೃಷ್ಟಿಯನ್ನು ಕಂಡು ಈ ಸೃಷ್ಟಿಗೆ ಓರ್ವ ಸೃಷ್ಟಿ ಕರ್ತನು ಇದ್ದಾನೆ ಎಂದು ಹೇಗೆ ಹೇಳದಿರಲು ಸಾಧ್ಯ? ನಿಸ್ಸಂದೇಹವಾಗಿಯು ಇದೊಂದು ಪ್ರಕೃತಿ ಸಹಜ ಉತ್ತರವಾಗಿದೆ.

ಕೆಲ ಜನರು ಹೇಳುತ್ತಾರೆ ಈ ಎಲ್ಲಾ ಲೋಕವು ಆಕಸ್ಮಿಕವಾಗಿ ಸೃಷ್ಟಿಸಲ್ಪಟ್ಟಿದೆ ಎಂದು. ಇದರ ಉತ್ತರ ಅಲ್ಲಾಹನು ಸೂರಃ ಅಲ್ ಮುಲ್ಕ್‌ನ 2 ರಿಂದ 5ರ ವರೆಗಿನ ವಚನಗಳಲ್ಲಿ ಹೀಗೆ ನೀಡಿದ್ದಾನೆ– ಆಕಸ್ಮಿಕವಾಗಿ ಉಂಟಾದ ವಸ್ತುಗಳಲ್ಲಿ ಎಂದೂ ಒಂದು ಸರಣಿ ಮತ್ತು ಸುವ್ಯವಸ್ಥೆ ಇರುವುದಿಲ್ಲ ಬದಲು ಅಸಂಬದ್ಧತೆ ಕಾಣಬಹುದಾಗಿದೆ. ಪ್ರಭುತ್ವ ಹೊಂದಿದವರಲ್ಲಿ ಸಾವಿರಾರು ನಿಪುಣರು ಅದರ ಒಳಿತಿಗಾಗಿ ಶ್ರಮವಹಿಸುವವರಾಗಿರುತ್ತಾರೆ ಆದರೂ ಕೆಲವು ಇಂತಹ ತಪ್ಪುಗಳಾಗುತ್ತವೆ ಅದರಿಂದ ಆಡಳಿತ ಅಸ್ತವ್ಯಸ್ತಗೊಳ್ಳುತ್ತದೆ. ಬದಲು ಕೆಲವೊಮ್ಮೆ ಸಂಪೂರ್ಣ ನಾಶ ಹೊಂದುವಂತಾಗುತ್ತದೆ. ಆದರೆ ಈ ಲೋಕವನ್ನು ಸೃಷ್ಟಿಸಿದವನು ಯಾವ ತಪ್ಪು ಎಸಗುವುದಿಲ್ಲ. ಸತ್ಯ ಹೇಳಬೇಕಾದರೆ ಈ ಲೋಕಕ್ಕೆ ಒಬ್ಬ ಸೃಷ್ಟಿಕರ್ತನಿದ್ದಾನೆ ಅವನು ಸಕಲ ಕಾರ್ಯಗಳಲ್ಲಿ ಸರ್ವ ಸಾಮರ್ಥ್ಯವಂತನಾಗಿದ್ದಾನೆ. ಹೀಗಿಲ್ಲದಿರುತ್ತಿದ್ದರೆ ಇಂತಹ ವ್ಯವಸ್ಥೆ ಕಾಣಲು ಸಾಧ್ಯವಿಲ್ಲ.

ಪವಿತ್ರ ಖುರ್‌ಆನಿನಿಂದ ತಿಳಿದುಬರುತ್ತದೆ ಅಲ್ಲಾಹನನ್ನು ನಿರಾಕರಿಸುವವರು ಸದಾ ಅಪಮಾನ ಹಾಗೂ ಅವನತಿಗೆ ಒಳಗಾಗುತ್ತಾರೆ ಅದಕ್ಕೆ 'ಫಿರ್‌ಔನ್'ನ ಘಟನೆಯು ಒಂದು ಪ್ರಬಲ ಸಾಕ್ಷ್ಯವಾಗಿದೆ ಅಲ್ಲಾಹನನ್ನು ನಿರಾಕರಿಸುವವನು ಯಾವ ರೀತಿ ಅಪಮಾನಕ್ಕೆ ಅವನತಿಗೆ ಗುರಿಯಾಗುತ್ತಾನೆ ಎಂಬುದಕ್ಕೆ.


ಅಲ್ಲಾಹನ ಅಸ್ತಿತ್ವವನ್ನು ಸಾದರ ಪಡಿಸುವವರು ಎಲ್ಲಾ ದೇಶಗಳಲ್ಲೂ ಜನ್ಮ ತಾಳಿದ್ದಾರೆ. ಅವರನ್ನು ಎಷ್ಟು ದಮನಿಸಲು ಪ್ರಯತ್ನಪಡಲಾಗಿದೆಯೋ ಬಹುಶಃ ಬೇರೆ ಯಾರೊಂದಿಗೂ ಪ್ರಯತ್ನಿಸಿರಲಿಕ್ಕಿಲ್ಲ. ಲೋಕ ವಿರೋದ ಮಾಡಿ ಏನು ಪಡೆದಂತಾಯಿತು. ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೇಳುತ್ತಾನೆ: **ವಮ್ಯೆಂ ಯತವಲ್ಲಲ್ಲಾಹು ವರಸೂಲಹು ವಲ್ಲಝೀನ ಆಮನೂ ಫಇನ್ನ ಹಿಝ್‌ಬಲ್ಲಾಹಿ ಹುಮುಲ್‌ಗಾಲಿಬೂನ್**. (ಅಲ್‌ಮಾಇದಃ: 57) ಅಲ್ಲಾಹನನ್ನೂ ಅವನ ಸಂದೇಶವಾಹಕನನ್ನೂ ಸತ್ಯವಿಶ್ವಾಸಿಗಳನ್ನು ಯಾರು ಮಿತ್ರರನ್ನಾಗಿ ಮಾಡುತ್ತಾರೋ ಅವರು ತಿಳಿದುಕೊಳ್ಳಲಿ ಖಂಡಿತವಾಗಿಯೂ ಅಲ್ಲಾಹನ ಪಕ್ಷದವರೇ ವಿಜಯಿಗಳಾಗುತ್ತಾರೆ.

ಪವಿತ್ರ ಖುರ್‌ನಿನಿಂದ ತಿಳಿದುಬರುತ್ತದೆ ಅಲ್ಲಾಹನು ಪ್ರಾರ್ಥನೆಗಳನ್ನು ಸ್ವೀಕರಿಸುತ್ತಾನೆ ಎಂದು. ಪ್ರಾರ್ಥನೆ ಸ್ವೀಕೃತಿಯು ತನ್ನಲ್ಲಿ ಒಂದು ದೃಷ್ಟಾಂತ ಹೊಂದಿರುತ್ತದೆ. ಆದುದರಿಂದ ನಮ್ಮ ನಾಯಕರಾದ ಹಝ್‌ರತ್ ಮಿರ್ಝಾ ಗುಲಾಮ್ ಅಹ್ಮದ್ ಸಾಹಿಬ್ ಖಾದಿಯಾನಿ ಮಹದಿ ಹಾಗೂ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು 'ದೇವಾಸ್ತಿತ್ವ'ವನ್ನು ಸಾಬೀತು ಪಡಿಸಲು ಒಂದು ಸಾಕ್ಷ್ಯವನ್ನು ಪ್ರಸ್ತುತ ಪಡಿಸಿರುವುದು ಏನೆಂದರೆ:– ಅಪಾಯಕರ ಮಟ್ಟಕ್ಕೆ ತಲುಪಿದ ಕೆಲವು ರೋಗಿಗಳನ್ನು ಆರಿಸಿಕೊಂಡು ಹಂಚಿಕೊಳ್ಳೋನ, ಒಂದು ಗುಂಪಿನವರು ವೈದ್ಯರ ಮೂಲಕ ಅವರ ಚಿಕಿತ್ಸೆ ನಡೆಸಲಿ. ಇನ್ನೊಂದೆಡೆ ನನ್ನ ಪಾಲಿಗೆ ಬಂದ ರೋಗಿಗಳಿಗೆ ನಾನು ಪ್ರಾರ್ಥಿಸುವೆನು ಮತ್ತೆ ನೋಡಿರಿ ಯಾವ ರೋಗಿಗಳು ಗುಣಹೊಂದುತ್ತಾರೆಂದು. ಈ ತರಹದ ಪರೀಕ್ಷೆಯಲ್ಲಿ ಏನು ಸಂಶಯವಿರಲು ಸಾಧ್ಯ? ಆದುದರಿಂದ ಹುಚ್ಚು ನಾಯಿ ಕಡಿತಕ್ಕೆ ಒಳಗಾದ ಒಬ್ಬ ರೋಗಿಯನ್ನು ಕಸೋಲಿಯ ವೈದ್ಯರು ಖಡಖಂಡಿತವಾಗಿ ಇದಕ್ಕೆ ಚಿಕಿತ್ಸೆ ಇಲ್ಲ ಎಂದು ಹೇಳಿ ಬರಹವನ್ನು ನೀಡಿದ್ದರು. ಆಗ ಅವನಿಗಾಗಿ ಹಝ್‌ರತ್ ಮಸಿಹ್ ಮೌಊದ್(ಅ) ಪ್ರಾರ್ಥಿಸಿದಾಗ ಅವನು ಗುಣ ಹೊಂದಿದನು. ಸಾಧಾರಣವಾಗಿ ಹುಚ್ಚು ನಾಯಿ ಕಚ್ಚಿ ಹುಚ್ಚನಾದವರು ಎಂದೂ ಗುಣ ಹೊಂದುವುದಿಲ್ಲ. ಆದರೆ ಪ್ರಾರ್ಥನೆ ಸ್ವೀಕೃತಿಯು ದೇವಾಸ್ತಿತ್ವದ ಮೇಲೆ ಒಂದು ಪ್ರಬಲ ಸಾಕ್ಷಿಯಾಗಿದೆ. ಅದು ಎಲ್ಲಾ ಕಾಲಕ್ಕೂ ಸ್ವೀಕೃತಗೊಳ್ಳುತ್ತವೆ.


ಪವಿತ್ರ ಖುರ್‌ಆನಿನಲ್ಲಿ ಅಲ್ಲಾಹನು ಹೇಳುತ್ತಾನೆ: ನಮ್ಮ ಮಾರ್ಗದಲ್ಲಿ ಯಾರು ಅತ್ಯಂತ ಪ್ರಯತ್ನಪಡುತ್ತಾರೋ, ಖಂಡಿತವಾಗಿಯೂ ನಾವು ಅವರನ್ನು ನಮ್ಮ ಪಥದಲ್ಲಿ ನಡೆಸುವೆವು. ಒಂದು ವೇಳೆ ಈ ರೀತಿ ಒಮ್ಮನಸ್ಸಿನಿಂದ ಯಾವನೇ ವ್ಯಕ್ತಿ ಪ್ರಾರ್ಥಿಸಿದರೆ ಮತ್ತು ಕನಿಷ್ಠ ನಲವತ್ತು ದಿನಗಳವರೆಗೆ ಅದರಂತೆ ನಡೆದುಕೊಂಡರೆ, ಅವನು ಯಾವುದೇ ಧರ್ಮದಲ್ಲಿ ಹುಟ್ಟಿದವನಾಗಲಿ ಅವನು ಯಾವುದೇ ದೇಶದವನಾಗಲಿ, ಸರ್ವಲೋಕಗಳ ಪರಿಪಾಲಕನಾದ ದೇವನು ಅವನಿಗೆ ಅವಶ್ಯವಾಗಿ ಮಾರ್ಗದರ್ಶನ ನೀಡುವನು. ಅವನು ಅತಿ ಶೀಘ್ರವಾಗಿ ಅಲ್ಲಾಹನ ಕೃಪೆಯಿಂದ ತನ್ನ ಮನಸ್ಸಿನಿಂದ ಎಲ್ಲ ಸಂಶಯಗಳನ್ನು ದೂರಮಾಡಿ ದೃಷ್ಟಾಂತವನ್ನು ಕಾಣುವವನಾಗುತ್ತಾನೆ.

ಇಂದಿನ ಲೋಕವು ಭೌತಿಕತೆಗೆ ಮನಸೋತಿದೆ. ಧರ್ಮದಿಂದ ದೂರವಾಗಿ ತನ್ನ ಸೃಷ್ಟಿಕರ್ತನನ್ನು ಮರೆತುಬಿಟ್ಟಿದೆ. ಇಂತಹ ಪರಿಸ್ಥಿತಿಗಳಲ್ಲಿ ಪ್ರತಿಯೊಬ್ಬ ಅಹ್ಮದಿಯ ಕರ್ತವ್ಯವಾಗಿದೆ– ದೇವಾಸ್ತಿತ್ವದ ಸಾಕ್ಷಿಗಳನ್ನು ಅರಿತುಕೊಳ್ಳಬೇಕು. ದೇವಸಂಬಂಧದಲ್ಲಿ ಪ್ರಗತಿ ಸಾಧಿಸಬೇಕು ಮತ್ತು ಇಡೀ ಲೋಕಕ್ಕೆ ಈ ಜೀವಂತ ವಾಸ್ತವದ ಅರಿವನ್ನು ಮೂಡಿಸಬೇಕು. ಅಲ್ಲಾಹನು ಆ ಭಾಗ್ಯ ನಿಮಗೆ ಕರುಣಿಸಲಿ. **ಆಮೀನ್**


ವಸ್ಸಲಾಮ್



ಖಲೀಫತುಲ್ ಮಸೀಹ್ ಖಾಮಿಸ್



ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಸಾಹಿಬ್ ಖಾದಿಯಾನಿ ವಾಗ್ದತ್ತ ಮಹದಿ ಹಾಗೂ
ಮಸೀಹ್ ಮೌಊದ್ ಅಲೈಹಿಸ್ಸಲಾಮ್ (1835–1908)




ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್(ಅತಬಿಅ)

## ಕನ್ನಡ ವಾರ ಪತ್ರಿಕೆ ಬದರ್ "ದೇವನ ಅಸ್ತಿತ್ವ ವಾರ್ಷಿಕ ಸಂಚಿಕೆ"


| ಕ್ರಮ ಸಂಖ್ಯೆ | ವಿಷಯ ಸೂಚಿಕೆ | ಪುಟ |
|---|---|---|
| 01 | ಪ್ರವಾದಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಅಲ್ಲಾಹನೊಂದಿಗೆ ಅದ್ವಿತೀಯ ಪ್ರೇಮ | 01 |
| 02 | ಅಲ್ಲಾಹನ ಅಸ್ತಿತ್ವದ ಕುರಿತು ಅಲ್ಲಹನ ಉಪದೇಶಗಳು | 02 |
| 03 | ಪ್ರವಾದಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಅಧ್ಯಾಪನೆಗಳು | 03 |
| 04 | ಹಝ್ರತ್ ಮಸೀಹ್ ಮೌಊದ್(ಅ) ರವರ ಅಧ್ಯಾಪನೆಗಳು | 04 |
| 05 | ದೇವಾಸ್ತಿತ್ವದ ಹತ್ತು ಸಾಕ್ಷ್ಯಾಧಾರಗಳು | 05 |
| 06 | ಇಡೀ ಬೈಬಲಿನಲ್ಲಿ ಕೇವಲ ಸೂರಃ ಇಖ್‌ಲಾಸ್‌ನಲ್ಲಿರುವಷ್ಟು ದೇವ ಏಕತ್ವದ ವಿಷಯ ಇದ್ದರೆ ತೆಗೆದು ತೋರಿಸಲು ಪಂಥಾಹ್ವಾನ | 12 |
| 07 | ಹಮಾರಾ ಖುದಾ (ನಮ್ಮ ಪ್ರಭು) | 13 |
| 08 | ಅಲ್ಲಾಹನ ಗುಣಗಳು – ಪವಿತ್ರ ಖುರ್‌ಆನ್, ನಬಿವರ್ಯರ ಹದೀಸ್ ಹಾಗೂ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಅಧ್ಯಾಪನೆಗಳ ಪ್ರಕಾಶದಲ್ಲಿ:– | 18 |
| 09 | ದೇವಾಸ್ತಿತ್ವದ ಮಹೋನ್ನತ ಪ್ರೇಮಿ ಪ್ರವಾದಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮ್ | 24 |
| 10 | ದೇವಾಸ್ತಿತ್ವ, ಪ್ರಾರ್ಥನೆ ಸ್ವೀಕೃತಿಯ ನೆಲೆಯಲಿ | 27 |
| 11 | ದೇವಾಸ್ತಿತ್ವ ಕುರಿತು ಬೌದ್ಧಿಕ ಸಾಕ್ಷ್ಯಗಳು: | 29 |


# ಪ್ರವಾದಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಅಲ್ಲಾಹನೊಂದಿಗೆ ಅದ್ವಿತೀಯ ಪ್ರೇಮ

ಮುಸಲ್ಮಾನನಾಗಲು ಪ್ರಪ್ರಥಮವಾಗಿ ಸ್ವೀಕರಿಸಬೇಕಾದ ಮಾತು.

"ಲಾ ಇಲಾಹ ಇಲ್ಲಲ್ಲಾಹ್" ಅಲ್ಲಾಹನ ಹೊರತು ಯಾರೂ ಅರಾಧ್ಯರಿಲ್ಲ" ಎಂಬುದಾಗಿದೆ. ಆರಾಧನೆಗೆ ಅರ್ಹನು ಆ ಏಕೈಕನು ಮಾತ್ರ. ಅವನು ಮುಂದೆ ಮಾತ್ರ ಈ ಮನುಷ್ಯನು ಸಾಷ್ಟಾಂಗವೆರಗಬೆಕಾದುದು ಮತ್ತು ಅವನಿಂದ ಮಾತ್ರ ಬೇಡುವುದಾಗಿದೆ. ಏಕೆಂದರೆ ಅವನು (ಅಲ್ಲಾಹ್) ಮಾತ್ರ ನಮ್ಮ ಸೃಷ್ಟಿಕರ್ತ ಹಾಗೂ ಮಾಲಿಕನಾಗಿದ್ದಾನೆ. ಅಲ್ಲಾಹನೇ ನಮ್ಮ ಪರಿಪಾಲಕನು. ಅವನು ಪರಮದಯವಂತನೂ ಅಂದರೆ ಅವನು ಮನುಷ್ಯರೆಲ್ಲರಿಗೂ ವಿಶ್ವಾಸಿಗಳಿಗೂ ಅವಿಶ್ವಾಸಿಗಳಿಗೂ ಇಡೀ ಪ್ರಪಂಚಕ್ಕೂ ದಯಾವಂತನಾಗಿದ್ದಾನೆಂದು ಸೂಚಿಸುತ್ತದೆ ಮತ್ತು ಅವನು ರಹೀಂ ಆಗಿದ್ದಾನೆ. ಅಂದರೆ ಮನುಷ್ಯರ ಪ್ರಯತ್ನದೊಂದಿಗೆ ಸಂಬಂಧಪಟ್ಟ ಅವನ ಕಾರುಣ್ಯವನ್ನು ಸೂಚಿಸುತ್ತದೆ. ಅಲ್ಲಾಹನಿಗೆ ತನ್ನ ಏಕತ್ವ ಮತ್ತು ಸಾರ್ವಭೌಮತ್ವ ಎಷ್ಟೊಂದು ಪ್ರಿಯವಾಗಿದೆ ಎಂದರೆ ಅವನು ಸಮಭಾಗಿತ್ವ ಕಲ್ಪಿಸುವುದನ್ನು ಮಹಾಪಾಪ ಎಂದು ಸಾರಿರುತ್ತಾನೆ. ಹೇಳಿದನು. ಇನ್ನಲ್ಲಾಹ ಲಾ ಯಗ್‌ಫಿರು ಅಯ್ಯುಂಶ್ರಿಕ ಬಿಹಿ ವ ಯಗ್‌ಫಿರು ಮಾ ದೂನ ಝಾಲಿಕ ಲಿಮಯ್ಯಂಶಾಉ. (ಅನ್ನಿಸಾಅ್:117) "ತನ್ನೊಂದಿಗೆ ಏನನ್ನಾದರೂ ಸಹಭಾಗಿಯಾಗಿ ಕಲ್ಪಿಸುವುದನ್ನು ಖಂಡಿತವಾಗಿಯೂ ಅಲ್ಲಾಹನು ಕ್ಷಮಿಸಲಾರ. ಅದರ ಹೊರತು ಇತರ ಪಾಪಗಳನ್ನು ತಾನು ಉದ್ದೇಶಿಸುವವರಿಗೆ ಅವನು ಕ್ಷಮಿಸಿ ಕೊಡುವನು." (ಅನ್ನಿಸಾಅ–117) ಯಾರು ಅಲ್ಲಾಹನಿಗೆ ಸಹಭಾಗಿತ್ವವನ್ನು ಕಲ್ಪಿಸುತ್ತಾನೋ ನಿಸ್ಸಂದೇಹವಾಗಿಯೂ ಅವನು ಮಾರ್ಗಭ್ರಂಶನಾಗಿ ಬಹುದೂರ ಅಗಲಿ ಹೋಗುತ್ತಾನೆ.

ಇನ್ನೊಂದು ಸ್ಥಳದಲ್ಲಿ ಅಲ್ಲಾಹನು ಸಹಭಾಗಿತ್ವವನ್ನು ಕಟು ಶಬ್ದಗಳಲ್ಲಿ ಖಂಡಿಸುತ್ತಾ ಹೀಗೆ ಎಚ್ಚರಿಸಿದನು. ವಖಾಲೂತ್ತಖಝುರ್ರಹ್ಮಾನು ವಲದ. ಲಖದ್ ಜಿಅ್‌ತುಮ್ ಬಿಶೈಅ ಇದ್ದಂ, ತಖಾದುಸ್ಸಮಾವಾತಿ ಯತಫತ್ತರ್‌ನ ಮಿನ್‌ಹು ವ ತನ್‌ಶಕ್ಕಲ್ ಅರ್‌ಝು ವ ತಖಿರ್‍ರುಲ್ ಜಿಬಾಲ ಹದ್ದ. ಅನ್ ದೌ ಲಿರ್ರಹ್ಮಾನಿ ವಲದ. (ಮರಿಯಮ್ –89–92)

"ದಯಾವಂತನಾದ ದೇವನು ಒಬ್ಬ ಪುತ್ರನನ್ನು ಹೊಂದಿದ್ದಾನೆಂದು

لَا اِلٰهَ اِلَّا اللّٰهُ مُحَمَّدٌ رَّسُوْلُ اللّٰهِ

ಅವರು ಹೇಳುತ್ತಾರೆ. (ನೀನು ಹೇಳು): ನೀವು ಅತಿ ಘೋರವಾದ ಮಾತನಾಡಿದ್ದೀರಿ. ಆಕಾಶಗಳು ಸ್ಫೋಟಗೊಳ್ಳಬಹುದು. ಭೂಮಿ ಸೀಳಲ್ಪಡಬಹುದು. ಪರ್ವತಗಳು ಛಿದ್ರ ಛಿದ್ರಗೊಳ್ಳಬಹುದು. ಏಕೆಂದರೆ ದಯಾವಂತನಾದ ದೇವನಿಗೆ ಒಬ್ಬ ಪುತ್ರನಿದ್ದಾನೆಂದು ಅವರು ವಾದಿಸುತ್ತಾರೆ."

ಅಲ್ಲದೇ ಯಾರೂ ಸಹಭಾಗಿತ್ವ ಕಲ್ಪಿಸುತ್ತಾ ಮೃತನಾಗುತ್ತಾನೋ ಅವನಿಗಾಗಿ ಕ್ಷಮೆ ಕೋರುವುದಕ್ಕೂ ಅಲ್ಲಾಹನು ನಿಷೇಧಿಸಿರುವನು. ಅದರಲ್ಲಿ ಅಡಗಿರುವ ರಹಸ್ಯವೇನೆಂದರೆ ಯಾರೂ ಜೀವನ ಪರ್ಯಂತ ಅಲ್ಲಾಹನಿಗೆ ಸಹಭಾಗಿತ್ವ ಕಲ್ಪಿಸಿದ್ದಾನೆ. ಅದೇ ಪ್ರಭುವಿನಿಂದ ಕ್ಷಮೆ ಬೇಡುವುದಾದರೂ ಹೇಗೆ. ಈ ಕೆಳಗಿನ ಸಾಲುಗಳಲ್ಲಿ ನಾವು ಸಯ್ಯದನಾ ಹಝ್ರತ್ ಮುಹಮ್ಮದ್ ಮುಸ್ತಫಾ(ಸ) ರಿಗೆ ತನ್ನ ಒಡೆಯ ಮಾಲೀಕನೊಂದಿಗೆ ಹೊಂದಿದ ಅದ್ವಿತೀಯ ಪ್ರೇಮ, ಅವನ ಏಕತ್ವ ಸಾರ್ವಭೌಮತೆ ಪ್ರಚಾರಕ್ಕಾಗಿ ಮಾಡಿದ ಅನೋನ್ಯ ತ್ಯಾಗ ಹೋರಾಟಗಳ ಕುರಿತು ಒಂದಿಷ್ಟು ನೋಟ ಪ್ರಸ್ತುತಪಡಿಸುವ ಪ್ರಯತ್ನ ಮಾಡುವೆನು.

ಅರಬರ ಪರಿಸರ ಬಹುದೇವಾರಾಧನೆಗಳಿಂದ ತುಂಬಿ ಹೋಗಿತ್ತು. ಸ್ವಯಂ ಕಅಬ ಮಸೀದಿಯಲ್ಲಿ ಅದು ದೇವನ ಏಕತ್ವ ಸಾರುವ ಕೇಂರ್ಧವಾಗಿತ್ತು. ಮತ್ತು ಅದು ಅಲ್ಲಾಹನ ಮೊದಲ ಗೃಹವಾಗಿತ್ತು. ಅಂತಹದರಲ್ಲಿ 360 ವಿಗ್ರಹಗಳು ರಾರಾಜಿಸಿದ್ದವು ಇಂತಹ ಪರಿಸರದಿಂದ ಉಳಿಯುವುದೇ ಕಷ್ಟಸಾಧ್ಯವಾಫಿತ್ತು. ಆದರೆ ಅಲ್ಲಾಹನು ಅವರನ್ನು ಸದಾ ಬಹುದೇವಾರಾಧನೆಯಿಂದ ಸಂರಕ್ಷಿಸಿದನು. ಮಾನವಕುಲದ ಪ್ರಕೃತಿಯಲ್ಲಿ ಅಲ್ಲಾಹನು ತನ್ನ ಏಕತ್ವದ ಅಂಶ ಅಡಗಿಸಿಟ್ಟಿರುವನು. ಆ ಅಂಶ ನಮ್ಮ ಸರದಾರ ಮಾಲಿಕರವರ ಪ್ರಕೃತಿಯಲ್ಲಿ ಎಷ್ಟೊಂದು ಪ್ರೇರಕವಾಗಿದ್ದಿತ್ತೆಂದರೆ ಅದು ತನ್ನ ಪ್ರಭುವನ್ನು ಪಡೆಯುವ ಹಂಬಲದಿಂದ ಹಿರಾ ಪರ್ವತದ ಒಂದು ಗುಹೆಯೆಡೆ ಎಳೆದುಕೊಂಡು ಹೋಗುತಿತ್ತು ಅಲ್ಲಿ ಅವರು ಹಲವು ದಿನಗಳವರೆಗೆ ನಿರಂತರವಾಗಿ ಅಲ್ಲಾಹನ ಆರಾಧನೆಯಲ್ಲಿ ತೊಡಗಿಕೊಳ್ಳುತ್ತಿದ್ದರು ಮತ್ತು ಮನೆಗೆ ಬರುತ್ತಿರಲಿಲ್ಲ. ಆ ಪೈಕಿ ಸಂಕೇತಿಸುತ್ತ ಅಲ್ಲಾಹನು ನುಡಿದನು. **"ಫವಜದಕ ಝಾಲ್ಲನ್ ಫಹದಾ"** (ತನ್ನನ್ನು) ಹುಡುಕುತ್ತಾ ಅಲೆದಾಡುವವನಾಗಿ ಅವನು ನಿನ್ನನ್ನು ಕಂಡನು ಆಗ ಅವನು (ತನ್ನೆಡೆಗೆ) ಮಾರ್ಗದರ್ಶನ ಮಾಡಿದರು.

ಪ್ರವಾದಿಯ ಹುದ್ದೆ ಸ್ವೀಕರಿಸಿದಾಗ ಅಲ್ಲಾಹನ ಏಕತ್ವದ ಪ್ರಚಾರದಲ್ಲಿ ಬರುವ ಎಲ್ಲ ಕಷ್ಟ ಕಾರ್ಪಣ್ಯಗಳನ್ನು ಸಹಿಸಿಕೊಂಡು ಹೋದರು. ಅದೊಂದು ದೀರ್ಘವಾದ ಘಟನೆಗಳಾಗಿವೆ, ಮಕ್ಕದವರು ಅವರ ಮೇಲೆ ಮಣ್ಣು ಹಾಕುತ್ತಿದ್ದರೆ, ಅವರ ಮಾರ್ಗದಲ್ಲಿ ಮುಳ್ಳುಗಳನ್ನು ಹಾಕುತ್ತಿದ್ದರು. ನಮಾಝ್ ನಿರ್ವಹಿಸುತ್ತಾ ಸಾಷ್ಟಾಂಗ ಅವಸ್ಥೆಯಲ್ಲಿ ಇರುವಾಗ ಒಂಟೆಯ ಡೇರೆಯನ್ನು ಅವರ ಬೆನ್ನಿನ ಮೇಲೆ ಇಡುತ್ತಿದ್ದರು. ಬಯ್ಯುವುದಂತೂ ಸಾಮಾನ್ಯ ಮಾತಾಗಿ ಹೋಗಿತ್ತು. ಅವರನ್ನು ಧ್ಯೇಯದಿಂದ ವಿಮುಖಗೊಳಿಸಲು ಎಲ್ಲ ರೀತಿಯ ದೌರ್ಜನ್ಯಗಳನ್ನು ಉಪಯೋಗಿಸಿದರು. ಎಲ್ಲ ರೀತಿಯ ಉಪಾಯಗಳನ್ನು ಹೂಡಿದರು. ಅಂತಿಮವಾಗಿ ಅವರ ಹತ್ಯೆ ಮಾಡುವ ಯೋಜನೆ ಹಾಕಿದರು. ತಾಯಿಫ್‌ಗೆ ಹೋದಾಗ ಅಲ್ಲಿಯ ಗುಂಡಾ ಪ್ರವೃತ್ತಿಯ ಯುವಕರು ಅವರನ್ನು ತೀವ್ರ ಗಾಯಗೊಳಿಸಿದರು ಅವರು ತಾಯಿಫಿನ ಮುಖಂಡರಾದ ಅಬ್ದ್ ಯಾ ಲೈಲ್ ಅವರನ್ನು ಪ್ರಚರ ಮಾಡಿದಾಗ ಅವನು ಕೇವಲ ಅವರನ್ನು ಅಪಹಾಸ್ಯ ಮಾತ್ರ ಮಾಡಲಿಲ್ಲ. ಬದಲು ಗುಂಡಾ ಯುವಕರನ್ನು ಅವರ ಹಿಂದೆ ಕಳುಹಿಸಿದನು. ಹಝ್ರತ್ ರಸೂಲುಲ್ಲಾಹ್(ಸ) ನಗರದಿಂದ ಹೊರ ಬಂದಾಗ ಈ ಜನರು ಬೊಬ್ಬೆ ಹಾಕುತ್ತಾ ಹಿಂಬಾಲಿಸಿದರು. ಮತ್ತು ಅವರ ಮೇಲೆ ಕಲ್ಲು ತೂರಾಟ ಮಾಡಿದರು. ಅದರಿಂದ ಅವರ ಶರೀರವೆಲ್ಲ ರಕ್ತಸಿಕ್ತಗೊಂಡಿತು. ಸುಮಾರು ಮೂರು ಮೈಲುಗಳಷ್ಟು ದೂರದವರೆಗೆ ಬೈಯ್ಯುತ್ತಾ ಕಲ್ಲು ತೂರಾಟ ಮಾಡುತ್ತಾ ಬಂದರು. (ಸೀರತ್ ಖಾತಮುನ್ನಬಿಈನ್, ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಎಂ.ಎ.(ರ) ಪುಟ–204)

ಅವರ ಈ ಪ್ರವಾಸದ ಕುರಿತು ಶತ್ರುಗಳು ಸಹ ಒಪ್ಪಿಕೊಳ್ಳುತ್ತಾರೆ. ಅವರು ತ್ಯಾಗ ಸಹಿಷ್ಣುತೆಯ ಅತ್ಯಮೂಲ್ಯ ನಮೂನೆಯನ್ನು ಪ್ರದರ್ಶಿಸಿದರು. ಸರ್ ವಿಲಿಯಂ ಮೇವರ್ ತನ್ನ ಗ್ರಂಥ "ಲೈಫ್ ಆಫ್ ಮುಹಮ್ಮದ್‌ನಲ್ಲಿ ಬರೆಯುತ್ತಾನೆ. ಮುಹಮ್ಮದ್(ಸ) ತಾಯಿಫ್ ಪ್ರವಾಸದಲ್ಲಿ ಒಂದು ಭವ್ಯ ಹಾಗೂ ಸಾಹಾಸದ ರೂಪವನ್ನು ನಾವು ಕಾಣಬಹುದಾಗಿದೆ. ಒಬ್ಬ ವ್ಯಕ್ತಿ ಅವನ ಸಮುದಾಯವೇ ಅವರನ್ನು ಕೀಳಾಗಿ ಕಂಡರು ಮತ್ತು ಅವರನ್ನು ಧಿಕ್ಕರಿಸಿದರು. ಅಲ್ಲಾಹನ ಹೆಸರಿನಲ್ಲಿ ಸಾಹಸದಿಂದ ನೇನ್ವಾದ ಯುನಾಹ್ (ಯುನುಸ್) ನಬಿ ಅವರಂತೆ ವಿಗ್ರಹಾರಾಧನೆಯಿಂದ ತುಂಬಿದ ನಗರವಾಸಿಗಳಿಗೆ ಅಲ್ಲಾಹನ ಸಂದೇಶ ತಲುಪಿಸಿದರು ಮತ್ತು ಅವರನ್ನು ಏಕದೇವತ್ವದೆಡೆ ಆಹ್ವಾನಿಸಿದರು.

*(ಉಳಿದ ಭಾಗ ಪುಟ ಸಂಖ್ಯೆ 31ರಲ್ಲಿ ಮುಂದುವರಿಸಲಾಗಿದೆ)*

**ಅಲ್ಲಾಹನು; ಏಕನು. 'ಅವನು ನಿರಪೇಕ್ಷನು (ಮತ್ತು ಸರ್ವರಿಗೂ ಆಶ್ರಯದಾತನು).. 'ಅವನು ಜನಕನಲ್ಲ; ಜಾತನೂ ಅಲ್ಲ. 'ಅವನಿಗೆ ಸಮನಾಗಿ ಯಾರೂ ಇಲ್ಲ.'**

# ಅಲ್ಲಾಹನ ಅಸ್ತಿತ್ವದ ಕುರಿತು ಅಲ್ಲಹನ ಉಪದೇಶಗಳು

### ಅಲ್ಲಾಹನು ಏಕೈಕವಾಗಿದ್ದಾನೆ ಅವನ ಹೊರತು ಆರಾಧನೆಗರ್ಹನಿಲ್ಲ.

وَاِلٰهُكُمْ اِلٰهٌ وَّاحِدٌ ۚ لَآ اِلٰهَ اِلَّا هُوَ الرَّحْمٰنُ الرَّحِيْمُ ○

ನಿನ್ನ ಒಡೆಯನು ಏಕ ದೇವನು. ಅವನ ಹೊರತು ಆರಾಧನೆಗರ್ಹನಿಲ್ಲ. ಅವನು ದಯಾವಂತನೂ ಕಾರುಣ್ಯ ನಿಧಿಯೂ ಆಗಿದ್ದಾನೆ.

### ಅಲ್ಲಾಹನು ಆಕಾಶಗಳ ಮತ್ತು ಭೂಮಿಯ ಪ್ರಕಾಶವಾಗಿದ್ದಾನೆ

اَللّٰهُ نُوْرُ السَّمٰوٰتِ وَالْاَرْضِ ؕ

ಅಲ್ಲಾಹನು ಆಕಾಶಗಳ ಮತ್ತು ಭೂಮಿಯ ಪ್ರಕಾಶವಾಗಿದ್ದಾನೆ

### ಜೀವನ ಹಾಗೂ ಮರಣ ಅಲ್ಲಾಹನಿಂದಲೇ ಇದೆ

كَيْفَ تَكْفُرُوْنَ بِاللّٰهِ وَكُنْتُمْ اَمْوَاتًا فَاَحْيَاكُمْ ۚ ثُمَّ يُمِيْتُكُمْ ثُمَّ يُحْيِيْكُمْ ثُمَّ اِلَيْهِ تُرْجَعُوْنَ ○ (سورة البقرة آيت:29)

ನೀವು ಅಲ್ಲಾಹನ ಅಸ್ತಿತ್ವವನ್ನು ಹೇಗೆ ಅಲ್ಲಗಳೆಯಬಲ್ಲಿರಿ? ನೀವು ನಿರ್ಜೀವರಾಗಿದ್ದಾಗ ಅವನು ನಿಮಗೆ ಜೀವ ನೀಡಿದನು. ಮುಂದೆ ಅವನು ನಿಮ್ಮನ್ನು ಮೃತಪಡಿಸುವನು ಮತ್ತು ಪುನಃ ಜೀವಂತಗೊಳಿಸುವನು. ಅವನ ಕಡೆಗೆಯೇ ನೀವು ಹಿಂತಿರುಗಿಸಲ್ಪಡುವಿರಿ.

### ಅಲ್ಲಾಹನ ಅಸ್ತಿತ್ವವೇ ಬಾಕಿಯುಳಿಯುವುದು.

كُلُّ مَنْ عَلَيْهَا فَانٍ ○ وَّيَبْقٰى وَجْهُ رَبِّكَ ذُو الْجَلٰلِ وَالْاِكْرَامِ ○

ಅಲ್ಲಿ (ಭೂಮಿಯಲ್ಲಿ) ಇರುವುದೆಲ್ಲವೂ ನಶ್ವರ. ಆದರೆ, ಪ್ರತಾಪಶಾಲಿಯೂ ಅತ್ಯಂತ ಆದರಣೀಯನೂ ಆದ ನಿನ್ನ ಪ್ರಭುವಿನ ವದನ (ಉದ್ದೇಶಿತ ಕಾರ್ಯಗಳು) ಮಾತ್ರ ಬಾಕಿಯುಳಿಯುವುದು.

### ಅಲ್ಲಾಹನು ಸದಾ ಜೀವಂತನೂ ಸ್ವತಃ ನೆಲೆನಿಂತಿರುವವನೂ (ಎಲ್ಲವನ್ನು) ನೆಲೆನಿಲ್ಲಿಸುವವನೂ ಆಗಿದ್ದಾನೆ

اَللّٰهُ لَآ اِلٰهَ اِلَّا هُوَ ۚ اَلْحَيُّ الْقَيُّوْمُ ۚ لَا تَاْخُذُهٗ سِنَةٌ وَّلَا نَوْمٌ ؕ لَهٗ مَا فِي السَّمٰوٰتِ وَمَا فِي الْاَرْضِ ؕ مَنْ ذَا الَّذِيْ يَشْفَعُ عِنْدَهٗٓ اِلَّا بِاِذْنِهٖ ؕ يَعْلَمُ مَا بَيْنَ اَيْدِيْهِمْ وَمَا خَلْفَهُمْ ۚ وَلَا يُحِيْطُوْنَ بِشَيْءٍ مِّنْ عِلْمِهٖٓ اِلَّا بِمَا شَآءَ ۚ وَسِعَ كُرْسِيُّهُ السَّمٰوٰتِ وَالْاَرْضَ ۚ وَلَا يَـُٔوْدُهٗ حِفْظُهُمَا ۚ وَهُوَ الْعَلِيُّ الْعَظِيْمُ ○ (سورة البقرة آيت:256)

ಅಲ್ಲಾಹ್ – ಅವನ ಹೊರತು ಬೇರೆ ಆರಾಧ್ಯನಿಲ್ಲ. (ಅವನು) ಸದಾ ಜೀವಂತನೂ ಸ್ವತಃ ನೆಲೆನಿಂತಿರುವವನೂ (ಎಲ್ಲವನ್ನು) ನೆಲೆನಿಲ್ಲಿಸುವವನೂ ಆಗಿದ್ದಾನೆ. ತೂಕಡಿಕೆಯಾಗಲಿ, ನಿದ್ರೆಯಾಗಲಿ ಅವನಿಗಿಲ್ಲ. ಆಕಾಶಗಳಲ್ಲಿ ಮತ್ತು ಭೂಮಿಯಲ್ಲಿರುವ ಎಲ್ಲವೂ ಅವನದ್ದಾಗಿವೆ. ಅವನ ಅನುಮತಿಯಿಲ್ಲದೆ ಅವನ ಸನ್ನಿಧಿಯಲ್ಲಿ ಶಿಫಾರಸು ಮಾಡುವವರು ಯಾರಿದ್ದಾರೆ? ಅವರ ಮುಂದೆ ಮತ್ತು ಹಿಂದೆ ಇರುವ ಎಲ್ಲವನ್ನೂ ಅವನು ಬಲ್ಲನು. ಅವನು ಇಚ್ಛಿಸುವುದರ ಹೊರತು, ಅವನ ಜ್ಞಾನದಿಂದ ಏನನ್ನೂ ಅವರು ಗಳಿಸುವುದಿಲ್ಲ. ಅವನ ಸಿಂಹಾಸನ ಆಕಾಶಗಳಲ್ಲೂ ಭೂಮಿಯಲ್ಲೂ ವ್ಯಾಪಿಸಿಕೊಂಡಿದೆ. ಅವುಗಳ ಸಂರಕ್ಷಣೆ ಅವನನ್ನು ಆಯಾಸಗೊಳಿಸುವುದಿಲ್ಲ. ಅವನು ಅತ್ಯುನ್ನತನೂ ಮಹಾಮಹಿಮನೂ ಆಗಿದ್ದಾನೆ.

### ಅಲ್ಲಾಹನು ನಿರಪೇಕ್ಷನು ಮತ್ತು ಅವನಿಗೆ ಸಮಾನಾಗಿ ಯಾರೂ ಇಲ್ಲ

قُلْ هُوَ اللّٰهُ اَحَدٌ ○ اَللّٰهُ الصَّمَدُ ○ لَمْ يَلِدْ ۙ وَلَمْ يُوْلَدْ ○ وَلَمْ يَكُنْ لَّهٗ كُفُوًا اَحَدٌ ○ (سورة الاخلاص)

ಪರಮ ದಯಾವಂತನೂ ಕಾರುಣ್ಯನಿಧಿಯೂ ಆದ ಅಲ್ಲಾಹನ ನಾಮದಿಂದ. ಹೇಳು: 'ಅವನು ಅಲ್ಲಾಹನು; ಏಕನು. 'ಅವನು ನಿರಪೇಕ್ಷನು (ಮತ್ತು ಸರ್ವರಿಗೂ ಆಶ್ರಯದಾತನು).. 'ಅವನು ಜನಕನಲ್ಲ; ಜಾತನೂ ಅಲ್ಲ. 'ಅವನಿಗೆ ಸಮನಾಗಿ ಯಾರೂ ಇಲ್ಲ.'

### ಅಲ್ಲಾಹನನ್ನು ಸ್ತುತಿಸುವುದರೊಂದಿಗೆ ಅವನ ಮಹಿಮೆಯನ್ನು ಕೊಂಡಾಡದ ಯಾವುದೇ ವಸ್ತುವಿಲ್ಲ

تُسَبِّحُ لَهُ السَّمٰوٰتُ السَّبْعُ وَالْاَرْضُ وَمَنْ فِيْهِنَّ ؕ وَاِنْ مِّنْ شَيْءٍ اِلَّا يُسَبِّحُ بِحَمْدِهٖ وَلٰكِنْ لَّا تَفْقَهُوْنَ تَسْبِيْحَهُمْ ؕ اِنَّهٗ كَانَ حَلِيْمًا غَفُوْرًا ○

ಏಳು ಆಕಾಶಗಳೂ ಭೂಮಿಯೂ ಅವುಗಳಲ್ಲಿರುವ ಎಲ್ಲರೂ ಅವನ ಮಹಿಮೆಯನ್ನು ಕೊಂಡಾಡುತ್ತಾರೆ. ಅವನನ್ನು ಸ್ತುತಿಸುವುದರೊಂದಿಗೆ ಅವನ ಮಹಿಮೆಯನ್ನು ಕೊಂಡಾಡದ ಯಾವುದೇ ವಸ್ತುವಿಲ್ಲ. ಆದರೆ ಅವುಗಳ ಪ್ರಕೀರ್ತನೆಗಳು ನಿಮಗೆ ಗ್ರಾಹ್ಯವಾಗುವುದಿಲ್ಲ. ಖಂಡಿತವಾಗಿಯೂ ಅವನು ಸಹನಶೀಲನೂ ಅತ್ಯಂತ ಕ್ಷಮಿಸುವವನೂ ಆಗಿದ್ದಾನೆ.

### ದೃಷ್ಟಿಗಳು ಅಲ್ಲಾಹನನ್ನು ತಲಪಲಾರವು. ಆದರೆ ಅಲ್ಲಾಹನು ದೃಷ್ಟಿಗಳನ್ನು ತಲಪುತ್ತಾನೆ.

لَا تُدْرِكُهُ الْاَبْصَارُ ۫ وَهُوَ يُدْرِكُ الْاَبْصَارَ ۚ وَهُوَ اللَّطِيْفُ الْخَبِيْرُ ○

ದೃಷ್ಟಿಗಳು ಅವನನ್ನು ತಲಪಲಾರವು. ಆದರೆ ಅವನು ದೃಷ್ಟಿಗಳನ್ನು ತಲಪುತ್ತಾನೆ. ಅವನು ಅತಿಸೂಕ್ಷ್ಮನೂ ಎಲ್ಲ ಬಲ್ಲವನೂ ಆಗಿರುತ್ತಾನೆ.

### ಅಲ್ಲಾಹನು ಮನುಷ್ಯನ ಜೀವನಾಡಿಗಿಂತ ಹೆಚ್ಚು ಸಮೀಪದಲ್ಲಿದ್ದೇವೆ.

وَلَقَدْ خَلَقْنَا الْاِنْسَانَ وَنَعْلَمُ مَا تُوَسْوِسُ بِهٖ نَفْسُهٗ ۖ وَنَحْنُ اَقْرَبُ اِلَيْهِ مِنْ حَبْلِ الْوَرِيْدِ ○ (سورة ق آيت 17)

ದಿಟವಾಗಿಯೂ ನಾವೇ ಮನುಷ್ಯನನ್ನು ಸೃಷ್ಟಿಸಿರುವೆವು. ಅವನ ಮನಸ್ಸು ಅವನಿಗೇನನ್ನು ಪಿಸುಗುಟ್ಟುತ್ತದೆಂಬುದನ್ನು ನಾವು ಬಲ್ಲೆವು. ಅವನ ಜೀವನಾಡಿಗಿಂತ ನಾವು ಅವನಿಗೆ ಹೆಚ್ಚು ಸಮೀಪದಲ್ಲಿದ್ದೇವೆ.

### ಅಲ್ಲಾಹನು ಬಯಸುವವರಿಗೆ ಉನ್ನತ ಸ್ಥಾನವನ್ನು ನೀಡುತ್ತಾನೆ ಹಾಗೂ ಅಲ್ಲಾಹನು ಬಯಸುವವರನ್ನು ಅಪಮಾನಿತರನ್ನಾಗಿ ಮಾಡುತ್ತಾನೆ.

قُلِ اللّٰهُمَّ مٰلِكَ الْمُلْكِ تُؤْتِي الْمُلْكَ مَنْ تَشَآءُ وَتَنْزِعُ الْمُلْكَ مِمَّنْ تَشَآءُ ۫ وَتُعِزُّ مَنْ تَشَآءُ وَتُذِلُّ مَنْ تَشَآءُ ؕ بِيَدِكَ الْخَيْرُ ؕ اِنَّكَ عَلٰى كُلِّ شَيْءٍ قَدِيْرٌ ○ (سورة آل عمران آيت:27)

ಹೇಳಿರಿ: 'ಸರ್ವಾಧಿಪತ್ಯದ ಪ್ರಭುವಾದ ಅಲ್ಲಾಹನೇ, ನೀನು ಬಯಸುವವರಿಗೆ, ಆಧಿಪತ್ಯ ನೀಡುತ್ತಿ. ನೀನು ಬಯಸುವವರಿಂದ ಅಧಿಕಾರವನ್ನು ಕಿತ್ತುಕೊಳ್ಳುತ್ತಿ. ನೀನು ಬಯಸುವವರಿಗೆ ಉನ್ನತ ಸ್ಥಾನವನ್ನು ನೀಡುತ್ತಿ. ನೀನು ಬಯಸುವವರನ್ನು ಅಪಮಾನಿತರನ್ನಾಗಿ ಮಾಡುತ್ತಿ. ಎಲ್ಲ ಒಳಿತುಗಳು ನಿನ್ನ ಕೈಯಲ್ಲಿವೆ. ನಿಸ್ಸಂದೇಹವಾಗಿಯೂ ನೀನು ಎಲ್ಲ ಕಾರ್ಯಗಳಲ್ಲೂ ಸರ್ವಸಮರ್ಥನಾಗಿರುವೆ.

**ನಾನು ನನ್ನ ಅಸ್ತಿತ್ವದಲ್ಲಿ ಹಿಂಸೆಯನ್ನು ನಿಷಿದ್ಧಗೊಳಿಸಿದ್ದೇನೆ. ನಾನು ನಿಮ್ಮಲ್ಲಿ ಯಾರಿಗೆ ಸರಿಯಾದ ಮಾರ್ಗದಲ್ಲಿ ನಡೆಸಿದ್ದೇನೋ ಅವರ ಹೊರತು ನೀವೆಲ್ಲರು ದಾರಿತಪ್ಪಿದವರಾಗಿದ್ದೀರಿ. ಆದ್ದರಿಂದ ನನ್ನ ಬಳಿ ಮಾರ್ಗದರ್ಶನವನ್ನು ಯಾಚಿಸಿರಿ. ನಾನು ನಿಮ್ಮನ್ನು ಮಾರ್ಗದರ್ಶನ ನೀಡುವೆನು.**

## ಪ್ರವಾದಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಅಧ್ಯಾಪನೆಗಳು

عَنْ هَمَّامِ بْنِ مُنَبِّهٍ قَالَ هٰذَا مَا حَدَّثَنَا بِهٖ اَبُوْ هُرَيْرَةَ رضی اللہ عنہ عَنْ رَسُوْلِ اللّٰهِ صَلَّى اللّٰهُ عَلَيْهِ وَسَلَّمَ قَالَ اللّٰهُ عَزَّوَجَل كَذَّبَنِىْ عَبْدِىْ وَلَمْ يَكُنْ لَّهٗ ذٰلِكَ، وَشَتَمَنِىْ وَلَمْ يَكُنْ لَّهٗ ذٰلِكَ، تَكْذِيْبُهٗ اِيَّاىَ اَنْ يَّقُوْلَ فَلَنْ يُّعِيْدَنَا كَمَا بَدَاَنَا، وَاَمَّا شَتْمُهٗ اِيَّاىَ يَقُوْلُ اِتَّخَذَ اللّٰهُ وَلَدًا، وَاَنَا الصَّمَدُ الَّذِىْ لَمْ اَلِدْ وَلَمْ اُوْلَدْ، وَلَمْ يَكُنْ لِّىْ كُفُوًا اَحَدٌ۔

ಹಝ್ರತ್ ಅಬೂಹುರ್ರೈರ(ರ) ವರದಿ ಮಾಡುತ್ತಾರೆ ಪ್ರವಾದಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಹೇಳಿದರು: ಅಲ್ಲಾಹನು ನುಡಿಯುತ್ತಾನೆ: ನನ್ನ ದಾಸನು ನನ್ನ ವಿರೋಧಿಸುತ್ತಾನೆ ಆದರೆ ಆತನಿಗೆ ಹೀಗೆ ಮಾಡಬಾರದು. ಆತನು ನನಗೆ ಬೈಯುತ್ತಾನೆ ಆದರೆ ಆತನಿಗೆ ಹೀಗೆ ಮಾಡಲು ಅಧಿಕಾರವಿಲ್ಲ. ನನ್ನನ್ನು ತಿರಸ್ಕರಿಸುವುದು ಎಂದರೆ ಆತನು ಹೀಗೆ ಹೇಳುತ್ತಾನೆ ಅಲ್ಲಾಹನು ನಮ್ಮನ್ನು ಮತ್ತೊಮ್ಮೆ ಮೊದಲು ಸೃಷ್ಟಿದ ಹಾಗೆ ಸೃಷ್ಟಿಸಲು ಸಾಧ್ಯವಿಲ್ಲ. ಮತ್ತೆ ನನಗೆ ಬೈಯುವುದು ಎಂದರೆ ಆತನು ಹೇಳುತ್ತಾನೆ ಅಲ್ಲಾಹನು ಬೇರೆಯವನನ್ನು ತನ್ನ ಪುತ್ರನಾಗಿಸಿದ್ದಾನೆ ಆದರೆ ನನ್ನ ಜಾತಿಯು ಸಮದ್ ಆಗಿದೆ ಅಂದರೆ ನಾನು ಜನಕನಲ್ಲ; ಜಾತನೂ ಅಲ್ಲ. ಅವನಿಗೆ ಸಮನಾಗಿ ಯಾರೂ ಇಲ್ಲ.

**(ಮಸ್ನದ್ ಅಹ್ಮದ್, ಹದೀಖತುಸ್ಸಾಲಿಹೀನ್, ಹದೀಸ್–11)**

عَنْ اَبِىْ ذَرٍّ رَضِىَ اللّٰهُ عَنْهُ عَنِ النَّبِيِّ صَلَّى اللّٰهُ عَلَيْهِ وَسَلَّمَ فِيْمَا يَرْوِىْ عَنِ اللّٰهِ تَبَارَكَ وَتَعَالٰى اَنَّهٗ قَالَ يَا عِبَادِىْ اِنِّىْ حَرَّمْتُ الظُّلْمَ عَلٰى نَفْسِىْ وَجَعَلْتُهٗ بَيْنَكُمْ مُحَرَّمًا فَلَا تَظَالَمُوْا ، يَا عِبَادِىْ كُلُّكُمْ ضَآلٌّ اِلَّا مَنْ هَدَيْتُهٗ فَاسْتَهْدُوْنِىْ اَهْدِيْكُمْ ، يَا عِبَادِىْ كُلُّكُمْ جَائِعٌ اِلَّا مَنْ اَطْعَمْتُهٗ فَاسْتَطْعِمُوْنِىْ اُطْعِمْكُمْ ، يَا عِبَادِىْ كُلُّكُمْ عَارٍ اِلَّا مَنْ كَسَوْتُهٗ فَاسْتَكْسُوْنِىْ اَكْسُكُمْ، يَاعِبَادِىْ اِنَّكُمْ تُخْطِئُوْنَ بِاللَّيْلِ وَالنَّهَارِ وَاَنَا اَغْفِرُ الذُّنُوْبَ جَمِيْعًا فَاسْتَغْفِرُوْنِىْ اَغْفِرْلَكُمْ، يَاعِبَادِىْ اِنَّكُمْ لَنْ تَبْلُغُوْا ضُرِّىْ فَتَضُرُّوْنِىْ وَلَنْ تَبْلُغُوْا نَفْعِىْ فَتَنْفَعُوْنِىْ، يَاعِبَادِىْ لَوْ اَنَّ اَوَّلَكُمْ وَاٰخِرَكُمْ وَاِنْسَكُمْ وَجِنَّكُمْ كَانُوْا عَلٰى اَتْقٰى قَلْبِ رَجُلٍ وَّاحِدٍ مِّنْكُمْ مَا زَادَ ذٰلِكَ فِىْ مُلْكِىْ شَيْئًا، يَاعِبَادِىْ لَوْ اَنَّ اَوَّلَكُمْ وَاٰخِرَكُمْ وَاِنْسَكُمْ وَجِنَّكُمْ كَانُوْا عَلٰى اَفْجَرِ قَلْبِ رَجُلٍ وَّاحِدٍ مِّنْكُمْ مَا نَقَصَ ذٰلِكَ مِنْ مُلْكِىْ شَيْئًا، يَاعِبَادِىْ لَوْ اَنَّ اَوَّلَكُمْ وَاٰخِرَكُمْ وَاِنْسَكُمْ وَجِنَّكُمْ قَامُوْا فِىْ صَعِيْدٍ وَّاحِدٍ فَسَاَلُوْنِىْ فَاَعْطَيْتُ كُلَّ اِنْسَانٍ مَّسْئَلَتَهٗ مَا نَقَصَ ذٰلِكَ مِمَّا عِنْدِىْ اِلَّا كَمَا يَنْقُصُ الْمِخْيَطُ اِذَا اُدْخِلَ الْبَحْرَ، يَاعِبَادِىْ اِنَّمَا هِىَ اَعْمَالُكُمْ اُحْصِيْهَا لَكُمْ ثُمَّ اُوَفِّيْكُمْ اِيَّاهَا فَمَنْ وَجَدَ خَيْرًا فَلْيَحْمَدِ اللّٰهَ وَمَنْ وَجَدَ غَيْرَ ذٰلِكَ فَلَا يَلُوْمَنَّ اِلَّا نَفْسَهٗ۔

ಹಝ್ರತ್ ಅಬೂ ಝರ್(ರ) ವರದಿ ಮಾಡುತ್ತಾರೆ ಪ್ರವಾದಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಅಲ್ಲಾಹನ ಕಡೆಯಿಂದ ಹೀಗೆ ತಿಳಿಸಿದರು ಅವರು ಹೇಳುತ್ತಾರೆ: ಅಲ್ಲಾಹನು ಹೀಗೆ ನುಡಿದಿದ್ದಾನೆ– ಎಲೈ ನನ್ನ ದಾಸರೇ!! ನಾನು ನನ್ನ ಅಸ್ತಿತ್ವದಲ್ಲಿ ಹಿಂಸೆಯನ್ನು ನಿಷಿದ್ಧಗೊಳಿಸಿದ್ದೇನೆ. ನಾನು ನಿಮ್ಮಲ್ಲಿ ಯಾರಿಗೆ ಸರಿಯಾದ ಮಾರ್ಗದಲ್ಲಿ ನಡೆಸಿದ್ದೇನೋ ಅವರ ಹೊರತು ನೀವೆಲ್ಲರು ದಾರಿತಪ್ಪಿದವರಾಗಿದ್ದೀರಿ. ಆದ್ದರಿಂದ ನನ್ನ ಬಳಿ ಮಾರ್ಗದರ್ಶನವನ್ನು ಯಾಚಿಸಿರಿ. ನಾನು ನಿಮ್ಮನ್ನು ಮಾರ್ಗದರ್ಶನ ನೀಡುವೆನು. ಓ ನ್ನನ ದಾಸರೇ!! ನೀವೆಲ್ಲರು ಹಸಿವಿನಲ್ಲಿದ್ದೀರಿ ನಾನು ತಿನ್ನಿಸುವವರನ್ನು ಹೊರತುಪಡಿಸಿ. ಆದ್ದರಿಂದ ನನ್ನಿಂದ ಮಾತ್ರ ಜೀವನಾಧಾರವನ್ನು ಯಾಚಿಸಿರಿ. ನಾನು ನಿಮ್ಮೆಲ್ಲರನ್ನು ಜೀವನಾಧಾರವನ್ನು ನೀಡುವೆನು. ಓ ನನ್ನ ದಾಸರೇ!! ನೀವೆಲ್ಲರು ನಗ್ನನಾಗಿದ್ದೀರಿ ನಾನು ಉಡುಪನ್ನು ಉಡಿಸುವವರನ್ನು ಹೊರತುಪಡಿಸಿ. ಆದ್ದರಿಂದ ನನ್ನಿಂದ ಮಾತ್ರ ಉಡುಪುಗಳನ್ನು ಯಾಚಿಸಿರಿ. ನಾನು ನಿಮ್ಮನ್ನು ಉಡುಪುಗಳನ್ನು ತಲುಪಿಸುವೆನು. ಓ ನ್ನನ ದಾಸರೇ!! ನಿವು ಹಗಲು ರಾತ್ರಿ ತಪ್ಪುಗಳನ್ನು ಮಾಡಿದರೂ ಸಹ ಸಾನು ನಿಮ್ಮನ್ನು ಕ್ಷಮಿಸುವೆನು. ಆದ್ದರಿಂದ ನನ್ನಿಂದ ಮಾತ್ರ ಕ್ಷಮಾದಾನವನ್ನು ಯಾಚಿಸಿರಿ. ನಾನು ನಿಮ್ಮನ್ನು ಕ್ಷಮಿಸುವೆನು. ಓ ನ್ನನ ದಾಸರೇ!! ನೀವು ನನಗೆ ಯಾವ ಹಾನಿ ಉಂಟು ಮಾಡಲು ಸಾಧ್ಯವಿಲ್ಲ. ಹಾನಿವುಂಟು ಮಾಡಲು ಬಯಸಿದರೂ ಮಾಡಲು ಸಾಧ್ಯವಿಲ್ಲ. ಅದೇ ರೀತಿ ನೀವು ನನಗೆ ಯಾವ ಲಾಭ ತಲುಪಿಸಲು ಸಾಧ್ಯವಿಲ್ಲ. ಲಭ ತಲುಪಿಸಲು ಪ್ರಯತ್ನಿಸಿದರೂ ತಲುಪಿಸಲು ಸಾಧ್ಯವಿಲ್ಲ. ಓ ನನ್ನ ದಾಸರೇ!! ನಿಮ್ಮ ಮುಂದೆ ಬರುವವರು ಮತ್ತು ನಿಮ್ಮ ಪೂರ್ವಜರೂ ಎಲ್ಲರೂ ಉತ್ತಮ ಭಯಭಕ್ತಿವುಳ್ಳವವರಾದರೂ ನನ್ನ ಪ್ರಭುತ್ವದಲ್ಲಿ ಯಾವುದೇ ರೀತಿಯ ವೃದ್ಧಿ ಆಗುವುದಿಲ್ಲ. ಅದೇ ರೀತಿ ಓ ನನ್ನ ದಾಸರೇ!! ನಿಮ್ಮ ಮುಂದೆ ಬರುವವರು ಹಾಗೂ ನಿಮ್ಮ ಪೂರ್ವಜರೂ ಎಲ್ಲರೂ ಎಲ್ಲರಕ್ಕಿಂತ ಹೆಚ್ಚು ಕೆಟ್ಟು ನಡವಳಿಕೆವುಳ್ಳವವರಾದರೂ ನನ್ನ ಪ್ರಭುತ್ವದಲ್ಲಿ ಯಾವುದೇ ರೀತಿಯ ಹಾನಿವುಂಟು ಮಡಲು ಸಾಧ್ಯವಿಲ್ಲ. ಓ ನನ್ನ ದಾಸರೇ!! ನಿಮ್ಮ ಎಲ್ಲಾ ಪೂರ್ವಜರೂ ಹಾಗೂ ಮುಂದೆ ಬರುವವರೂ ಒಂದು ಮೈದಾನದಲ್ಲಿ ಸೇರಿ ನನ್ನಿಂದ ತಮ್ಮ ಅವಶ್ಯಕತೆಗಳನ್ನು ನೀಡಿದರೆ ನಾನು ಎಲ್ಲರ ಅವಶ್ಯಕತೆಗಳನ್ನು ಪೂರೈಸಿದರೂ ಸಹ ನನ್ನ ಖಜಾನೆಯಲ್ಲಿ ಒಂದು ಸಮುದ್ರದಲ್ಲಿ ಒಂದು ಸೂಜಿ ಹಾಕಿ ಎತ್ತಿದರೆ ಸಮುದ್ರದ ನೀರು ಕಡಿಮೆ ಆಗುವುದಿಲ್ಲವೋ ಅಷ್ಟು ಕಡಿಮೆ ಆಗುವುದಿಲ್ಲ. ಓ ನನ್ನ ದಾಸರೇ!! ಇದು ನಾನು ಮಾಡಿರುವ ನಿಮ್ಮೆಲ್ಲರ ಕರ್ಮಗಳ ಲೆಕ್ಕಚಾರವಾಗಿದೆ. ನಾನು ಅವುಗಳಿಗೆ ತಕ್ಕ ಪ್ರತಿಫಲ ನೀಡುವೆನು.

**(ಮುಸ್ಲಿಮ್ ಕಿತಾಬುಲ್ ಬರ್ರಿ ವಸ್ಸಿಲ ಬಾಬ್ ತಹ್ರೀಮುಝ್ಝುಲ್ಮ್, ಹದೀಖತುಸ್ಸಾಲಿಹೀನ್ ಹದೀಸ್–12)**

عَنْ اَبِىْ هُرَيْرَةَ رَضِىَ اللّٰهُ عَنْهُ قَالَ : قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ يَقُوْلُ اللّٰهُ تَعَالٰى اَنَا عِنْدَ ظَنِّ عَبْدِىْ بِىْ وَاَنَا مَعَهٗ حِيْنَ يَذْكُرُنِىْ فَاِنْ ذَكَرَنِىْ فِىْ نَفْسِهٖ ذَكَرْتُهٗ فِىْ نَفْسِىْ وَاِنْ ذَكَرَنِىْ فِىْ مَلَاٍ ذَكَرْتُهٗ فِىْ مَلَاٍ خَيْرٍ مِّنْهُمْ وَاِنِ اقْتَرَبَ اِلَىَّ شِبْرًا اِقْتَرَبْتُ اِلَيْهِ ذِرَاعًا وَاِنِ اقْتَرَبَ اِلَىَّ ذِرَاعًا اِقْتَرَبْتُ اِلَيْهِ بَاعًا وَاِنْ اَتَانِىْ يَمْشِىْ اَتَيْتُهٗ هَرْوَلَةً۔ (ترمذی ابواب الدعوات، بحوالہ حدیقۃ الصالحین حدیث نمبر 80)

ಹಝ್ರತ್ ಅಬೂ ಹುರ್ರೈರ(ರ) ವರದಿ ಮಾಡುತ್ತಾರೆ: ಪ್ರವಾದಿ ಸಲ್ಲಲ್ಲಾಹು ಅಲೈಹವಸಲ್ಲಮರು ಹೀಗೆ ಹೇಳಿದರು: ಅಲ್ಲಾಹನು ಹೀಗೆ ಹೇಳುತ್ತಾನೆ ನಾನು ದಾಸರ ಊಹೆಯ ಪ್ರಕಾರ ವರ್ತಿಸುವೆನು. ದಾಸನು ನನ್ನನ್ನು ಸ್ಮರಿಸಿದಾಗ ನಾನು ಅವನೊಂದಿಗೆ ಇರುವೆನು. ಒಂದು ವೇಳೆ ಆತನು ನನ್ನನ್ನು ತನ್ನ ಮನಸ್ಸಿನಲ್ಲಿ ಸ್ಮರಿಸಿದರೆ ನಾನು ಸಹ ಅವನನ್ನು ನನ್ನ ಮನಸ್ಸಿನಲ್ಲಿ ಸ್ಮರಿಸುವೆನು. ಆತನು ನನ್ನನ್ನು ಸಭೆಯಲ್ಲಿ ಸ್ಮರಿಸಿದರೆ ನಾನು ಆತನನ್ನು ಅದಕ್ಕಿಂತ ಉತ್ತಮ ಸಭೆಯಲ್ಲಿ ಸ್ಮರಿಸುವೆನು. ಆತನು ನನ್ನ ಕಡೆ ಒಂದು ಗೇಣು ಬಂದರೆ ನಾನು ಆತನ ಕಡೆ ಒಂದು ಕೈಯಷ್ಟು ಮುಂದೆ ಬರುವೆನು. ಒಂದು ವೇಳೇ ಆತನು ನನ್ನ ಕಡೆ ಒಂದು ಕೈಯಷ್ಟು ಮುಂದೆ ಬಂದರೆ ನಾನು ಆತನ ಕಡೆ ಎರಡು ಕೈಯಷ್ಟು ಮುಂದೆ ಬರುವೆನು. ಓಮದು ವೇಳೆ ಆತನು ನನ್ನ ಕಡೆ ನಡೆದುಕೊಂಡು ಬಂದರೆ ನಾನು ಆತನ ಕಡೆ ಓಡಿ ಹೋಗುವೆನು.

**(ತಿರ್ಮಿಝಿ ಅಬ್ವಾಬುದ್ದವಾತ್, ಹದೀಖತುಸ್ಸಾಲಿಹೀನ್, ಹದೀಸ್–80)**

**ಸರ್ವಶಕ್ತನಾದ ಒಬ್ಬ ದೇವನಿದ್ದಾನೆಂದು ಈಗಲಾದರೂ ದೃಢ ವಿಶ್ವಾಸ ಹೊಂದದವನು ಎಷ್ಟು ದುರದೃಷ್ಟ ಶಾಲಿಯಾಗಿರುವನು. ನಮ್ಮ ಸ್ವರ್ಗ, ನಮ್ಮ ದೇವನಾಗಿರುವನು, ನಮ್ಮ ಶ್ರೇಷ್ಠ ರಸಾನುಭೂತಿಗಳು ನಮ್ಮ ದೇವನಲ್ಲಿವೆ. ಏಕೆಂದರೆ ನಾವು ಅವನನ್ನು ಕಂಡಿದ್ದೇವೆ. ಎಲ್ಲಾ ಸೌಂದರ್ಯ ಅವನಲ್ಲಿ ನಾವು ದರ್ಶಿಸಿದೆವು.**

**ದೇವನು ಒಂದು ಪ್ರಿಯ ಖಜಾನೆ ಆಗಿದ್ದಾನೆ. ಅದರ ಬಗ್ಗೆ ಲಕ್ಷ್ಯ ನೀಡಿರಿ. ಅವನು ನಿಮ್ಮ ಪ್ರತಿಯೊಂದು ಹೆಜ್ಜೆಯಲ್ಲಿ ನಿಮ್ಮ ಸಹಾಯಕನಾಗಿದ್ದಾನೆ. ಅವನ ಹೊರತು ನೀವು ಏನೂ ಅಲ್ಲ. ನಿಮ್ಮ ಸಾಧನ ಸಾಮಗ್ರಿಗಳು ಮತ್ತು ಪ್ರಯತ್ನಗಳು ಯಾವ ಪ್ರಯೋಜನಕ್ಕೆ ಬರಲಾರವು.**

**ಸಯ್ಯದುನಾ ಹಝ್ರತ್ ಮಸೀಹ್ ಮೌಊದ್[ಅ] ರವರ ಅಧ್ಯಾಪನೆಗಳು**

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ:

"ಸರ್ವಶಕ್ತನಾದ ಒಬ್ಬ ದೇವನಿದ್ದಾನೆಂದು ಈಗಲಾದರೂ ದೃಢ ವಿಶ್ವಾಸ ಹೊಂದದವನು ಎಷ್ಟು ದುರದೃಷ್ಟ ಶಾಲಿಯಾಗಿರುವನು. ನಮ್ಮ ಸ್ವರ್ಗ, ನಮ್ಮ ದೇವನಾಗಿರುವನು, ನಮ್ಮ ಶ್ರೇಷ್ಠ ರಸಾನುಭೂತಿಗಳು ನಮ್ಮ ದೇವನಲ್ಲಿವೆ. ಏಕೆಂದರೆ ನಾವು ಅವನನ್ನು ಕಂಡಿದ್ದೇವೆ. ಎಲ್ಲಾ ಸೌಂದರ್ಯ ಅವನಲ್ಲಿ ನಾವು ದರ್ಶಿಸಿದೆವು. ಜೀವವನ್ನು ಬಲಿಯರ್ಪಿಸುವ ಮೂಲಕ ದೊರಕುವ ನಿಧಿಯಾಗಿರುವುದಾದರೂ ಅದು ಪಡೆಯಲು ಅರ್ಹವಾಗಿದೆ. ಎಲ್ಲವನ್ನೂ ತೆತ್ತು ಖರೀದಿಸಲು ಯೋಗ್ಯವಾದ ರತ್ನ ಇದಾಗಿದೆ. ಓ ಭಾಗ್ಯ ಹೀನರೇ, ನೀವು ಈ ನೀರಿನ ಝರಿಯ ಕಡೆಗೆ ಓಡಿ ಬನ್ನಿರಿ. ಅದು ನಿಮ್ಮ ದಾಹಕ್ಕೆ ಶಮನ ನೀಡುವುದು. ಅದು ನಿಮ್ಮನ್ನು ರಕ್ಷಿಸುವಂತಹ ಜೀವಿತದ ನೀರ ದಾರೆಯಾಗಿದೆ. ನಾನು ಏನು ಮಾಡಲಿ? ಯಾವ ರೀತಿ ಈ ಶುಭ ವಾರ್ತೆಯನ್ನು ಹೃದಯಗಳಲ್ಲಿ ಮೂಡಿಸಲಿ. ನಾನು ಯಾವ ತಮಟೆ ಬಾರಿಸಿ ಬೀದಿಗಳಲ್ಲಿ ಡಂಗುರ ಸಾರಿ ನಿಮಗೆ ಒಬ್ಬ ದೇವನಿದ್ದಾನೆಂದು ಹೇಳುವುದನ್ನು ಆಲಿಸುವಂತೆ ಮಾಡಲಿ. ಜನರು ಕಿವಿಗೊಟ್ಟು ಕೇಳುವಂತೆ ಮಾಡಲು ನಾನು ಯಾವ ಔಷಧಿಯಿಂದ ಚಿಕಿತ್ಸೆ ನಡೆಸಲಿ.

ನೀವು ದೇವನಿಗೆ ಸೇರಿದವರಾಗುವಿರಾದರೆ ನೀವು ದೃಢವಾಗಿ ನಂಬಿರಿ. ದೇವನು ನಿಮ್ಮವನೇ ಆಗಿರುವನು. ನೀವು ನಿದ್ರಿಸುವಾಗ ನಿಮಗೋಸ್ಕರ ಅವನು ಎಚ್ಚರದಿಂದಿರು ವನು. ನೀವು ನಿಮ್ಮ ಶತ್ರುವಿನ ಕಾರಸ್ಥಾನದ ಬಗ್ಗೆ ಅರಿತಿದಿದ್ದಾಗ ದೇವನು ಅದನ್ನು ನೋಡಿ ಶತ್ರುವಿನ ಕಾರಸ್ಥಾನಗಳನ್ನು ನಿಷ್ಫಲಗೊಳಿಸುವನು. ನಿಮ್ಮ ದೇವನಲ್ಲಿ ಯಾವ್ಯಾವ ಅದ್ಭುತ ಸಾಮರ್ಥ್ಯಗಳಿವೆ ಎಂದು ನೀವು ಅರಿತಿಲ್ಲ. ನೀವು ಅವುಗಳ ಬಗ್ಗೆ ಅರಿತಿದ್ದರೆ ನೀವು ಲೋಕದ ಬಗ್ಗೆ ತೀವ್ರವಾಗಿ ದುಃಖಿಸುವ ಅವಶ್ಯಕತೆ ಎಂದೂ ಉಂಟಾಗುತ್ತಿರಲಿಲ್ಲ. ಒಂದು ಖಜಾನೆಯನ್ನು ಹೊಂದಿರುವವನು ಒಂದು ಪೈಸೆ ನಷ್ಟವಾದುದಕ್ಕೆ ಅಳುತ್ತಾ ಚೀರಾಡುತ್ತಾ ನಾಶೋನ್ಮುಖನಾಗುತ್ತಾನೋ? ನಿಮಗೆ ಈ ಖಜಾನೆಯ ಬಗ್ಗೆ ತಿಳಿದಿದ್ದರೆ, ನಿಮ್ಮ ಪ್ರತಿಯೊಂದು ಅವಶ್ಯಕತೆಯನ್ನು ದೇವನು ಈಡೇರಿಸುವನು ಎಂದು ನಿಮಗೆ ತಿಳಿದಿದ್ದರೆ ನೀವು ಲೌಕಿಕ ಸಂಪಾದನೆ ಮಾಡುವಾಗ ಅವನನ್ನು ಮರೆತು ಬಿಡುವುದೇಕೆ? ದೇವನು ಒಂದು ಪ್ರಿಯ ಖಜಾನೆ ಆಗಿದ್ದಾನೆ. ಅದರ ಬಗ್ಗೆ ಲಕ್ಷ್ಯ ನೀಡಿರಿ. ಅವನು ನಿಮ್ಮ ಪ್ರತಿಯೊಂದು ಹೆಜ್ಜೆಯಲ್ಲಿ ನಿಮ್ಮ ಸಹಾಯಕನಾಗಿದ್ದಾನೆ. ಅವನ ಹೊರತು ನೀವು ಏನೂ ಅಲ್ಲ. ನಿಮ್ಮ ಸಾಧನ ಸಾಮಗ್ರಿಗಳು ಮತ್ತು ಪ್ರಯತ್ನಗಳು ಯಾವ ಪ್ರಯೋಜನಕ್ಕೆ ಬರಲಾರವು."

**(ಕಶ್ತಿ ಎ ನೂಹ್, ರೂಹಾನಿ ಖಝಾಈನ್, ಸಂಪುಟ–19, ಪುಟ–21–22)**

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ:

"ಆಲಿಸಲು ಇಚ್ಛಿಸುವವರೇ, ಆಲಿಸಿರಿ. ದೇವನು ನಿಮ್ಮಿಂದ ಬಯಸುವುದಾದರೂ ಏನನ್ನು? ಅವನು ಬಯಸುವುದು ಇಷ್ಟು ಮಾತ್ರವಾಗಿದೆ – ನೀವು ಅವನಿಗೆ ಸೇರಿದವರಾಗಬೇಕು. ನೀವು ಅವನಿಗೆ ಸರಿಸಾಟಿಗಳಾಗಿ ಭೂಮಿಯಲ್ಲಾಗಲೀ ಆಕಾಶದಲ್ಲಾಗಲೀ ಯಾರನ್ನೂ ಕಲ್ಪಿಸಬಾರದು. ಗತಕಾಲದಲ್ಲಿ ಜೀವಂತವಾಗಿ ಇದ್ದ ಹಾಗೆ ಈಗಲೂ ಜೀವಂತವಾಗಿ ಇರುವವನೇ ನಮ್ಮ ದೇವ. ಅವನು ಮುಂಚಿನ ಕಾಲದಲ್ಲಿ ಮಾತನಾಡುತ್ತಿದ್ದ ಹಾಗೆ ಈಗಲೂ ಮಾತನಾಡುತ್ತಾನೆ. ಅವನು ಹಿಂದಿನ ಕಾಲದಲ್ಲಿ ಆಲಿಸುತಿದ್ದ ಹಾಗೆ ಈಗಲೂ ಆಲಿಸುತ್ತಾನೆ. ಅವನು ಇಂದಿನ ಕಾಲದಲ್ಲಿ ಆಲಿಸುತ್ತಾನೆ ಆದರೆ ಮಾತನಾಡುವುದಿಲ್ಲ ಎಂಬ ಕಲ್ಪನೆ ನಿರಾಧಾರವಾಗಿದೆ. ಅವನು ಇಂದೂ ಆಲಿಸುತ್ತಲೂ ಮಾತನಾಡುತ್ತಲೂ ಇದ್ದಾನೆ. ಅವನ ಗುಣಗಳು ಅನಾದಿ ಮತ್ತು ಅನಂತವಾಗಿವೆ. ಅವನ ಯಾವುದೇ ಗುಣ ಸ್ಥಗಿತವಾಗಿಲ್ಲ. ಅವನ ಯಾವುದೇ ಗುಣ ಎಂದೂ ಸ್ಥಗಿತವಾಗಲಾರದು. ಅವನು ಪುತ್ರನಾಗಲೀ ಪತ್ನಿಯಾಗಲೀ ಇಲ್ಲದ ಏಕನೂ ಸರಿಸಾಟಿಗಳಿಲ್ಲದವನೂ ಆಗಿರುವನು. ಅವನು ಅನುಪಮೇಯನೂ ಅದ್ವಿತೀಯನೂ ಆಗಿದ್ದಾನೆ..... ಅವನ ವಿಶಿಷ್ಟ ಗುಣಗಳಲ್ಲಿ ಯಾವುದಾದರೂ ಒಂದನ್ನು ಅವನ ಹಾಗೆಯೇ ಹೊಂದಿದವನು ಬೇರೆ ಯಾರೂ ಇಲ್ಲ..... ಅವನ ಯಾವುದೇ ಶಕ್ತಿ ಸಾಮರ್ಥ್ಯ ಕುಂದಿಹೋಗುತ್ತಾ ಇಲ್ಲ. ಅವನು ದೂರವಾಗಿದ್ದರೂ ಸಮೀಪವಾಗಿಯೇ ಇದ್ದಾನೆ. ಅವನು ಸಮೀಪವಾಗಿದ್ದರೂ ದೂರವಾಗಿಯೇ ಇದ್ದಾನೆ..... ಅವನು ಎಲ್ಲರಿಗಿಂತಲೂ ಮೇಲೆ ಇದ್ದಾನೆ. ಆದರೆ ಅವನ ಕೆಳಕಡೆ ಅವನಿಂದ ದೂರವಾಗಿ ಯಾರಾದರೂ ಇರುವರೆಂದು ಹೇಳಲಾರೆವು. ಅವನು ಆಕಾಶದಲ್ಲಿ ಸಿಂಹಾಸನಾರೂಢನಾಗಿದ್ದರೂ ಅವನು ಭೂಮಿಯಲ್ಲಿಲ್ಲವೆಂದು ಹೇಳಲಾರೆವು. ಅವನು ಎಲ್ಲ ಪರಿಪೂರ್ಣ ಗುಣಗಳನ್ನು ತನ್ನಲ್ಲಿ ಒಗ್ಗೂಡಿಸಿಕೊಂಡವನಾಗಿದ್ದಾನೆ. ಅವನು ಎಲ್ಲ ಸತ್ಯಸಂಧವಾದ ಸ್ತುತಿಗಳಿಗೆ ಅರ್ಹನಾಗಿದ್ದಾನೆ. ಅವನು ಎಲ್ಲ ಒಳಿತುಗಳ ಒರತೆಯಾಗಿದ್ದಾನೆ. ಅವನು ಎಲ್ಲ ಶಕ್ತಿಗಳನ್ನು ಒಟ್ಟಿಗೆ ಸೇರಿಸಿಕೊಳ್ಳುವವನಾಗಿದ್ದಾನೆ. ಅವನು ಎಲ್ಲ ಅನುಗ್ರಹಗಳ ಉಗಮಸ್ಥಾನವಾಗಿದ್ದಾನೆ. ಅವನು ಎಲ್ಲ ವಸ್ತುಗಳು ಮರಳಿ ಹೋಗುವ ಗಮ್ಯಸ್ಥಾನವೂ ಆಗಿದ್ದಾನೆ. ಅವನು ಎಲ್ಲ ಲೋಕಗಳ ಅಧಿಪತಿಯಾಗಿದ್ದಾನೆ. ಅವನು ಎಲ್ಲ ಶ್ರೇಷ್ಠತೆಗಳನ್ನು ಹೊಂದಿರುವವನೂ ಪ್ರತಿಯೊಂದು ನ್ಯೂನತೆ ಮತ್ತು ಬಲಹೀನತೆಯಿಂದ ಮುಕ್ತನೂ ಪರಿಶುದ್ಧನೂ ಆಗಿರುವನು. ಅವನು ಆಕಾಶದಲ್ಲೂ ಭೂಮಿಯಲ್ಲೂ ಇರುವವರೆಲ್ಲರಿಂದ ಆರಾಧಿಸಲ್ಪಡಲು ಅರ್ಹನು ಎಂಬ ವಿಶಿಷ್ಟತೆಯನ್ನು ಹೊಂದಿದವನಾಗಿದ್ದಾನೆ. ಅವನಿಗೆ ಅಸಾಧ್ಯವಾದುದೇನೂ ಇಲ್ಲ. ಎಲ್ಲಾ ಆತ್ಮಗಳು ಮತ್ತು ಅವುಗಳ ಶಕ್ತಿಗಳು, ಎಲ್ಲಾ ಕಣಗಳು ಮತ್ತು ಅವುಗಳ ಶಕ್ತಿಗಳು ಅವನ ಸೃಷದಠಿಸಿದವುಗಳೇ ಆಗಿವೆ. ಅವನ ಮೂಲಕ ಹೊರತು ಯಾವುದೇ ವಸ್ತು ಅಸ್ತಿತ್ವಕ್ಕೆ ಬರುವುದಿಲ್ಲ. ಅವನು ತನ್ನ ಶಕ್ತಿಗಳ, ತನ್ನ ಸಾಮರ್ಥ್ಯಗಳ ಮತ್ತು ತನ್ನ ದೃಷ್ಟಾಂತಗಳ ಮೂಲಕ ತನ್ನ ಅಸ್ತಿತ್ವವನ್ನು ಸ್ವತಃ ಪ್ರಕಟಿಸುತ್ತಾನೆ. ನಾವು ಅವನ ಮೂಲಕವೇ ಗಳಿಸಬಹುದಾಗಿದೆ. ಅವನು ಸತ್ಯವಂತರಿಗೆ ತನ್ನ ಅಸ್ತಿತ್ವವನ್ನು ಪ್ರಕಟಿಸುತ್ತಾ ಇರುತ್ತಾನೆ. ಅವನು ತನ್ನ ಸಾಮರ್ಥ್ಯಗಳನ್ನು ಅವರಿಗೆ ತೋರಿಸುತ್ತಾ ಇರುತ್ತಾನೆ. ಅದರ ಮೂಲಕವೇ ಅವನನ್ನು ಗುರುತಿಸಬಹುದಾಗಿದೆ. ಅವನಿಗೆ ಇಷ್ಟಕರವಾದ ಮಾರ್ಗ ಯಾವುದೆಂದು ಅದರ ಮೂಲಕ ಕಂಡು ಹಿಡಿಯಬಹುದಾಗಿದೆ. ಅವನು ಭೌತಿಕ ಕಣ್ಣುಗಳ ಸಹಾಯವಿಲ್ಲದೆ ಕಾಣುತ್ತಾನೆ. ಅವನು ಭೌತಿಕ ಕಿವಿಗಳ ಸಹಾಯವಿಲ್ಲದೆ ಆಲಿಸುತ್ತಾನೆ. ಅವನು ಭೌತಿಕ ನಾಲಗೆಯ ಸಹಾಯವಿಲ್ಲದೆ ಮಾತನಾಡುತ್ತಾನೆ. ಅಸ್ತಿತ್ವವಿಲ್ಲದುದನ್ನು ಅಸ್ತಿತ್ವಕ್ಕೆ ತರುವುದು ಅವನ ಕೆಲಸವಾಗಿದೆ. ನೀವು ಸ್ವಪ್ನದಲ್ಲಿ ಕಾಣುತ್ತಿರುವ ಹಾಗೆ ಯಾವುದೇ ಮೂಲ ವಸ್ತುವಿಲ್ಲದೆ ಅವನು ಒಂದು ಲೋಕವನ್ನು ಸೃಷ್ಟಿಸುತ್ತಾನೆ. ಪ್ರತಿಯೊಂದು ನಾಶಹೊಂದಿದ ಮತ್ತು ಅಳಿದು ಹೋದುದನ್ನು ಅಸ್ತಿತ್ವದಲ್ಲಿ ಇರುವಂತೆ ತೋರಿಸುತ್ತಾನೆ. ಇದೇ ರೀತಿ ಅವನ ಎಲ್ಲಾ ಶಕ್ತಿ ಸಮರ್ಥ್ಯಗಳು ಇವೆ. ಅವನ ಶಕ್ತಿ ಸಾಮರ್ಥ್ಯಗಳನ್ನು ಅಲ್ಲಗಳೆಯುವವನು ಬುದ್ಧಿ ಹೀನನಾಗಿದ್ದಾನೆ. ಅವನ ಬೃಹತ್ ಶಕ್ತಿಗಳ ಕುರಿತು ತಿಳಿಯದವನು ಅಂಧನಾಗಿದ್ದಾನೆ. ಅವನು ಎಲ್ಲವನ್ನೂ ಮಾಡುತ್ತಾನೆ. ಅವನ ಘನತೆಗೆ ವಿರುದ್ಧವಾಗಿರುವ ಮತ್ತು ಅವನ ಎಕ್ಕ ವಾಗ್ದಾನಗಳಿಗೆ ವಿರುದ್ಧವಾಗಿರುವ ಕೆಲಸಗಳ ಹೊರತು ಬೇರೆ ಎಲ್ಲಾ ಕೆಲಸಗಳನ್ನು ಮಾಡಲು ಅವನು ಶಕ್ತನು. ಅವನು ತನ್ನ ಅಸ್ತಿತ್ವದಲ್ಲೂ ಗುಣಗಳಲ್ಲೂ ವರ್ತನೆಗಳಲ್ಲೂ ದಿವ್ಯಶಕ್ತಿಗಳಲ್ಲೂ ಏಕನಾಗಿದ್ದಾನೆ. ಪವಿತ್ರ ಖುರ್‌ಆನ್ ತೆರೆದಿಟ್ಟಿರುವ ಒಂಉ ಬಾಗಿಲಿನ ಹೊರತು ಅವನ ಬಳಿ ತಲುಪುವ ಎಲ್ಲಾ ಬಾಗಿಲುಗಳು ಮುಚ್ಚಲ್ಪಟ್ಟಿವೆ. ಇದರ ಮೊದಲು ಆಗಿ ಹೋದ ಎಲ್ಲಾ ಸಬುವ್ವತ್‌ಗಳನ್ನೂ ಎಲ್ಲಾ ಗ್ರಂಥಗಳನ್ನೂ ಬೇರೆ ಬೇರೆಯಾಗಿ ಅನುಸರಿಸುವ ಅವಶ್ಯಕತೆ ಇಲ್ಲ. ಏಕೆಂದರೆ ಮುಹಮ್ಮದೀಯ ನಬುವ್ವತ್ ಅವುಗಳನ್ನೆಲ್ಲಾ ಒಳಗೊಂಡಿದ್ದು ಅವುಗಖ ಮೇಲೆ ಆವರಿಸಿದುದೂ ಆಗಿದೆ. ಈ ಒಂದು ಮಾರ್ಗದ ಹೊರತು ಉಳಿದ ಎಲ್ಲಾ ಮಾರ್ಗಗಳು ಮುಚ್ಚಲ್ಪಟ್ಟಿವೆ. ಅಲ್ಲಾಹನ ಸಮೀಪಕ್ಕೆ ತಲುಪಿಸುವಂತಹ ಸತ್ಯಗಳು ಅದರೊಳಗೆ ಇವೆ. ಅದರ ನಂತರ ಹೋಸದಾದ ಯಾವುದೇ ಸತ್ಯ ಬರಲಾರದು. ಅದರಲ್ಲಿ ಅಡಕವಾಗದೆ ಇರುವ ಯಾವುದೇ ಹಿಂದಿನ ಸತ್ಯವಿಲ್ಲ. ಈ ನಬುವ್ವತ್‌ನಲ್ಲಿ ಎಲ್ಲಾ ನಬುವ್ವತ್‌ಗಳು ಕೊನೆಗೊಂಡಿವೆ. ಹೀಗೆಯೇ ಆಗಬೇಕಾಗಿತ್ತು. **(ಅಲ್‌ವಸಿಯ್ಯತ್, ರೂಹಾನಿ ಖಝಾಈನ್, ಸಂಪುಟ–20, ಪುಟ–309)**

# ದೇವಾಸ್ತಿತ್ವದ ಹತ್ತು ಸಾಕ್ಷ್ಯಾಧಾರಗಳು

**ಹಝ್ರತ್ ಮಿರ್ಝಾ ಬಶೀರ್‌ಉದ್ದೀನ್ ಮಹ್ಮೂದ್ ಅಹ್ಮದ್(ರ)**
**ಜಾಗತಿಕ ಅಹ್ಮದಿಯಾ ಮುಸ್ಲಿಮ್ ಜಮಾಅತ್ತಿನ ಎರಡನೆಯ ಖಲೀಫ.**

ಇಂದಿನ ಕಾಲದಲ್ಲಿ ಭೌತಿಕವಾದಿಗಳು ಧಾರ್ಮಿಕ ವಿಶ್ವಾಸ ಹಾಗೂ ಆದರ್ಶಗಳ ವಿರುದ್ಧ ಮಾಡುವ ಆಕ್ಷೇಪಗಳಲ್ಲಿ ಅತ್ಯಂತ ಮುಖ್ಯವಾದುದು ದೇವನ ಅಸ್ತಿತ್ವದ ನಿರಾಕರಣೆಯಾಗಿದೆ. ಬಹುದೇವಾರಾಧಕರು ದೇವನಿಗೆ ಸಹಭಾಗಿಗಳನ್ನು ಕಲ್ಪಿಸುತ್ತಾರಾದರೂ ಕನಿಷ್ಠಪಕ್ಷ ದೇವನ ಅಸ್ತಿತ್ವವನ್ನು ಅಂಗೀಕರಿಸುವವರಾಗಿದ್ದಾರೆ. ಆದರೆ ನಾಸ್ತಿಕರು ದೇವನ ಅಸ್ತಿತ್ವವನ್ನು ಸಂಪೂರ್ಣವಾಗಿ ನಿರಾಕರಿಸುವವರಾಗಿದ್ದಾರೆ. ಆಧುನಿಕ ಕಾಲದ ವಿಜ್ಞಾನ ಪ್ರತಿಯೊಂದರ ಅಸ್ತಿಭಾರವನ್ನು ಪ್ರತ್ಯಕ್ಷಜ್ಞಾನದ ಮೇಲೆ ಇರಿಸಿದೆ. ಆದುದರಿಂದ ದೇವನೊಬ್ಬನಿದ್ದರೆ ತೋರಿಸಿಕೊಡಿ, ಅವನನ್ನು ಕಾಣದೆ ಹೇಗೆ ತಾನೆ ನಾವು ನಂಬಲಲ್ಲೆವು? ಎಂದು ನಾಸ್ತಿಕರು ಕೇಳುತ್ತಾರೆ. ಈ ಕಾಲಘಟ್ಟದ ಪರಿಸರ ಬಹುತೇಕ ಯುವ ಜನರ ಹೃದಯಗಳಲ್ಲಿ ದೇವನೆಂಬ ಪರಿಶುದ್ಧ ಅಸ್ತಿತ್ವದ ಚಿತ್ರವನ್ನು ಅಳಿಸಿಬಿಟ್ಟಿದೆ. ಕಾಲೇಜುಗಳ ಅನೇಕ ವಿದ್ಯಾರ್ಥಿಗಳು, ನ್ಯಾಯವಾದಿಗಳು ಮುಂತಾದವರು ದೇವನ ಅಸ್ತಿತ್ವವನ್ನು ನಿರಾಕರಿಸುತ್ತಾರೆ. ಅವರ ಸಂಖ್ಯೆ ವರ್ಧಿಸುತ್ತಾಇದೆ. ಸಾವಿರಾರು ಜನರು ತಮ್ಮ ದೇಶ ಮತ್ತು ಜನಾಂಗದ ಭಯದಿಂದ ಬಹಿರಂಗವಾಗಿ ಪ್ರಕಟಿಸುವುದಿಲ್ಲವಾದರೂ ವಾಸ್ತವಿಕವಾಗಿ ಅವರಿಗೆ ದೇವನ ಅಸ್ತಿತ್ವದ ಬಗ್ಗೆ ದೃಢ ವಿಶ್ವಾಸವಿಲ್ಲದವರಾಗಿದ್ದಾರೆ. ಆದುದರಿಂದ ಸಾತ್ವಿಕನಾದ ಯಾರಿಗಾದರೂ ಪ್ರಯೋಜನವಾಗಲಿ ಎಂದು ನಾನು ಈ ವಿಷಯಕ್ಕೆ ಸಂಬಂಧಿಸಿ ಒಂದುಚಿಕ್ಕ ಪುಸ್ತಕ ಬರೆಯಲು ಉದ್ದೇಶಿಸಿದೆನು.

1. **"ನಮಗೆ ದೇವನನ್ನು ತೋರಿಸಿ ಕೊಡುವುದಾದರೆ ನಾವು ನಂಬುವೆವು ಎಂಬುದಾಗಿದೆ"** ನಾಸ್ತಿಕರ ಮೊದಲನೆಯ ಪ್ರಸ್ತಾಪ.

ನಾನು ಈ ಪ್ರಶ್ನೆಯನ್ನು ಆಲಿಸಿದ ಅನೇಕ ಸಂದರ್ಭಗಳಿವೆ. ಆದರೆ ಇದನ್ನು ಕೇಳಿದಾಗಲೆಲ್ಲ ಆಶ್ಚರ್ಯವಾಗುತ್ತಿತ್ತು. ಮನುಷ್ಯನು ವಿವಿಧ ಇಂದ್ರಿಯಗಳ ಮೂಲಕ ವಿವಿಧ ವಸ್ತುಗಳನ್ನು ಗುರುತಿಸುತ್ತಾನೆ. ಕೆಲವನ್ನು ನೋಡಿ, ಕೆಲವನ್ನು ಸ್ಪರ್ಶಿಸಿ, ಕೆಲವನ್ನು ಮೂಸಿ, ಕೆಲವನ್ನು ಆಲಿಸಿ, ಕೆಲವನ್ನು ರುಚಿಸಿ ಗುರುತಿಸುತ್ತೇವೆ. ಬಣ್ಣವನ್ನು ನೋಡುವುದರಿಂದ ಗುರುತಿಸಬಹುದೇ ಹೊರತು ಮೂಸುವುದರಿಂದ, ಸ್ಪರ್ಶಿಸುವುದರಿಂದ ಅಥವಾ ರುಚಿಸುವುದರಿಂದ ಗುರುತಿಸಲಾಗಲ್ಲ. ಬಣ್ಣದ ಧ್ವನಿಯನ್ನು ಕೇಳಿದರೆ ಮಾತ್ರ ಒಪ್ಪಿಕೊಳ್ಳುತ್ತೇನೆ ಎಂದು ಯಾರಾದರೂ ಹೇಳಿದರೆ ಅವನು ಮೂರ್ಖನಲ್ಲವೇ? ಇದೇ ರೀತಿಯಲ್ಲಿ ಧ್ವನಿಯನ್ನು ಕೇಳುವುದರ ಮೂಲಕ ತಿಳಿಯಬಹುದಾಗಿದೆ. ವ್ಯಕ್ತಿಯ ಸ್ವರವನ್ನು ತೋರಿಸಿಕೊಟ್ಟರೆ ಒಪ್ಪುತ್ತೇನೆ ಎಂದು ಯಾರಾದರೂ ಹೇಳುವುದಾದರೆ ಅವನು ಅಜ್ಞಾನಿಯಲ್ಲವೇ? ಇದೇ ರೀತಿಯಲ್ಲಿ ಸುವಾಸನೆಯನ್ನು ಮೂಸಿ ತಿಳಿಯಲಾಗುತ್ತದೆ. ಗುಲಾಬಿಯ ಸುಗಂಧವನ್ನು ರುಚಿಸಿದರೆ ಒಪ್ಪಿಕೊಳ್ಳುತ್ತೇನೆ ಎಂದು ಯಾರಾದರೂ ಹೇಳುವುದಾದರೆ ಅವನನ್ನು ಬುದ್ಧಿಶಾಲಿಯೆಂದು ಹೇಳಬಹುದೇ? ಇದೇ ರೀತಿಯಲ್ಲಿ ರುಚಿಸಿ ತಿಳಿಯಬಹುದಾದ ಹುಳಿ, ಸಿಹಿ, ಕಹಿ, ಉಪ್ಪು ಮೊದಲಾದ ವಸ್ತುಗಳನ್ನು ಮೂಸಿ ನೋಡಲು ಬಯಸುವುದಾದರೆ ಅದು ಎಂದೂ ಸಾಧ್ಯವಾಗದು. ಗೋಚರ ವಸ್ತುಗಳನ್ನು ಮಾತ್ರ ನಂಬುವುದು ಮತ್ತು ಕಾಣಲು ಅಸಾಧ್ಯವಾದುದನ್ನು ನಂಬದಿರುವುದು ಸರಿಯಾದ ನಿಲುವಲ್ಲ. ಹೀಗಾದರೆ, ಗುಲಾಬಿಯ ಸುವಾಸನೆ, ಲಿಂಬೆಯ ಹುಳಿ, ಜೇನಿನ ಸಿಹಿ, ಕಹಿ ವಸ್ತುವಿನ ಕಹಿ, ಕಬ್ಬಿಣದ ಕಾಠಿಣ್ಯ, ಸ್ವರದ ಮಾಧುರ್ಯ, ಇವುಗಳನ್ನೆಲ್ಲ ನಿರಾಕರಿಸಬೇಕಾಗುತ್ತದೆ. ಏಕೆಂದರೆ ಇವುಗಳು ಕಾಣಿಸುವುದಿಲ್ಲ. ಮೂಸುವ, ರುಚಿಸುವ ಮತ್ತು ಆಲಿಸುವ ಮೂಲಕ ತಿಳಿಯುತ್ತದೆ. ಒಟ್ಟಿನಲ್ಲಿ, ದೇವನನ್ನು ತೋರಿಸಿ ಕೊಟ್ಟರೆ ಮಾತ್ರ ನಂಬುವೆವು ಎಂದೆನ್ನುವುದು ತಪ್ಪಾದ ಧೋರಣೆಯಾಗಿದೆ. ಇಂತಹ ಆಕ್ಷೇಪಕರು ಗುಲಾಬಿಯ ಸುವಾಸನೆ ಅಥವಾ ಜೇನಿನ ಸಿಹಿಯನ್ನು ನೋಡಿ ಮನವರಿಕೆ ಮಾಡುತ್ತಾರೆಯೇ? ಹೀಗಿರುವಾಗ ದೇವನ ಅಸ್ತಿತ್ವವನ್ನು ನೋಡಿದರೆ ನಂಬುವೆವು ಎಂಬ ಶರತ್ತನ್ನು ಮುಂದಿರಿಸುವುದು ಏಕೆ?

ಇದಲ್ಲದೆ, ನೋಡದೆ ಒಪ್ಪಿಕೊಳ್ಳುವ ಮತ್ತು ಒಪ್ಪಿಕೊಳ್ಳಬೇಕಾಗಿ ಬರುವ ವಿವಿಧ ಅಂಗಗಳು ಮನುಷ್ಯನ ದೇಹದೊಳಗೆ ಇವೆ. ವ್ಯಕ್ತಿಯು ತನ್ನ ಹೃದಯ, ಮೆದುಳು, ಕರುಳು, ಶ್ವಾಸಕೋಶ, ಯಕೃತ್ ಮೊದಲಾದವುಗಳನ್ನು ನೋಡಿದ ನಂತರ ನಂಬುತ್ತಾನೋ ಅಥವಾ ನೋಡದೇ ನಂಬುತ್ತಾನೋ? ಅವುಗಳನ್ನು ತೋರಿಸಲು ಅವನ ದೇಹದಿಂದ ಹೊರಗೆತೆಗೆದರೆ ಅವನು ಕೂಡಲೆ ಸತ್ತು ಹೋಗುವನು ಮತ್ತು ನೋಡುವ ಸಂದರ್ಭವೇ ಅವನಿಗೆ ಸಿಗದು.

ಎಲ್ಲ ವಸ್ತುಗಳನ್ನು ಕೇವಲ ನೋಡುವುದರಿಂದ ಅರಿಯಲಾಗುವುದಿಲ್ಲ, ಬದಲಾಗಿ ವಿವಿಧ ಪಂಚೇಂದ್ರಿಯಗಳ ಮೂಲಕ ತಿಳಿಯಲಾಗುತ್ತದೆ ಎಂಬುದಕ್ಕೆ ನಾನು ಉದಾಹರಣೆಗೆಕೊಟ್ಟಿರುವೆನು. ಆದರೆ ಕೆಲವು ವಸ್ತುಗಳನ್ನು ಪಂಚೇಂದ್ರಿಯಗಳ ಮೂಲಕವೂ ಮನವರಿಕೆ ಮಾಡಲು ಸಾಧ್ಯವಾಗುವುದಿಲ್ಲ. ಅವುಗಳನ್ನು ತಿಳಿದುಕೊಳ್ಳಬಹುದಾದ ಮಾರ್ಗವೇ ಬೇರೆಯಾಗಿದೆ. ಉದಾಹರಣೆಗೆ ಬುದ್ಧಿ, ನೆನಪು ಅಥವಾ ವಿವೇಕ ಮೊದಲಾದವುಗಳನ್ನು ಲೋಕದಲ್ಲಿ ಯಾರೂ ನಿರಾಕರಿಸುವುದಿಲ್ಲ. ಆದರೆ ಯಾರಾದರೂ ಬುದ್ಧಿಯನ್ನು ನೋಡಿರುವರೋ? ಆಲಿಸಿರುವರೋ? ರುಚಿಸಿರುವರೋ? ಮೂಸಿರುವರೋ? ಅಥವಾ ಸ್ಪರ್ಶಿಸಿರುವರೋ? ಹೀಗಿರುವಾಗ ಬುದ್ಧಿ ಒಂದು ವಾಸ್ತವಿಕತೆ ಎಂದೂ ನೆನಪು ಎಂಬುವುದಿದೆ ಎಂದು ಹೇಗೆ ತಿಳಿದರು? ಇನ್ನು ಶಕ್ತಿಯನ್ನು ನೋಡಿರಿ. ಬಲವಂತನಾದ ಅಥವಾ ಬಲಹೀನನಾದ ಪ್ರತಿಯೊಬ್ಬನಲ್ಲಿಯೂ ಖಂಡಿತವಾಗಿಯೂ ಅಲ್ಪಸ್ವಲ್ಪ ಶಕ್ತಿಯಿರುತ್ತದೆ. ಆದರೆ ಯಾರಾದರೂ ಇಂದಿನ ತನಕ ಶಕ್ತಿಯನ್ನು ನೋಡಿರುವನೋ? ಆಲಿಸಿರುವನೋ? ಸ್ಪರ್ಶಿಸಿರುವನೋ? ರುಚಿಸಿರುವನೋ? ಹೀಗಿರುವಾಗ ಬುದ್ಧಿ ಎಂಬುದೊಂದಿದೆ ಎಂದು ಹೇಗೆ ತಾನೆ ತಿಳಿಯಲಾಯಿತು? ಈ ವಸ್ತುಗಳನ್ನು ಇಂದ್ರಿಯಗಳ ಮೂಲಕವಲ್ಲ, ಬದಲಾಗಿ ಅವುಗಳು ಉಂಟುಮಾಡುವ ಪರಿಣಾಮಗಳಿಂದ ತಿಳಿಯಲಾಯಿತು ಎಂದು ಅತ್ಯಂತ ಅವಿವೇಕಿಯಾದ ವ್ಯಕ್ತಿಯೂ ತಿಳಿಯಬಹುದಾಗಿದೆ. ಉದಾಹರಣೆಗೆ ವ್ಯಕ್ತಿಯೂ ವಿವಿಧ ಕಷ್ಟಗಳಿಗೆ ಗುರಿಯಾಗಿ, ಸ್ವಲ್ಪ ಹೊತ್ತು ಯೋಚಿಸುವಾಗ ತನ್ನ ಕಷ್ಟ ಪರಿಹಾರದ ಉಪಾಯವನ್ನು ಕಂಡುಕೊಳ್ಳುತ್ತಾನೆ. ಈ ರೀತಿ ಕಷ್ಟ ಪರಿಹಾರವಾಗುವುದನ್ನು ನಾವು ಕಾಣುವಾಗ, ಇಂತಹ ಸಂದರ್ಭಗಳಲ್ಲಿ ಸಹಾಯ ಮಾಡುವ ಯಾವುದೋ ಒಂದು ವಸ್ತುವಿದೆ ಎಂದು ನಾವು ದೃಢವಾಗಿ ನಂಬುತ್ತೇವೆ. ಇದನ್ನು ನಾವು ಬುದ್ಧಿ ಎಂದು ಹೆಸರಿಸುತ್ತೇವೆ. ಬುದ್ಧಿಯನ್ನು ನಾವು ಪಂಚೇಂದ್ರಿಯಗಳ ಪೈಕಿ ಯಾವುದರ ಮೂಲಕವೂ ಗುರುತಿಸುವುದಿಲ್ಲ. ಆದರೆ ಅದರ ಪ್ರಭಾವಗಳನ್ನು ಕಂಡು ಅದನ್ನು ತಿಳಿದುಕೊಳ್ಳುತ್ತೇವೆ. ಇದೇ ರೀತಿಯಲ್ಲಿ, ಮನುಷ್ಯನು ದೊಡ್ಡದೊಡ್ಡ ಭಾರವಾದ ವಸ್ತುಗಳನ್ನು ಎತ್ತುವಾಗ, ತನಗಿಂತ ಬಲಹೀನವಾದುದನ್ನು ನಿಯಂತ್ರಿಸುವಾಗ ಮನುಷ್ಯನಲ್ಲಿ ಶಕ್ತಿ ಎಂಬುದಿದೆ ಎಂದು ಗುರುತಿಸುತ್ತೇವೆ.

ಇದೇ ರೀತಿ ಸೂಕ್ಷ್ಮಾತಿ ಸೂಕ್ಷ್ಮ ವಸ್ತುಗಳು ಮನುಷ್ಯರ ದೃಷ್ಟಿಗೆ ಅದೃಶ್ಯವಾಗಿರುತ್ತದೆ. ಅವುಗಳ ಅಸ್ತಿತ್ವವನ್ನು ಅವುಗಳು ಉಂಟುಮಾಡುವ ಪರಿಣಾಮಗಳಿಂದ ತಿಳಿಯಬಹುದೇ ಹೊರತು ಅವುಗಳನ್ನು ನೋಡಿ, ಮೂಸಿ, ರುಚಿಸಿ, ಸ್ಪರ್ಶಿಸಿ ತಿಳಿಯಲು ಸಾಧ್ಯವಿಲ್ಲ.

ಆದುದರಿಂದ ಅಲ್ಲಾಹನೆಂಬ ಸೂಕ್ಷ್ಮಾತಿಸೂಕ್ಷ್ಮ ಅಸ್ತಿತ್ವದ ಬಗ್ಗೆ ನೋಡದೆ ನಂಬಲಾರೆವು ಎಂಬ ಶರತ್ತು ವಿಧಿಸುವುದು ಹೇಗೆ ತಾನೆ ಸರಿಯಾಗಲು ಸಾಧ್ಯ? ವಿದ್ಯುಚ್ಛಕ್ತಿಯನ್ನು ಯಾರಾದರೂ ಕಂಡಿರುವನೇ? ಅದರ ಮೂಲಕ ತಂತಿ ಸಂದೇಶ ಲಭಿಸುವುದು, ಯಂತ್ರ ಚಲಿಸುವುದು, ಬೆಳಗಿಸುವುದು ಎಂಬಿತ್ಯಾದಿಗಳನ್ನು ನಿರಾಕರಿಸಲಾಗುವುದೇ? ಇದನ್ನು ಕಂಡುಹಿಡಿದುದರಿಂದ ವಿಜ್ಞಾನಕ್ಷೇತ್ರದಲ್ಲಿ ಕ್ರಾಂತಿಯನ್ನು ಉಂಟುಮಾಡಿತು. ಆದರೆ ಇಂದಿನ ತನಕ ಅದನ್ನು ಕಾಣಲು, ಆಲಿಸಲು, ಮೂಸಲು, ಸ್ಪರ್ಶಿಸಲು ಮತ್ತು ರುಚಿಸಲು ವಿಜ್ಞಾನಿಗಳಿಗೆ ಸಾಧ್ಯವಾಗಿಲ್ಲ. ಆದರೆ ಅದರ ಅಸ್ತಿತ್ವವನ್ನು ಒಪ್ಪದಿದ್ದರೆ ಸೂರ್ಯನ ಬೆಳಕು ಭೂಮಿಗೆ ತಲಪುವುದು ಹೇಗೆಂದು ತಿಳಿಯಲಾಗದು. ಹೀಗಿರುವಾಗ ದೇವನನ್ನು ತೋರಿಸಿದರೆ ಮಾತ್ರ ನಂಬುವೆವು ಎಂದು ಹೇಳುವುದು ಅನ್ಯಾಯವಲ್ಲವೇ?

ಅವನನ್ನು ನೋಡಲು ಅರ್ಹತೆಯಿರುವ ಕಣ್ಣುಗಳಿಗೆ ಅವನು ಕಾಣಿಸುತ್ತಾನೆ. ಅಲ್ಲಾಹನನ್ನು ಕಾಣಲು ಆಶಿಸುವವರಿಗೆ ಅಲ್ಲಾಹನು ತನ್ನ ಶಕ್ತಿಗಳ ಪ್ರದರ್ಶನದ ಮೂಲಕ ಲೋಕದಲ್ಲಿದ್ದಾನೆ. ಅವನು ಅದೃಶ್ಯನಾಗಿದ್ದರೂ ಎಲ್ಲಕ್ಕಿಂತಲೂ ಹೆಚ್ಚು ಪ್ರತ್ಯಕ್ಷನಾಗಿದ್ದಾನೆ. ಪವಿತ್ರ ಖುರ್‌ಆನ್ ಸಂಕ್ಷಿಪ್ತವಾಗಿ ಅತುಲ್ಯವಾದ ರೀತಿಯಲ್ಲಿ ಹೀಗೆ ವಿವರಿಸಿದೆ: **ಲಾ ತುದ್‌ರಿಕುಹುಲ್ ಅಬ್‌ಸಾರು ವಹುವ ಯುದ್‌ರಿಕುಲ್‌ಅಬ್‌ಸಾರ ವ ಹುವಲ್ಲತೀಫುಲ್ ಖಬೀರ್**. ದೃಷ್ಟಿಗಳು ಅವನನ್ನು ತಲಪಲಾರವು, ಆದರೆ ಅವನು ದೃಷ್ಟಿಗಳನ್ನು ತಲಪುತ್ತಾನೆ. ಅವನು ಅತಿಸೂಕ್ಷ್ಮನೂ ಎಲ್ಲವನ್ನೂ ಬಲ್ಲವನೂ ಆಗಿರುತ್ತಾನೆ. (ಪವಿತ್ರಖುರ್‌ಆನ್

6: 104) ಅಲ್ಲಾಹನು ಅತಿಸೂಕ್ಷ್ಮನಾಗಿರುವ ಕಾರಣ ಮನುಷ್ಯನ ದೃಷ್ಟಿಗೆ ಅವನನ್ನು ನೋಡಲು ಸಾಧ್ಯವಿಲ್ಲ ಎಂದು ಅಲ್ಲಾಹನು ಈ ವಚನದಲ್ಲಿ ತಿಳಿಸಿದ್ದಾನೆ. ಶಕ್ತಿ, ಬುದ್ಧಿ, ಆತ್ಮ, ವಿದ್ಯುಚ್ಛಕ್ತಿ, ಈಥರ್ ಎಂಬಿತ್ಯಾದಿ ಸೂಕ್ಷ್ಮ ವಸ್ತುಗಳು ಕಣ್ಣಿಗೆ ಕಾಣಿಸುವುದಿಲ್ಲ. ಹಾಗಾದರೆ ಅತಿಸೂಕ್ಷ್ಮನಾದ ದೇವನ ಅಸ್ತಿತ್ವ ತನಕ ಮನುಷ್ಯನ ದೃಷ್ಟಿ ಹೇಗೆ ತಾನೆ ತಲುಪುವುದು. ಹೀಗಿರುವಾಗ ದೇವನನ್ನು ನೋಡಲು ಮತ್ತು ಅವನ ಜ್ಞಾನವನ್ನು ಪಡೆಯಲು ಇರುವ ಮಾರ್ಗವೇನು? ಅದಕ್ಕೆ ಉತ್ತರವಾಗಿ ಅಲ್ಲಾಹನು ಹೇಳುತ್ತಾನೆ: ವಹುವ ಯುದ್‌ರಿಕುಲ್ ಅಬ್‌ಸಾರ ಎಂದರೆ, ಅವನು ಸ್ವತಃ ದೃಷ್ಟಿಗಳನ್ನು ತಲಪುತ್ತಾನೆ. ಮನುಷ್ಯನ ದೃಷ್ಟಿ ಬಲಹೀನವಾದ ಕಾರಣ ಅವನು ಅಲ್ಲಾಹನ ತಳವನ್ನು ತಲಪಲಾರನು. ಅಲ್ಲಾಹನು ತನ್ನ ಶಕ್ತಿ ಪ್ರದರ್ಶನಗಳ ಮತ್ತು ತನ್ನ ಪರಿಪೂರ್ಣ ವಿಶೇಷ ಗುಣಗಳ ಪ್ರಕಟಣೆ ಮೂಲಕ ತನ್ನ ಅಸ್ತಿತ್ವವನ್ನು ಸ್ವತಃ ಮನುಷ್ಯನಗೆ ತೋರಿಸುತ್ತಾನೆ. ಮನುಷ್ಯನ ದೃಷ್ಟಿಗೆ ಅಲ್ಲಾಹನನ್ನು ನೋಡಲು ಸಾಧ್ಯವಿಲ್ಲವಾದರೂ ಅವನು ತನ್ನ ಅಪಾರ ಶಕ್ತಿ ಮತ್ತು ಸಾಮರ್ಥ್ಯಗಳ ಮೂಲಕ ವಿವಿಧ ರೀತಿಗಳಲ್ಲಿ ತನ್ನ ಅಸ್ತಿತ್ವವನ್ನು ಸ್ವತಃ ಪ್ರಕಟಗೊಳಿಸುತ್ತಾನೆ. ಅದು ಕೆಲವು ಸಾರಿ ಶಿಕ್ಷೆಯ ದೃಷ್ಟಾಂತಗಳ ಮೂಲಕ, ಕೆಲವು ಸಾರಿ ಪ್ರವಾದಿಗಳ ಮೂಲಕ ಮತ್ತು ಕೆಲವು ಸಾರಿ ಅನುಗ್ರಹ ನೀಡುವ ಮೂಲಕ ಮತ್ತು ಕೆಲವು ಸಾರಿ ಪ್ರಾರ್ಥನೆಯ ಅಂಗೀಕಾರದ ಮೂಲಕ ಆಗಿರಬಹುದು.

ಅಲ್ಲಾಹನಲ್ಲಿನ ನಂಬಿಕೆಯನ್ನು ಅವನ ಅಸ್ತಿತ್ವವನ್ನು ನೋಡುವುದಕ್ಕೆ ಅವಲಂಬಿಸಿ, ನೋಡದೆ ಯಾವುದೇ ವಸ್ತುವನ್ನು ನಂಬಲಾಗದು ಎಂದು ಹೇಳುವುದಾದರೆ ಲೋಕದ ಸುಮಾರು 4/5 ರಷ್ಟು ವಸ್ತುಗಳನ್ನು ನಿರಾಕರಿಸಬೇಕಾಗುತ್ತದೆ ಮತ್ತು ಕೆಲವು ತತ್ವಜ್ಞಾನಿಗಳ ಪ್ರಕಾರ ಎಲ್ಲ ವಸ್ತುಗಳನ್ನು ನಿರಾಕರಿಸಬೇಕಾಗುತ್ತದೆ, ಏಕೆಂದರೆ ಅವರ ಪ್ರಕಾರ ಲೋಕದಲ್ಲಿ ಯಾವುದೇ ವಸ್ತು ಕಾಣಲು ಸಾಧ್ಯವಿಲ್ಲ, ಬದಲಾಗಿ ಅದರ ವಿಶೇಷ ಗುಣಗಳು ಮಾತ್ರ ಕಾಣಬಹುದಾಗಿದೆ. ಇದನ್ನು ಮೇಲೆ ಸಾಬೀತು ಪಡಿಸಿದ ನಂತರ ನಾನು ಈಗ ಅಲ್ಲಾಹನ ಅಸ್ತಿತ್ವವನ್ನು ಗೊತ್ತುಮಾಡಲು ಮತ್ತು ಮನುಷ್ಯನನ್ನು ಸೃಷ್ಟಿಸಿದ ಒಬ್ಬ ಸೃಷ್ಟಿಕರ್ತನಿದ್ದಾನೆ ಹಾಗೂ ಮನುಷ್ಯನು ಸ್ವತಃ ಅವನ ಸೃಷ್ಟಿಕರ್ತನಲ್ಲ ಎಂಬುದಕ್ಕೆ ಇರುವ ಪುರಾವೆಗಳೇನು ಎಂಬುದರ ಬಗ್ಗೆ ವಿವರಿಸುವೆನು.

**ಪ್ರಥಮ ಸಾಕ್ಷ್ಯಾಧಾರ**

ಆಧ್ಯಾತ್ಮಿಕ ಉನ್ನತಿಗಳಿಸಲು ಇರುವ ಎಲ್ಲ ಮಾರ್ಗಗಳನ್ನು ಪವಿತ್ರ ಖುರ್‌ಆನ್ ವಿವರಿಸಿದೆ ಎಂದು ನಾನು ನಂಬುವುದರಿಂದ ದೇವನ ಅಸ್ತಿತ್ವದ ಬಗ್ಗೆ ಇರುವ ಎಲ್ಲ ಸಾಕ್ಷ್ಯಾಧಾರಗಳನ್ನು ಪವಿತ್ರಖುರ್‌ಆನಿನಿಂದಲೇ ಪ್ರಸ್ತಾಪಿಸುವೆನು. (**ವ ಮಿನಲ್ಲಾಹಿ ತೌಫೀಖ್**–ಅಲ್ಲಾಹನಿಂದಲೇ ಹಾಗೆ ಮಾಡುವ ಭಾಗ್ಯ ನನಗೆ ಸಿಗುವುದು). ಮನುಷ್ಯನು ಜನಿಸಿದ ನಂತರ ಅವನಿಗೆ ದೊರಕುವ ಪ್ರಥಮ ಜ್ಞಾನ ಕಿವಿಯ ಮೂಲಕವಾಗಿರುತ್ತದೆ. ಆದುದರಿಂದ ನಾನು ಮೊತ್ತಮೊದಲು ಆಲಿಸುವುದಕ್ಕೆ ಸಂಬಂಧಿಸಿದ ಸಾಕ್ಷ್ಯಾಧಾರ ವಿವರಿಸುವೆನು.

ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳಿದ್ದಾನೆ: **ಖದ್‌ಅಫ್‌ಲಹ ಮನ್‌ತಝ್ಝಕ್ಕಾ. ವಝ್ಝಕರಸ್ಮರಬ್ಬಿಹೀ ಫ ಸಲ್ಲಾ . ಬಲ್ ತೂಅ್‌ಸಿರೂನಲ್ ಹಯಾತದ್ದುನ್‌ಯಾ. ವಲ್‌ಆಖಿರತುಖೈರುನ್ ವ ಅಬ್‌ಖಾ. ಇನ್ನ ಹಾಝ಼ಾ ಲಫೀ ಸುಹುಫಿಲ್ ಊಲಾ. ಸುಹುಫಿಇಬ್ರಾಹೀಮ ವ ಮೂಸಾ. (ಅಲ್‌ಅಲಾ: 15–20)** ಅಂದರೆ ಯಾರು ಪರಿಶುದ್ಧನಾಗಿರುತ್ತಾನೋ ಅವನು ಜಯ ಹೊಂದುವನು. ಅವನು ತನ್ನ ಪ್ರಭುವಿನ ನಾಮ ಸ್ಮರಣೆ ಮಾಡುವನು ಮತ್ತು ಪ್ರಾರ್ಥನೆ ಸಲ್ಲಿಸುವವನು. ಆದರೆ ನೀವು ಐಹಿಕ ಜೀವನಕ್ಕೆ ಆದ್ಯತೆ ನೀಡುತ್ತೀರಿ. ವಾಸ್ತವದಲ್ಲಿ ಪರಲೋಕ ಜೀವನವು ಉತ್ತಮವಾದುದು ಮತ್ತು ಶಾಶ್ವತವಾದುದ್ದು. (ಪವಿತ್ರ ಖುರ್‌ಆನ್: 15–18)

ಎಂದರೆ ಯಾರು ಪರಿಶುದ್ಧನಾಗಿ ತನ್ನ ನಾಲಗೆ ಮೂಲಕ ತನ್ನ ಪ್ರಭುವಿನ ಅಸ್ತಿತ್ವದ ಬಗ್ಗೆ ಅಂಗೀಕರಿಸಿ ಆರಾಧನೆ ಮೂಲಕ ತನ್ನ ವಿಶ್ವಾಸವನ್ನು ಪ್ರಕಟಿಸುತ್ತಾನೋ ಅವನು ಜಯಶಾಲಿಯಾದವನು. ಆದರೆ ನೀವು ಲೌಕಿಕ ಜೀವನಕ್ಕೆ ಆದ್ಯತೆ ನೀಡುತ್ತಿರುವಿರಿ ಆದರೆ ಅಂತಿಮದಲ್ಲಿ ಉತ್ತಮವಾದ ಅಂತಿಮವೇ ಉತ್ತಮವಾದದು ಹಾಗೂ ಶಾಶ್ವತವಾದದು. ಅದು ದೀರ್ಘಕಾಲ ಬಾಳುವುದಾಗಿದೆ. ಈ ಸತ್ಯವನ್ನು ಹೇಳುವುದು ಪವಿತ್ರ ಖುರ್‌ಆನಿನಲ್ಲಿ ಮಾತ್ರವಲ್ಲ ಹಿಂದಿನ ಎಲ್ಲಾ ಧಾರ್ಮಿಕ ಗ್ರಂಥಗಳಲ್ಲಿಯೂ ಪ್ರತಿಪಾದಿಸಲಾಗಿಲ್ಲ. ಹಝ್ರತ್ ಇಬ್ರಾಹೀಮ್(ಅ) ಹಝ್ರತ್ ಮೂಸಾ(ಅ) ಲೋಕದ ಮುಂದೆ ಇರಿಸಿದ ಉಪದೇಶಗಳಲ್ಲಿ ಈ ವಿಷಯ ಇದೆ.

ಮೇಲೆ ಉಲ್ಲೇಖಿಸಿದ ವಚನದಲ್ಲಿ ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ವಿರೋಧಿಗಳಿಗೆ ಸಾಕ್ಷ್ಯ ನೀಡಿದ್ದಾನೆ. ದೇವನ ಅಸ್ತಿತ್ವವನ್ನು ನಂಬಿ ತಮ್ಮನ್ನು ಪರಿಶುದ್ಧರನ್ನಾಗಿ ಮಾಡಿದ ದೇವನ ಸತ್ಯಸಂಧರಾಧ ಆಜ್ಞಾಪಾಲಕರು ಯಾವಾಗಲೂ ಜಯಶಾಲಿಗಳಾಗುತ್ತಾರೆ. ಪವಿತ್ರ ಖುರ್‌ಆನಿನಲ್ಲಿರುವ ಈ ಉಪದೇಶ ಸತ್ಯತೆಯ ಸಾಕ್ಷಾಧಾರವಾಗಿದೆ ಎಂದು ಹಿಂದಿನ ಕಾಲದ ಧರ್ಮಗಳಲ್ಲೂ ಈ ವಿಷಯ ಸಮಾನವಾಗಿ ಪ್ರಸ್ತಾಪಿಸಲಾಗಿದೆ. ಆ ಕಾಲದ ದೊಡ್ಡ ಧರ್ಮಗಳಾದ ಕ್ರೈಸ್ತ ಧರ್ಮ ಯಹೂದಿ ಧರ್ಮದವರಿಗೆ ಮತ್ತು ಮಕ್ಕದ ಬಹುದೇವಾರಾಧಕರಾದ ಜನರಿಗೆ ಹಝ್ರತ್ ಇಬ್ರಾಹೀಮ್(ಅ), ಹಝ್ರತ್ ಮೂಸಾ(ಅ) ಅವರು ಸಹ ಇದೇ ರೀತಿಯ ಉಪದೇಶ ನೀಡಿದ್ದರು. ಇದು ಪವಿತ್ರ ಖುರ್‌ಅನ್ ದೇವನ ಅಸ್ತಿತ್ವದ ಬಗ್ಗೆ ನೀಡಿದ ದೊಡ್ಡ ಸಾಕ್ಷ್ಯಾಧಾರವಾಗಿದೆ. ಎಲ್ಲಾ ಧರ್ಮಗಳು ಈ ವಿಷಯದಲ್ಲಿ ಒಮ್ಮತಗೊಂಡಿವೆ. ಎಲ್ಲಾ ಜನಾಂಗಗಳು ಈ ವಿಶ್ವಾಸದಲ್ಲಿ ಸಹಭಾಗಿ ಆಗಿವೆ ಎಂಬ ಸಂಗಾತಿ ಈ ಸಾಕ್ಷ್ಯಾಧಾರದ ಬಗ್ಗೆ ಚಿಂತಿಸುವುದಾದರೆ ನಮಗೆ ಚೆನ್ನಾಗಿ ಸ್ಪಷ್ಟವಾಗುವುದು ಹೀಗೆ. ಈ ವಿಶ್ವಯವನ್ನು ಸೃಷ್ಟಿಸಿದ ಒಬ್ಬ ದೇವನಿದ್ದಾನೆ ಎಂಬ ವಿಷಯದಲ್ಲಿ ಎಲ್ಲಾ ಧರ್ಮಗಳು ಒಮ್ಮತ ಹೊಂದಿವೆ ಎಂದು ವಿವಿಧ ದೇಶಗಳ ವ್ಯತ್ಯಾಸದ ಕಾರಣ ಮತ್ತು ಪರಿಸರದ ವ್ಯತ್ಯಾಸದ ಕಾರಣ ನಂಬಿಕೆಗಳಲ್ಲಿ ವ್ಯತ್ಯಾಸದ ಕಾರಣ ಮತ್ತು ಪರಿಸರದ ವ್ಯತ್ಯಾಸದ ಕಾರಣ ನಂಬಿಕೆಗಳಲ್ಲಿ ವ್ಯತ್ಯಾಸ ಉಂಟಾಗಿರಬಹುದಾದರೂ ಎಲ್ಲಾ ಚಾರಿತ್ರಿಕ ಧರ್ಮಗಳು ಅಲ್ಲಾಹನ ಅಸ್ತಿತ್ವವನ್ನು ಒಮ್ಮತದಿಂದ ಒಪ್ಪಿಕೊಂಡಿವೆ. ಅವನ ಗುಣ ವಿಶೇಷಗಳ ಬಗ್ಗೆ ಆ ಧರ್ಮಗಳಲ್ಲಿ ವ್ಯತ್ಯಾಸವಿರಬಹುದು. ಇಂದಿನ ಕಾಲದ ಧರ್ಮಗಳಾದ ಇಸ್ಲಾಮ್, ಕ್ರೈಸ್ತ ಧರ್ಮ, ಯಹೂದಿ ಧರ್ಮ, ಬೌದ್ಧ ಧರ್ಮ, ಸಿಖ್ ಧರ್ಮ, ಹಿಂದೂ ಧರ್ಮ ಮತ್ತು ಝೊರಾಸ್ಟ್ರದ ಧರ್ಮ, ಒಬ್ಬ ದೇವನ ಅಸ್ತಿತ್ವವನ್ನು ಅಂಗೀಕರಿಸುತ್ತದೆ. ಮತ್ತು ಎಲೋಹಿಂ, ಪರಮೇಶ್ವರ, ಪರಮಾತ್ಮ, ಸತ್‌ಗುರು, ಯಝ್‌ದಾನ್ ಎಂಬ ಹೆಸರುಗಳಿಂದ ಕರೆಯುತ್ತವೆ. ಲೋಕದಿಂದ ಅಳಿದು ಹೋದ ಧರ್ಮಗಳೆಲ್ಲದರ ದೊರೆತ ಅವಶೇಷಗಳಿಂದ ತಿಳಿದು ಬರುವುದೇನೆಂದರೆ ಏಕದೇವನನ್ನು ನಂಬುತ್ತಿದ್ದವು ಎಂದು. ಅಮೇರಿಕ, ಆಫ್ರಿಕ, ರೋಮ್, ಇಂಗ್ಲೆಂಡ್, ಜಾವಾ, ಸುಮತ್ರ, ಜಾಪಾನ್, ಚೈನ, ಸೈಬೇರಿಯಾ, ಮಂಚೂರಿಯ ಮೊದಲಾದ ದೇಶಗಳ ಪುರತನ ಧರ್ಮಗಳಲ್ಲಿ ಈ ವಿಶ್ವಾಸ ಜಾರಿಯಲ್ಲಿತ್ತು. ಈ ವಿಶ್ವಾಸದ ಐಕ್ಯತೆ ಹೇಗೆ ಸಂಭವಿಸಿತು. ಅಮೇರಿಕದವರೆಗೆ ಹಿಂದೂಸ್ಥಾನದ ಜನರ ವಿಶ್ವಾಸವನ್ನೂ, ಚೀನದವರಿಗೆ ಆಫ್ರಿಕದ ಜನರ ವಿಶ್ವಾಸವನ್ನು ತಲಪಿಸಿದವರು ಯಾರು? ಈಗ ಇರುವ ಸಂಪರ್ಕ ಮಾಧ್ಯಮಗಳು ಆಗ ಇರಲಿಲ್ಲ. ಆ ಕಾಲದಲ್ಲಿ ಹಡಗುಗಳ ಸಂಚಾರ ಇಂದಿನ ಹಾಗಿರಲಿಲ್ಲ. ಕುದುರೆ ಹೇಸರಗತ್ತೆಗಳ ಮೂಲಕ ಪ್ರಯಾಣ ಸಹ ಮೊದಲಾಗುತ್ತಿತ್ತು. ಇಂದಿನ ದಿನಗಳಲ್ಲಿ ಸಂಚಾರ ಮಾಡಲು ಆಗ ತಿಂಗಳುಗಳು ಬೇಕಾಗುತ್ತಿದ್ದವು. ಆ ಕಾಲದಲ್ಲಿ ಅನೇಕ ಪ್ರದೇಶಗಳು ಕಂಡು ಹಿಡಿಯಲ್ಪಟ್ಟಿರಲಿಲ್ಲ. ವಿವಿಧ ಆಚಾರ ವಿಚಾರಗಳನ್ನು ಹೊಂದಿದ ಪರಸ್ಪರ ಪರಿಚಯವಿಲ್ಲದ ದೇಶಗಳು ಅವುಗಳಾಗಿದ್ದುವು. ಹೀಗಿರುವಾಗ ಎಲ್ಲರೂ ಒಂದು ನಂಬಿಕೆಯ ಬಗ್ಗೆ ಐಕ್ಯಮತ ಹೊಂದಿದುದು ಹೇಗೆ? ಒಂದು ಯೋಚನೆ ಬಗ್ಗೆ ಇಬ್ಬರು ಐಕ್ಯಮತ್ಯ ಹೊಂದುವುದು ಕಷ್ಟಕರವಾಗಿರುತ್ತದೆ. ಹೀಗಿರುವಾಗ ಇಷ್ಟೆಲ್ಲಾ ಜನಾಂಗಗಳು ಮತ್ತು ದೇಶಗಳು ಪರಸ್ಪರ ಸಮಾಲೋಚನೆಯ ಮಾರ್ಗವೇ ಇಲ್ಲದಿರುವಾಗ ಏಕಾಭಿಪ್ರಾಯ ಹೊಂದಿರುವುದು. ಈ ವಿಶ್ವಾಸ ವಾಸ್ತವಿಕವಾದುದು ಎನ್ನುವುದಕ್ಕೆ ಸಾಕ್ಷ್ಯವಾಗಿದೆ. ಮತ್ತು ಯಾವುದೂ ಅಜ್ಞಾತ ಮಾರ್ಗದಿಂದ ಇಸ್ಲಾಮ್ ಬಹಿರಂಗಗೊಳಿಸಿದೆ ಅದರ ಬಗ್ಗೆ ಪ್ರತಿಯೊಂದು ಜನಾಂಗ ಮತ್ತು ಪ್ರತಿಯೊಂದು ಜನಾಂಗಗಳ ಚರಿತ್ರೆಗಾರರು ಏಕಾಭಿಪ್ರಾಯ ಹೊಂದಿರುವರೋ. ಅದರ ಸತ್ಯತೆ ಬಗ್ಗೆ ಸಂಶಯವಿಲ್ಲವೆಂದು ಚರಿತ್ರೆಗಾರರು ಒಮ್ಮತಾಭಿಪ್ರಾಯ ಸೂಚಿಸಿದ್ದಾರೆ. ಈ ವಿಷಯದ ಕುರಿತು ಸಾವಿರಾರು, ಲಕ್ಷಾಂತ ಜನಾಂಗಗಳು ಒಮ್ಮತ ಹೊಂದಿರುವಾಗ ಯಾವುದಾದರೂ ಪ್ರಜೆಯನ್ನು ನೋಡಿ ಲೋಕ ಈ ನಂಬಿಕೆ ಹೊಂದಿತ್ತೆಂದು ದೃಢವಾಗಿ ನಂಬಬಹುದಾಗಿದೆ.

**ಎರಡನೆಯ ಸಾಕ್ಷ್ಯಾಧಾರ**

ಪವಿತ್ರ ಖುರ್‌ಆನ್ ದೇವಾಸ್ತಿತ್ವದ ಬಗ್ಗೆ ಹೀಗೆ ಹೇಳುತ್ತದೆ. **ತಿಲ್‌ಕ ಹುಜ್ಜತುನಾ ಆತಯ್‌ನಾಹಾ ಇಬ್ರಾಹೀಮ ಅಲಾ ಖೌಮಿಹೀ ಸರಫಉ ದರಜಾತಿನ್ ಮನ್ ನಶಾಉ ಇನ್ನರಬ್ಬಕ ಹಕೀಮುನ್ ಅಲೀಮುನ್ ವ ವಹಬ್‌ನಾ ಲಹೂಇಸ್‌ಹಾಖ ವ ಯಾಅಖೂಬ ಕುಲ್ಲನ್ ಹಯ್‌ನಾ ವ ನೂಹನ್ ಹದಯ್‌ನಾ ಮಿನ್‌ಖಬ್‌ಲು ವ ಮಿನ್ ಝುಕ್ರಿಯತಿಹೀ ದಾಊದ ವ ಸುಲೈಮಾನ ವ ಅಯ್ಯೂಬ ವ ಯೂಸುಫ ವ ಮೂಸಾ ವ ಹಾರೂನ ವ ಕಝಾಲಿಕ ನಜ್‌ಝಿಲ್ ಮುಹ್‌ಸಿನೀನ ವ ಝುಕರಿಯ್ಯ ವ ಯಹ್‌ಯಾ ವ ಈಸಾ ವ ಇಲ್ಯಾಸ ಕುಲ್ಲುಅನ್ ಮಿನಸ್ಸಾಲಿಹೀನ ವ ಇಸ್‌ಮಾಈಲ ವಲ್ ಯುಸಅ ವ ಯೂಸುಪ ವ ಲೂತನ್ ವ ಕುಲ್ಲಿನ್ ಫಝ್ಝಲ್‌ನಾ ಅಲಲ್‌ಆಲಮೀನ್.**

**(ಅಲ್‌ಅನ್‌ಆಮ್:84-87)**ಇದು, ಇಬ್ರಾಹೀಮರಿಗೆ ಅವರ ಜನತೆಗೆ ವಿರುದ್ಧವಾಗಿ ನಾವು ನೀಡಿದ ನಮ್ಮ ಪುರಾವೆಯಾಗಿದೆ. ನಾವು ಇಷ್ಟಪಡುವವರ ಪದವಿಗಳನ್ನು ಉನ್ನತಿಗೇರಿಸುತ್ತೇವೆ. ಖಂಡಿತವಾಗಿಯೂ ನಿನ್ನ ಪ್ರಭು ವಿವೇಕಶಾಲಿಯೂ ಸರ್ವಜ್ಞನೂ ಆಗಿದ್ದಾನೆ. ನಾವು ಅವರಿಗೆ (ಇಬ್ರಾಹೀಮರಿಗೆ) ಇಸ್‌ಹಾಖ್ ಮತ್ತು ಯಅ್‌ಖೂಬರನ್ನು ದಯಪಾಲಿಸಿದೆವು. ಪ್ರತಿಯೊಬ್ಬರಿಗೂ ಮಾರ್ಗದರ್ಶನ ನೀಡಿದೆವು. ಇದಕ್ಕೆ ಮುಂಚೆ ನೂಹ್‌ರಿಗೆ ಸಹ ನಾವು ಮಾರ್ಗದರ್ಶನ ಇತ್ತೆವು. ಅವರ (ಇಬ್‌ರಾಹೀಮರ) ಸಂತತಿಗಳ ಪೈಕಿ ದಾಊದ್, ಸುಲೈಮಾನ್, ಅಯ್ಯೂಬ್, ಯೂಸುಫ್, ಮೂಸಾ, ಹಾರುನ್ ಎಂಬವರಿಗೂ (ನಾವು ಸತ್ಪಥವನ್ನು ತೋರಿಸಿಕೊಟ್ಟೆವು) ಸಜ್ಜನರಿಗೆ ಹೀಗೆ ನಾವು ಪ್ರತಿಫಲ ನೀಡುತ್ತೇವೆ. ಝಕರಿಯ್ಯಾ, ಯಹ್‌ಯ, ಈಸಾ, ಇಲ್ಯಾಸ್ ಎಂಬವರಿಗೂ (ನಾವು ನೇರ ಮಾರ್ಗ ತೋರಿಸಿ ಕೊಟ್ಟಿದ್ದೇವೆ) ಅವರೆಲ್ಲರೂ ಧರ್ಮನಿಷ್ಠರಲ್ಲಿ ಸೇರಿದವರಾಗಿದ್ದರು. ಇಸ್ಮಾಈಲ್, ಅಲ್‌ಯಸಅ್, ಯೂನುಸ್, ಲೂತ್ ಎಂಬವರಿಗೂ (ನಾವು ಮಾರ್ಗದರ್ಶನ ನೀಡಿದ್ದೇವೆ) ಪ್ರತಿಯೊಬ್ಬರಿಗೂ ನಾವು ಜನರ ಮೇಲೆ ಶ್ರೇಷ್ಠತೆಯನ್ನು ದಯಾಪಾಲಿಸಿದ್ದೆವು. (ಪವಿತ್ರ ಖುರ್‌ಆನ್ 6: 84-87) **ಉಲಾಯಿಕಲ್ಲಝೀನ ಹದಲ್ಲಾಹು ಫ ಬಿ ಹುದಾಹಿಮುಖ್‌ತದಿಹ್** ಅವರಿಗೆಯೇ ಅಲ್ಲಾಹನು ಸರಿಯಾದ ಮಾರ್ಗದರ್ಶನ ನೀಡಿರುವುದು. ಆದುದರಿಂದ ಅವರ ಮಾರ್ಗದರ್ಶನವನ್ನು ನೀನು ಅನುಸರಿಸು. (ಪವಿತ್ರ ಖುರ್‌ಆನ್ 6:91) ಪವಿತ್ರ ಖುರ್‌ಆನಿನ ಈ ವಚನಗಳಲ್ಲಿ ಅಲ್ಲಾಹನು ಕೇಳುತ್ತಾನೆ: ಇಷ್ಟೆಲ್ಲಾ ಸಾತ್ವಿಕರಾದ ಪರಿಶುದ್ಧ ಜನರು ನೀಡುತ್ತಿರುವ ಸಾಕ್ಷ್ಯಗಳನ್ನು ಅಂಗೀಕರಿಸಬೇಕೋ ಅಥವಾ ಅಜ್ಞಾನಿಗಳಾದ ಜನರು ಹೇಳುವುದನ್ನು ನಂಬಬೇಕೋ ಎಂದೂ ಯಾರು ತಮ್ಮ ನಡೆವಳಿಕೆಗಳಿಂದ ತಮ್ಮ ಸಾತ್ವಿಕತೆ ಮತ್ತು ಪರಿಶುದ್ಧತೆಯನ್ನು ಮತ್ತು ಪಾಪಕೃತ್ಯಗಳಿಂದಲೂ ಸುಳ್ಳುಗಳಿಂದಲೂ ದೂರ ಸರಿದುದನ್ನು ಸಾಬೀತುಗೊಳಿಸುವರೋ ಅಂತಹ ಜನರ ಮಾತುಗಳನ್ನು ನಂಬಬೇಕಾದುದು ಸರಿಯಾದುದಾಗಿದೆ. ಆದುದರಿಂದ ಈ ಜನರನ್ನು ಅನುಸರಿಸಬೇಕು ಮತ್ತು ಅವರಿಗೆ ಎದುರಾಗಿರುವವರ ಮಾತುಗಳನ್ನು ನಿರಾಕರಿಸಬೇಕು ನಾವು ನೋಡುತ್ತಿದ್ದೇವೆ. ಒಳಿತನ್ನು, ಸದ್ಗುಣಗಳನ್ನೂ ಹರಡುವುದನ್ನು ತಮ್ಮ ಕೆಲಸಗಳಿಂದ ತಮ್ಮ ಸತ್ಯತೆಯನ್ನು ಸಾಬೀತುಗೊಳಿಸಿರುವರು. ಅವರೆಲ್ಲರೂ ಒಮ್ಮತದಿಂದ ಹೀಗೆ ಸಾಕ್ಷ್ಯವಹಿಸಿ ಹೇಳುತ್ತಾರೆ. ಆ ಮಹಾನ್ ಅಸ್ತಿತ್ವವನ್ನು ಅಲ್ಲಾಹ್ ಎಂದೂ ಗಾಡ್ ಎಂದೂ ಪರಮೇಶ್ವರ ಎಂದು ಕರೆಯುತ್ತಾರೆ. ಹಿಂದೂಸ್ಥಾನದಲ್ಲಿ ಜನಿಸಿದ ಸತ್ಯಸಂಧರಾದ ಶ್ರೀರಾಮ, ಶ್ರೀಕೃಷ್ಣ ಇರಾನಿನಲ್ಲಿ ಜನಿಸಿದ ಸಾತ್ವಿಕರಾದ ಝೊರಾಸ್ಟರ್, ಈಜಿಪ್ಟ್‌ನಲ್ಲಿ ಜನಿಸಿದ ಮೂಸಾ ನಜರೇತ್‌ನಲ್ಲಿ ಜನಿಸಿದ ಈಸಾ ಮಸೀಹ್, ಪಂಜಾಬಿನ ಒಬ್ಬ ಸಾತ್ವಿಕ ನಾನಕ್ ಮತ್ತು ಎಲ್ಲಾ ಸಾತ್ವಿಕ ನಾಯಕರಾದ ಅರಬ್ ದೇಶದ ಪ್ರಕಾಶ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರಿಗೆ ಅವರ ಬಾಲ್ಯಕಾಲದಿಂದಲೇ ಅವರ ಸಮುದಾಯದ ಜನರು ಸಾದಿಖ್ (ಸತ್ಯವಂತ) ಎಂಬ ಬಿರುದು ನೀಡಿದ್ದರು. ಅವರು ಸ್ವತಃ ತನ್ನ ಸಮುದಾಯದ ಜನರೊಂದಿಗೆ ಹೀಗೆ ಹೇಳಿದರು:- **ಫಖದ್ ಲಬಿಸ್ತು ಫೀಕುಮ್ ಉಮುರ್** ಒಂದು ದೀರ್ಘಕಾಲ ನಾನು ನಿಮ್ಮ ಮಧ್ಯೆ ಜೀವಿಸುತ್ತಿದ್ದೆನಲ್ಲವೇ? (ಪವಿತ್ರ ಖುರ್‌ಆನ್ 10:17) ಅವರು ಹೀಗೆ ಹೇಳಿದರ ಅರ್ಥ ಹೀಗೆ:- ನಾನು ಎಂದಾದರೂ ಸುಳ್ಳು ಹೇಳಿದುದಾಗಿ ನೀವು ಸಾಬೀತುಗೊಳಿಸಬಲ್ಲಿರೇನು? ಇದಕ್ಕೆ ವಿರುದಾಗಿ ಅವರ ಸಮುದಾಯ ಏನೂ ಆಕ್ಷೇಪ ಹೇಳಲಿಲ್ಲ. ಇವರಲ್ಲದೆ ಸಾವಿರಾರು ಸಾತ್ವಿಕರು ಲೋಕದಲ್ಲಿ ಜನಿಸಿ ಬೇರೆ ಬೇರೆ ಕಾಲಘಟ್ಟಗಳಲ್ಲಿ ಒಮ್ಮತದಿಂದ ಹೇಳಿರುತ್ತದೆ. ಒಬ್ಬ ದೇವನಿದ್ದಾನೆಂದು. ಅವರು ಹೇಗೆ ಸಹ ಹೇಳಿದ್ದಾರೆ: ನಾವು ಅವನನ್ನು ಕಂಡಿದ್ದೇವೆ ಮತ್ತು ಅವನೊಂದಿಗೆ ಮಾತನಾಡಿದ್ದೇವೆ ಎಂದು. ಲೋಕದಲ್ಲಿ ಜನಿಸಿದ ಪ್ರಸಿದ್ಧ ದಾರ್ಶನಿಕರಲ್ಲಿ ಎಂದೂ ಕೂಡ ಮೇಲೆ ವಿವರಿಸಿದ ಸಾತ್ವಿಕರಲ್ಲಿ ಒಬ್ಬರು ಮಾಡಿದ, ಕಲಿಸಿದ ಸಾವಿರದಲ್ಲಿ ಒಂದು ಪಾಲು ಸಹ ಮೊದಲು ಸಾಧ್ಯವಾಗದು. ಆ ಸಾತ್ವಿಕರ ಜೀವಿತವನ್ನು ದಾರ್ಶನಿಕರ ಜೀವಿತರೊಂದಿಗೆ ಹೋಲಿಸಿ ನೋಡುವುದಾದರೆ ದಾರ್ಶನಿಕರ ಜೀವಿತದಲ್ಲಿ ಕೇವಲ ಮಾತುಗಳೆ ಕಂಡು ಬರುತ್ತವೆ. ಆದರೆ ಮಾತುಗಳಿಂದ ಅವರ ಕೃತ್ಯಗಳು ಬಹಳ ಕಡಿಮೆಯಾಗಿ ಕಾಣಿಸುತ್ತವೆ. ಸಾತ್ವಿಕರು ಪ್ರದರ್ಶಿಸಿದ ಸತ್ಯಸಂಧತೆ ದಾರ್ಶನಿಕರಿಗೆ ಪ್ರದರ್ಶಿಸಲು ಹೇಗೆ ತಾನೆ ಸಾಧ್ಯ? ಈ ದಾರ್ಶನಿಕರು ಜನರಿಗೆ ಸತ್ಯವನ್ನು ಹೇಳಬೇಕೆಂದು ಜನರನ್ನು ಉಪದೇಶಿಸುತ್ತಾರೆ. ಆದರೆ ಅವರು ಸ್ವತಃ ಸುಳ್ಳನ್ನು ಕೈಬಿಡುವುದಿಲ್ಲ. ಆದರೆ ನಾನು ಮೇಲೆ ಉಲ್ಲೇಖಿಸಿದ ಸಾತ್ವಿಕರು ಸತ್ಯಪಾಲನೆಗೋಸ್ಕರ ಸಾವಿರಾರು ಕಷ್ಟಗಳನ್ನು ಸಹಿಸಿದರು. ಆದರೆ ಅವರ ಪಾದಗಳು ತಮ್ಮ ಸ್ಥಾನದಿಂದ ಅಲುಗಾಡಲಿಲ್ಲ. ಅವರನ್ನು ಕೊಲ್ಲಲು ಗೂಢತಂತ್ರಗಳನ್ನು ಮಾಡಲಾಯಿತು. ಅವರನ್ನು ಅವರ ದೇಶಗಳಿಂದ ಹೊರ ಹಾಕಲಾಯಿತು, ಅವರನ್ನು ಮಾರ್ಗಗಳಲ್ಲಿಯೂ ಗಲ್ಲಿಗಳಲ್ಲೂ ಅಪಮಾನಿಸಲಾಯಿತು, ಎಲ್ಲರೂ ಅವರೊಂದಿಗಿರುವ ಸಂಬಂಧ ವಿಚ್ಛೇಧಿಸಿದರು. ಆದರೆ ಅವರು ತಮ್ಮ ಮಾತನ್ನು ಎಂದೂ ಬದಲಾಯಿಸಲಿಲ್ಲ, ಸುಳ್ಳು ಹೇಳಿ ತಮ್ಮನ್ನು ರಕ್ಷಿಸಲು ಪ್ರಯತ್ನಿಸಲಿಲ್ಲ. ಅವರ ಕೃತ್ಯಗಳು, ಅವರಿಗಿದ್ದ ಲೌಕಿಕ ನಿರಾಸಕ್ತಿ, ತೋರಿಕೆಯಿಂದ ದೂರಸರಿಯುವಿಕೆ ಮೊದಲಾದುವು ಅವರು ನಿಸ್ವಾರ್ಥಿಗಳಾಗಿದ್ದರೆಂದು ಸಾಬೀತುಗೊಳಿಸಿದರು ಮತ್ತು ಯಾವುದೇ ವಯಕ್ತಿಕ ಉದ್ದೇಶಗಳಿಂದ ಯಾವ ಕಾರ್ಯವೂ ಕೈಗೊಳ್ಳುತ್ತಿರಲಿಲ್ಲ. ಹೀಗಾಗಿ ಇಂತಹ ಸಾತ್ವಿಕ ವ್ಯಕ್ತಿಗಳು ನಾವು ನಮ್ಮ ಪ್ರಭುವನ್ನು ನೋಡಿರುವೆವು ಎಂದು ಒಮ್ಮತದಿಂದ ಹೇಳುವಾಗ ಅವರ ಮಾತುಗಳನ್ನು ತಿರಸ್ಕರಿಸಲು ಕಾರಣವೇನದೆ? ಕೆಲವು ಜನರು ನಿತ್ಯ ಸುಳ್ಳು ಹೇಳುವವರಾಗಿದ್ದರೂ ಅವರಲ್ಲಿ ಕೆಲವರು ಒಟ್ಟಿಗೆ ಸೇರಿ ಒಂದು ವಿಷಯದ ಬಗ್ಗೆ ಸಾಕ್ಷ್ಯ ಹೇಳಿದರೆ ನಾವು ನಂಬ ಬೇಕಾಗುತ್ತದೆ. ಕೆಲವರು ನಮಗೆ ಪರಿಚಿತವಲ್ಲವಾದರೂ ವ್ಯಕ್ತಗಳು ಅವರು ಪತ್ರಿಕೆಗಳಲ್ಲಿ ತಮ್ಮ ಸಂಶೋಧನೆ ಬಗ್ಗೆ ಲೇಖನ ಬರೆದಾಗ ನಾವು ಅಂಗೀಕರಿಸಲು ಸಿದ್ಧರಾಗುತ್ತೇವೆ. ಆದರೆ ಆ ಸಾತ್ವಿಕದ ಮಾತುಗಳನ್ನು ಅಂಗೀಕರಿಸಲು ಏಕೆ ಸಿದ್ಧರಾಗುವುದಿಲ್ಲ, ಲಂಡನ್ ಎಂಬ ನಗರವಿದೆ ಎಂದು ಹೇಳಿದರೆ ನಾವು ನಂಬುತ್ತೇವೆ. ಅಮೇರಿಕ ಬಹಳ ದೊಡ್ಡ ಭೂಖಂಡ ಎಂದು ಭೌಗೋಳ ಶಾಸ್ತ್ರ ಹೇಳುವುದನ್ನು ನಂಬುತ್ತೇವೆ. ಸೈಬೀರಿಯಾ ವಿಶಾಲವಾದ ನಿರ್ಜನ ಪ್ರವೇಶವೆಂದು ಪ್ರವಾಸಿಗಳು ಹೇಳಿದರೆ ನಾವು ನರಾಕರಿಸುವುದಿಲ್ಲ ಏಕೆ? ಏಕೆಂದರೆ ಅನೇಕರು ಇವುಗಳ ಬಗ್ಗೆ ಸಾಕ್ಷ್ಯ ಹೇಳುತ್ತಿದ್ದಾರೆ. ಆದರೆ ಈ ಸಾಕ್ಷ್ಯ ಹೇಳುವರು ಸತ್ಯವಂತರೋ ಅಲ್ಲವೋ ಎಂದು ನಮಗೆ ತಿಳಿಯದು. ಅಲ್ಲಾಹನ ಬಗ್ಗೆ ಪ್ರತ್ಯಕ್ಷ ಸಾಕ್ಷ ನೀಡುವವರು ಹೇಗಿದ್ದಾರೆಂದರೆ ಅವರ ಸತ್ಯ ಸಂಧತೆ ಹಗಲು ಬೆಳಕಿನ ಹಾಗೆ ಸ್ಪಷ್ಟವಾಗಿರುತ್ತದೆ. ಅವರು ತಮ್ಮ ಸಂಪತ್ತು, ಜೀವ, ದೇಶ, ಗೌರವ ಮೊದಲಾದುವುಗಳನ್ನು ಭಂಗಗೊಳಿಸಿ ಲೋಕದಲ್ಲಿ ಸತ್ಯವನ್ನು ಸ್ಥಾಪಿಸಿದರೂ ಪ್ರವಾಸಿಗಳ ಮತ್ತು ಭೌಗೋಳ ಶಾಸ್ತ್ರಜ್ಞರ ಮಾತುಗಳನ್ನು ನಂಬುವುದು ಮತ್ತು ಸಾತ್ವಿಕರ ಮಾತುಗಳನ್ನು ನಂಬದಿರುವುದು ಹೇಗೆ ಸರಿಯಾಗುತ್ತದೆ. ಲಂಡನ್ ನಗರ ಇರುವುದು ಕೆಲವು ಜನರ ಹೇಳಿಕೆಯಿಂದ ಸಾಬೀತಾಗುವುದಾದರೆ ಸಾವಿರಾರು ಸಾತ್ವಿಕರು ಅಲ್ಲಾಹನ ಅಸತಿತ್ವದ ಬಗ್ಗೆ ನುಡಿದ ಸಾಕ್ಷ್ಯ ಏಕೆ ಅಂಗೀಕಾರ ಅರ್ಹವಾಗಲಾರದು.

ಸಾವಿರಾರು ಸಾತ್ವಿಕರು ದೇವನ ಅಸ್ತಿತ್ವದ ಬಗ್ಗೆ ತಮ್ಮ ಪ್ರತ್ಯಕ್ಷ ದರ್ಶನದ ಮೂಲಕ ಸಾಕ್ಷಿ ನೀಡುವಾಗ ಅದಾ ತಿರಸ್ಕಾರಕ್ಕೆ ಅರ್ಹವಾಗಿರುವುದಿಲ್ಲ. ಸಾತ್ವಿಕರ ಗುಂಪು ಒಮ್ಮತದಿಂದ ಹೇಳುತ್ತದೆ ದೇವನಿದ್ದಾನೆಂದು. ಆದರೆ ಆಧ್ಯಾತ್ಮಿಕತೆ ಬಗ್ಗೆ ಅಜ್ಞಾರಾಗಿರುವವರು ಹೇಳುತ್ತಾರೆ ದೇವನಿದ್ದಾನೆಂಬ ಅವರ ಮಾತನ್ನು ನಂಬ ಬೇಡಿರಿ. ಸಾಕ್ಷ್ಯ ನೀಡುವ ತತ್ವಗಳ ಪ್ರಕಾರ ಇಬ್ಬರು ಸಾತ್ವಿಕದಲ್ಲಿ ಒಬ್ಬನು ನಾನು ನೋಡಿದ್ದೇನೆ ಎಂದು ಸಾಕ್ಷ್ಯ ನೀಡುವಾಗ ಇನ್ನೊಬ್ಬ ಸಾತ್ವಿಕನು ನಾನು ನೋಡಿಲ್ಲ ಎಂದು ಸಾಕ್ಷ್ಯ ನೀಡಿದರೆ ಆಗ ನೋಡಿದ್ದೇನೆ ಎಂದು ಸಾಕ್ಷ್ಯ ನೀಡಿದ ಸಾತ್ವಿಕರ ಸಾಕ್ಷ್ಯಕ್ಕೆ ಆದ್ಯತೆ ನೀಡಲಾಗುವುದು. ಏಕೆಂದರೆ ಇಬ್ಬರಲ್ಲಿ ಒಬ್ಬನು ದೃಷ್ಟಿ ಅದರ ಮೇಲೆ ಬಿದ್ದಿರಲಿಕ್ಕಿಲ್ಲ. ಆದರೆ ಸಾತ್ವಿಕರಲ್ಲಿ ಒಬ್ಬನು ನೋಡುವುದನ್ನು ನೋಡಿದ್ದೇನೆ ಎಂದು ಮನವರಿಕ ಮಾಡಲಾರನು, ಆದುದರಿಂದ ದೇವನನ್ನು ಕಂಡವರ ಸಾಕ್ಷ್ಯ ಅವನನ್ನ ನಿರಾಕರಿಸುವವರ ಮೇಲೆ ಆದ್ಯತೆ ಗಳಿಸುತ್ತದೆ.

**ಮೂರನೆಯ ಸಾಕ್ಷ್ಯಧಾರ**

ಪವಿತ್ರ ಖುರ್‌ಆನ್‌ನಿಂದ ತಿಳಿಯಬಹುದಾದ ಮೂರನೆ ಸಾಕ್ಷ್ಯಾಧಾರವೇನೆಂದರೆ ಮನುಷ್ಯನ ಪ್ರಕೃತಿ ಅವನ ಅಸ್ತಿತ್ವಕ್ಕೆ ಒಂದು ಸಾಕ್ಷ್ಯಾಧಾರವಾಗಿದೆ. ಕೆಲವು ಪಾಪ ಕೃತ್ಯಗಳನ್ನು ಮನುಷ್ಯನ ಪ್ರಕೃತಿ ಖಂಡಿತವಾಗಿಯೂ ಇಷ್ಟಪಡುವುದಿಲ್ಲ. ತಾಯಿ, ಸಹೋದರಿ ಮತ್ತು ಮಗಳೊಂದಿಗೆ ಲೈಂಗಿಕ ಸಂಪರ್ಕ. ಮಲ ಮೂತ್ರ ಮೊದಲಾದ ಕೊಳಕುಗಳ ಸಂಪರ್ಕ ಸುಳ್ಳು ಮೊದಲಾದವುಗಳನ್ನು ಇಷ್ಟ ಪಡುವುದಿಲ್ಲ. ಆದರೆ ಹೀಗೆ ಏಕೆ ಸಂಭವಿಸುತ್ತದೆ? ದೇವನಿಲ್ಲವಾದರೆ ಹೀಗೆ ಏಕೆ? ತಾಯಿ, ಸಹೋದರಿಯರ ಬಗ್ಗೆ ಅನ್ಯ ಸ್ತ್ರೀಯರಿಂದ ವ್ಯತ್ಯಾಸ ಏಕೆ ಕಲ್ಪಿಸುತ್ತಾನೆ. ಸುಳ್ಳು ಕೆಟ್ಟದೆಂದು ಏಕೆ ಭಾವಿಸುತ್ತಾನೆ. ಅವುಗಳು ಕೆಟ್ಟದೆಂದು ಹೇಳಲು ಕಾರಣವೇನು? ಒಂದು ಉನ್ನತ ಬಾಹ್ಯ ಶಕ್ತಿಯ ಪ್ರಭಾವ ಹೃದಯದಲ್ಲಿವಾದರೆ ಇವುಗಳಿಂದ ಏಕೆ ತನ್ನನ್ನು ದೂರ ಸರಿಸುತ್ತಾನೆ. ನಿರೀಶ್ವರವಾದಿಗೆ ಸುಳ್ಳು, ಸತ್ಯ, ದೌರ್ಜನ್ಯ ಮತ್ತು ನ್ಯಾಯ ಪಾಲನೆ ಒಂದೇ ರೀತಿಯಾಗಿರಬೇಕು. ಮನಸ್ಸಿಗೆ ಬಂದಂತೆ ಮಾಡಬೇಕಾಗಿದೆ. ಅವನ ಭಾವನೆಗಳನ್ನು ನಿಯಂತ್ರಿಸುವ ನಿಯಮ ಸಂಹಿತ

ಯಾವುದು? ಅದು ಅವನ ಹೃದಯಗಳಲ್ಲಿ ತನ್ನ ಸಿಂಹಾಸನ ಇರಿಸಿರುತ್ತದೆ. ಒಬ್ಬ ನಾಸ್ತಿಕ ಬಾಯಿ ಮಾತಿನಲ್ಲಿ ದೇವನ ಅಧಿಕಾರದಿಂದ ಹೊರಗಿರುವುದಾಗಿ ಹೇಳಿದರು ಅವನು ದೇವನು ಸೃಷ್ಟಿಸಿದ ಪ್ರಕೃತಿಯಿಂದ ಹೊರಗೆ ಹೋಗಲು ಸಾಧ್ಯವಾಗದು. ಪಾಪಕೃತ್ಯ ಮಾಡುವುದರಿಂದ ದೂರ ಸರಿದಿರುವುದು ಮತ್ತು ಅವುಗಳ ಪ್ರಕಟಣೆಯಿಂದ ದೂರ ಸರಿದಿರುವುದು ಅವನು ಯಾವುದೇ ಒಬ್ಬ ದೊರೆಗೆ ಉತ್ತರ ನೀಡಬೇಕಾದೀತೆಂಬ ಭಯ ಅವನ ಹೃದಯದಲ್ಲಿವೆ ಎನ್ನುವುದಕ್ಕೆ ಸಾಕ್ಷ್ಯಾಧಾರವಾಗಿದೆ. ಅವನು ಆ ದೊರೆಯ ಅಸ್ತಿತ್ವವನ್ನು ನಿರಾಕರಿಸಿದರೂ ಆ ದೊರೆಯ ಅಧಿಕಾರ ಜಾರಿಯಲ್ಲಿದೆ. ಇದರ ಬಗ್ಗೆ ಪವಿತ್ರ ಖುರ್‌ಆನ್ ಹೀಗೆ ಸೂಚಿಸಿದೆ. **ಲಾ ಉಖ್‌ಸಿಮು ಬಿಯೌಮಿಲ್ ಖಿಯಾಮತಿ. ವಲಾ ಉಖ್‌ಸಿಮು ಬಿನ್ನಫ್‌ಸಿಲ್ಲವ್ವಾಮ** ನಾನು ಪುನರುತ್ಥಾನದ ದಿನದ ಮೇಲೆ ಆಣೆ ಹಾಕುತ್ತೇನೆ. ಸ್ವಯಂ ರೂಪಿಸುವ ಆತ್ಮದ ಮೇಲೆಯು ಆಣೆ ಹಾಕುತ್ತೇನೆ.

(ಪವಿತ್ರ ಖುರ್‌ಆನ್ 75:2,3) ಪವಿತ್ರ ಖುರ್‌ಆನಿನ ಈ ವಚನಗಳು ಹೀಗೆ ಸೂಚಿಸುತ್ತವೆ. ಜನರು ದೇವನಲ್ಲಿ ಶಿಕ್ಷೆ ರಕ್ಷೆಗಳಲ್ಲಿ ಎಂದು ಭಾವಿಸುವುದು ಸರಿಯಲ್ಲ. ನಾವು ಇದರ ಬಗ್ಗೆ ಎರಡು ಸಾಕ್ಷ್ಯಗಳನ್ನು ನೀಡುತ್ತೇವೆ. ಪ್ರತಿಯೊಂದು ವಿಷಯಕ್ಕೆ ಸಂಬಂಧಿಸಿ ಒಂದು ಶಿಕ್ಷೆಯ ದಿನ ನಿಶ್ಚಿತವಾಗಿದೆ. ಆ ದಿನ ಒಳಿತಿನ ಬದಲಾಗಿ ಒಳಿತು ಮತ್ತು ಕೆಡುಕಿಗೆ ಬದಲಾಗಿ ಕೆಡುಕು ಲಭಿಸುತ್ತದೆ. ದೇವನಿಲ್ಲವಾದರೆ ಈ ರೀತಿಯ ಶಿಕ್ಷೆಗಳು ದೊರಕುವುದಾದರೂ ಹೇಗೆ. ಯಾರು ಅಂತಿಮದಿನದ (ಪ್ರಳಯದ) ಶಿಕ್ಷೆ ರಕ್ಷೆಗಳನ್ನು ನಿರಾಕರಿಸುತ್ತಾರೋ ಅವರು ನೋಡುವರು ಅಂದರೆ ಅಂತಿಮದಿನದ (ಪ್ರಳಯದ) ಶಿಕ್ಷೆ ರಕ್ಷೆ ಈ ಲೋಕದಿಂದಲೇ ಆರಂಭವಾಗುತ್ತದೆ. ವ್ಯಭಿಚಾರಿ ಲೈಗಿಂಕ ರೋಗಿಗಳಿಗೆ ತುತ್ತಾಗುತ್ತಾನೆ. ಆದರೆ ವಿವಾಹಿತನಾಗಿದವನಿಗೆ ಈ ರೋಗ ತುತ್ತಾಗುವುದಿಲ್ಲ. ಆದರೆ ಇಬ್ಬರು ಮಾಡುವ ಕೆಲಸ ಒಂದೇ ಆಗಿರುತ್ತದೆ. ಇನ್ನೊಂದು ಸಾಕ್ಷ ಸ್ವಯಂ ದೊಷಿಸುವ ಆತ್ಮದಾಗಿದೆ. ಪಾಪ ಕೃತ್ಯಗಳ ಬಗೆ ಕೆಟ್ಟದೆಂದೂ ಆತ್ಮವೇ ದೂಷಿಸುತ್ತದೆ. ನಾಸ್ತಿಕ ಸಹ ವ್ಯಭಿಚಾರ ಮತ್ತು ಸುಳ್ಳನ್ನು ಕೆಟ್ಟದೆಂದು ಹೇಳುತ್ತಾನೆ. ದುರಹಂಕಾರ ಮತ್ತು ಅಸೂಯಯನ್ನು ಕೆಟ್ಟ ಕೃತ್ಯ ಎಂದು ಹೇಳುತ್ತಾನೆ. ಆದರೆ ಹೀಗೆ ಏಕೆ? ಅವನು ಯಾವುದೇ ಧಾರ್ಮಿಕ ನಿಯಮ ಸಂಹಿತೆಯನ್ನು ಅಂಗೀಕರಿಸುವುದಿಲ್ಲ ಆದರೆ ಅವನ ಹೃದಯ ಅವುಗಳು ಕೆಟ್ಟದೆಂದು ಹೇಳುತ್ತದೆ. ತನಗೆ ಅತ್ಯುನ್ನತ ಅಧಿಕಾರಿಯಿಂದ ಶಿಕ್ಷೆ ದೊರಕುವುದಿಂದ ಅದು ಭಯ ಪಡುತ್ತದೆ. ಅದು ಶಬ್ದಗಳಲ್ಲಿ ಹಾಗೆ ಹೇಳುವುದಿಲ್ಲವಾದರೂ ಅದು ಹಾಗೆ ನಂಬುತ್ತದೆ. ಇದರ ಬಗ್ಗೆ ಪವಿತ್ರ ಖುರ್‌ಆನಿನ ಇನ್ನೊಂದು ವಚನ ಹೀಗಿದೆ:– **ಫ ಅಲ್‌ಹಮಹಾ ಫುಝೂರಹಾ ವ ತಖ್ವಾಹಾ** ಅಲ್ಲಾಹನು ಆತ್ಮಕ್ಕೆ ಅದರ ದುಷ್ಟತೆ ಮತ್ತು ಸಾತ್ವಿಕತೆಯ ಬಗ್ಗೆ ತಿಳಿಯಪಡಿಸಿದನು. (ಪವಿತ್ರ ಖುರ್‌ಆನ್ 91:9) ಮನುಷ್ಯನಲ್ಲಿ ಒಳಿತು ಕೆಡುಕುಗಳ ಬಗ್ಗೆ ಸಾಕ್ಷ್ಯಾಧಾರವಾಗಿದೆ. ದೇವನಿಲ್ಲವಾದರೆ ಒಂದು ಒಳ್ಳೆಯದು ಇನ್ನೊಂದು ಕೆಟ್ಟದು ಎಂದು ಹೇಳಲಾಗದು. ಮನಸ್ಸಿಗೆ ಬರದಂತೆ ಜನರು ಮಾಡುವರು.

### ನಾಲ್ಕನೆಯ ಸಾಕ್ಷ್ಯಾಧಾರ

ಪವಿತ್ರ ಖುರ್‌ಆನ್ ಅಲ್ಲಾಹನ ಅಸ್ತಿತ್ವದ ಬಗ್ಗೆ ನೀಡುವ ನಾಲ್ಕನೆಯ ಸಾಕ್ಷ್ಯಾಧಾರ ಹೀಗಿದೆ. **ವ ಅನ್ನ ಇಲಾ ರಬ್ಬಿಕಲ್ ಮುನ್‌ತಹಾ. ವ ಅನ್ನಹೂ ಹೂವ ಅಝ್‌ಹಕ. ವ ಅಬ್‌ಕಾ ವ ಅನ್ನಹೂ ಹೂವ ಅಮಾತ ವ ಅಹ್‌ಯಾ. ವ ಅನ್ನಹೂ ಖಲಖಝ್ಝುವ್ ಜೈನಿಝ್ಝಕದ ವಲ್ ಉನ್‌ಸಾ. ಮಿನ್ ನುತ್‌ಫತಿನ್ ಇಝಾತುಮ್‌ನಾ.** ಕೊನೆಗೆ ಎಲ್ಲವೂ ನಿನ್ನ ಪ್ರಭುವಿನ ಬಳಿಗೆ ಬಂದು ಸೇರುವುವು. ನಗುವಂತೆಯೂ ಅಳುವಂತೆಯೂ ಮಾಡುವವನು ಅವನೇ ಆಗಿದ್ದಾನೆ. ಸಾಯಿಸುವವನೂ ಬದುಕಿಸುವವನೂ ಅವನೇ. ಅವನೇ ಗಂಡು ಹೆಣ್ಣು ಜೋಡಿಗಳನ್ನು ಸೃಷ್ಟಿಸುವವನು ವೀರ್ಯಾಣುವಿನಿಂದ ಅದು (ಗರ್ಭಾಶಯದಲ್ಲಿ) ಸ್ರವಿಸಲ್ಪಡುವಾಗ. (ಪವಿತ್ರ ಖುರ್‌ಆನ್ 53, 43–47)

ಪವಿತ್ರ ಖುರ್‌ಆನಿನ ಈ ವಚನದಲ್ಲಿ ಅಲ್ಲಾಹನು ಹೀಗೆ ಸೂಚಿಸುತ್ತಾನೆ. ಪ್ರತಿಯೊಂದು ಕೆಲಸದ ಒಬ್ಬ ಕರ್ತೃ ಇರುತ್ತದೆ. ಪ್ರತಿಯೊಂದು ಕಾರ್ಯದ ಕರ್ತೃ ಒಬ್ಬನಿರಬೇಕಾದುದು ಆವಶ್ಯಕವಾಗಿದೆ. ನೀವು ವಿಶ್ವದ ಕಡೆಗೆ ದೃಷ್ಟಿಹಾಯಿಸಿದರೆ ನಿಮಗೆ ನಿಶ್ಚಯವಾಗಿಯೂ ಮರ್ಗದರ್ಶನ ದೊರೆಯುವುದು. ಎಲ್ಲಾ ವಸ್ತುಗಳು ಕೊನೆಗೆ ಸೃಷ್ಟಿಕರ್ತನ ಕಡೆಗೆ ತಲಪುತ್ತವೆ. ಅವನೇ ಎಲ್ಲಾ ವಸ್ತುಗಳ ಕೊನೆಯಲ್ಲಿದ್ದಾನೆ. ಅವನ ಸೂಚನೆ ಪ್ರಕಾರ ಎಲ್ಲವೂ ಆಗುತ್ತ ಇವೆ. ಅಲ್ಲಾಹನು ಮನುಷ್ಯನ ಆರಂಭದ ಸ್ಥಿತಿಯ ಕಡೆಗೆ ಗಮನ ಹರಿಸಿ ಹೇಳುತ್ತಾನೆ. ನಿನ್ನ ಸೃಷ್ಟಿ ಒಂದು ವೀರ್ಯಾಣುವಿನಿಂದಾಗಿದೆ. ನೀನು ನಿನ್ನ ಜೀವಿತದ ಹಿಂದಿನ ಕಾಲದ ಕಡೆಗೆ ಹೋಗುವಾಗ ನೀನು ಕೀಳಾಗಿ ಹೋಗುತ್ತಿರುವೆ ಆದ್ದರಿಂದ ನೀನು ಹೇಗೆ ಸೃಷ್ಟಿಕರ್ತನು ಎಂದು ಭಾವಿಸುತ್ತೀಯ. ಏಕೆಂದರೆ ಸೃಷ್ಟಿಕರ್ತನಿಲ್ಲದೆ ಸೃಷ್ಟಿ ಹೇಗೆ ಸಾಧ್ಯ. ಮತ್ತು ಮನುಷ್ಯನು ಸೃಷ್ಟಿಕರ್ತನಲ್ಲ ಏಕೆಂದರೆ ಮನುಷ್ಯನು ತನ್ನ ಸ್ಥಿತಿಯ ಬಗ್ಗೆ ಚಿಂತಿಸಿದರೆ ಆತನು ಅತ್ಯಂತ ಚಿಕ್ಕ ಅವಸ್ಥೆಯಿಂದ ಅಭಿವೃದ್ಧಿ ಹೊಂದಿ ಈಗಿನ ಸ್ಥಿತಿಗೆ ತಲಪಿರುತ್ತಾನೆ ಎಂದು ತಿಳಿದು ಬರುತ್ತದೆ. ಮನುಷ್ಯನು ಇಂದಿನ ಸ್ಥಿತಿಯಲ್ಲಿ ಸೃಷ್ಟಿಸುವವನಾಗದಿರುವಾಗ ಇದಕ್ಕಿಂತ ಬಲಹೀನ ಸ್ಥಿತಿಯಲ್ಲಿ ಹೇಗೆತಾನೆ ಸೃಷ್ಟಿಕರ್ತನಾಗಬಲ್ಲನು. ಹೀಗಾಗಿ ಆತನು ಪ್ರಸ್ತುತ ಪರಿಸ್ಥಿತಿಯಲ್ಲಿ ಸೃಷ್ಟಿಕರ್ತನಗದಿದ್ದರೆ ಆತನ ಕರ್ತೃ ಬೇರೆಯವನದ್ದಾನೆ ಎಂದು ಒಪ್ಪಬೇಕಾಗುತ್ತದೆ ಮತ್ತು ಆತನ ಶಕ್ತಿಯು ಸೀಮಿತವಲ್ಲ, ವಿಶಾಲ ಎಂದು ಸಹ ಒಪ್ಪಬೇಕಾಗುತ್ತದೆ. ಮನುಷ್ಯನು ತನ್ನ ಹಂತ, ಹಂತವಾದ ವೃದ್ಧಿಯ ಬಗ್ಗೆ ಚಿಂತಿಸುವುದಾದರೆ ಅವನು ಕೊನೆಗೆ ಎಂತಹ ಸ್ಥಳವನ್ನು ತಲಪುವನೆಂದರೆ ಲೌಕಿಕ ಜ್ಞಾನ ಹೇಳುವುದು. ಇನ್ನು ಮುಂದೆ ನಾವು ಏನೂ ಹೇಳಲಾರೆವು. ಹಾಗೆ ಏಕಾಯಿತೆಂದು ಹೇಳುವೆವು. ಅದು ಅಲ್ಲಾಹನ ಕೈ ಕೆಲಸ ಮಾಡುವ ಸ್ಥಳವಾಗಿದೆ. ಪ್ರತಿಯೊಬ್ಬ ವಿಜ್ಞಾನಿ ಹೀಗೆ ಹೇಳಬೇಕಾಗುತ್ತದೆ. ಕೊನೆಗೆ ಸೃಷ್ಟಿಸುವ ಒಂದು ಶಕ್ತಿಯಿರಬೇಕಾಗುತ್ತದೆ. ಅದನ್ನು ಬುದ್ಧಿಯ ವಲಯ ದೊಳಗೆ ತರಲು ಸಾಧ್ಯವಾಗದು. ಸೃಷ್ಟಿಕರ್ತನ ಬಗ್ಗೆ ಅತ್ಯಂತ ಅಜ್ಞಾನಿಯಾದವನು ಅರ್ಥ ಮಾಡಬಲ್ಲ ಸಾಕ್ಷ್ಯಾಧಾರ ಇದಾಗಿದೆ.

ಒಂದು ಕಥೆ ಹೀಗಿದೆ. ಒಬ್ಬ ಗ್ರಾಮೀಣ ಅರಬಿಯೊಂದಿಗೆ “ದೇವನ ಅಸ್ತಿತ್ವದ ಬಗ್ಗೆ ನಿನ್ನ ಬಳಿ ಸಾಕ್ಷ್ಯಾಧಾರ ಏನಿದೆ ಎಂದು ಕೇಳಿದಾಗ ಅವನು ಹೇಳಿದನು. ಮರುಭೂಮಿಯಲ್ಲಿ ಒಂದು ಒಂಟೆಯ ಸೆಗಣಿ ಬಿದ್ದಿರುವುದು ಕಂಡರೆ ನಾನು ಹೇಳುತ್ತೇನೆ. ಇಲ್ಲಿಂದ ಯಾವುದೋ ಒಂಟೆ ದಾಟಿ ಹೋಗಿದೆ ಎಂದು. ಇಷ್ಟು ವಿಶಾಲ ಸೃಷ್ಟಿಯನ್ನು ನೋಡಿ ಅದಕ್ಕೊಬ್ಬ ಸೃಷಿಕರ್ತನಿದ್ದಾನೆಂದು ನನಗೆ ತಿಳಿಯಲಾರದೆ. ಈ ಉತ್ತರ ಸತ್ಯವಾಗಿದೆ ಮತ್ತು ಮನುಷ್ಯನ ಪ್ರಕೃತಿಗೆ ಅನುಸಾರವಾಗಿದೆ. ಮನುಷ್ಯನು ಲೋಕದಲ್ಲಿರುವ ಜೀವ ಜಾಲಗಳ ಬಗ್ಗೆ ಚಿಂತಿಸುವುದಾದರೆ ಅವುಗಳಿಗೆ ಒಬ್ಬ ಸೃಷಿಕರ್ತನಿದ್ದಾನೆಂದು ಸಮ್ಮತಿಸಬೇಕಾಗುತ್ತದೆ.

### ಐದನೆಯ ಸಾಕ್ಷ್ಯಾಧಾರ

ಐದನೆಯ ಸಾಕ್ಷ್ಯಾಧಾರ ಮೇಲಿನ ಸಾಕ್ಷ್ಯಾಧಾರದ ಹಾಗೆ ಇದೆ ಯಾದವರೂ ಇದು ಹೆಚ್ಚು ಬಲದಿಂದ ಕೂಡಿದೆ. ಪವಿತ್ರ ಖುರ್‌ಆನ್ ಹೀಗೆ ಹೇಳಿವೆ.

**ತಬಾರಕಲ್ಲಝೀ ಬಿಯದಿಹಿಲ್ ಮುಲ್‌ಕು ವ ಹೂವ ಅಲಾ ಕುಲ್ಲಿ ಶೈಯಿನ್ ಖದೀರ್. ಅಲ್ಲಝೀ ಖಲಖಲ್ ಮೌತಾ ವಲ್ ಹಯಾತ ಅಯಬ್‌ಲುವಕುಮ್ ಅಯ್ಯುಕುಮ್ ಅಹ್‌ಸನು ಅಮಲ ವ ಹೂವಲ್ ಅಝೀಝುಲ್ ಗಫೂರ್. ಅಲ್ಲಝೀ ಖಲಖ ಸಬ್‌ಅ ಸಮಾವಾತಿನ ತಿಬಾಖನ್ ಮಾತರಾಮಿನ್ ಖಲ್‌ಖಿದ್ರಹ್ಮಾನಿ ಮಿನ್ ತ ಫಾಉತಿನ್ ಫರ್‌ಜಿಅಲ್ ಬಿಸರ ಹಲ್ ತರಾ ಮಿನ್ ಫುತೂರಿನ್ ಸುಮ್ಮದ್‌ಜಿಅಲ್ ಬಸರ ಕರ್‌ತೈನಿ ಯನ್‌ಖಲಿಬು ಇಲೈಕಲ್‌ಬಸದು ಖಾಶಿಅನ್ ವ ಹೂವ ಹಸೀರ್.** ಯಾರ ಕೈಯಲ್ಲಿ ಪ್ರಭುತ್ವ ವಿದೆಯೋ ಅವನು ಅನುಗ್ರಹ ಪೂರ್ಣನು (ತಾನಿಚ್ಛಿಸುವ) ಎಲ್ಲ ಕಾರ್ಯಗಳಲ್ಲಿ ಅವನು ಸರ್ವ ಸಮರ್ಥ್ಯನಾಗಿದ್ದಾನೆ. ನಿಮ್ಮ ಪೈಕಿ ಕೃರ್ತವ್ಯ ನಿರ್ವಹಣೆಯಲ್ಲಿ ಯಾರು ಉತ್ತಮರೆಂದು ಪರೀಕ್ಷಿಸಲಿಕ್ಕೋಸ್ಕರ ಅವನು ಮರಣವನ್ನು, ಜೀವನವನ್ನು ಸೃಷ್ಟಿಸಿದ್ದಾನೆ. ಅವನು ಪ್ರತಾಪವಂತನೂ ಕ್ಷಮಾಶೀಲನೂ ಆಗಿದ್ದಾನೆ. ಅವನು ಏಳು ಆಕಾಶಗಳನ್ನು ಕ್ರಮಬದ್ಧವಾಗಿ ಸೃಷ್ಟಿಸಿದವನು. ಪರಮ ದಯಾವಂತನೂ (ಅಲ್ಲಾಹನ) ಸೃಷ್ಟಿಕಾರ್ಯದಲ್ಲಿ ಯಾವ ಅಸಂಬದ್ಧತೆಯನ್ನು ನೀನು ಕಾಣಲಾರೆ. ನೀನು ಪುನಃ ನೋಡು ಏನಾದರೂ ಕೋಪ ದೋಷವಿದೆಯೋ? ಪುನಃ ಎರಡು ಕಣ್ಣಿನ ದೃಷ್ಟಿ ಹರಿಸಿ ನೋಡು. ದೃಷ್ಟಿಸಿ ನೋಡು, ಬಳಲಿ ನಿನ್ನೆಡೆಯೇ ಮರಳುವುದು. (ಪವಿತ್ರ ಖುರ್‌ಆನ್ 67:2–5)

ಈ ವಿಶ್ವ ಆಕಸ್ಮಿಕವಾಗಿ ಉಂಟಾಯಿತೆಂದು ಕೆಲವರು ಹೇಳುತ್ತಾರೆ. ಮತ್ತು ಆಕಸ್ಮಿಕವಾಗಿ ಹೆಣ್ಣು ಸೇರಿದ್ದರಿಂದ ಎಲ್ಲವು ಸೃಷ್ಟಿಯಾಗಿದೆ ಮತ್ತು ವೈಜ್ಞಾನಿಗಳು ವಿಜ್ಞಾನದಿಂದ ಸಾಬೀತುಗೊಳಿಸಲು ಪ್ರಯತ್ನಿಸಿರುವುದೇನೆಂದರೆ ಪ್ರಪಂಚವು ತಾನಾಗಿಯೇ ಒಂದಕ್ಕೊಂದು ಸೇರಿಕೊಂಡು ಸ್ವತಃ ನಡೆಯಲು ಸಾಧ್ಯವಿದೆ ಎಂದು. ಚಲಾಯಿಸುವವನು ಯಾರು ಇಲ್ಲ ಎಂದು ಹೇಳುತ್ತಾರೆ. ಅವರಿಗೆ ಉತ್ತರ ಅಲ್ಲಾಹನು ಮೇಲಿನ ಪವಿತ್ರ ಖುರ್‌ಆನ್ ವಚನಗಳಲ್ಲಿ ನೀಡುತ್ತಾನೆ. ಆಕಸ್ಮಿಕವಾಗಿ ಜೋಡಣೆಯಾಗುವ ವಸ್ತುಗಳಲ್ಲಿ ಒಂದು ಕ್ರಮ ಬದ್ಧತೆ ಇರುವುದಿಲ್ಲ, ಅವುಗಳು ಪರಸ್ಪರ ಹೊಂದಿಕೆ ಯಾಗಲಾರದು. ವಿವಿಧ ಬಣ್ಣಗಳನ್ನು ಬಳಸಿ ಒಂದು ಚಿತ್ರ ತಯಾರಿಸುತ್ತಾರೆ. ಆದರೆ ಕೆಲವು ಬಣ್ಣಗಳನ್ನು ಕಾಗದಕ್ಕೆ ಚೆಲ್ಲಿದ್ದರೆ ಒಂದು ಚಿತ್ರವಾಗುವುದೇ. ಇಟ್ಟಿಗೆಗಳಿಂದ ಮನೆ ನಿರ್ಮಿಸವಾಗುತ್ತಿದೆ. ಆದರೆ ಇಟ್ಟಿಗೆಗಳನ್ನು ಒಂದರ ಮೇಲೆ ಇನ್ನೊಂದರಂತೆ

ಎಸೆದರೆ ಮನೆ ನಿರ್ಮಿಸಲ್ಪಡುವುದೇ. ಕೆಲವು ಘಟನೆಗಳು ಆಕಸ್ಮಿಕವಾಗಿ ಸಂದರ್ಭವಿಸುತ್ತವೆ ಎಂದು ಊಹಿಸುವುದರೂ ಜಾಗತಿಕ ವ್ಯವಸ್ಥೆಯನ್ನು ನೋಡಿ ಮನುಷ್ಯನು ಈ ವ್ಯವಸ್ಥೆ ತಾನಾಗಿಯೇ ಸೃಷ್ಟಿಸಿಲ್ಪಟ್ಟಿತೆಂದು ಹೇಳಲು ಸಾಧ್ಯವಿಲ್ಲ. ಭೂಮಿ ಆಕಸ್ಮಿಕವಾಗಿ ಉಂಟಾಯಿತು, ಮನುಷ್ಯನು ಆಕಸ್ಮಿಕವಾಗಿ ಉಂಟಾದನು ಎಂದು ಒಪ್ಪಿಕೊಳ್ಳೋಣ ಆದರೆ ಮನುಷ್ಯನ ದೇಹದ ಬಗ್ಗೆ ಯೋಚಿಸಿರಿ. ಇಂತಹ ಪರಿಪೂರ್ಣ ಸೃಷ್ಟಿ ತಾನಾಗಿ ಆಗಲು ಸಾಧ್ಯವೇ? ಲೋಕದಲ್ಲಿ ಒಬ್ಬನ ಕರಕುಶಲನ ಮೂಲಕ ಒಂದು ವಸ್ತುವಿನ ನಿರ್ಮಾಪಕನ ಬಗ್ಗೆ ತಿಳಿಯುತ್ತದೆ. ಒಂದು ಉತ್ತಮ ಚಿತ್ರವನ್ನು ನೋಡಿದಾಗ ಒಬ್ಬ ದೊಡ್ಡ ಚಿತ್ರಗಾರ ಚಿತ್ರಿಸಿದನೆಂದು ಕೂಡಲೆ ಯೋಚಿಸುತ್ತೇವೆ. ಒಂದು ಸುಂದರ ಬರಹವನ್ನು ಕಂಡಾಗ ಒಬ್ಬ ದೊಡ್ಡ ಬರಹಗಾರ ಬರೆದುದೆಂದು ಊಹಿಸುತ್ತೇವೆ. ನಮ್ಮ ಸಂಬಂಧ ವರ್ದಿಸಿದ ಹಾಗೆ ನಿರ್ಮಾಪಕನ ಅಥವಾ ಬರೆಯುವವನ ಶ್ರೇಷ್ಠತೆ ಚೆನ್ನಾಗಿ ಮನವರಿಕೆ ಆಗುತ್ತದೆ. ಹೀಗಿರುವಾಗ ಇಷ್ಟು ಕ್ರಮ ಬದ್ಧವಾಗಿರುವ ಲೋಕ ತಾನಾಗಿಯೇ ಅಸ್ತಿತ್ವಕ್ಕೆ ಬಂತೆಂದು ಹೇಳುವುದು ಹೇಗೆ:

ನೀವು ನಿಮ್ಮ ಈ ವಿಷಯದ ಬಗ್ಗೆ ಚಿಂತಿಸಿ. ಮನುಷ್ಯನಿಗೆ ಅಭಿವೃದ್ಧಿ ಹೊಂದಲು ಸಾಧ್ಯವಾಗುವ ಶಕ್ತಿ ನೀಡಲಾಗಿದೆ ಎಂದಾದರೆ. ಅವನಿಗೆ ತನ್ನ ನಿರ್ಧಾರಗಳನ್ನು ಈಡೇರಿಸಲು ಬುದ್ಧಿ ನೀಡಲಾಗಿವೆ. ಮತ್ತು ಅವನ ಶರೀರ ರಚನೆಯು ಸಹ ಹಾಗೆ ಮಾಡಲಾಗಿದೆ. ಮನುಷ್ಯನು ದುಡಿದು ಆಹಾರ ಸಂಪಾದಿಸಬೇಕಾದ ಕಾರಣ ಅವನಿಗೆ ನಡೆದಾಡಿ ಆಹಾರ ಸಂಪಾದನೆ ಮಾಡುವ ವ್ಯವಸ್ಥೆ ಮಾಡಲಾಗಿದೆ. ಮರಗಳು ಭೂಮಿಯಲ್ಲಿ ಸ್ಥಿರವಾಗಿ ನಿಲ್ಲಿಸಿರುವರಿಂದ ಅವುಗಳಿಗೆ ಆಹಾರ ಸಂಪಾದಿಸಲು ಬೇರುಗಳನ್ನು ನೀಡಲಾಗಿದೆ. ಸಿಂಹದ ಆಹಾರ ಮಾಂಸವಾದುದರಿಂದ ಅದಕ್ಕೆ ಬೇಟೆ ಮಾಡಲು ಪಂಜೆ ನೀಡಲಾಗಿದೆ. ಕುದುರೆ ಮತ್ತು ಪಶುಗಳ ಆಹಾರ ಹುಲ್ಲು ಆಗಿ ನಿಗದಿ ಪಡಿಸಿರುವದರಿಂದ ಕತ್ತು ಚಾಚಿ ಹುಲ್ಲು ತಿನ್ನುವ ಹಾಗೆ ಅವುಗಳ ದೇಹರಚನೆ ಇದೆ. ಒಂಟೆಗಳಿಗೆ ಮರಗಳ ಎಲೆ ಆಹಾರವಾಗಿರುವದರಿಂದ ಅವುಗಳ ಕೊರಳನ್ನು ಎತ್ತರಕ್ಕೆ ತಲಪುವಂತೆ ಮಾಡಲಾಗಿದೆ. ಇವುಗಳೆಲ್ಲಾ ಆಕಸ್ಮಿಕವಾಗಿ ಸಂಭವಿಸಿದುವೇ. ಒಂಟೆಗೆ ಉದ್ದ ಕೊರಳು, ಸಿಂಹಕ್ಕೆ ಪಂಜ ಮತ್ತು ಮರಕ್ಕೆ ಬೇರು, ಮನುಷ್ಯನಿಗೆ ಕಾಲುಗಳು ಇವುಗಳೆಲ್ಲಾ ತಾನಾಗಿಯೇ ಸಂಭವಿಸಿದುವೇ? ಇದರಲ್ಲಿ ಎಷ್ಟೇ ವ್ಯವಸ್ಥೆ ಕಂಡು ಬರುತ್ತದೆ. ಮನುಷ್ಯನಿಗೆ ಶ್ವಾಸಕೋಶ ನೀಡಿ ಅವರೊಂದಿಗೆ ವಾಯು ವ್ಯವಸ್ಥೆ ಸಹ ಮಾಡಲಾಗಿದೆ. ನೀರನ್ನು ಮನುಷ್ಯನಿಗೆ ಜೀವ ದಾಯಕವನ್ನಾಗಿ ಮಾಡಿ ಅದನ್ನು ಸೂರ್ಯನ ಮೂಲಕ ಮೇಘ ಸೃಷ್ಟಿಸಿ ಮಳೆ ಸುರಿಸಿ ನೀರಿನ ವ್ಯವಸ್ಥೆ ಮಾಡಲಾಗಿದೆ. ಕಣ್ಣು ಕಾಣುವಂತೆ ಮಾಡಲು ಸೂರ್ಯನ ಬೆಳಕಿನ ವ್ಯವಸ್ಥೆಯಾಗಿದೆ. ಕಿವಿ ನೀಡಿರುವಾಗ ಸುಶ್ರವ್ಯ ಧ್ವನಿಯನ್ನು ಸಹ ಸೃಷ್ಟಿಸಲಾಗಿದೆ. ನಾಲಿಗೆ ನೀಡಿರುವಾಗ ರುಚಿಕರವಾದ ಪದಾರ್ಥಗಳನ್ನು ಸೃಷ್ಟಿಸಲಾಗಿದೆ. ಮೂಗು ನೀಡಿರುವಾಗ ಸುವಾಸನೆಯನ್ನೂ ಸೃಷ್ಟಿಸಲಾಗಿದೆ. ಆಕಸ್ಮಿಕವಾಗಿ ಶ್ವಾಸಕೋಶ ನಿರ್ಮಿಸಿರಬಹುದು ಆದರೆ ಅದರೊಂದಿಗೆ ವಾಯು ಸೃಷ್ಟಿಸಲ್ಪಟ್ಟಿರುವುದು ಹೇಗೆ. ಕಣ್ಣು ಆಕಸ್ಮಿಕವಾಗಿ ಸೃಷ್ಟಿಸಲ್ಪಟ್ಟಿದ್ದರೆ ಅದು ಕಾಣುವಂತೆ ಮಾಡಲು ಕೋಟಿಗಟ್ಟಲೆ ಮೈಲು ದೂರದಲ್ಲಿ ಸೂರ್ಯನ ಸೃಷ್ಟಿಯಾದರು ಹೇಗೆ? ಕಿವಿ ಆಕಸ್ಮಿಕವಾಗಿ ಸೃಷ್ಟಿಸಲ್ಪಟ್ಟಿದ್ದರೆ ಅದು ಕೇಳುವಂತೆ ಧ್ವನಿಯನ್ನು ಸೃಷ್ಟಿಸಿದವರು ಯಾರು. ಹಿಮಾಚ್ಛಾದಿತ ದೇಶಗಳಲ್ಲಿ ಕರಡಿಗಳು ಹಾಗೂ ನಾಯಿಗಳು ಮಾತ್ರ ಆಕಸ್ಮಿಕವಾಗಿ ಸೃಷ್ಟಿಸಲ್ಪಟ್ಟಿದ್ದರೆ ಅವು ಚಳಿಯಿಂದ ರಕ್ಷಣೆ ಪಡೆಯಲು ಅವುಗಳ ರೋಮಗಳು ಉದ್ದವಾಗಿ ಬೆಳೆಯುವಂತ ಮಾಡಿದವರು ಯಾರು. ಆಕಸ್ಮಿಕವಾಗಿ ಸಾವಿರಾರು ರೋಗಗಳು ತಲೆ ದೋರಿರುವು ಮತ್ತು ಅವುಗಳ ಚಿಕಿತ್ಸೆಗೋಸ್ಕರ ಗಿಡ ಮೂಲಿಕೆಗಳು ಸೃಷ್ಟಿಸಲ್ಪಟ್ಟಿರುವುದು ಆಕಸ್ಮಿಕವಾಗಿಯೇ? ಒಂದು ಗಿಡವನ್ನು ಸ್ಪರ್ಶಿಸುವಾಗ ತುರಿಕೆ ಉಂಟಾಗುವುದು ಆಕಸ್ಮಿಕವಾಗಿದ್ದರೆ ಅವರ ಚಿಕಿತ್ಸೆಗೆ ಪಾಲಕ್ ಗಿಡ ಸೃಷ್ಟಿಸಿದವರು ಆಕಸ್ಮಿಕವೇ, ನಾಸ್ತಿಕರ ಆಕಸ್ಮಿಕವೆಂಬ ಸಿದ್ಧಾಂತ ವಿಚಿತ್ರವಾಗಿದೆ. ಯಾವ ವಸ್ತುಗಳಿಗೆ ಮೃತ್ಯು ವಿಧಿಸಲಾಗಿದೆಯೋ ಅವುಗಳಲ್ಲಿ ಜನನ ವ್ಯವಸ್ಥೆಯನ್ನು ಮಾಡಲಾಗಿದೆ. ಯಾವ ವಸ್ತುಗಳಿಗೆ ಮೃತ್ಯು ವಿಧಿಸಲಾಗಿಲ್ಲವೋ ಅವುಗಳಲ್ಲಿ ಜನನ ವ್ಯವಸ್ಥೆ ಸಹ ಇರಿಸಲಾಗಿಲ್ಲ. ಮನುಷ್ಯನು ಹುಟ್ಟುತ್ತಲೇ ಇದ್ದು ಮೃತನಾಗದೆ ಇರುತ್ತಿದ್ದಾರೆ. ಕೆಲವೇ ವರ್ಷಗಳಲ್ಲಿ ಲೋಕ ವ್ಯವಸ್ಥೆ ಕೊನೆಗೊಳ್ಳುತ್ತಿತ್ತು. ಆದುದರಿಂದ ಮನುಷ್ಯನನ್ನು ಜನನ ಮರಣ ವ್ಯವಸ್ಥೆಯಡಿ ಒಳಪಡಿಸಲಾಗಿದೆ. ಆದರೆ ಸೂರ್ಯ, ಚಂದ್ರ, ಭೂಮಿ ನಾಶವಾಗುವದಿಲ್ಲ ವಾದುವರಿಂದ ಹೊಸದು ಹುಟ್ಟುವುದೂ ಇಲ್ಲ. ಭೂಮಿ ಮತ್ತು ಸೂರ್ಯನಲ್ಲಿ ಗುರುತ್ವಾಕರ್ಷಣ ಶಕ್ತಿ ಇರುವುದರಿಂದ ಅವು ಪರಸ್ಪರ ಡಿಕ್ಕಿ ಹೊಡೆಯದ ಹಾಗೆ ಅವುಗಳನ್ನು ಬಹಳ ದೂರ ದೂರವಾಗಿ ಇರಿಸಲಾಗಿದೆ ಎನ್ನುವುದು ಆಶ್ಚರ್ಯಕರವಾದ ವ್ಯವಸ್ಥೆ ಅಲ್ಲವೇ? ಇವುಗಳೆಲ್ಲ ಒಬ್ಬ ಸೃಷ್ಟಿಕರ್ತನ ಅಸ್ತಿತ್ವವನ್ನು ತ್ಯಜಿಸುವುದಿಲ್ಲವೇ? ಅವನು ಎಲ್ಲವನ್ನು ತಿಳಿದವನಾಗಿದ್ದಾನೆ. ಅವನ ಜ್ಞಾನ ಅಪರಿಮಿತ ಅವನು ರೂಪಿಸಿದ ನಿಯಮಗಳು ಬಲಿಷ್ಠವೂ ವೈರುಧ್ಯವಿಲ್ಲದ್ದು ಆಗಿವೆ. ಅವುಗಳಲ್ಲಿ ಯಾವುದೇ ಕುಂದು ಕೊರತೆಗಳಿಲ್ಲ. ನನಗೆ ನನ್ನ ಕೈಬೆರಳುಗಳು ಸಹ ಸೃಷ್ಟಿಕರ್ತನ ಅಸತಿತ್ವಕ್ಕೆ ಸಾಕ್ಷ್ಯಾಧಾರವಾಗಿದೆ. ನನಗೆ ಸಿಂಹದ ಹಾಗೆ ಪಂಜವನ್ನು ನೀಡಿದ್ದರೆ ನನಗೆ ಬರೆಯಲು ಸಾಧ್ಯವಿತ್ತೇ. ಸಿಂಹಕ್ಕೆ ಪಂಜ ನೀಡಿದರೂ ಜ್ಞಾನ ನೀಡಿಲ್ಲ. ಆದರೆ ನನಗೆ ಜ್ಞಾನ ನೀಡಿ ಬರೆಯಲು ಬೆರಳುಗಳನ್ನು ನೀಡಲಾಗಿದೆ.

ದೊರೆಗಳ ಸರಕಾರಗಳಲ್ಲಿ ಸಾವಿರಾರು ನಿಷ್ಣಾಂತರು ಸರಕಾರದ ವ್ಯವಸ್ಥೆಯ ಸುಧಾರಣೆಗೆ ರಾತ್ರಿ ಹಗಲು ಕಾರ್ಯ ನಿರತವಾಗುತ್ತದೆ. ಹೀಗಿದ್ದರೂ ಅವರಿಂದ ಸಂಭವಿಸುವ ತಪ್ಪುಗಳಿಂದ ಸರಕಾರಕ್ಕೆ ಹಾನಿ ಉಂಟಾಗುತ್ತದೆ. ಆದರೆ ಲೋಕದ ವ್ಯವಸ್ಥೆ ಆಕಸ್ಮಿಕವಾಗಿ ಸಂಭವಿಸಿ ಹೇಳುವ ಜನರು ಈ ಆಕಸ್ಮಿಕ ವ್ಯವಸ್ಥೆಯಲ್ಲಿ ಯಾವುದೇ ತಪ್ಪಿಲ್ಲದಿರುವುದು ಕಾಣುತ್ತಾರೆ. ವಾಸ್ತವಿಕ ಸಂಗಾತಿ ಏನೆಂದರೆ ಈ ಎಲ್ಲಾ ಸೃಷ್ಟಿ ವ್ಯವಸ್ಥೆಯನ್ನು ಸೃಷ್ಟಿಸಿದ ಸೃಷ್ಟಿಕರ್ತನೊಬ್ಬ ಆಗಿದ್ದಾನೆ. ಅವನು ವಿಶಾಲ ವಿಶ್ವದ ಒಡೆಯನಾಗಿದ್ದಾನೆ. ಅವನು ಶಕ್ತಿ ಶಾಳಿಯಾಗಿದ್ದಾನೆ. ಅವನ ಮೂಲಕವೇ ಈ ವಿಶ್ವ ವ್ಯವಸ್ಥೆ ಜಾರಿಯಲ್ಲಿದೆ. ನೀವು ವಿಶ್ವದ ಯಾವ ಕಡೆಗೆ ದೃಷ್ಟಿ ಹಾಯಿಸಿದರೂ ಪವಿತ್ರ ಖುರ್‌ಆನಿನಲ್ಲಿ ನೀವು ಯಾವುದೇ ಕುಂದು ಕೊರತೆ ಕಾಣದೆ ಸೋತು ಬಳಲುವಿರಿ. ಎಲ್ಲದರಲ್ಲೂ ಒಂದು ಸುವ್ಯವಸ್ಥೆ ಕಾಣುವಿರಿ. ಒಳ್ಳೆಯವರು ಉತ್ತಮಗತಿ ಕಾಣುತ್ತಾರೆ. ಕೆಟ್ಟವರು ಶಿಕ್ಷೆ ಪಡೆಯುತ್ತಾರೆ. ಪ್ರತಿಯೊಂದು ವಸ್ತು ತನಗೆ ವಹಿಸಿಕೊಟ್ಟು ಕೆಲಸ ಮಾಡುತ್ತಿದೆ. ಒಂದು ಕ್ಷಣಕಾಲ ಸಹ ಕರ್ತವ್ಯಚ್ಯುತಿ ಮಾಡುವುದಿಲ್ಲ. ಇದು ಬಹಳ ವಿಶಾಲವಾಗಿ ಪ್ರತಿ ಪಾಲಿಸಬೇಕಾದ ವಿಷಯವಾಗಿದೆ. ನಾನು ಇಲ್ಲಿ ಮುಕ್ತಾಯಗೊಳಿಸುತ್ತೇನೆ. ಬುದ್ಧಿಶಾಲಿಗೆ ಸೂಚನೆ ಸಾಕಾಗುತ್ತದೆ.

### ಆರನೆಯ ಸಾಕ್ಷ್ಯಾಧಾರ

ಪವಿತ್ರ ಖುರ್‌ಆನ್‌ನಿಂದ ತಿಳಿಯುವುದೇನೆಂದರೆ ಅಲ್ಲಾಹನ ಅಸ್ತಿತ್ವವನ್ನು ನಿರಾಕರಿಸುವವರು ಯಾವಾಗಲೂ ಕೀಳು ಅವಸ್ಥೆಗೆ ತಲಪುತ್ತಾರೆ. ಇದು ಅವರು ಸುಳ್ಳುಗಾದರೆಂಬುದಕ್ಕೆ ಸಾಕ್ಷ್ಯವಾಗಿದೆ. ಅಲ್ಲಾಹನನ್ನು ನಂಬುವವರಿಗೆ ಯಾವಾಗಲೂ ಅಲ್ಲಾಹನು ಜಯನೀಡುತ್ತಾನೆ. ಅವರು ತಮ್ಮ ವಿರೋಧಿಗಳ ವಿರುದ್ಧ ಜಯಗೊಳಿಸುತ್ತಾರೆ. ದೇವನಿಲ್ಲದಿದ್ದರೆ ಈ ಸಹಾಯ ಮತ್ತು ಬೆಂಬಲ ದೊರಕುವುದು ಹೇಗೆ ಹೇಳುತ್ತದೆ. ಫಿರ್‌ಔನ್ ಹಝ್ರತ್ ಮೂಸಾ(ಅ) ಹೇಳಿದನು:- **ಫಖಾಲ ಅನ ರಬ್ಬುಕುಮುಲ್ ಅಅಲಾ ಫಅಖಝಹುಲ್ಲಾಹು ನಕಾಲಲ್ ಆಖಿರ ವಲ್ ಊಲಾ.** ನಾನೇ ಮಹೋನ್ನತನಾದ ನಿಮ್ಮ ಪ್ರಭು ಎಂದು ಅವನು (ಫಿರ್‌ಔನ್) ಹೇಳಿದನು. ಆದುದರಿಂದ ಅಲ್ಲಾಹನು: ಅವನನ್ನು ಹಿಡಿದು ಪರಲೋಕದ ಮತ್ತು ಇಹಲೋಕದ ಶಿಕ್ಷೆಗೆ ಗುರಿಪಡಿಸಿದನು. (ಪವಿತ್ರ ಖುರ್‌ಆನ್ 79: 25-26)

ಹಝ್ರತ್ ಮೂಸಾ(ಅ) ಫಿರ್‌ಔನ್‌ನೊಂದಿಗೆ ಅಲ್ಲಾಹನನ್ನು ಅನುಸರಿಸಲು ಹೇಳಿದಾಗ ಅವನು ಅಹಂಭಾವದಿಂದ ಹೇಳಿದನು. ನಾನೇ ದೇವನು ಆದುದರಿಂದ ಅಲ್ಲಾಹನು ಅವನನ್ನು ಹೀನೈಸಿದನು. ಫಿರ್‌ಔನನ ಘಟನೆ ಒಂದು ಸ್ಪಷ್ಟ ಉದಾಹರಣೆಯಾಗಿದೆ. ದೇವನನ್ನು ನಿರಾಕರಿಸುವವರನ್ನು ಹೀಗೆ ಶಿಕ್ಷಿಸುತ್ತಾನೆಂದು ಲೋಕದಲ್ಲಿ ನಿರೀಶ್ವರದವಾದಿಗಳ ರಾಜ್ಯಭಾರ ಎಂದೂ ಸ್ಥಾಪಿಸಲ್ಪಡಲಿಲ್ಲ. ಲೋಕದ ಜಯಶಾಲಿಗಳು, ಚರಿತ್ರೆಯನ್ನು ನಿರ್ಮಿಸಿದವರು ದೇವನನ್ನು ನಂಬುವವರೇ ಆಗಿದ್ದಾರೆ. ಅವರು ಜನಾಂಗದ ದೃಷ್ಟಿಯಲ್ಲಿ ಹೀನೈಸಲ್ಪಡುವುದು ಅರ್ಥಗರ್ಭಿತವಾಗಿಲ್ಲವೇ.

### ಏಳನೆಯ ಸಾಕ್ಷ್ಯಾಧಾರ

ಅಲ್ಲಾಹನ ಅಸ್ತಿತ್ವವನ್ನು ನಂಬುವವರು, ನೈಜ ವಿಶ್ವಾಸ ಹೊಂದಿರುವರು ಯಾವಾಗಲೂ ಜಯಶಾಲಿಗಳಾಗುತ್ತಾರೆ. ಜನರು ಅವರನ್ನು ವಿರೋಧಿಸುತ್ತಾ ಇದ್ದರೂ. ಅವರ ಮೇಲೆ ವಿಪತ್ತು ಬಂದೆರಗುವುದಿಲ್ಲ. ದೇವನ ಅಸ್ತಿತ್ವವನ್ನು ಪ್ರತಿಪಾದಿಸುವವರು ಪ್ರತಿಯೊಂದು ದೇಶದಲ್ಲಿ ಜನಿಸಿದರು. ಅವರನ್ನು ಬಹಳ ಜನರು ವಿರೋಧಿಸಿದರು. ಆದರೆ ಅವರ ಕೆಲಸ ತಡೆಯಲು ಸಾಧ್ಯವಾಗಲಿಲ್ಲ. ಶ್ರೀರಾಮರಿಗೆ ವನವಾಸದ ಶಿಕ್ಷೆ ನೀಡಿದವರಿಗೆ ಲಭಿಸಿದ ಸುಖವಾದರೂ ಏನು? ರಾವಣನು ಅನುಭವಿಸಿದ ಸುಖವೇನು? ಶ್ರೀರಾಮರ ಹೆಸರು ಸಾವಿರಾರೂ ವರ್ಷ ಜೀವಂತವಾಗಿಲ್ಲವೇ. ರಾವಣ ಯಾವಾಗಲೂ ಅಪಕೀರ್ತಿಗೆ ಪಾತ್ರನಾಗಲಿಲ್ಲವೇ? ಶ್ರೀಕೃಷ್ಣ ನೀಡಿದ ಉಪದೇಶ ತಿರಸ್ಕರಿಸಿ ಕೌರವರು ಗಳಿಸಿದ ಲಾಭವಾದರೂ ಏನು. ಅವರು ಕುರುಕ್ಷೇತ್ರ ರಣಾಂಗದಲ್ಲಿ ನಾಶವಾಗಲಿಲ್ಲವೇ? ಫಿರ್‌ಔನನು ಬನೀ ಇಸ್ರಾಯೀಲ್ ಜನರಿಂದ ಇಟ್ಟಿಗೆ ಮಾಡಿಸುತ್ತಿದ್ದ ಆತನು ಹಝ್ರತ್ ಮೂಸಾ(ಅ) ಬಲಹೀನ ಮನುಷ್ಯನನ್ನು ವಿರೋಧಿಸಿದನು. ಆದರೆ

ಅವರಿಗೆ ಹಾನಿ ಉಂಟು ಮಾಡಲು ಅವನಗೆ ಸಾಧ್ಯವಾಯಿತೆ? ಅವನು ನೀರಿನಲ್ಲಿ ಮುಳುಗಿದನು. ಹಝ್ರತ್ ಮೂಸಾ(ಅ) ದೊರೆಯಾದರು. ಹಝ್ರತ್ ಮಸೀಹ್(ಅ) ರವರನ್ನು ಲೋಕವು ವಿರೋಧಿಸಿರುವುದು ಪ್ರಕಟವಾಗಿದೆ. ಅವರ ಸಮುದಾಯ ಗಳಿಸಿದ ಅಭಿವೃದ್ಧಿ ರಹಸ್ಯವಾದುದೇನೂ ಅಲ್ಲ. ಅವರ ಶತ್ರುಗಳು ನಾಶವಾದರು ಅವರ ಸೇವಕರು ದೇಶಗಳ ದೊರೆಗಳಾದರು. ನಮ್ಮ ಯಜಮಾನ ಹಝ್ರತ್ ಮುಹಮ್ಮದ್(ಸ) ರವರು ಲೋಕದಲ್ಲಿ ಅಲ್ಲಾಹನ ಪರಿಶುದ್ಧ ನಾಮ ಹರಡುವವರಾಗಿದ್ದರು. ಅವರ ಬಗ್ಗೆ ಯುರೋಪಿನ ಒಬ್ಬ ಲೇಖಕ ಹೇಳುತ್ತಾರೆ. ಅವರಿಗೆ ದೇವನ ಹುಚ್ಚು ಹಿಡಿದಿತ್ತು (ನಊಝು ಬಿಲ್ಲಾಹ್- ಅಲ್ಲಾಹನ ಅಭಯ ಯೋಚಿಸುತ್ತೇವೆ) ಅವರು ಯಾವಾಗಲೂ ಅಲ್ಲಾಹ್, ಅಲ್ಲಾಹ್ ಎಂದು ಹೇಳುತ್ತಾ ಇದ್ದರು. ಹಝ್ರತ್ ಮುಹಮ್ಮದ್(ಸ) ಅವರ ಸ್ವಂತ ಕೋಮಿನ ಜನರೂ ಅನ್ಯರೂ ವಿರೋಧಿಸಿದರು. ಹೀಗಿದ್ದರೂ ಅವರಿಗೆ ಲೋಕದ ಖಜಾನೆಗಳನ್ನು ಜಯಿಸಲು ಸಾಧ್ಯವಾಗಲಿಲ್ಲವೇ? ದೇವನಿಲ್ಲವಾದರೆ ಅವರಿಗೆ ಸಹಾಯ ಮಾಡಿದವರು ಯಾರು? ಇವುಗಳೆಲ್ಲಾ ಆಕಸ್ಮಿಕವಾಗಿರಲಾರವು. ಹಾಗಿದ್ದರೆ ಅಂತಹವನನ್ನು ಲೋಕವು ಕೆಳಕ್ಕೆ ತಳ್ಳುತ್ತಿತ್ತು. ಆದರೆ ಅಲ್ಲಾಹನ ಹೆಸರನ್ನು ಉನ್ನತಗೊಳಿಸಲು ಆಗಮಿಸಿದವನು ಯಾವಾಗಲೂ ಜಯಶಾಲಿಯಾದನೂ ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳುತ್ತಾನೆ. **ಮನ್ ಯತವಲ್ಲಲ್ಲಾಹ ವ ರಸೂಲಹೂ ವಲ್ಲಝೀನ ಆಮನೂ ಫ ಇನ್ನ ಹಿಝ್‌ಬಲ್ಲಾಹಿ ಹುಮುಲ್‌ಗಾಲಿಬೂನ್** ಅಲ್ಲಾಹನನ್ನು ಅವನ ಸಂದೇಶವಾಹಕರನ್ನು ಸತ್ಯವಿಶ್ವಾಸಿಗಳನ್ನು ಯಾರು ಮಿತ್ರರನ್ನಾಗಿ ಮಾಡುತ್ತಾರೋ (ಅವರು ತಿಳಿದುಕೊಳ್ಳಲಿ) ಖಂಡಿತವಾಗಿಯೂ ಅಲ್ಲಾಹನ ಪಕ್ಷದವರೇ ವಿಜಯಗಳಾಗುತ್ತಾರೆ.

### ಎಂಟನೆಯ ಸಾಕ್ಷ್ಯಾಧಾರ

ಪವಿತ್ರ ಖುರ್‌ಆನಿನ ಮೂಲಕ ಅಲ್ಲಾಹನ ಅಸ್ತಿತ್ವದ ಬಗ್ಗೆ ದೊರಕುವ ಇನ್ನೊಂದು ಸಾಕ್ಷಾಧಾರ ಅಲ್ಲಾಹನು ಪ್ರಾರ್ಥನೆಗಳನ್ನು ಅಂಗೀಕರಿಸುತ್ತಾನೆ ಎನ್ನುವುದಾಗಿದೆ. ಅಲ್ಲಾಹನು ಪ್ರಾರ್ಥನೆಗಳನ್ನು ಅಂಗೀಕರಿಸುವ ದೃಷ್ಟಿಗಳು ಪ್ರತಿಯೊಂದು ಕಾಲಘಟ್ಟದಲ್ಲಿ ಕಂಡು ಬರುತ್ತವೆ. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳುತ್ತಾನೆ. **ಇಝಾ ಸಅಲಕ ಇಬಾದಿ ಅನ್ನೀ ಫ ಇನ್ನೀ ಕರೀಬುನ್ ಉಜೀಬುದಅವತ ದಾಇ ಇಝಾ ದಾನಿ ಯಸ್ತ ಜೀಬೂಲೀ ವಲ್ ಯೂ ಮಿನೂ ಬೀ ಲಅಲ್ಲಹುಮ್ ಯರ್‌ಶುದೂನ್**. (ಓ ಪ್ರವಾದಿ) ನನ್ನ ಬಗ್ಗೆ ನನ್ನ ದಾಸರು ನಿನ್ನೊಡನೆ ಕೇಳಿದರೆ (ಹೇಳು) ಖಂಡಿತವಾಗಿಯೂ ನಾನು ಸಮೀಪದಲ್ಲಿಯೇ ಇದ್ದೇನೆ. ನನ್ನನ್ನು ಕರೆದು ಪ್ರಾರ್ಥಿಸುವಾಗ ಪ್ರಾರ್ಥಿಸುವವನ ಪ್ರಾರ್ಥನೆಗೆ ನಾನು ಉತ್ತರ ನೀಡುವೆನು. ಆದ್ದರಿಂದ ಅವರು ಸತ್ಯ ಪಡೆಯಲ್ಲಿಕ್ಕಾಗಿ ನನ್ನ ಕಡೆಗೆ ಓಗೊಡಲಿ ಮತ್ತು ನನ್ನ ಮೇಲೆ ನಂಬಿಕೆ ಇರಿಸಲಿ. (ಪವಿತ್ರ ಖುರ್‌ಆನ್ 2: 187) ಪ್ರಾರ್ಥನೆಗಳು ಅಲ್ಲಾಹನಿಂದ ಅಂಗೀಕಾರ ಪಡೆಯುವ ಬಗ್ಗೆ ಯಾರಾದರೂ ಹೀಗೆ ಆಕ್ಷೇಪಿಸಬಹುದು. ಕೆಲವರ ಪ್ರಾರ್ಥನೆಗಳು ಮಾತ್ರ ಅಂಗೀಕಾರ ಪಡೆಯುತ್ತವೆ. ಆದುದರಿಂದ ಅವುಗಳು ಆಕಸ್ಮಿಕವೆಂದು ಏಕೆ ಭಾವಿಸಬಾರದು. ಎಲ್ಲರ ಪ್ರಾರ್ಥನೆ ಅಂಗೀಕಾರವಾಗುವುದಾದರೆ ಮಾತ್ರ ದೇವನ ಅಸ್ತಿತ್ವವನ್ನು ಒಪ್ಪು ಬಹುದು. ಇದಕ್ಕೆ ಉತ್ತರವೇನೆಂದರೆ ಪ್ರಾರ್ಥನೆಯ ಅಂಗೀಕಾರ ಒಂದು ದೈವಿಕ ದೃಷ್ಟಾಂತವಾಗಿದೆ. ವಾಗ್ದತ್ತ ಮಹ್‌ದೀ ಮಸೀಹ್ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್(ಅ) ದೇವನ ಅಸ್ತಿತ್ವದ ಸಾಕ್ಷ್ಯಾಧಾರ ನೀಡುವ ಬಗ್ಗೆ ಹೇಗೆ ಹೇಳಿದ್ದರು. ಕಠಿಣ ರೋಗಬಾಧಿತರಾಗಿರುವ ಕೆಲವು ರೋಗಿಗಳನ್ನು ಜಮಾಯಿಸಬೇಕು. ಅವರನ್ನು ಎರಡು ಭಾಗಗಳಾಗಿ ವಿಂಗಡಿಸಬೇಕು. ಒಂದು ಭಾಗದ ರೋಗಿಗಳಿಗೆ ಡಾಕ್ಟರ್‌ಗಳು ಚಿಕಿತ್ಸೆ ನೀಡಲಿ. ಇನ್ನೊಂದು ಭಾಗದ ರೋಗಿಗಳ ಪರವಾಗಿ ನಾನು ಪಾರ್ಥಿಸುವೆನು.

ಅನಂತರ ನೋಡಿರಿ ಯಾವ ಭಾಗದ ರೋಗಿಗಳು ಗುಣ ಹೊಂದುತ್ತಾರೆಂದು. ಇಂತಹ ಪರೀಕ್ಷೆ ಬಗ್ಗೆ ಸಂಶಯಕ್ಕೆ ಆಸ್ಪದವಿರುದಿಲ್ಲ. ಹುಚ್ಚು ನಾಯಿ ಕಡಿದ ಒಬ್ಬ ಹುಡುಗನಿಗೆ ರೋಗಬಾಧಿಸಿದಾಗ ಕಸೌಲಿಯ ಹುಚ್ಚು ರೋಗ ಚಿಕಿತ್ಸಾಲಯದವರು ಇದಕ್ಕೆ ಚಿಕಿತ್ಸೆ ಇಲ್ಲವೆಂದು ಹೇಳಿದರು. ಅವನಿಗೋಸ್ಕರ ವಾಗ್ದಾತ್ತ ಮಹ್‌ದೀ ಮಸೀಹ್ ಪ್ರಾರ್ಥಿಸಿದಾಗ ಅವನಿಗೆ ರೋಗ ನಿವಾರಣೆ ಆಯಿತು. ಆದರೆ ಹುಚ್ಚು ನಾಯಿ ಕಚ್ಚಿದ ನಂತರ ಹುಚ್ಚು ಹಿಡಿದರೆ ಚಿಕತ್ಸೆಯೇ ಇರುವುದಿಲ್ಲ. ಆದುದರಿಂದ ಪ್ರಾರ್ಥನೆಗಳು ಅಂಗೀಕಾರವಾಗಿರುವುದು ಸಾಬೀತುಗೊಳಿಸುವುದೇನೆಂದರೆ ಪ್ರಾರ್ಥನೆ ಅಂಗೀಕಾರದಂತಹ ಒಂದು ಅಸ್ತಿತ್ವವಿದೆ. ಪ್ರಾರ್ಥನೆಯ ಅಂಗೀಕಾರ ಒಂದು ವಿಶಿಷ್ಟ ಕಾಲಘಟ್ಟಕ್ಕೆ ಸಂಬಂಧಿಸಿರುವುದಿಲ್ಲ. ಪ್ರತಿಯೊಂದು ಕಾಲದಲ್ಲಿ ಅದರಲ್ಲಿ ಅದರ ಉದಾಹರಣೆ ಕಂಡುಬರುತ್ತದೆ. ಹಿಂದಿನ ಕಾಲದಲ್ಲಿ ಪ್ರಾರ್ಥನೆಗಳು ಅಂಗೀಕಾರವಾಗುತ್ತಿದ್ದ ಹಾಗೆಯೇ ಈಗಲೂ ಅಂಗೀಕಾರಗೊಳ್ಳುತ್ತವೆ.

### ಒಂಬತ್ತನೆಯ ಸಾಕ್ಷ್ಯಾಧಾರ

ಅಲ್ಲಾಹನು ಅವತೀರ್ಣಗೊಳಿಸುವ ಸಂದೇಶ ವಾಣಿಗಳು ಇನ್ನೊಂದು ಸಾಕ್ಷ್ಯಾಧಾರವಾಗಿದೆ ಎಂದು ಪವಿತ್ರ ಖುರ್‌ಆನ್‌ನಿಂದ ತಿಳಿಯುತ್ತದೆ. ಇದನ್ನು ನಾನು ಒಂಬತ್ತನೆಯ ಸಾಕ್ಷ್ಯಾಧಾರವೆಂದು ಪ್ರಸ್ತಾಪಿಸಿದ್ದರೂ ಇದು ಅತ್ಯಂತ ವೈಭವಶಾಲಿ ಸಾಕ್ಷ್ಯಾಧಾರವಾಗಿದೆ ಮತ್ತು ಅಲ್ಲಾಹನ ಅಸ್ತಿತ್ವವನ್ನು ದೃಢವಾಗಿ ಸ್ಥಾಪಿಸುತ್ತದೆ. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳಿದ್ದಾನೆ. **"ಯುಸಬ್ಬಿತುಲ್ಲಾಹುಲ್ಲಝೀನ ಆಮನೂ ಬಿಲ್ ಖೌಲಿಸ್ಸಾಬಿತಿ ಫಿಲ್ ಹಯಾತಿದ್ದುನ್‌ಯಾ ವ ಫಿಲ್ ಆಖಿರತಿ."** ಅಲ್ಲಾಹನು ಸತ್ಯವಿಶ್ವಾಸಿಗಳಿಗೆ ಐಹಿಕ ಜೀವಿತದಲ್ಲೂ ಪರಲೋಕದಲ್ಲೂ ಸ್ಥಿರವಾದ ವಚನ ಮೂಲಕ ಶಕ್ತಿ ನೀಡುತ್ತಾನೆ. (ಪವಿತ್ರ ಖುರ್‌ಆನ್ 14:28) ಪ್ರತಿಯೊಂದು ಕಾಲಘಟ್ಟದಲ್ಲಿ ಅಲ್ಲಾಹನು ಬಹಳ ಜನರೊಂದಿಗೆ ಮಾತನಾಡುತ್ತ ಇರುತ್ತಾನೆ ಎನ್ನುವುದನ್ನು ನಿರಾಕರಿಸುವುದು ಹೇಗೆ ತಾನೆ ಸಾಧ್ಯ? ಪ್ರವಾದಿಗಳೊಂದಿಗೆ, ಸಂದೇಶವಾಹಕರೊಂದಿಗೆ ಮಾತ್ರವಲ್ಲ ಅವನು ಸಂತರೊಂದಿಗೂ ಮಾತನಾಡುತ್ತಾನೆ. ಕೆಲವು ಸಾರಿ ಅವನು ತನ್ನ ಬಡ ದಾಸನ ಮೇಲೆ ದಯದೋರಿ ಅವನನ್ನು ಸಮಾಧಾನ ಪಡಿಸಲು ಅವನೊಂದಿಗೆ ಮಾತನಾಡಿರುವನು ಮತ್ತು ತನ್ನ ಅಸ್ತಿತ್ವವನ್ನು ಸಾಕ್ಷ್ಯಾಧಾರಗಳಿಂದ ಸಾಬೀತುಗೊಳಿಸಿರುವನು. ಕೆಲವು ಸಾರಿ ಕೆಟ್ಟ ಅಂತರಂಗ ಹೊಂದಿದವರೊಂದಿಗೂ, ಅವರಿಗೆ ತನ್ನ ಅಸ್ತಿತ್ವದ ಸಾಕ್ಷ್ಯಾಧಾರವಾಗಿ ಮಾತನಾಡುತ್ತಾನೆ. ಕೆಲವು ಸಾರಿ ಕಸ ಗುಡಿಸುವವರಿಗೂ, ಚಮ್ಮಾರರಿಗೂ, ನೃತ್ಯಗಾರ್ತಿಯರಿಗೂ ಸ್ವಪ್ನಗಳು ಮತ್ತು ವಾಣಿಗಳು ಲಭಿಸುತ್ತವೆ. ಒಬ್ಬ ಶಕ್ತಿಶಾಲಿ ಅಸ್ತಿತ್ವದ ಮೂಲಕ ಇದು ದೊರೆಯುತ್ತವೆ ಎನ್ನುವುದಕ್ಕೆ ಸಾಕ್ಷ್ಯವಾಗಿ ಕೆಲವು ಸಾರಿ ಭವಿಷ್ಯತ್ ಕಾಲದ ಘಟನೆಗಳು ಸೂಚಿಸಲ್ಪಡುತ್ತವೆ ಮತ್ತು ಅವು ಈಡೇರುತ್ತವೆ. ಅವು ಸಾಬೀತು ಪಡಿಸುವುದೇನೆಂದರೆ ಅವು ಯಾರಾದರೂ ಊಹಿಸಿ ಹೇಳಿರುವುದಲ್ಲ ಅಥವಾ ಅಜೀರ್ಣ ರೋಗ ಬಾಧೆಯ ಪರಿಣಾವಾಗಿ ಅಲ್ಲಿ ಎಂದು ಸಾಬೀತಾಗುತ್ತದೆ. ಕೆಲವು ಸಾರಿ ನೂರಾರು ವರ್ಷಗಳ ನಂತರದ ಸಮಾಚಾರ ನೀಡಲ್ಪಡುತ್ತವೆ. ಇದರಿಂದ ತಿಳಿಯುವುದೇನೆಂದರೆ ಕನಸಿನಲ್ಲಿ ಕಂಡದ್ದು ಆಕಸ್ಮಿಕವಾಗಿ ಈಡೇರಿತು ಎಂದು ಭಾವಿಸಬಾರದು. ಕ್ರೈಸ್ತ ಜನಾಂಗಗಳ ಅಭಿವೃದ್ಧಿಯನ್ನು ಕಂಡು ಲೋಕವು ಆಶ್ಚರ್ಯಗೊಳ್ಳುತ್ತಿದೆ. ಇದರ ಬಗ್ಗೆ ಭವಿಷ್ಯವಾಣಿಗಳು ಪವಿತ್ರ ಖುರ್‌ಆನ್‌ನಲ್ಲೂ ತೌರಾತ್‌ನಲ್ಲೂ ಸ್ಪಷ್ಟವಾಗಿ ಪ್ರಸ್ತಾಪಿಸಲ್ಪಟ್ಟವೆ. ಮುಂದೆ ಸಂಭವಿಸಲಿರುವ ಅನೇಕ ವಿಷಯಗಳ ಭವಿಷ್ಯವಾಣಿಗಳಿವೆ. ಉದಾಹರಣೆಗೆ ಪವಿತ್ರ ಖುರ್‌ಆನಿನ ಈ ಕೆಳಗಿನ ಭವಿಷ್ಯವಾಣಿಯನ್ನು ನೋಡಿರಿ. **"ವ ಇಝುಲ್ ಇಶಾರು ಉತ್ತಿಲಿತ್"** ಹತ್ತು ಮಾಸ ಗರ್ಭವುಳ್ಳ ಒಂಟೆಗಳು ತ್ಯಜಿಸಲ್ಪಡುವಾಗ. (ಪವಿತ್ರ ಖುರ್‌ಆನ್ 81:5) ಇದರ ವ್ಯಾಖ್ಯಾನವಾಗಿ ಹದೀಸಿನಲ್ಲಿ ಹೀಗೆ ಬರೆಯಲಾಗಿದೆ. **"ವಲಯುತ್‌ರಕನ್ನಲ್ ಖಿಲಾಸ ಫಲಾ ಯುಸ್‌ಆ ಅಲೈಹಾ"** ಎಂದರೆ ಒಂಟೆಗಳನ್ನು ಉಪಯೋಗಿಸದ ಕಾಲವು ಬರುವುದು. ರೈಲು ಬಂಡಿಗಳು ಜಾರಿಗೊಂಡು ಈ ಭವಿಷ್ಯವಾಣಿ ಈಡೇರಿದೆ. ರೈಲು ಬಂಡಿಯ ಬಗ್ಗೆ ಹಝ್ರತ್ ಮುಹಮ್ಮದ್(ಸ) ರವರರು ಹದೀಸುಗಳಲ್ಲಿ ಎಂತಹ ಸೂಚನೆಗಳಿಂದ ರೈಲು ಬಂಡಿಯ ಚಿತ್ರ ನಮ್ಮ ಕಣ್ಣ ಮುಂದೆ ಬರುತ್ತದೆ. ಉಗಿಯಿಂದ ಚಲಿಸುವ ಮತ್ತು ಹೊಗೆಯ ಪರ್ವತವನ್ನೇ ಹೊಂದಿರುವ ಸವಾರಿ ಸಾಧನದ ಬಗ್ಗೆ ಸೂಚಿಸಲಾಗಿದೆ. ಅದು ಭಾರ ಹೊರುವ ಗುಣದಲ್ಲಿ ಕತ್ತೆಯ ಹಾಗಿರುವುದು. ಪ್ರಯಾಣ ಕಾಲದಲ್ಲಿ ಧ್ವನಿ ಹೊರಡಿಸುವುದು ಎಂದೆಲ್ಲ ಹೇಳಲಾಗಿದೆ.

2. ಇನ್ನೊಂದು ಭವಿಷ್ಯವಾಣಿ **"ವ ಇಝುಸ್ಸುಹುಫು ನುಶಿರತ್** ಪುಸ್ತಕಗಳು ವಿಫುಲವಾಗಿ ಪ್ರಚಲಿಸಲ್ಪಡುವಾಗ (ಪವಿತ್ರಖುರ್‌ಆನ್ 81:11)

ಮುದ್ರಣಾಲಯ ಕಾರಣದಿಂದ ಪುಸ್ತಕಗಳು ಎಷ್ಟು ಹೆಚ್ಚು ಹೆಚ್ಚಾಗಿ ಪ್ರಕಟಿಸಲ್ಪಡುತ್ತಿವೆ ಎಂದರೆ ಅದರ ಬಗ್ಗೆ ವಿವರಣೆ ಅನಾವಶ್ಯಕವಾಗಿದೆ.

3. ಇನ್ನೊಂದು ಭವಿಷ್ಯವಾಣಿ **"ವಿಝುನ್ನುಫೂಸು ಝುವ್ವಿಝುತ್"** ಜನರು ಒಂದು ಗೂಡಿಸಲ್ಪಡುವಾಗ (ಪವಿತ್ರ ಖುರ್‌ಆನ್ 51:6) ಇದು ಲೋಕದಲ್ಲಿ ಜನರು ಪರಸ್ಪರ ಸಂಬಂಧ ಸ್ಥಾಪಿಸುವ ಬಗ್ಗೆ ಮತ್ತು ಸಂಪರ್ಕ ಸುಲಭವಾಗುವ ಬಗ್ಗೆ ಸೂಚಿಸುತ್ತದೆ.

4. ಇನ್ನೊಂದು ಭವಿಷ್ಯವಾಣಿ ಹೀಗಿದೆ. **"ಯೌಮತರ್‌ಜುಫು ರಾಜಿಫತು ತತ್‌ಬಉಹಾರ್‍ರಾದಿಫ"**

ಕಂಪಿಸುವಂಥದ್ದು ತೀವ್ರವಾಗಿ ಕಂಪಿಸುವ ದಿನದಂದು ಬೆನ್ನಟ್ಟು ಇನ್ನೊಂದು (ಕಂಪನ) ಅದನ್ನು ಬೆನ್ನಟ್ಟುವುದು. (ಪವಿತ್ರ ಖುರ್‌ಆನ್ 79:7-8) ಅಸಾಧಾರಣ ಭೂಕಂಪಗಳು ಸಂಭವಿಸುವ ಬಗ್ಗೆ ಈ ವಚನಗಳಲ್ಲಿ ಸೂಚಿಸಲಾಗಿದೆ.

5. ಇನ್ನೊಂದು ಭವಿಷ್ಯವಾಣಿ ಹೀಗಿದೆ:- **"ವ ಇನ್‌ಮಿನ್ ಖರ್‌ಯತಿನ್ ಇಲ್ಲಾ ನಹ್‌ನು ಮುಹ್‌ಲಿಕೂಹಾ ಖಬ್‌ಲ ಯೌಮಿಲ್ ಖಿಯಾಮತಿ ಅವ್ ಮುಅಝ್ಝಿಬೂಹಾ."** ಪುನರುತ್ಥಾನ ದಿನಕ್ಕೆ ಮುಂಚೆ ನಾವು ನಾಶಪಡಿಸದೆ ಅಥವಾ ಶಿಕ್ಷಿಸದ ಯಾವುದೇ ನಾಡಿಲ್ಲ.(ಪವಿತ್ರ ಖುರ್‌ಆನ್ 17:59). ಇಂದಿನ ಕಾಲಘಟ್ಟದಲ್ಲಿ ಪ್ಲೇಗ್ ರೋಗ ಭೂಕಂಪವಾಗಲು ಬಿರುಗಾಳಿ, ಅಗ್ನಿಪರ್ವತಗಳು ಮಹಾಯುದ್ಧಗಳಿಂದ ಜನರು ಸಾಯುತ್ತಿದ್ದಾರೆ. ಇಂದಿನ ಕಾಲದಲ್ಲಿ ಮೃತ್ಯು ಬರಿಸುವ ಎಂತಹ ಕಾರಣಗಳು ಇವೆ ಎಂದರೆ ಹಿಂದೆಂದೂ ಇಂತಹ ಪರಿಸ್ಥಿತಿ ಉಂಟಾಗಿರಲಿಲ್ಲ.

ಇಸ್ಲಾಮ್ ಧರ್ಮದಲ್ಲಿ ಎಂತಹ ಧರ್ಮ ಎಂದರೆ ಈ ಧರ್ಮದಲ್ಲಿ ಪ್ರತಿಯೊಂದು ಶತಮಾನದಲ್ಲಿ ಎಂತಹ ಜನರು ಜನಿಸುತ್ತಾರೆಂದರೆ ಅವರು ದೇವವಾಣಿಗಳಿಸುತ್ತಾರೆ. ಅವರು ಅಸಾಧಾರಣ ಚಿಹ್ನೆಗಳನ್ನು ತೋರಿಸುತ್ತಾರೆ ಮತ್ತು ಒಬ್ಬ ಶಕ್ತಿಶಾಲಿ ತನ್ನ ನಿರ್ಧಾರಗಳನ್ನು ಈಡೇರಿಸುವ ದೇವನ ಪರಿಚಯ ಮಾಡಿಸುತ್ತಾರೆ. ಇಂದಿನ ಕಾಲದಲ್ಲಿ ದೇವನಿಂದ ನಿಯೋಜಿತರಾದ ವಾಗ್ದತ್ತ ಮಸೀಹರಿಗೆ ಅವರು ಯಾವುದೇ ಪ್ರಸಿದ್ಧಿಯನ್ನು ಗಳಿಸಿದ ಮತ್ತು ಸಂದರ್ಭ— ಅಲ್ಲಾಹನು ಹೀಗೆ ತಿಳಿಸಿದನು.

1. **"ಯಅತೀಕ ಮಿನಕುಲ್ಲಿ ಫಜ್ಜಿನ್ ಅಮೀಖ್ ಯನ್‌ಸುರುಕ ರಿಜಾಲುನ್ ನೂಹೀ ಇಲೈಹಿಮ್ ಮಿನಸ್ಸಮಾಇ ವಲಾ ತುಸಯ್ಯದ್ ಲಿ ಖಲ್‌ಖಿಲ್ಲಾಹಿ ವಲಾ ತಸ್ ಅಮ ಮಿನನ್ನಾಸ್"** (ಬರಾಹೀನೆ ಅಹ್ಮದಿಯಾ 1881ರಲ್ಲಿ ಮುದ್ರಿತ ಪುಟ 241, ರೂಹನಿ ಖಝಾಈನ್ ಸಂಪುಟ-1 ಪುಟ:267 ಹಾಶಿಯಾ)

ಅರ್ಥ: ಪ್ರತಿಯೊಂದು ಮಾರ್ಗದಲ್ಲಿ ಸಂಚರಿಸಿ ಜನರು ನಿನ್ನ ಬಳಿಗೆ ಆಗಮಿಸುವರು. ಅವರು ಎಷ್ಟು ಹೆಚ್ಚು ಹೆಚ್ಚಾಗಿ ಆಗಮಿಸುವರೆಂದರೆ ಮಾರ್ಗಗಳು ಕುಸಿದುಬೀಳುವುದು. ನಿನಗೆ ಎಂತಹ ಜನರು ಸಹಾಯ ಮಾಡುವರೆಂದರೆ ಅವರ ಹೃದಯಗಳನ್ನು ನಾವು ಪ್ರೇರೇಪಿಸುವೆವು. ನಿನ್ನ ಬಳಿಗೆ ಆಗಮಿಸುವವರೊಂದಿಗೆ ನೀನು ಕೆಟ್ಟರೀತಿಯಲ್ಲಿ ವರ್ತಿಸಬಾರದು. ನೀನು ಅವರನ್ನು ಭೇಟಿಯಾಳಾಗಿ ಬಳಸಬಾರದು. ಈ ಸಂದೇಶವಾಣಿಗಳು ಎಂತಹ ವ್ಯಕ್ತಿಗೆ ಲಭಿಸಿತೆಂದರೆ ಆ ವ್ಯಕ್ತಿ ಜೀವಿಸುತ್ತಿದ್ದ ಗ್ರಾಮದ ಹೆಸರು ಅಂದಿನ ನಾಗರಿಕ ಜಗತ್ತಿನ ತಿಳಿದಿರಲಿಲ್ಲ. ಆ ವ್ಯಕ್ತಿಯನ್ನು ಎಲ್ಲರೂ ವಿರೋಧಿಸುತ್ತಿದ್ದರೂ ಅಮೇರಿಕ, ಆಫ್ರಿಕದಿಂದ ಪ್ರಾರಂಭಿಸಿ ಲೋಕದ ಎಲ್ಲ ಪ್ರಾದೇಶಗಳಿಂದ ಜನರು ಇಲ್ಲಿಗೆ ಆಗಮಿಸುವರು ಎಷ್ಟು ಹೆಚ್ಚು ಜನರು ಆಗಮಿಸುತ್ತಾರೆಂದರೆ ಅವರಿಗೆ ಹಸ್ತದಾನ ಮಾಡಿ ಭೇಟಿಯಾಗುವುದು ಸಾಮಾನ್ಯ ಮನುಷ್ಯನಿಗೆ ಸಾಧ್ಯವಾಗುವುದಿಲ್ಲ. ಶ್ರೀಮಂತರಾದ ಅನೇಕರು ತಮ್ಮ ಸ್ವಂತ ಪ್ರಿಯನಾದವನನ್ನು ಬಿಟ್ಟು ಇಲ್ಲಿಗೆ ಬಂದು ನೆಲೆಸುವರು. ಖಾದಿಯಾನ್ ಎಂಬ ಹೆಸರು ಲೋಕದಲ್ಲಿ ಪ್ರಸಿದ್ಧವಾಗುತ್ತದೆ. ಇದು ಚಿಕ್ಕವಿಷಯ ವೇನು? ಇದು ಎಂತಹ ದೃಷ್ಟಾಂತವೆಂದರೆ ಇದು ಸಾಮಾನ್ಯ ದೃಷ್ಟಿಯಲ್ಲಿ ವೀಕ್ಷಿಸಿ ಕಡೆಗಣಿಸುವಂತಹದಲ್ಲ.

2. ಕ್ರೈಸ್ತ ಧರ್ಮದ ಡೂಯಿ ಎಂಬವನು ತಾನು ಪ್ರವಾದಿ ಎಂದು ವಾದಿಸಿ ಹೇಗೆ ತನ್ನ ಕೊಳಕು ಭಾಷೆಯಲ್ಲಿ ಪ್ರಕಟಿಸಿದನು:- ಇಸ್ಲಾಮ್ ಲೋಕದಿಂದ ಬೇಗನೆ ಅಳಿದು ಹೋಗಲಿ ಎಂದು ನಾನು ದೇವನೊಂದಿಗೆ ಪ್ರಾರ್ಥಿಸುತ್ತೇನೆ. ಓ ದೇವ ನೀನು ಹೀಗೆಯೇ ಮಾಡು. ಓ ದೇವ ನೀನು ಇಸ್ಲಾಮನ್ನು ನಾಶಮಾಡು. ಇದನ್ನು ವಿರೋಧಿಸಿ ಪ್ರಕಟಣೆ ನೀಡಿದವರು ನಮ್ಮ ಇಮಾಮರಾದ ವಾಗ್ದತ್ತ ಮಸೀಹರ ಮಾತ್ರವಾಗಿದ್ದರು. ಅವರು ಹೀಗೆ ಪಂಥಾಹ್ವಾನ ನೀಡಿದರೂ. **"**ಓ ಪ್ರವಾದಿತ್ವ ವಾದಿ, ನನ್ನೆದುರಿಗೆ ಪ್ರಾರ್ಥನೆಯಲ್ಲಿ ಭಾಗವಹಿಸು. ನಾವಿಬ್ಬರೂ ಪ್ರಾರ್ಥನೆ ಮೂಲಕ ಎದುರಾಗೋಣ. ನಮ್ಮ ಪೈಕಿ ಸುಳ್ಳುಗಾರನಾದವನು ಮೊದಲು ಸಾಯಬೇಕು ಎಂದು. (ಟೆಲಿಗ್ರಾಫ್ ಪತ್ರಿಕೆ 5-7-1903) ವಾಗ್ದದತ್ತ ಮಸೀಹರು, 23-08-1903ರ ಪ್ರಕಟಣೆ ಪತ್ರಿಕೆಯಲ್ಲಿ ಹೀಗೆ ಹೇಳಿದ್ದರು. ಡೂಯಿ ಪ್ರಾರ್ಥನೆಯ ಸಮಯದಿಂದ ಓಡಿ ಹೋದರೂ ಅವನು ಸ್ಥಾಪಿಸಿದ ಝಿಯೋನ್ ಮೇಲೆ ಬೇಗನೆ ವಿಪತ್ತು ಬರದೆರಗುವುದು ಅವರು ಹೀಗೆ ಪ್ರಾರ್ಥಿಸಿದ್ದರು. ಓ ದೇವ ನೀನು ಬೇಗನೆ ತೀರ್ಪು ನೀಡು. ಡೂಯಿಯ ಸುಳ್ಳವಾದ ಜನರಿಗೆ ತಿಳಿಯುವಂತೆ ಮಾಡು. ಅನಂತರ ಏನಾಯಿತೆಂದು ನೋಡಿರಿ. ಡೂಯಿ ರಾಜಠೀವಿಯಿಂದ ಜೀವಿಸುತ್ತಿದ್ದನು. ಅವನ ಬಳಿ ಏಳು ಕೋಟಿ ನಗದು ಹಣವಿತ್ತು. ಅವನ ಪತ್ನಿ ಮತ್ತು ಮಗ ಅವನ ಶತ್ರುವಾದರು. ತದನಂತರ ಆತನ ತಂದೆ ಆತನು ವ್ಯಭಿಚಾರಿದಿಂದ ಜನಿಸಿದ್ದನು ಎಂದು ಪ್ರಕಟಿಸಿದನು. ಅವನಿಗೆ ಲಕ್ವ ಬಾಧಿಸಿತು. ಅವನು ಅರೆ ಹುಚ್ಚನಾದನು. ಅನಂತರ 1907ರ ಮಾರ್ಚ್ ತಿಂಗಳಲ್ಲಿ ಬಹಳ ಕಷ್ಟ ಪೀಡಿತನಾಗಿ ಸತ್ತನು. ಅವನ ಬಗ್ಗೆ ವಾಗ್ದತ್ತ ಮಸೀಹರು 20-02-1907ರಲ್ಲಿ ಒಂದು ಪ್ರಕಟಣೆಯನ್ನು ಪತ್ರಿಕೆಯಲ್ಲಿ ಹೇಳಿದ್ದರು: ದೇವನು ನನ್ನೊಂದಿಗೆ ಹೇಳಿರುವನು. ಒಂದು ಹೊಸ ದೃಷ್ಟಾಂತ ತೋರಿಸುವೆನು. ಅದು ಬೃಹತ್ತಾದ ಜಯವಾಗುವುದು. ಲೋಕಕ್ಕೆಲ್ಲಾ ಅದೊಂದು ದೃಷ್ಟಾಂತವಾಗುವುದು. ಡೂಯಿ ಸತ್ತು ಅಲ್ಲಾಹನ ಅಸ್ತಿತ್ವಕ್ಕೆ ಸಾಕ್ಷಿ ನೀಡಿದನು. ಇದು ಕ್ರೈಸ್ತ ಮೋಶೆ, ಹಳೆಯ ಲೋಕ ಮತ್ತು ಹೊಸ ಲೋಕಗಳಿಗೆ ಮೇಲೆ ವಾಗ್ದತ್ತ ಮಸೀಹರ ಜಯವಾಗಿತ್ತು.

3. ಈ ದೇಶದಲ್ಲಿ ಆರ್ಯಾ ಸಮಾಜದವರ ಪ್ರಭಾವ ಬಹಳ ಇತ್ತು. ಅವರ ನಾಯಕ ಲೇಖರಾಮ್ ಆಗಿದ್ದನು. ವಾಗ್ದತ್ತ ಮಸೀಹರ ಕರಾಮಾತುಸ್ಸಾದಿಖೀನ್ ಎಂಬ ಪುಸ್ತಕದಲ್ಲಿ (1311 ಹಿಜರಿ ಸಫರ್ ತಿಂಗಳಲ್ಲಿ ಮುದ್ರಿತ) ಅವನ ಬಗ್ಗೆ ಹೀಗೆ ಭವಿಷ್ಯ ನುಡಿದ್ದರು. ಲೇಖ್‌ರಾಮನ ಬಗ್ಗೆ ನನ್ನ ಪ್ರಾರ್ಥನೆ ಅಂಗೀಕೃತವಾಗಿದೆ ಎಂದು ನನಗೆ ಅಲ್ಲಾಹನು ತಿಳಿಸಿರುವನು. ಅವನು ಆರು ವರ್ಷಗಳೊಳಗೆ ಸತ್ತು ಹೋಗುವನು. ಅವನು ಮಾಡಿದ ಅಪರಾಧ ಇದಾಗಿದೆ. ಅಲ್ಲಾಹನ ಪ್ರವಾದಿಯಾದ ಹಝ್ರತ್ ಮುಹಮ್ಮದ್(ಸ) ರವರನ್ನು ಅವನು ಬೈಯ್ಯುತ್ತ ಇರುತ್ತಾನೆ. ಕೆಟ್ಟ ಶಬ್ದಗಳನ್ನು ಬಳಸಿ ಅಪಹಾಸ್ಯ ಮಾಡುತ್ತಾ ಇರುತ್ತಾನೆ. 22-02-1893ರಲ್ಲಿ ಪ್ರಕಟಿಸಿದ ವಿಜ್ಞಾಪನೆಯಲ್ಲಿ ಲೇಖ್‌ರಾಮ್ ಸಾಯುವ ಬಗ್ಗೆ ಹೇಗೆ ಪ್ರಕಟಿಸಲಾಗಿತ್ತು. **"ಇಜ್‌ಲುನ್ ಜಸದುನ್ ಲಹೂ ಖುವಾರುನ್ ಲಹೂ ನಸಬುನ್ ವ ಅಝಾಬುನ್"** ಲೇಖ್‌ರಾಮ್ ಸಾಮಿರಿಯ ಕರುವಿನ ಹಾಗಿದ್ದಾನೆ. ಅದು ಜೀವ ರಹಿತವಾಗಿದೆ. ಅದರಲ್ಲಿ ಯಾವುದೇ ರೀತಿಯ ಆಧ್ಯಾತ್ಮಿಕತೆಯು ಇಲ್ಲ. ಆದುದರಿಂದ ಅವನಿಗೆ ಶಿಕ್ಷೆ ನೀಡಲ್ಪಡುವುದು. ಸಾಮಿರಿಯ ಕರುವಿಗೆ ನೀಡಲಾದ ಶಿಕ್ಷೆಯ ಹಾಗೆ ಸಾಮಿರಿಯ ಕರುವಿನ ರೂಪವನ್ನು ತುಂಡು ತುಂಡು ಮಾಡಲಾಗಿತ್ತು ಮತ್ತು ಅನಂತರ ಬೆಂಕೆಯಲ್ಲಿ ಸುಡಲಾಯಿತು ಎಂದು ಎಲ್ಲರಿಗೂ ತಿಳಿದಿದೆ. 12-04-1893ರಂದು ವಾಗ್ದಾತ್ತ ಮಸೀಹರು ಒಂದು ದಿವ್ಯ ದರ್ಶನ ಕಂಡರು. (ಬರಕಾತುದ್ದುಆ ಹಾಶಿಯಾ ನೋಡಿರಿ. ರೂಹಾನಿ ಖಝಾಯಿನ್ ಸಂಪುಟ 6 ಪುಟ 33) ಒಬ್ಬ ಶಕ್ತಿಶಾಲಿ ಭೀಕರ ವ್ಯಕ್ತಿ ಮನುಷ್ಯನಿಗಿರದ ಮಲಕ್‌ಗಳ ಗುಂಪಿಗೆ ಸೇರಿದವನು ವಾಗ್ದತ್ತ ಮಸೀಹರೊಂದಿಗೆ ಕೇಳುತ್ತಾನೆ. **"ಲೇಖ್‌ರಾವ್ ಎಲ್ಲಿ"** ಎಂದೂ ಕರಾಮಾತುಸ್ಸಾದಿಖೀನಲ್ಲಿ ಹೀಗೆ. ಅರಬಿ ಪದ್ಯ ಬರೆಯಲಾಗಿತ್ತು.

**"ಬಶ್ಶರನೀ ರಬ್ಬೀ ವ ಖಾಲ ಮುಬಶ್ಶಿರನ್**
**ಸತಅರಿಫು ಯೌಮುಲ್ ಈದಿ ವಲ್ ಈದಿ ಅಖ್‌ರಬು."**

ನನ್ನ ಪ್ರಭು ನನಗೆ ಶುಭವಾರ್ತೆ ನೀಡಿರುವೆನು. ಈದ್ ದಿವಸದ ಮರುದಿನ ಈದ್ ಸಮೀಪವಾಗಿರುವುದು. ಈದ್ ದಿನದ ಮರುದಿನ ಘಟನೆ ಸಂಭವಿಸುವುದು ಎಂದು ತಿಳಿಲಾಗಿತ್ತು. ಇನ್ನೊಂದು ಪದ್ಯ ಐದು ವರ್ಷದ ಮೊದಲು ಹೀಗೆ ಸೂಚಿಸಿತು.

**"ಅಲಾ ಅಏ ದುಶ್ಮನೆ ನಾದಾನೋ ಬೇರಾಹ್**
**ಬತರಸ್ ಅಝ್ ತೇಗೆ ಬರ್‍ರಾನೆ ಮುಹಮ್ಮದ್"**

ದಾರಿ ತಪ್ಪಿದ ಅವಿವೇಕಿ ಶತ್ರು ಮುಹಮ್ಮದ್ ಖಡ್ಗಧಾರಿಗಳ ಖಡ್ಗದ ಬಗ್ಗೆ ಭಯಪಡು. ಲೇಖರಾಮ್ 06-03-1897 ರಂದು ಕೊಲ್ಲಲ್ಪಟ್ಟನು. ವಾಗ್ದತ್ತ ಮಸೀಹರ ಭವಿಷ್ಯವಾಣಿ ಬಹಳ ಸ್ಪಷ್ಟವಾಗಿ ಈಡೇರಿ ಅಲ್ಲಾಹನ ಅಸ್ತಿತ್ವದ ಬಗ್ಗೆ ಸಾಕ್ಷ್ಯಾಧಾರವಾಯಿತು.

ಆದುದರಿಂದ ಅಲ್ಲಾಹನ ಸಂದೇಶವಾಣಿ ಸತ್ಯವಾಗಿದೆ. ಇಂತಹ ಸಂದೇಶವಾಣಿಗಳನ್ನು ಈಡೇರುವುದನ್ನು ಕಂಡ ನಂತರ ಸಹ ದೇವನ ಅಸ್ತಿತ್ವ ನಿರಾಕರಿಸುವುದು ಲಜ್ಜೆಗೇಡಿತನದ ಮಾತಗಿದೆ.

### ಹತ್ತನೆಯ ಸಾಕ್ಷ್ಯಾಧಾರ

ಪವಿತ್ರ ಖುರ್‌ಆನ್ ಪ್ರಸ್ತಾಪಿಸುವ ಹತ್ತನೆಯ ಸಾಕ್ಷ್ಯಾಧಾರ ಹೀಗೆ. ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೇಳುತ್ತಾನೆ. **"ವಲ್ಲಝೀನ ಜಾಹದೂ ಫೀನ ಲನಹ್‌ದಿಯನ್ನಹುಮ್ ಸುಬುಲನಾ"** ನಮ್ಮ ಮಾರ್ಗದಲ್ಲಿ ಯಾರು ಅತ್ಯಂತ ಪ್ರಯತ್ನ ಮಾಡುತ್ತಾರೋ ಖಂಡಿತವಾಗಿಯೂ ನಾವು ಅವರನ್ನು ನಮ್ಮ ಪಥದಲ್ಲಿ ನಡೆಸುವೆವು. (ಪವಿತ್ರ ಖುರ್‌ಆನ್ 29:70) ಪವಿತ್ರ ಖುರ್‌ಆನಿನ ಈ ವಚನ ಪ್ರಕಾರ ಶೌರ್ಯನಿರತರಾದವರು ಯಾವಾಗಲೂ ಲಾಭ ಪಡೆದರು. ದೇವನ ಅಸ್ತಿತ್ವವನ್ನು ನಿರಾಕರಿಸುವವನು ಆವಶ್ಯಕವಾಗಿಯೂ ಹೀಗೆ ಚಿಂತಿಸಬೇಕು. ದೇವನು ವಾಸ್ತವಿಕವಾಗಿಯೂ ಅಸ್ತಿತ್ವದಲ್ಲಿದ್ದರೆ ನನಗೆ ಬಹಳ ಕಷ್ಟ ಉಂಟಾಗುವುದು. ಈ ಯೋಚನೆ ಹೊಂದಿ ಸತ್ಯವನ್ನು ಅನ್ವೇಷಿಸುವ ಅಭಿಲಾಷೆ ಅವನ ಹೃದಯದಲ್ಲಿ ಉಂಟಾದರೆ ಅವನು ಅಳುತ್ತಾ ಮತ್ತು ಬಹಳ ತೀವ್ರವಾಗಿ ಹೀಗೆ ಪ್ರಾರ್ಥಿಸಬೇಕು. "ಓ ದೇವ ನಿನ್ನನ್ನು ನಂಬುವವರು ಹೇಳುವ ಹಾಗೆ

ನೀನು ಅಪರಿಮಿತ ಶಕ್ತಿವಂತರಾಗಿದ್ದರೆ ನೀನು ನನ್ನ ಮೇಲೆ ದಯೆದೋರು ಮತ್ತು ನಿನ್ನ ಕಡೆಗೆ ಮಾರ್ಗದರ್ಶನ ನೀಡು, ನನ್ನ ಹೃದಯದಲ್ಲಿಯೂ ದೃಢವಾದ ವಿಶ್ವಾಸವನ್ನು ಉಂಟು ಮಾಡು. ನಾನು ನಿನ್ನ ಕರುಣೆಯಿಂದ ವಂಚಿತನಾಗದಿರುವದಂತೆ ಮಾಡು." ಈ ರೀತಿ ಹೃತ್ಪೂರ್ವಕವಾಗಿ ಯರಾದರೂ ಪ್ರಾರ್ಥಿಸುವದಾದರೆ ಕನಿಷ್ಠ ನಲವತ್ತು ದಿನಗಳ ಕಾಲ ಹೀಗೆ ಪ್ರಾರ್ಥನೆ ಮಾಡುವುದಾದರೆ ಹಾಗೆ ಪ್ರಾರ್ಥಿಸುವವನು ಯಾವ ಧರ್ಮಕ್ಕೆ ಸೇರಿದವನಾದರೂ ಅವನು ಯಾವ ದೇಶ ವಾಸಿಯಾದರೂ ಸಕಲ ಲೋಕಗಳ ಪ್ರಭುವಾದ ಅಲ್ಲಾಹನು ಖಂಡಿತವಾಗಿಯೂ ಮಾರ್ಗದರ್ಶನ ದಯಪಾಲಿಸುವನು. ಅಲ್ಲಾಹನು ಎಂತಹ ರೀತಿಯಲ್ಲಿ ತನ್ನ ಅಸ್ತಿತ್ವವನ್ನು ಅವನಿಗೆ ಸಾಬೀತು ಪಡಿಸಿ ಕೊಡುವನೆಂದರೆ ಅವನ ಹೃದಯವು ಸಂಶಯ ಸಂದೇಹಗಳ ಕೊಳಕಿನಿಂದ ಸಂಪೂರ್ಣವಾಗಿ ದೂರ ಸರಿಯುವುದು. ಈ ರೀತಿಯಲ್ಲಿ ತೀರ್ಮಾನ ಮಾಡುವುದರಿಂದ ಯವುದೇ ರೀತಿ ಮೋಸ ಉಂಟಾಗಲಾರದು. ಸತ್ಯವನ್ನು ಅನ್ವೇಷಿಸುವವರು ಈ ರೀತಿ ವರ್ತಿಸಲು ಕಷ್ಟವೇನಿದೆ?

ಈ ಹತ್ತು ಸಾಕ್ಷ್ಯಾಧಾರಗಳನ್ನು ಪ್ರಸ್ತಾಪಿಸಿ ನಾನು ಲೇಖನ ಮುಕ್ತಾಯಗೊಳಿಸುತ್ತೇನೆ. ಪವಿತ್ರ ಖುರ್‌ಆನ್‌ನಲ್ಲಿ ಬೇರೆ ಸಾಕ್ಷ್ಯಾಧಾರಗಳಿಗೆ ಸೀಮಿತಗೊಳಿಸುತ್ತೇನೆ. ಯಾರಾದರೂ ಈ ಸಾಕ್ಷ್ಯಾಧಾರಗಳ ಬಗ್ಗೆ ಚಿಂತಿಸುವುದಾದರೆ ಈ ಸಾಕ್ಷ್ಯಾಧಾರಗಳ ಮೂಲಕ ಅವನಿಗೆ ಬೇರೆ ಸಾಕ್ಷ್ಯಾಧಾರಗಳ ಮೂಲಕ ಅವನಿಗೆ ಬೇರೆ ಸಾಕ್ಷ್ಯಾಧಾರಗಳೂ ಸಿಗುವುವು. ವಲ್ಲಾಹುಲ್ ಮುಸ್ತಾನ್ (ಅಲ್ಲಾಹನೇ ಸಹಾಯಕನಾಗಿದ್ದಾನೆ)

ಕೊನೆಯದಾಗಿ ನಾನು ಹೀಗೆ ಹೇಳಲು ಬಯಸುತ್ತೇನೆ. ಈ ಕಿರು ಪುಸ್ತಕ ಯಾರಿಗಾದರೂ ತಲುಪಿದರೆ ಅವರು ಅದನ್ನು ಓದಿದನಂತರ ಈ ಪುಸ್ತಕ ಯಾರಿಗಾದರೂ ಲಾಭಕರವಾಗುವುದೆಂದು ಅವರು ಯೋಚಿಸುತ್ತಾರೋ ಅವರಿಗೆ ನೀಡಬೇಕೆಂದು ಅಪೇಕ್ಷಿಸುತ್ತೇನೆ. **(ಅನ್ವಾರುಲ್ ಉಲೂಮ್, ಸಂಪುಟ-1, ಪುಟ-413)**

## ಇಡೀ ಬೈಬಲಿನಲ್ಲಿ ಕೇವಲ ಸೂರಃ ಇಖ್‌ಲಾಸ್‌ನಲ್ಲಿರುವಷ್ಟು ದೇವ ಏಕತ್ವದ ವಿಷಯ ಇದ್ದರೆ ತೆಗೆದು ತೋರಿಸಲು ಪಂಥಾಹ್ವಾನ

ಇಷ್ಟೆಲ್ಲ ಜಗಳ ಏಕೆ? ನಿಜ ಹೇಳಬೇಕೆಂದರೆ ಸೂರಃ ಇಖ್‌ಲಾಸಿನ ಒಂದು ಸಾಲಿನಲ್ಲಿ ಎಷ್ಟು ದೇವ ಏಕತ್ವ ವಿಷಯ ತುಂಬಿದೆಯೋ ಅಷ್ಟು ತೌರಾತ್ ಹಾಗೂ ಇಡೀ ಬೈಬಲಿನಲ್ಲಿಯೂ ಕಾಣಸಿಗುವುದಿಲ್ಲ. ಇದ್ದರೆ ಯಾರಾದರೊಬ್ಬ ಕ್ರೈಸ್ತರು ನಮ್ಮ ಮುಂದೆ ಪ್ರಸ್ತುತಪಡಿಸಲಿ.

**ಯಾವ ದೇವ ಏಕತ್ವದ ವಿಷಯ ಖುರ್‌ಆನ್‌ನ ಹತ್ತು ಪುಟಗಳಲ್ಲಿವೆಯೋ ಅಷ್ಟು ಇಡೀ ವೇದದಲ್ಲೂ ಇಲ್ಲ.**

ಯಾವುದೆಲ್ಲ ಪವಿತ್ರ ಖುರ್‌ಆನ್‌ನಲ್ಲಿ ಹತ್ತು ಪುಟಗಳಲ್ಲಿ ದೇವ ಏಕತ್ವ ಕುರಿತು ಆಧ್ಯಾತ್ಮಿಕ ಜ್ಞಾನ ಪ್ರಕಾಶಮಾನ ಸೂರ್ಯನಂತೆ ಬೆಳಗುತ್ತದೆಯೋ, ಯಾವ ವ್ಯಕ್ತಿಯೊಬ್ಬನು ವೇದದ ಸಾವಿರ ಪುಟಗಳಿಂದ ಆದರೂ ಸರಿ ತೆಗೆದು ತೋರಿಸಿದರೆ ನಾವು ಸಹ ಒಪ್ಪುವೆವು. ಹೌದು ವೇದದಲ್ಲೂ ದೇವ ಏಕತ್ವ ಕುರಿತು ಮಾಹಿತಿ ಇದೆ ಎಂದು, ಯಾರು ಬೇಕಾದರೂ ಶರತ್ತು ಒಡ್ಡಿಯೂ ಈ ವಿಷಯ ಪ್ರಸ್ತಾಪಿಸಬಹುದು. ನಾವು ಆಣೆ ಹಾಕಿ ಹೇಳುವೆವು ಮತ್ತು ಏಕದೇವನಾದ ಅಲ್ಲಾಹನ ಮೇಲೆ ಆಣೆ ಮಾಡಿ ಹೇಳುವೆವು. ಒಟ್ಟಿನಲ್ಲಿ ನೀವು ಹೇಗೆ ಬಯಸುತ್ತೀರೋ ಯಾವ ಶರತ್ತಿನ ಮೇಲೆ ನಿರ್ಣಯ ಬಯಸುತ್ತೀರೋ ಅದಕ್ಕೆ ನಾವು ಸಿದ್ಧರೆಂದು (ಸುರ್ಮ ಚಶ್ಮ ಆರ್ಯ ಪುಟ 216)

ಮುಕರ್‍ರಮ್ ಮುಹಮ್ಮದ್ ಇಸ್ಮಾಯಿಲ್ ಸಾಹಿಬ್ ಮಾಜಿ ಪ್ರೊಫೆಸರ್ ಜಾಮಿಯಾ ಅಹ್ಮದಿಯಾ ಖಾಧಿಯಾನ್ ತನ್ನ ಪತ್ರಿಕೆ "ದುರೂದ್ ಶರೀಫ್" ನಲ್ಲಿ ಬರೆಯುತ್ತಾರೆ. ಮುಕರ್‍ರಮ್ ಶೇಖ್ ಕರಮ್ ಇಲಾಹಿ ಸಾಹಿಬ್ ಪಟಿಯಾಲವಿ ಅವರು ಹಝ್ರತ್ ಮಸೀಹ್ ಮೌಊದ್(ಅ) ರವರ ಬಹಳ ಹಳೆಯ ಆತ್ಮೀಯರಲ್ಲಿ ಒಬ್ಬರಾಗಿದ್ದರು. ತಮ್ಮ ಒಂದು ಪತ್ರದಲ್ಲಿ, ಅದು ಈ ವಿನೀತನಿಗೆ ಬರೆದಿದ್ದರು. ಬರೆಯುತ್ತಾರೆ. ಒಂದು ಸಂದರ್ಭದಲ್ಲಿ ನಮ್ಮ ಗಮನಕ್ಕೆ ಬಂತು. ಈ ದಿನಗಳಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ಅಂಬಾಲ ಕಂಟೋನ್‌ಮೆಂಟ್‌ನಲ್ಲಿ ಆಗಮಿಸಿರುತ್ತಾರೆ. ಅದನ್ನು ತಿಳಿದು ಅವರನ್ನು ಕಾಣಲು ಅಲ್ಲಿಗೆ ಹೋದೆವು. ಆ ಸಮಯ ಹಝ್ರತ್ ಮೀರ್ ನಾಸಿಕ್ ನವಾಬ್ (ತಂದೆ ಹಝ್ರತ್ ಉಮ್ಮುಲ್ ಮೂಮಿನೀನ್(ರ) ಇನ್ನು ಸಂಘಟನೆಯ ಕಾರ್ಯದಲ್ಲಿ ಅಂಬಾಲ ಛಾವನಿಯಲ್ಲಿಯೇ ಇದ್ದರು. ಅದು ಹಜ್ರತ್ ಖಲೀಫತುಲ್ ಮಸೀಹ್ ಸಾನಿ (ದ್ವಿತೀಯ) ಅವರ ಹಾಲುನಿಸುವ ಕಾಲವಾಗಿತ್ತು. ಆಗ ಅವರು ಬಂಗ್ಲನಾಗ್ ಫೆನಿಯಲ್ಲಿ ಬಾಡಿಗೆಯಲ್ಲಿದ್ದರು. ನಾವು ಹುಝೂರ್(ಅ) ರವರ ಮುಂದೆ ಹಾಜರಾದೆವು. ಹುಝೂರ್(ಅ) ತಿಳಿಯುತ್ತಲೇ ಭೇಟಿಯ ಭಾಗ್ಯ ದಯಪಾಲಿಸಿದರು. ಸುಮಾರು ಒಂದು ಗಂಟೆ ಅವರ ಸೇವೆಯಲ್ಲಿದ್ದೆವು. ಈ ಸಭೆಯಲ್ಲಿ ನಮ್ಮ ಜೊತೆಗಾರರೊಬ್ಬರು ಹೇಳಿದರು. ನನಗೆ ದರವೇಶರೊಬ್ಬರು ಒಂದು ವಿಶೇಷ ರೀತಿಯ ದುರೂದ್ ತೋರಿಸಿದ್ದರು. ಅದರ ವಿಶೇಷತೆ ಆ ದರವೇಶರು ಹೀಗೆ ತಿಳಿಸಿದ್ದರು. ಕಷ್ಟ ಕಾಲ ಬಂದಾಗ ಈ ದುರೂದ್ ಪಠಿಸಿರಿ. ಅದು ಪರಿಹರಿಸಬಹುದು. ಮತ್ತು ಹೇಳಿದರು. ನನ್ನ ಅನುಭವಕ್ಕೆ ಬಂದ ಮಾತಾಗಿದೆ ಎಂತಹ ಕಷ್ಟ ಪರಿಸ್ಥಿತಿ ಬಂದರೂ ಈ ದೂರೂದ್ ಶರೀಫನ್ನು ಪಠಿಸಿದ್ದೇನೆ ಮತ್ತು ತಕ್ಷಣ ಅದಕ್ಕೆ ಪರಿಹಾರ ಲಭಿಸಿದೆ. ಈ ಕುರಿತು ಹುಝೂರರ ಅಭಿಪ್ರಾಯವೇನು, ಹುಝೂರ್(ಅ) ಹೇಳಿದರು.

"ದುರೂದ್ ಶರೀಫಿನ ಎಷ್ಟು ಮಹಿಮೆಗಳನ್ನು ವಿವರಿಸಿದರೂ ಕಡಿಮೆಯೇ ಸರಿ. ಸ್ವಯಂ ನನಗೆ ಅನುಭವ ಇದೆ. ನನಗೆ ಅಲ್ಲಾಹನು ಅನುಗ್ರಹಿಸಿದ್ದಾನೆ. ಅದಕ್ಕೆ ಕಾರಣ ದುರೂದಿನ ಕಾರುಣ್ಯಗಳು ಮತ್ತು ಅನುಗ್ರಹಗಳಾಗಿವೆ. ದುರೂದ್ ಶರೀಫ್ ಪಠಿಸುವವನು ಕೇವಲ ಪರಲೋಕದ ಪುಣ್ಯಗಳನ್ನು ಗಳಿಸುವುದಿಲ್ಲ. ಬದಲು ಇಹಲೋಕದಲ್ಲೂ ಗೌರವ ಪಡೆಯುತ್ತಾರೆ. ಅದಾಗ್ಯೂ ಅಲ್ಲಾಹನನ್ನು ಉಪೇಕ್ಷಿಸುವಂತಹ ಯಾವ ದುರೂದನ್ನು ನಾನು ಒಪ್ಪುವುದಿಲ್ಲ. ಅದರ ಪಠಣ, ನಂತರ ಎಲ್ಲ ವಿಧಿ ವಿಧಾನಗಳು ಅಲ್ಲಾಹನ ವಶದಲ್ಲಿರದೇ ಸ್ವಯಂ ದುರೂದ್ ಅದರ ಮೇಲೆ ಪ್ರಭುತ್ವ ಪಡೆಯುವುದು. ಇದನ್ನು ಹೇಳುವಾಗ ಹುಝೂರರ ಮಾತುಗಳಲ್ಲಿ ಆವೇಶ ವ್ಯಕ್ತವಾಗುತಿತ್ತು. ಮತ್ತು ಮುಖ ಕೆಂಪಾಗಿಸಿತು. ಮತ್ತು ಹೇಳಿದರು. ನಿಸ್ಸಂಶಯವಾಗಿ ದುರೂದ್ ಶರೀಫಿನ ಅಸಂಖ್ಯಾತ ಕಾರುಣ್ಯಗಳು ಮತ್ತು ಅನುಗ್ರಹಗಳಿವೆ ಮತ್ತು ಅದರಿಂದ ಮನುಷ್ಯನ ಮೇಲೆ ಹೇರಳವಾಗಿ ಕಾರುಣ್ಯಗಳು ಅವತರಿಸುತ್ತವೆ ಮತ್ತು ಅದರ ಪ್ರಭಾವದಿಂದ ಪ್ರಾರ್ಥನೆಗಳು ಸ್ವೀಕಾರವಾಗುತ್ತವೆ ಹಾಗೂ ಅದರ ಅಸಂಖ್ಯಾತ ಮಹಿಮೆಗಳಿವೆ. ಆದರೆ ಅದರ ಹೊರತಾಗಿಯೂ ಮನುಷ್ಯನು ಅಲ್ಲಾಹನಿಂದ ಉಪೇಕ್ಷೆ ಭಾವನೆ ತಾಳುವುದು ಸರಿಯಲ್ಲ. ನಬಿವರ್ಯರ ಮೇಲೆ ಜನರು ದುರೂದ್ ಕಳುಹಿಸಿ ಅದರಿಂದ ಅನುಗ್ರಹಗಳನ್ನು ಪಡೆಯುತ್ತಿದ್ದರು. ಸ್ವಯಂ ಅವರಿಗೂ ಅಲ್ಲಾಹನ ಆಜ್ಞೆಗಳ ಮುಂದೆ ತಲೆಬಾಗಿಸದೆ ನಿರ್ವಾಹವಿರಲಿಲ್ಲ. ಆದುದರಿಂದ ಯಥೇಚ್ಚವಾಗಿ ದುರೂದ್ ಪಠಿಸಿರಿ. ಆದರೆ ಈ ಮಾತನ್ನು ಸಹ ಸದಾ ನೆನಪಿರಲಿ. ಅಲ್ಲಾಹನನ್ನು ಸರ್ವಸಮರ್ಥನೆಂದು ಮತ್ತು ಅವನು ನಿರಪೇಕ್ಷನು ಎಂದು ಭಾವಿಸಿ ಅವನ ಸಾನಿಧ್ಯ ಸಂತೋಷದ ಮೇಲೆ ವಿಶ್ವಾಸವಿರಿಸಿಕೊಳ್ಳುವುದು ಮರೆಯದಿರಿ. (ರಿಸಾಲಾ ದುರೂದ್ ಶರೀಫ್ ಪುಟ 214 216)

### "ಕ್ರೈಸ್ತರ ಪ್ರಭು ಸರ್ವಶಕ್ತನಲ್ಲ"

ಪಾದರಿ ಸಾಹೇಬರುಗಳು ಸಹ ತನ್ನ ದೇವನನ್ನು ಸರ್ವಶಕ್ತನೆಂದು ಭಾವಿಸುವುದಿಲ್ಲ. ಏಕೆಂದರೆ ಅವರ ಪ್ರಭು ತನ್ನ ಎದುರಾಳಿಗಳಿಂದ ಹೊಡೆತಗಳನ್ನು ಪಡೆದು ಜೈಲು ಸೇರಿದನು. ದಂಡ ಸಹಿಸಿದನು. ಶಿಲುಬೆಗೆ ಏರಿಸಲ್ಪಟ್ಟನು. ಅವನು ಸರ್ವಶಕ್ತನಾಗಿರುತ್ತಿದ್ದರೆ ಅಷ್ಟೊಂದು ಅಪಮಾನಗಳು ದೇವನಾಗಿ ಪಡೆಯಬೇಕಾಗಿರಲಿಲ್ಲ. ಅಂತೆಯೇ ಅವನು ಸರ್ವಶಕ್ತನಾಗುತ್ತಿದ್ದರೆ ತನ್ನ ದಾಸರಿಗೆ ಮುಕ್ತಿ ನೀಡಲು ತನ್ನದೇ ಮರಣದ ಯೋಚನೆ ಹಾಕಿಕೊಳ್ಳುವ ಅವಶ್ಯಕತೆಯಾದರೂ ಏನಿತ್ತು. ಯಾವ ವ್ಯಕ್ತಿ ದೇವನಾಗಿ ಮೂರು ದಿನಗಳವರೆಗೆ ಮರಣ ಸ್ಥಿತಿಯಲ್ಲಿದ್ದನೋ ಅವನ ಸಾಮರ್ಥ್ಯ ಎಣಿಸುವುದೆ ನಾಚಿಕೆಗೇಡಿತನದ ಕೆಲಸವಾಗಿದೆ. ಇದು ಎಂತಹ ವಿಚಿತ್ರವಾದ ಮಾತಾಗಿದೆ. ದೇವನು ಮೂರು ದಿನಗಳವರೆಗೆ ಶವವಸ್ಥೆಯಲ್ಲಿದ್ದನು. ಆದರೆ ಅವನ ದಾಸರು ಮೂರು ದಿನಗಳವರೆಗೆ ದೇವನಿಲ್ಲದೆ ಬದುಕಿದರು. (ಚಶ್ಮ ಮಸೀಹಿ ಪುಟ) ಸೀರತುಲ್ ಮಹದಿ ವರದಿ ಸಂಖ್ಯೆ: 107, 324 ,354,

**ಅಂತ ಬಮಝಿಲ ತೌಹೀದಿ ವ ತಫ್‌ರೀದಿ ಅಂತ ಬಮಝಿ ಮಿನ್ನಿ ಲಾ ಯಲಮುಹಲ್ ಖಲ್ಕ್.**

***************

## ದೇವದರ್ಶನ

ತನ್ನ ಸಂಶಯವನ್ನು ನೀಗಿಸಿಕೊಳ್ಳದೆಯಿರುವವನು ಶಿಕ್ಷೆಯಿಂದ ರಕ್ಷಿತನಾಗಲಾರನು. ಈ ಲೋಕದಲ್ಲಿ ದೇವನನ್ನು ಕಾಣುವ ಭಾಗ್ಯವನ್ನು ಪಡೆಯದವನು ಪರಲೋಕದಲ್ಲಿಯೂ ಅಂಧಕಾರದಲ್ಲಿ ಬೀಳುವನು. ಪವಿತ್ರ ಖುರ್‌ಆನಿನಲ್ಲಿ ಅಲ್ಲಾಹನು ಹೀಗೆಂದಿರುವನು: ***"ಈ ಲೋಕದಲ್ಲಿ ಅಂಧನಾಗಿರುವವನು ಪರಲೋಕದಲ್ಲಿಯೂ ಅಂಧನಾಗಿಯೇ ಇರುವನು." (17:73)***

***(ಕಿತಾಬುಲ್ ಬರಿಯ್ಯ; ರೂಹಾನೀ ಖಝಾಇನ್ ಸಂಪುಟ 13, ಪುಟ 65)***

# ಹಮಾರಾ ಖುದಾ (ನಮ್ಮ ಪ್ರಭು)

## ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ(ರ)

**ಟಿಪ್ಪಣಿ:** ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂಬ ಅವರ ಗ್ರಂಥ "ಹಮಾರಾ ಖುದಾ" ದ ಸಾರಾಂಶವನ್ನು ಕೆಳಗೆ ಪ್ರಸ್ತುತಪಡಿಸಲಾಗುತ್ತದೆ. ಈ ಗ್ರಂಥ ಅಲ್ಲಾಹನ ಅಸ್ತಿತ್ವದ ಕುರಿತು ಬೌದ್ಧಿಕ ತಾರ್ಕಿಕ ಸಾಕ್ಷ್ಯಗಳ ಸಹಿತ ತುಂಬ ರೋಚಕ ಮತ್ತು ಸರಳ ರೀತಿಯಲ್ಲಿ ಬರೆಯಲಾಗಿದೆ. ಇದೀಗ "ದೇವಾಸ್ತಿತ್ವ" ಎಂಬ ಶೀರ್ಷಿಕೆ ಅಡಿಯಲ್ಲಿ ವಿಶೇಷಾಂಕ ಮುದ್ರಿತವಾಗುತ್ತಿದೆ. ಈ ಗ್ರಂಥವನ್ನು ಕಡೆಗಣಿಸಲಾಗುವುದಿಲ್ಲ. ಆದರೆ ಸೀಮಿತ ಪುಟಗಳಿರುವ ಕಾರಣ ಅದರ ಸಾರಾಂಶವನ್ನು ಪ್ರಸ್ತುತಪಡಿಸುತ್ತಿದ್ದೇವೆ. ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ(ರ) ತನ್ನ ಈ ಗ್ರಂಥದ ಕುರಿತು ಹೇಳುತ್ತಾರೆ:

"ಈ ಗ್ರಂಥವು ದೇಶದ ನವ ವಿದ್ಯಾವಂತ ವರ್ಗದವರಿಗಾಗಿ ಬರೆಯಲಾಗಿತ್ತು. ಆ ವರ್ಗವು ಅದನ್ನು ಮೆಚ್ಚುಗೆಯ ದೃಷ್ಟಿಯಿಂದ ಅಧ್ಯಯನ ಮಾಡುತ್ತಿದೆ ಎಂಬುದು ತುಂಬ ಸಂತೋಷದ ವಿಷಯವಾಗಿದೆ ಮತ್ತು ಕೆಲವು ಧರ್ಮದಲ್ಲಿ ಅಪಕ್ವತೆ ಹೊಂದಿರುವುದು ಇದರಿಂದ ಆಧ್ಯಾತ್ಮಿಕ ಶಕ್ತಿ ಪಡೆದು ತೃಪ್ತರಾಗಿದ್ದಾರೆ ಎಂದು ತಿಳಿಯಿತು. **ವಲ್‌ಹಮ್‌ದು ಲಿಲ್ಲಾಹಿ ಅಲಾ ಝಾಲಿಕ್ ವಲ್ಲಾಹು ಮುಅಫ್ಫಿಖುಲ್ ಮುಸ್ತಆನ್**" (ಸಂಪಾದಕರು)

### ಈ ಕಾಲಘಟ್ಟದಲ್ಲಿ ಅಲ್ಲಾಹನ ಮೇಲೆ ವಿಶ್ವಾಸದ ಸ್ಥಿತಿಗತಿ

ಪ್ರಪ್ರಥಮವಾಗಿ ನಾನು ಈ ಕಾಲಘಟ್ಟದಲ್ಲಿ ಅಲ್ಲಾಹನ ಮೇಲೆ ವಿಶ್ವಾಸದ ದಾರುಣವಾದ ಸ್ಥಿತಿಯನ್ನು ವಿವರಿಸ ಬಯಸುತ್ತೇನೆ. ಹೇಳಲಿಕ್ಕೇನು ಎಲ್ಲ ಧರ್ಮಗಳಲ್ಲೂ ಏಕದೇವನನ್ನು ನಂಬುತ್ತೇವೆ ಎನ್ನುವವರೇ ಇದ್ದಾರೆ. ಆದರೆ ವಾಸ್ತವದಲ್ಲಿ ಅವರು ದೇವರನ್ನೇ ನಂಬುವುದಿಲ್ಲ. ಅವರ ಹೃದಯಗಳು ಪಾಳುಬಿದ್ದ, ಮನೆಯ ಯಜಮಾನ ಇಲ್ಲದ ಮನೆಯ ಹಾಗೆ ಖಾಲಿ ಬಿದ್ದಿವೆ.

ಎಲ್ಲ ಧರ್ಮಗಳ ಅನುಯಾಯಿಗಳಲ್ಲಿ ಅವರು ಬೌದ್ಧರಾಗಲಿ, ಹಿಂದೂಗಳಾಗಲಿ, ಯಹೂದ್ಯರಾಗಲಿ, ಕ್ರೈಸ್ತರಾಗಲಿ, ಸಿಖ್, ಮುಸ್ಲಿಮರಾಗಲಿ ಎಲ್ಲರಲ್ಲೂ ಇರುವ ಈ ವಿಷಯವನ್ನು ಅವಿಶ್ವಾಸದ ವಿಷ, ಹೆಚ್ಚು ಕಡಿಮೆ ಬೆರೆತು ಹೋಗಿದೆ. ಐಹಿಕ ಲೋಭೆ, ಮತ್ತು ಆಕಾಂಕ್ಷೆಗಳ ಚಂಡಮಾರುತ "ಲೋಕದ ಯಾವ ವಿಶ್ವಾಸದ ಉದ್ಯಾನವನ್ನು ಭೂದಿಯನ್ನಾಗಿ ಮಾಡದೆ ಬಿಡಲಿಲ್ಲ. ಅಲ್ಲಾಹನ ಬಗ್ಗೆಯೂ ಹೀಗೆ ವಿಶ್ವಾಸ ಇಡುವರೇ. ಉದಾಹರಣೆಗೆ ಇದು ಸೂರ್ಯ ಮತ್ತು ಇದು ಚಂದ್ರ, ಇದು ಪರ್ವತ ಮತ್ತು ಇದು ಸಮುದ್ರ, ಇದು ನಮ್ಮ ಮನೆ ಮತ್ತು ಇವನು ನಮ್ಮ ತಂದೆ, ಇವನು ನಮ್ಮ ಮಿತ್ರ ಎಂಬಂತೆಯೇ?

ಹೀಗಿಲ್ಲದಿದ್ದರೆ ಸರಿಯಾಗಿ ನೆನಪಿಡಿರಿ. ಅದು ವಿಶ್ವಾಸ ಎನ್ನಲಾಗದು.

### ದೇವನಿದ್ದಾನೆಂದರೆ ಅವನು ಏಕೆ ಕಾಣುವುದಿಲ್ಲ?

ಜನರಲ್ಲಿ ದೇವನ ಬಗ್ಗೆ ಇರುವ ಒಂದು ಸಂಶಯ ಅಂದರೆ ದೇವನಿದ್ದರೆ ಅವನು ನಮಗೆ ಏಕೆ ಕಾಣಿಸುತ್ತಿಲ್ಲ? ಎಂಬುದು. ಈ ಸಂಶಯ ಇಂದಿನದ್ದಲ್ಲ ಬದಲು ಹಿಂದಿನಿಂದ ಬಂದದ್ದೆ ಆಗಿದೆ. ನೆನಪಿರಲಿ ಲೋಕದಲ್ಲಿ ವಿವಿಧ ವಸ್ತುಗಳ ಜ್ಞಾನ ಪಡೆಯಲು ವಿವಿಧ ಮಾರ್ಗಗಳಿವೆ. ಉದಾಹರಣೆಗೆ ಕೆಲವು ವಸ್ತುಗಳನ್ನು ನಾವು ನೋಡುವ ಮೂಲಕ ಗುರುತಿಸಿದರೆ ಕೆಲವನ್ನು ಆಲಿಸುವ ಮೂಲಕ ಮತ್ತು ಕೆಲವನ್ನು ನಾಲಿಗೆಯಿಂದ ರುಚಿ ಕಂಡುಹಿಡಿಯುವ ಮೂಲಕ, ಕೆಲವನ್ನು ಮೂಸುವ ಮೂಲಕ ಕೆಲವನ್ನು ಹುಡುಕುವ ಮೂಲಕ, ಕೆಲವನ್ನು ಸ್ಪರ್ಶಿಸುವ ಮೂಲಕ ಇತ್ಯಾದಿ, ಇತ್ಯಾದಿ ಇವೆಲ್ಲದರ ಜ್ಞಾನ ನಿಶ್ಚಿತವಾದುದು ಮತ್ತು ಭರವಸೆಯದ್ದೆ ಆಗಿರುತ್ತದೆ. ಆ ಪೈಕಿ ಇಂತ ವಸ್ತುವನ್ನು ಇಂತಿಷ್ಟು ಮೂಲಕವೇ ಜ್ಞಾನ ಪಡೆಯುವೆ. ಇಲ್ಲವಾದರೆ ಇಲ್ಲ ಎಂದು ವಾದಿಸಲಾಗುವುದಿಲ್ಲ. ಉದಾಹರಣೆಗೆ ನಾವು ಪರಿಮಳವನ್ನು ಕಣ್ಣಿನಿಂದ ನೋಡಿದಾಗ ಮಾತ್ರ ನಂಬುವೆವು. ಇಲ್ಲವಾದರೆ ಇಲ್ಲ. ಅಥವಾ ನಾವು ಒಂದು ವಸ್ತುವನ್ನು ಮೂಗಿನಿಂದ ಮೂಸಿಯೇ ಗುರುತಿಸುವೆವು. ಇಲ್ಲವಾದರೆ ಇಲ್ಲ. ಅಥವಾ ಒಂದು ಶಬ್ದವನ್ನು ಹುಡುಕಿಯೇ ಪಡೆಯುವೆವು. ಇಲ್ಲವಾದರೆ ಇಲ್ಲ ಎಂದರೆ ಅದು ಹುಚ್ಚಾಟವೇ ಆದೀತು. ಯಾವ ವ್ಯಕ್ತಿ ಇಂತಹ ಆಕ್ಷೇಪ ಎತ್ತುವನೋ ಅವನು ಹುಚ್ಚನೆಂದೇ ಭಾವಿಸಲಾಗುವುದು. ಒಂದು ವೇಳೆ ಅವನನ್ನು ಹುಚ್ಚಾಸ್ಪತ್ರೆಗೆ ಸೇರಿಸಲಾಗದಿದ್ದರೂ ಮಕ್ಕಳಿಗೆ ತಮಾಷೆಯಾಗಿ ಬಿಡುವನು. ವಾಸ್ತವವೇನೆಂದರೆ ಮೇಲೆ ವಿವರಿಸಿದ ಹಾಗೆ ಲೋಕದಲ್ಲಿ ವಿವಿಧ ವಸ್ತುಗಳ ಜ್ಞಾನ ಪಡೆಯಲು ವಿವಿಧ ಮಾರ್ಗಗಳಿವೆ.

ಪ್ರಿಯರೇ! ಈ ಮಾತನ್ನು ಸರಿಯಾಗಿ ತಿಳಿದುಕೊಳ್ಳಿ. ಯಾವ ವಸ್ತು ಎಷ್ಟು ಸೂಕ್ಷ್ಮವಾಗಿರುತ್ತದೆಯೋ ಅದರ ಜ್ಞಾನ ಪಡೆಯುವುದು ಸಹ ಅಷ್ಟೇ ಸೂಕ್ಷ್ಮವಾಗಿರುತ್ತದೆ ಮತ್ತು ಜ್ಞಾನೇಂದ್ರಿಯಗಳಿಂದ ದೂರದ ಮಾತಾಗಿರುತ್ತದೆ. ಹಾಗೆಯೇ ಯಾವ ವಸ್ತು ಜಡತ್ವ ಹೊಂದಿರುತ್ತದೆ. ಅದು ಅಷ್ಟೇ ಜ್ಞಾನೇಂದ್ರಿಯಗಳಿಗೆ ಹತ್ತಿರವಾಗಿರುತ್ತದೆ. ಹೀಗಿರುವಾಗ ನೀವು ಎಲ್ಲಿಯವರೆಗೆ ನಾವು ದೇವನನ್ನು ಐಹಿಕ ಕಣ್ಣುಗಳಿಂದ ನೋಡುವುದಿಲ್ಲವೋ ಅಲ್ಲಿಯತನಕ ನಂಬುವುದಿಲ್ಲ. ಎನ್ನುವುದಾದರೆ, ದೇವನು ಐಹಿಕ ಕಣ್ಣುಗಳಿಗೆ ಕಾಣುವಂತಾದರೆ ಆಗ ವಿಶ್ವಾಸದ ಮಹತ್ವವೇ ಕಳೆದುಕೊಳ್ಳುವುದು. ಏಕೆಂದರೆ ಅಂತಹ ಸ್ಥಿತಿಯಲ್ಲಿ ಅವನ ಇತರ ಗುಣಗಳು ಗೌಣವಾಗಿರುವುದು. ಉದಾಹರಣೆಗೆ ಅವನು ಸೂಕ್ಷ್ಮವಾಗಿದ್ದಾನೆ. ಈ ಸ್ಥಿತಿಯಲ್ಲಿ ಅವನು ಸೂಕ್ಷ್ಮನಾಗಿರುವುದಿಲ್ಲ. ಬದಲು ಜಡತ್ವದ ವಸ್ತುವಾಗುವುದು. ಅವನು ಸೀಮಂತನಾಗಿದ್ದಾನೆ. ಈ ಸ್ಥಿತಿಯಲ್ಲಿ ಅವನು ಸೀಮಾತೀತನಾಗಿರಲು ಸಾಧ್ಯವಿಲ್ಲ. ಬದಲು ಸೀಮಿತನಾಗುವನು. ಇತ್ಯಾದಿ, ಒಟ್ಟಾರೆ ಅಲ್ಲಾಹನ ಶ್ರೇಷ್ಠತೆ ಮಹಾನತೆಯೂ ಬಯಸುವುದೇನೆಂದರೆ ಅವನು ಸೂಕ್ಷ್ಮನಾಗಿರಬೇಕು. ಮತ್ತು ಈ ಐಹಿಕ ಕಣ್ಣುಗಳಿಂದ ಗೌಪ್ಯವಾಗಿರಬೇಕು. ಆದರೆ ಈ ಕಾರಣದಿಂದ ಅವನ ಅಸ್ತಿತ್ವ ಸಂಶಯ ಭರಿತನಾಗಿರಲು ಸಾಧ್ಯವಿಲ್ಲ. ಏಕೆಂದರೆ ಅವನನ್ನು ಗುರುತಿಸಲು ಈ ಮಾರ್ಗದಿಂದ ಅತ್ಯುತ್ತಮ ಮಾರ್ಗ ಈ ಐಹಿಕ ಕಣ್ಣುಗಳಿಂದ ಹೊರತಾಗಿ ಲಭ್ಯವಿದೆ.

### ಅಲ್ಲಾಹನ ಬಗ್ಗೆ ಏಕೆ ಸಂಶೋಧನೆ ಮಾಡಬೇಕು?

ಪ್ರಕೃತಿ ಮತ್ತು ಬುದ್ಧಿವಂತಿಕೆ ಇವೆರಡೂ ಅಲ್ಲಾಹನ ಅಸ್ತಿತ್ವ ಕುರಿತು ನಮ್ಮ ಮುಂದೆ ಇಡಬಹುದಾದ ಪ್ರಶ್ನೆಯು, ಸಂಶೋಧನೆಯನ್ನು ತಳ್ಳಿ ಹಾಕುವುದು ಇಲ್ಲ. ನಮ್ಮ ಸೃಷ್ಟಿಕರ್ತನೊಬ್ಬ ಇದ್ದಾನೆಯೇ ಇಲ್ಲವೋ? ಎಂಬುದು ನಮಗೆ ಸಂಬಂಧಪಡದ ವಿಷಯವೇನೆಲ್ಲ. ನಮ್ಮ ಸೃಷ್ಟಿಕರ್ತನೊಬ್ಬ ಇದ್ದರೆ ಅವನು ಯಾರು, ಎಲ್ಲಿದ್ದಾನೆ? ಏನೇನು ಗುಣಗಳನ್ನು ಹೊಂದಿದ್ದಾನೆ? ಇದೇನು ನಮಗೆ ಸಂಬಂಧಪಡದ ವಿಷಯವೇನಲ್ಲ. ನಮ್ಮನ್ನು ಸೃಷ್ಟಿಸಿದರೆ ಸೃಷ್ಟಿಯ ಉದ್ದೇಶವೇನು? ಇದೇನು ನಮಗೆ ಸಂಬಂಧಪಡದ ವಿಷಯವೇ. ನಮ್ಮ ಸೃಷ್ಟಿಯ ಉದ್ದೇಶವೇನು? ಇದೇನು ನಮಗೆ ಸಂಬಂಧಪಡದ ವಿಷಯವೇ. ನಮ್ಮ ಸೃಷ್ಟಿಗೆ ಉದ್ದೇಶವಿದ್ದರೆ ಅದನ್ನು ಹೇಗೆ ಪಡೆಯಬಹುದು? ಇವೆಲ್ಲ ಪ್ರಶ್ನೆಗಳು ಸಂಬಂಧಪಡದ ವಿಷಯವಲ್ಲದಿದ್ದರೆ, ಖಂಡಿತ ಇಲ್ಲ ಎಂದಾದರೆ, ಯಾವ ಬುದ್ಧಿವಂತನು ಆ ಸಂಶೋಧನೆ ನಿರಾಕರಿಸಲು ಸಾಧ್ಯ? ಲೋಕದಲ್ಲಿರುವ ಎಲ್ಲ ಧರ್ಮಗಳು ಅಲ್ಲಾಹನ ಅಸ್ತಿತ್ವದ ಪ್ರಶ್ನೆ ನಮ್ಮ ಮುಂದಿರುತ್ತವೆ. ಕೇವಲ ಮುಂದಿಡುವುದಿಲ್ಲ. ಬದಲು ಅಂಶಗಳ ಶಿಕ್ಷಣದ ಕೇಂದ್ರಬಿಂದು ಅಲ್ಲಾಹನ ಅಸ್ತಿತ್ವವೇ ಆಗಿರುತ್ತದೆ.

ಲೋಕದ ವಿವಿಧ ಧರ್ಮಗಳಲ್ಲಿ ಎಷ್ಟೇ ಭಿನ್ನಾಭಿಪ್ರಾಯಗಳಿದ್ದರೂ ಈ ಲೋಕಗಳ ಸೃಷ್ಟಿಕರ್ತನೊಬ್ಬನಿದ್ದಾನೆ ಎಂಬ ಪ್ರಶ್ನೆಯಲ್ಲಿ ಒಮ್ಮತ ಹೊಂದಿವೆ. ಅವನ ಸುಪರ್ಧಿಯಲ್ಲಿಯೇ ನಮ್ಮ ಜೀವಗಳಿವೆ. ನಮ್ಮ ಸೃಷ್ಟಿಕರ್ತನೂ ಮಾಲೀಕನು ನಮ್ಮ ಜೀವನದ ಒಂದು ಉದ್ದೇಶವನ್ನು ಇರಿಸಿದ್ದಾನೆ. ಅದನ್ನು ಪಡೆಯುವ ವಿಧಾನವು ಸ್ವಯಂ ತೋರಿಸಿಕೊಟ್ಟಿದ್ದಾನೆ. ನಮ್ಮ ಈ ಮರಣವು ಮಾನವೀಯ ಜೀವನದ ಅಂತ್ಯವಲ್ಲ. ಬದಲು ಮರಣದ ನಂತರ ಇನ್ನೊಂದು ಜೀವನವಿದೆ. ಅದರಲ್ಲಿ ಮನುಷ್ಯನು ತನ್ನ ಜೀವನ ಧರ್ಮಗಳ ಫಲಗಳನ್ನು ಪಡೆಯುವವನು. ಇತ್ಯಾದಿ, ಇತ್ಯಾದಿ.

### ಅಲ್ಲಾಹನನ್ನು ಸಂಶೋಧಿಸುವ ವಿಧಾನ

ಈಗ ನಾನು ಅತ್ಯಂತ ಸಂಕ್ಷಿಪ್ತ ರೂಪದಲ್ಲಿ ಅಲ್ಲಾಹನನ್ನು ಹೇಗೆ ಸಂಶೋಧಿಸಬಹುದು? ಎಂಬ ಕುರಿತು ವಿವರಿಸ ಬಯಸುತ್ತೇನೆ. ಏಕೆಂದರೆ ಸಂಶೋಧನೆಯ ಸರಿಯಾದ ಮಾರ್ಗ ತಿಳಿಯದೇ ಉದ್ದೇಶ ಈಡೇರದು. ತಪ್ಪು ಮಾರ್ಗ ಹಿಡಿದರೆ ಎಲ್ಲ ಪ್ರಯತ್ನಗಳು ವ್ಯರ್ಥವಾಗುವುದು.

### ಸಂಶೋಧನೆಯಲ್ಲಿ ನಿಯ್ಯತ್ತಿನ ಪಾತ್ರ

ಒಬ್ಬ ತತ್ವಜ್ಞಾನಿ ರೂಪದಲ್ಲಿ ಅಲ್ಲಾಹನ ಸಂಶೋಧನೆ ವ್ಯರ್ತವಾಗಬಹುದು. ಅದು ಕೇವಲ ಮಾಹಿತಿಗಳ ನಿಧಿಯಲ್ಲಿ ಇನ್ನೊಂದು ಹೆಚ್ಚಳ ಎಂದಷ್ಟೇ ಆದಿತು. ಅವನಿಗೆ ದೇವನಿದ್ದಾನೆ. ಆದರೆ ಯಾವ ಗುಣಗಳನ್ನು ಹೊಂದಿದ್ದಾನೆ ಮತ್ತು ತನ್ನ ದಾಸರೊಡನೆ ಹೇಗೆ ಸಂಬಂಧ ಸ್ಥಾಪಿಸುತ್ತಾನೆ. ಅವರ ಸಾನಿಧ್ಯ ಹೇಗೆ ಪಡೆಯಬಹುದು? ಎಂದು ಆಲೋಚಿಸುವುದಿಲ್ಲ.

ಓ ನನ್ನ ಪ್ರೀತಿಯ ಬಂಧುಗಳೆ! ನೀವು ಅಲ್ಲಾಹನ ಬಗ್ಗೆ ಎಂದು ತತ್ವಜ್ಞಾನಿಯ ತರಹ ಆಲೋಚಿಸಬೇಡಿರಿ. ಏಕೆಂದರೆ ನೀವು ಆ ರೀತಿಯ ದೇವರನ್ನು ಎಲ್ಲಿಯೂ ಪಡೆಯಲಾರಿರಿ ಮತ್ತು ಈ ಪ್ರಯತ್ನ ವ್ಯರ್ಥವಾಗುವುದು. ಈ ರೀತಿಯ ಪ್ರಯತ್ನಗಳಿಂದ ಅಲ್ಲಾಹನು ಎಂದೂ ತನ್ನ ಮುಖ ತೋರಿಸಲಾರನು. ಬದಲು ನಾನು ಸತ್ಯವನ್ನು ಬಯಸಿ ಮನ:ಪೂರ್ವಕವಾಗಿ ನೋವಿನಿಂದ ಅವನನ್ನು ಬಯಸಿದಾಗ ಮಾತ್ರ ಅವನು ನಮ್ಮನ್ನು ಆರಿಸಿಕೊಳ್ಳುವನು ಮತ್ತು ತನ್ನ ಅನುಗ್ರಹಗಳಿಂದ ಅನುಗ್ರಹಿಸಿ ತನ್ನ ಸಾನಿಧ್ಯವನ್ನು ಪಡೆಯಲು ಉನ್ನತ ಪ್ರಗತಿಯ ದ್ವಾರಗಳನ್ನು ತೆರೆಯುವನು. ಅದುವೇ ಜೀವನದ

ಉದ್ದೇಶವಾಗಿರುತ್ತದೆ.

**ಅಲ್ಲಾಹನ ಮೇಲಿನ ವಿಶ್ವಾಸದ ಎರಡು ದರ್ಜೆಗಳು.**

ಅಲ್ಲಾಹನ ಮೇಲೆ ವಿಶ್ವಾಸವು ಎರಡು ವಿಧಗಳಲ್ಲಿ ವಿಭಜಿಸಲ್ಪಟ್ಟಿದೆ. ಪ್ರಥಮ ದರ್ಜೆಯು ತನ್ನ ಬೌದ್ಧಿಕ ಶಕ್ತಿಯನ್ನು ಪಡೆಯಬಹುದು. ಮತ್ತು ಎರಡನೆಯ ದರ್ಜೆಯು ಬೌದ್ಧಿಕ ಮಟ್ಟದಿಂದ ಪಡೆಯಲು ಸಾಧ್ಯವಿಲ್ಲ. ಆದರೆ ಅದಕ್ಕಾಗಿ ಅಲ್ಲಾಹನು ನಮ್ಮ ಬುದ್ಧಿ ಮಾತ್ರ ನಮಗೆ **"ಇದ್ದಾನೆ"** ಎಂಬ ಮಟ್ಟಕ್ಕೆ ತಲುಪಿಸಲಾರದು. ಬದಲು ಅದರ ಕೆಲಸ ಅಲ್ಲಾಹನು ಇರಬೇಕು ಎಂಬುವಷ್ಟಕ್ಕೆ ಸೀಮಿತವಾಗಿದೆ.

**ಅಲ್ಲಾಹನ ಅಸ್ತಿತ್ವ ಕುರಿತು ಬೌದ್ಧಿಕ ಸಾಷ್ಯ (ಗಳು)**

ಹೇಳುತ್ತಾರೆ. ಒಬ್ಬರು ಹಜರತ್ ಅಲಿ ಅವರಿಗೆ ಕೇಳಿದ್ದರು. ಅಲ್ಲಾಹನ ಅಸ್ತಿತ್ವಕ್ಕೆ ಯಾವ ಪುರಾವೆ ಇದೆ? ಅವರು ಆ ಪ್ರಶ್ನಿಸುವವನ ಸರಳತನವನ್ನು ನೋಡಿ ಉತ್ತರ ನೀಡಿದರು. ನಿಮಗೆ ಇಷ್ಟು ಸಾಕು. ಅಲ್ಲಾಹನನ್ನು ನಂಬುವುದು ಮತ್ತು ನಂಬದಿರುವುದು ಸಮಾನವಾಗಿದೆ. ಅದರಲ್ಲಿ ಯಾರದು ಯಾವ ನಷ್ಟವು ಇಲ್ಲ. ಒಂದು ವೇಳೆ ಅಲ್ಲಾಹನು ಇದ್ದಾನೆ ಎಂದಾದರೆ ಸರಿಯಾಗಿ ನೆನಪಿಟ್ಟುಕೊಳ್ಳಿ, ತಿರಸ್ಕರಿಸುವವನಿಗೆ ಒಳ್ಳೆಯದಾಗುವುದಿಲ್ಲ. ಈ ಸಾಕ್ಷ್ಯದಿಂದ ಆ ವ್ಯಕ್ತಿಗೆ ತೃಪ್ತಿಯಾಯಿತು ಮತ್ತು ಅವನು ಮುಂದೆ ಪ್ರಶ್ನೆ ಮಾಡಲಿಲ್ಲ. ನಿಜವಾಗಿಯೂ ದೇವನಿಲ್ಲದಿದ್ದರೂ ನಮಗೆ ನಂಬುವುದರಲ್ಲಿ ನಷ್ಟವೇನಿದೆ? ಅಲ್ಲಾಹನನ್ನು ನಂಬಿದರೆ ನಾವು ಕಳೆದು ಬಿಡುವ ವಸ್ತು ಆದರೂ ಏನಿದೆ? ನೀವು ಧರ್ಮಸಮ್ಮತವಾಗಿ ತಿನ್ನಿರಿ, ಕುಡಿಯಿರಿ, ನಿದ್ರೆ ಮಾಡಿರಿ. ಜಾಗ್ರತೆಗೊಳಿರಿ. ಏಳಿರಿ, ಕುಳಿತುಕೊಳ್ಳಿರಿ. ಆಟವಾಡಿರಿ. ಅಧ್ಯಾನ ಮಾಡಿರಿ. ಈ ಲೌಕಿಕ ಕಾರ್ಯಗಳನ್ನು ಮಾಡಿರಿ, ಸಂಪತ್ತು ಗಳಿಸಿರಿ. ಗೆಳೆತನ ಬೆಳೆಸಿರಿ, ವಿವಾಹ ಆಗಿರಿ. ಸಂತಾನ ಪಡೆಯಿರಿ. ಅಲ್ಲಾಹನ ಮೇಲೆ ವಿಶ್ವಾಸ ಹೊಂದುವುದರಿಂದ ನಿಮಗೆ ಈ ಯಾವ ಕಾರ್ಯಗಳಿಂದಲೂ ದೂರು ಉಳಿಯಬೇಕಾಗಿಲ್ಲ. ಬದಲು ಅದು ಕೇವಲ ನಮಗೆ ನಷ್ಟವಾಗುವಂತಹ ಮತ್ತು ಇತರರಿಗೆ ನಷ್ಟವಾಗುವಂತಹ ಕಾರ್ಯಗಳಿಂದ ನಿಷೇಧ ಹೇರುತ್ತದೆ. ಇದಂತು ಸ್ವಯಂ ನಿಮಗೆ ಪ್ರಾಕೃತವಾಗಿ ಮತ್ತು ಬೌದ್ಧಿಕವಾಗಿ ಮತ್ತು ಕಾನೂನಾತ್ಮಕವಾಗಿ ಒಳ್ಳೆಯದೆ ಇದೆ.

ಪ್ರಪ್ರಥಮ ಅಲ್ಲಾಹನ ಅಸ್ತಿತ್ವ ಕುರಿತು ಪುರಾವೆ ಪ್ರಸ್ತುತಪಡಿಸುವುದೇನೆಂದರೆ ಅದು ನಮಗೆ ಪ್ರಕೃತಿಗೆ ಸಾಮಿಪ್ಯವಾಗಿದೆ. ನಮ್ಮ ಪ್ರಕೃತಿ ಸ್ವಯಂ ನಮ್ಮಲ್ಲಿ ಈ ಪ್ರಶ್ನೆಯನ್ನು ಉಂಟು ಮಾಡುತ್ತದೆ. ಈ ಬ್ರಹ್ಮಾಂಡದ ಸೃಷ್ಟ ಕರ್ತನೊಬ್ಬ, ಮಾಲೀಕನೊಬ್ಬ ಇದ್ದಾನೆಯೇ ಇಲ್ಲವೋ? ಆದುದರಿಂದ ನಾವು ಈ ಪ್ರಶ್ನೆಯನ್ನು ಕಡೆಗಾಣಿಸಲು ಸಾಧ್ಯವಿಲ(ಟಿಪ್ಪಣಿ) ಈ ಶೀರ್ಷಿಕೆಯ ಮೇಲೆ ಒಂದು ದೀರ್ಘವಾದ ಪ್ರಬಂಧ ಮುದ್ರಣದಲ್ಲಿದೆ. ಓದುಗರು ಆದ್ದರಿಂದ ಪ್ರಯೋಜನ ಪಡೆಯಬೇಕು.) ಬ್ರಹ್ಮಾಂಡ ಸೃಷ್ಟಿ ಮತ್ತು ಬ್ರಹ್ಮಾಂಡ ರಚನೆಯ ಪುರಾವೆ

ಮೊದಲ ಭಾಗದ ಪುರಾವೆ ಅದು ಸೃಷ್ಟಿಯ ಅಸ್ತಿತ್ವದಿಂದ ಸೃಷ್ಟಿಕರ್ತನ ತನಕ ತಲುಪುವುದಕ್ಕೆ ಸಂಬಂಧಿಸಿದ್ದಾಗಿದೆ. ಅದು ತನ್ನ ಬಾಹ್ಯ ರೂಪದಲ್ಲಿ ತುಂಬ ಸರಳವಾಗಿದೆ. ವಿಷಾದದ ಸಂಗತಿ ಎಂದರೆ ಈ ಲೋಕದಲ್ಲಿ ಲಕ್ಷಾಂತರ ಜನರು ನಮ್ಮನ್ನು ನಂಬಿಸ ಬಯಸುವುದೇನೆಂದರೆ ಈ ಭೂಮಿ, ಈ ಆಕಾಶ, ಈ ಪ್ರಾಣಿಗಳು ಈ ಸಸ್ಯಗಳು ಈ ಜಡವಸ್ತುಗಳು, ಈ ಸೌರಮಂಡಲಗಳು, ಈ ಭೌತ ವಸ್ತುಗಳು, ಈ ಮಾನವ ಶರೀರ, ಯಾವನೇ ಸೃಷ್ಟಿಕರ್ತನ ಸೃಷ್ಟಿಯ ಫಲವಲ್ಲ. ಬದಲು ಸ್ವಯಂ ತಂತಾನೆ ಪುರಾತನ ಕಾಲದಿಂದ ಬಂದಿವೆ. ನಾನು ಅವರ ಈ ಮಾತನ್ನು ಹೇಗೆ ನಂಬಲಿ? ನನ್ನ ಮುಂದೆ ಈ ಸಮಯ ಒಬ್ಬ ಹಳ್ಳಿಯ ಅರಬನ ಕಥೆ ಇದೆ. ಅವನಲ್ಲಿ ಒಬ್ಬನು ಕೇಳಿದನು. ದೇವನಿದ್ದಾನೆ ಎಂಬುವುದಕ್ಕೆ ನಿನ್ನ ಬಳಿ ಯಾವ ಪುರಾವೆ ಇದೆ.

**ಅಲ್‌ಬಿಅ್‌ರತು ತದುಲ್ಲು ಅಲಲ್ ಬೀರಿ ವ ಅಸ್ರಲ್ ಖದಮಿ ಅಲಸ್ಸಫೀರಿ ಫಸ್ಸಮಾಅ ಝಾಲಿಕಲ್ ಬುರೂಜು ವಲ್ ಅರ್‌ಝು ಝಾತಲ್‌ಫಜ್ಜಾಜಿ ಅಮ್ಮಾ ತದುಲ್ಲು ಖದೀರ್**

ಅಂದರೆ ಒಬ್ಬ ವ್ಯಕ್ತಿ ಅರಣ್ಯದಿಂದ ಹೋಗುವಾಗ ಒಂದು ಒಂಟೆಯ ಹೆಜ್ಜೆಯನ್ನು ಕಾಣುವಾಗ ಭಾವಿಸುತ್ತಾನೆ. ಈ ಜಾಗದಿಂದ ಯಾವುದೇ ಒಂಟೆ ಒಂದು ಹೋಗಿರಬೇಕು. ಅಥವಾ ಆ ಮರುಭೂಮಿಯ ಮರಳಿನ ಮೇಲೆ ಯಾವುದೋ ಮನುಷ್ಯನ ಕಾಲುಗಳ ಗುರುತುಗಳನ್ನು ಕಂಡರೆ ಅವನು ನಿಶ್ಚಯಿಸಿಕೊಳ್ಳುತ್ತಾನೆ. ಇಲ್ಲಿಂದ ಒಬ್ಬ ಪ್ರಯಾಣಿಕನು ಹೋಗಿದ್ದಾನೆಂದು, ಹೀಗಿರುವಾಗ ನಿಮಗೆ ಈ ಭೂಮಿ, ಈ ಎಲ್ಲಾ ವಿಶಾಲವಾದ ಮಾರ್ಗಗಳೊಂದಿಗೆ ಮತ್ತು ಈ ಆಕಾಶ ಸೂರ್ಯ, ಚಂದ್ರ, ಮತ್ತು ನಕ್ಷತ್ರಗಳನ್ನು ಕಂಡು ಇದರ ಸೃಷ್ಟಿಕರ್ತನೊಬ್ಬನಿರಬಹುದು ಎಂಬ ವಿಚಾರ ಮೂಡುವುದಿಲ್ಲವೇ,

ಅಲ್ಲಾಹ್, ಅಲ್ಲಾಹ್, ಎಷ್ಟೊಂದು ಸತ್ಯವಾಗಿದೆ, ಎಷ್ಟೊಂದು ಕೃತಕ ರಹಿತವಾಗಿದೆ. ಆದರೆ ಈ ಜಾಣ್ಮೆಯುಕ್ತ ಕಥೆ ನಮ್ಮ ಮರುಭೂಮಿಯ ಒಬ್ಬ ಅನಕ್ಷರಸ್ತ ಸುಪುತ್ರನ ಬಾಯಿಂದ ಹೊರಟಿದೆ. ಆದರೆ ಆ ಅಳಕ್ಕೆ ಯೂರೋಪ್ ಅಮೇರಿಕದ ತತ್ವಜ್ಞಾನಿಗಳು ಸಹ ಪ್ರಯತ್ನ ಮಾಡಿಯೂ ಆ ಮಟ್ಟಕ್ಕೆ ತಲುಪಲು ಸಾಧ್ಯವಾಗಲಿಲ್ಲ.

**ಪಾಶ್ಚಿಮಾತ್ಯ ವಿದ್ವಾಂಸರು ಮತ್ತು ದೇವ ವಿಶ್ವಾಸ:**

ಆ ಜನರು ಹೇಳುವುದೇನೆಂದರೆ ಭ್ರೂಣದಲ್ಲಿ ವಿವಿಧ ರೂಪಧಾರಣೆ ಆಗುತ್ತದೆ. ಅದರಲ್ಲಿ ಪ್ರಕೃತಿ ರೂಪದಲ್ಲಿ ಅನ್ವಯಿಸುವಂತಿರುತ್ತದೆ. ಅದು ಒಂದು ಸಮಯದ ತನಕ ಪ್ರಾಥಮಿಕ ಹಂತದಿಂದ ಉನ್ನತ ಮಟ್ಟಕ್ಕೆ ಪ್ರಗತಿ ಹೊಂದುತ್ತ ಹೋಗುತ್ತದೆ. ಪಾಶ್ಚಿಮಾತ್ಯ ವಿದ್ವಾಂಸರು ಇನ್ನೊಂದು ರೀತಿಯಲ್ಲಿ ಕೇಳುವುದೇನೆಂದರೆ ಈ ಲೋಕ ಎಂದಿನಿಂದ ಒಂದು ವಿಶೇಷ ನಿರ್ದಿಷ್ಟ ಕಾನೂನಿನ ಅಡಿಯಲ್ಲಿ ಕೆಲಸ ನಿರ್ವಹಿಸುತ್ತ ಬಂದಿದೆ. ಈಗಲೂ ಸಹ ಲೋಕದ ಪ್ರತಿ ಒಂದು ವಸ್ತು ಒಂದು ವಿಶೇಷವಾದ ಕಾನೂನಿನ ಅಡಿಯಲ್ಲಿ ನಡೆಯುತ್ತಿದೆ ಮತ್ತು ನಾವು ಶೈಕ್ಷಣಿಕ ಮೂಲಕ ಎಲ್ಲ ಬದಲಾವಣೆಗಳನ್ನು ಮತ್ತು ಚಲನವಲನ ಮತ್ತು ನಿಲುಗಡೆಯ ಕಾರಣಗಳು ತಿಳಿಯಬಹುದು.

ಯೋಚಿಸಿ ನೋಡಿದರೆ ಈ ಆಕ್ಷೇಪವು ಅತ್ಯಂತ ನಿರಾಧಾರವಾಗಿದೆ. ಮಸ್‌ಅಲ ಇರ್‌ತಿಖಾ (ವಿಕಸನ ಪ್ರಕ್ರಿಯೆ ದೇವಾಸ್ತಿತ್ವಕ್ಕೆ) ವಿರುದ್ಧವಾಗಿ ಒಂದು ಅಸ್ತ್ರವಾಗಲು ಸಾಧ್ಯವಿಲ್ಲ. ಏಕೆಂದರೆ ಲೋಕಸೃಷ್ಟಿಯ ಆರಂಭದ ಕುರಿತು ಯಾವುದೇ ನಿಜವಾದ ನಿಶ್ಚಿತ ಫಲಿತಾಂಶ ಹೊರಬಂದಿಲ್ಲ. ಅಲ್ಲಿದೆ ಅದರ ಸಂಬಂಧ ಇಂತಿಷ್ಟೇ ಇದೆ ಪ್ರಸಕ್ತ ಲೋಕದ ವಸ್ತುಗಳು ಶಾಶ್ವತ ಆದುದಲ್ಲ ಬದಲು ಅಲ್ಪತನದಿಂದ ಉನ್ನತ ಮಟ್ಟಕ್ಕೆ ಪ್ರಗತಿ ಹೊಂದಿವೆ. ಈಗಿನ ಸ್ಥಿತಿಗೆ ಬಂದಿವೆ. ಆದರೆ ಪ್ರಶ್ನೆ ಇರುವುದೇನೆಂದರೆ ಆ ಪ್ರಾಥಮಿಕ ಹಂತದ ಸ್ಥಿತಿ ಎಲ್ಲಿಂದ ಬಂದವು? ಆ ಕುರಿತು ವಿಕಸನ ಪ್ರಕ್ರಿಯೆಯ ಸಮರ್ಥಕರು ಯಾವುದೇ ನಿರ್ದಿಷ್ಟ ಫಲಿತಾಂಶ ತಿಳಿಸುವುದಿಲ್ಲ ವಿಕಸನ ಪ್ರಶ್ನೆ ಮಾತ್ರ ಅಲ್ಲಾಹನ ಅಸ್ತಿತ್ವವನ್ನು ನಿರಾಕರಿಸಲು ಒಂದು ನೆಪವನ್ನಾಗಿ ಮಾಡುವುದು ಪುರಾವೆ ಎಂತಾಗುವುದಿಲ್ಲ.

ಯೋಚನೆ ಮಾಡಿ ಹೇಳುವುದಾದರೆ ಈ ಭೌತಿಕ ಲೋಕವು ಅದರ ಮೊದಲ ಸ್ಥಿತಿಯ ಕುರಿತು ಹೇಳಲಾಗುತ್ತಿದ್ದು (ಅದು ಸರಿ ತಪ್ಪು ಬೇರೆ ವಿಷಯ) ಪ್ರಸಕ್ತ ಸ್ಥಿತಿಗಿಂತಲೂ ಹೆಚ್ಚು ಆಶ್ಚರ್ಯ ಜನಕವಾಗಿದೆ. ಮಾನವ ಬುದ್ಧಿಶಕ್ತಿ ಮಂಕು ಬಂದಂತಾಗುತ್ತದೆ. ಏಕೆಂದರೆ ಪ್ರಸಕ್ತ ಲೋಕದ ಸ್ಥಿತಿಯೂ ನೋಡಲಿಕ್ಕೆ ಬೀಜದಂತಿತ್ತು. ಈಗ ಆ ಪೈಕಿ ಪ್ರತಿಯೊಬ್ಬ ಬುದ್ಧಿಯುಳ್ಳವನು ತಿಳಿಯಬಹುದು. ಬೀಜವು ಮರದ ಪೈಕಿ ಹೆಚ್ಚು ವಿಷಯಕ್ಕೆ ಕಾರಣವಾಗಿರುತ್ತದೆ. ಇನ್ನುಳಿದದ್ದು ಎರಡನೆಯ ಆಕ್ಷೇಪ ಅಂದರೆ ಈ ಲೋಕದ ಪ್ರತಿಯೊಂದು ವಸ್ತು ಪ್ರತಿಯೊಂದು ಬದಲಾವಣೆಗಳು ಒಂದು ವಿಶೇಷವಾದ ಕಾನೂನಿನ ಅಡಿಯಲ್ಲಿ ನಡೆಯುತ್ತಿದೆ ಮತ್ತು ಇಂದು ದಿನೇ ದಿನೇ ಆ ಗೌಪ್ಯ ಕಾನೂನುಗಳ ಹೊಸತನವನ್ನು ನಾವು ತಿಳಿಯುತ್ತಾ ಹೋಗುತ್ತಿದ್ದೇವೆ. ಹೀಗಿರುವಾಗ ಅದೊಂದು ಅತ್ಯಂತ ದುರ್ಬಲ ಮತ್ತು ಅರ್ಥಹೀನ ಆಕ್ಷೇಪವಾಗಿದೆ.

ಸತ್ಯ ಹೇಳಬೇಕಾದರೆ ಬ್ರಹ್ಮಾಂಡ ರಚನೆ ಮತ್ತು ಪ್ರಕೃತಿ ನಿಯಮವು ಎಷ್ಟು ಶ್ರೇಷ್ಠತೆ ಹೊಂದುತ್ತ ಹೋಗುತ್ತದೆಯೋ ಅದೇ ಈ ಭೌತಿಕ ಲೋಕದ ಬಗ್ಗೆ ಆಧ್ಯಾತ್ಮಿಕ ಜ್ಞಾನ ಹೊಂದಿದವರ ದೃಷ್ಟಿಯಲ್ಲಿ ಒಬ್ಬ ಜಾಣ್ಮೆ, ವಿವೇಕಶೀಲ ಸರ್ವಶಕ್ತ, ಸೃಷ್ಟಿಕರ್ತನ ಕಡೆ ಬೊಟ್ಟು ಮಾಡುತ್ತದೆ ಮತ್ತು ಉಲ್ಲೇಖ ಬಯಸುತ್ತದೆ. ಆದುದರಿಂದ ಸ್ವಯಂ ಪಾಶ್ಚಿಮಾತ್ಯ ಸಂಶೋಧಕರಲ್ಲಿಯೂ ಒಂದು ಮಾರ್ಗ ಅಲ್ಲಾಹನ ಮೇಲೆ ವಿಶ್ವಾಸ ಹೊಂದುತ್ತಾರೆ. ಆಧುನಿಕ ಸಂಶೋಧನೆಗಳು ಎಂದೂ ಅದರ ವಿಶ್ವಾಸಗಳಿಗೆ ತಡೆ ಒಡ್ಡುವುದಿಲ್ಲ. ಬದಲು ನಾಸ್ತಿಕತೆಯ ವಿರುದ್ಧ ಒಂದು ಆಯುಧದಂತೆ ಬಳಸಬಹುದಾಗಿದೆ.

ಅದಲ್ಲದೇ ಇನ್ನೊಂದು ಮಾತು ನೆನಪಿಡ ಬೇಕಾಗಿದೆ ಅದೇನೆಂದರೆ ಜನರು ದೌರ್ಭಾಗ್ಯದಿಂದ ವಿಜ್ಞಾನದ ಪ್ರತಿ ಒಂದು ಅಪಾಯಕರ ತಪ್ಪಿಗೆ ಗುರಿಯಾಗಿದ್ದಾರೆ. ಅಂದರೆ ಅವರು ವಿಜ್ಞಾನಿಗಳ ವಿಚಾರಗಳಲ್ಲಿ ಮತ್ತು ವಿಜ್ಞಾನದ ಸಂಶೋಧಿಸಲ್ಪಟ್ಟ ಸಾಕ್ಷ್ಯಗಳಲ್ಲಿ ವ್ಯತ್ಯಾಸ ಗುರುತಿಸಲಾರರು. ವಿಜ್ಞಾನಿಗಳ ಘೋಷಣೆಗಳು ಮೂರು ವಿಧಗಳಲ್ಲಿ ವಿಭಜಿಸಲ್ಪಟ್ಟಿವೆ.

1) ವಿಜ್ಞಾನಿಗಳ ಭಾವನೆಗಳು
2) ವಿಜ್ಞಾನಿಗಳ ಪೂರ್ಣಗೊಳ್ಳದ ಸಂಶೋಧನೆಗಳು ಮತ್ತು
3) ವಿಜ್ಞಾನಿಗಳ ಸಾಕ್ಷ್ಯಗೊಂಡ ಸಾಕ್ಷ್ಯಗಳು

ಇವು ಮೂರು ಸಹ ಪ್ರತ್ಯೇಕ ಪ್ರತ್ಯೇ ಸ್ಥಿತಿಗಳು ಮತ್ತು ಪ್ರತ್ಯೇಕ ಪ್ರತ್ಯೇಕ ದರ್ಜೆಗಳು ಹೊಂದಿವೆ ಮತ್ತು ಅದ್ಸು ಸಮಾನವೆಂದು ಭಾವಿಸುವುದು ಒಂದು ಅಪಾಯಕರ ತಪ್ಪು ಆದೀತು. ಅದಾಗ್ಯೂ ಪ್ರತಿಯೊಬ್ಬ ವ್ಯಕ್ತಿ ಸ್ವಲ್ಪ ಮಾತ್ರ ಬುದ್ಧಿಯುಳ್ಳವರಾದರೂ ತಿಳಿಯಬಹುದು. ಭಾವನೆಗಳು ಮತ್ತು ಪರಿಪೂರ್ಣತೆ ಹೊಂದುವುದು ಬೇರೆಯಾಗಿವೆ ಮತ್ತು ಸಾಬೀತುಗೊಂಡ ಸಾಕ್ಷ್ಯಗಳು ಬೇರೆಯಾಗಿವೆ.

**ದೇವನು ಯಾರಿಂದಲೂ ಸೃಷ್ಟಿಸಲ್ಪಟ್ಟಿಲ್ಲ**

ಈ ಜಾಗದಲ್ಲಿ ಒಂದು ಸಂಶಯ ನಿವಾರಿಸುವುದು ಅನಿವಾರ್ಯವಾಗಿದೆ ಅದು ಈ ಸಂದರ್ಭದಲ್ಲಿ ಕೆಲ ತಿಳಿಯದವರು ವಿಶೇಷವಾಗಿ ಯುವಕರು

ಸಂಶಯಪಡುತ್ತಾರೆ. ಅದೇನೆಂದರೆ ಈ ಲೋಕವನ್ನು ದೇವನು ಸೃಷ್ಟಿಸಿದ, ದೇವನನ್ನು ಯಾರು ಸೃಷ್ಟಿಸಿದ್ದಾರೆ? ಒಂದು ವೇಳೆ ಈ ಲೋಕವನ್ನು ಒಬ್ಬ ಧರ್ಮಶಕ್ತ ದೇವನೊಬ್ಬನು ಸೃಷ್ಟಿಸಿದ್ದಾನೆಂದಾರೆ ಆ ಸರ್ವಶಕ್ತ ಅಸ್ತಿತ್ವ ಉಳ್ಳವನ ಹೆಸರೇ ದೇವನೆಂದು ಹೇಳಬಹುದು ಅವನ ಅಡಿಯಲ್ಲಿ ಎಲ್ಲ ಸೃಷ್ಟಿ ಕಾರ್ಯ ನಿರ್ವಹಿಸಬಹುದು.

ಯಾವುದೇ ವ್ಯಕ್ತಿಗೆ ಈ ಭಾವನೆಯೊಂದಿಗೆ ಎಲ್ಲ ಜೀವಿಯ ಕುರಿತು, ಅದರ ಸೃಷ್ಟಿಕರ್ತನ ಮತ್ತು ಮಾಲೀಕ ಯಾರು ಎಂಬ ಪ್ರಶ್ನೆ ಉದ್ಭವಿಸಿದರೆ ಯಾರಲ್ಲಿಯೂ ಉತ್ತರ ದೊರೆಯಲಾರರು. ಹಾಗಾದರೆ ಪ್ರಾರಂಭ ಎಲ್ಲಿಂದ ಆಯಿತು? ಅದರ ಉತ್ತರ ಇದಾಗಿದೆ. ಈ ಮಾತು ಬೌದ್ಧಿಕವಾಗಿ ಅಸಾಧ್ಯವಾಗಿದೆ. ಈ ಲೋಕದ ಪ್ರಾರಂಭಿಕ ಯಾರು, ಇದಕ್ಕೆ ಸೃಷ್ಟಿಕರ್ತ ಇಲ್ಲ ಎನ್ನುವುದರೆ ಅದರ ಪರಿಣಾಮವು ಎಲ್ಲ ಜೀವಿಗಳ ಸತ್ಯವನ್ನು ಅಲ್ಲಗೆಳೆಯಬೇಕಾಗುತ್ತದೆ. ಅದರಲ್ಲಿ ಈ ಲೋಕವು ಸೇರಿದೆ. ಅದನ್ನು ಸಹ ಅಲ್ಲಗೆಳೆಯಬೇಕಾಗುತ್ತದೆ.

ಅಂತೂ ಅಲ್ಲಾಹನ, ಸೃಷ್ಟಿಕರ್ತನ ಮಾಲೀಕ ಯಾರು ಎನ್ನುವ ಪ್ರಶ್ನೆಯೇ ತಪ್ಪು. ಏಕೆಂದರೆ ಅಲ್ಲಾಹನ ಪ್ರತಿ ಇಂತಹ ಪ್ರಶ್ನೆ ಉದ್ಭವಿಸುವುದಿಲ್ಲ. ವಾಸ್ತವವೇನೆಂದರೆ ದೇವನು ಮತ್ತು ಅವನ ಸೃಷ್ಟಿಯ ಕಲ್ಪನೆ ಪರಸ್ಪರ ತದ್ವಿರುದ್ಧವಾಗಿದೆ ಎರಡನ್ನೂ ಒಂದೇ ಎಂದು ಭಾವಿಸುವುದು ಬೌದ್ಧಿಕವಾಗಿ ತಪ್ಪು. ಏಕೆಂದರೆ ದೇವತ್ವವು ಅಪೇಕ್ಷಿವುದೇನೆಂದರೆ ಸರ್ವಶಕ್ತಿಯುಳ್ಳವನು ಮಾತ್ರ ದೇವನೆಂದಾಗುವುದು ಮತ್ತು ಅವನಿಗಿಂತ ಮಿಗಿಲಾಗಿ ಯಾರು ಇರಬಾರದು. ಸೃಷ್ಟಿಯು ಅಪೇಕ್ಷಿಸುವುದೇನೆಂದರೆ ಅವನ ಮೇಲೆ ಒಬ್ಬ ಶಕ್ತಿ ಇರಬೇಕು ಹೀಗೆ ಈ ಎರಡೂ ಭಾವ ಒಂದುಗೂಡಲು ಸಾಧ್ಯವಿಲ್ಲ.

ಅಂದರೆ ಒಂದೇ ಅಸ್ತಿತ್ವ ಅದು ಸೃಷ್ಟಿಯೂ, ಸೃಷ್ಟಿಕರ್ತನು ಆಗಿರಲು ಸಾಧ್ಯವಿಲ್ಲ. ಯಾವಾಗ ಅಸಾಧ್ಯವೆಂದಾಯಿತು. ಆಗ ನಮಗೆ ಮನ್ನಿಸಬೇಕಾಗುತ್ತದೆ. ಯಾವುದನ್ನೂ ನಾವು ದೇವನೆಂದು ನಂಬುತ್ತೇವೆಯೇ ಅವನ ಕುರಿತು ಅವನ ಸೃಷ್ಟಿಕರ್ತ ಯಾರು, ಮಾಲೀಕನಾರು ಎಂಬ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ಮೂರನೆಯ ಉತ್ತರವೇನೆಂದರೆ ನಾನು ಈ ಸಂಶಯ ದೂರ ಮಾಡಬಯಸುತ್ತೇನೆ. ಅದೇನೆಂದರೆ, ನಾವು ಕೆಲ ಸಮಯಕ್ಕೆ ಒಪ್ಪಿಕೊಳ್ಳೋಣ. ದೇವನು ಸೃಷ್ಟಿಯಾಗಿದ್ದಾನೆ ಎಂದು, ಅದರ ಪರಿಣಾಮ ನೋಡೋಣ, ದೇವನು ಸೃಷ್ಟಿ ಎಂದಾದರೆ ಅವನ ಎಲ್ಲ ಗುಣನಾಮಗಳನ್ನು ನಿರಾಕರಿಸಬೇಕಾಗುತ್ತದೆ. ಉದಾಹರಣೆಗೆ ದೇವನು ಸೃಷ್ಟಿಯಾಗಿದ್ದರೆ ಅವನು ಪುರಾತನವಾಗಿರಲು ಸಾಧ್ಯವಿಲ್ಲ. ಬದಲು ಅವನನ್ನು ಘಟಿಸುವಂತಹದ್ದು ಎಂದು ನಂಬಬೇಕಾಗುತ್ತದೆ. ದೇವನು ಸೃಟಿಯಾಗಿದ್ದರೆ ಅವನು ಶಾಶ್ವತ ಎಂದು ಹೇಳಲಾಗದು. ಬದಲು ನಶ್ವರ ಎಂದು ನಂಬಬೇಕಾಗುವುದು. ದೇವನು ಸೃಷ್ಟಿ ಎಂದಾದರೆ ಅವನು ನೆಲೆನಿಲ್ಲುವವನು ಎನ್ನಲಾಗದು. ಬದಲು ಅವನು ಆಶ್ರಯಿಸಿಕೊಂಡಿದ್ದಾನೆ ಎಂದು ನಂಬಬೇಕಾಗುತ್ತದೆ. ಅದು ಅವನ ಸೃಷ್ಟಿಕರ್ತ ಮತ್ತು ಮಾಲೀಕನೆಂದಾಯಿತು.

**ಈ ಲೋಕವನ್ನೇ ಸೃಷ್ಟಿ ಎಂದು ಯಾಕೆ ಪರಿಗೆಣಿಸಬಾರದು?**

ಅನಂತರ ಇನ್ನೊಂದು ಸಂಶಯ ಉಳಿಯುತ್ತದೆ. ಅದೇನೆಂದರೆ ದೇವನನ್ನು ನಾವು ಸೃಷ್ಟಿಕರ್ತನೆಂದು ನಂಬಿ ಅವನು ಸ್ವಯಂ ತಂತಾನೆ ಯಾವ ಸೃಷ್ಟಿಕರ್ತನೇ ಮಾಲೀಕನಾಗಿದ್ದಾನೆ ಎಂದಾದರೆ ಈ ಲೋಕವನ್ನೇ ಏಕೆ ಸೃಷ್ಟಿ ಎಂದು ನಂಬಬಾರದು. ಈ ಸಂಶಯವು ಅವಿವೇಕತನದಿಂದ ಕೂಡಿದೆ ಮತ್ತು ಮೂರ್ಖತನದ ಪರಿಣಾಮ ಹೊಂದಿದೆ. ಅದಕ್ಕಿಂತ ಹೆಚ್ಚೇನು ಇಲ್ಲ. ನಾವು ಲೋಕವನ್ನು ಸೃಷ್ಟಿ ಎಂದು ನಂಬಿದ್ದೇವೆ. ಅದಕ್ಕೆ ಕಾರಣ ಎಲ್ಲ ವಸ್ತುಗಳು ಸೃಷ್ಟಿಯಾಗಬೇಕೆಂದೇನಲ್ಲ. ಬದಲು ಲೋಕದ ಪರಿಸ್ಥಿತಿಗಳು ಅದನ್ನು ಸೃಷ್ಟಿ ಎಂದು ಸಾಬೀತುಪಡಿಸುತ್ತದೆ. ಎಲ್ಲ ವಸ್ತುಗಳು ತನ್ನ ತನ್ನ ವಿಶಿಷ್ಟ ಪರಿಸ್ಥಿತಿಗಳಲ್ಲಿ ಅದರನ್ವಯ ಒಂದು ಅಭಿಪ್ರಾಯ ರೂಪಿಸಬಹುದು. ಲೋಕದ ಯಾವ ವಸ್ತುವು ಸೃಷ್ಟಿ ಎಂದು ನಂಬಿ ಅದರ ವಿಶಿಷ್ಟ ಗುಣಗಳನ್ನು ನಿರಾಕರಿಸಲು ಆಗುವುದಿಲ್ಲ. ಹಾಗೆಯೇ ದೇವನನ್ನು ಸೃಷ್ಟಿ ಎಂದು ನಂಬಿದರೆ ಅದರ ಗುಣಗಳನ್ನು ನಿರಾಕರಿಸಬೇಕಾಗುತ್ತದೆ.

**ಒಳಿತು ಕೆಡಕುಗಳ ಅರಿವಿನ ಪುರಾವೆ**

ಅನಂತರ ದೇವಾಸ್ತಿತ್ವ ಕುರಿತು ನಾನು ಬೌದ್ಧಿಕ ಪುರಾವೆ ಪ್ರಸ್ತುತಪಡಿಸುವುದೇನೆಂದರೆ, ಅದು ನೈತಿಕ ನೆಲೆಯಲ್ಲಿ ಪ್ರತಿಯೊಬ್ಬನ ಪ್ರಕೃತಿಯಲ್ಲಿ ಉಪಸ್ಥಿತವಿದೆ. ಒಳಿತು ಮತ್ತು ಕೆಡುಕಿನ ಅರಿವು ಪ್ರತಿ ಒಬ್ಬ ಮನುಷ್ಯನ ಒಳಗೆ ಉಪಸ್ಥಿತವಿದೆ. ಈ ರೀತಿ ಸಾಕ್ಷ್ಯವಾಗಿದೆ ಮನುಷ್ಯನು ಸ್ವಯಂ ತಂತಾನೆ ಉಂಟಾದುದಲ್ಲ ಎಂದು. ಅಲ್ಲದೇ ಇದು ಕಾನೂನಿನ ಅಂಧತೆಯ ಪರಿಣಾಮವು ಅಲ್ಲ. ಬದಲು ಒಬ್ಬ ಸರ್ವಜ್ಞಾನಿಕ ವಿವೇಕಶೀಲನ ಒಂದು ವಿಶೇಷ ಉದ್ದೇಶ ಹೊಂದಿದ ಪರಿಣಾಮವಾಗಿದೆ. ಮತ್ತು ಅದೇ ಉದ್ದೇಶಕ್ಕಾಗಿ ಮನುಷ್ಯನು ತನ್ನ ಈ ಸಹಜ ಪ್ರಕ್ರಿಯೇ ಒಂದು ಬೀಜದ ನೆಲೆಯಲ್ಲಿ ಉಪಸ್ಥಿತವಿದೆ. ಅದು ಬೆಳವಣಿಗೆ ಹೊಂದಿ ಉನ್ನತ ದರ್ಜೆಗಳಿಗಾಗಿ ಕಾರಣವಾಗುತ್ತದೆ. ಅದರ ಮೂಲವು ಅವನ ಉಪಕಾರ ಹಾಗೂ ಸೌಂದರ್ಯ ಮತ್ತು ಆ ಮಹೋನ್ನತ ದೇವನ ಪ್ರತಿಬಿಂಬ ತನ್ನಲ್ಲಿ ಕೊಂಡುಕೊಳ್ಳುತ್ತಾನೆ. ಮತ್ತು ಉನ್ನತ ದರ್ಜೆಯತ್ತ ನಡೆಯುತ್ತಾನೆ ಆ ಪೈಕಿ ಪವಿತ್ರ ಖುರ್‌ಆನ್ ಹೀಗೆ ನುಡಿಯುತ್ತದೆ.

**ಫ ಅಲ್‌ಹಮಹ ಫುಜೂರಹ ವ ತಖ್‌ವಾಹ, (ಅಶ್ಶಮ್ಸ್:09)** ಅಂದರೆ ಅಲ್ಲಾಹನನ್ನು ಆದಕೆ (ಆತ್ಮಕ್ಕೆ) ಅದರ ದುಷ್ಟತೆ ಮತ್ತು ಸಾತ್ವಿಕತೆಯ ಬಗ್ಗೆ ತಿಳಿಯಪಡಿಸಿದನು. ಒನ್ನೊಂದು ಸ್ಥಳದಲ್ಲಿ ಹೀಗಿದೆ. ವಹದೇನಹುನ್ನಜದೇನಾ! ಅಂದರೆ ಭೌತಿಕ ಮತ್ತು ಆಧ್ಯಾತ್ಮಿಕವಾದ ಎರಡು ಉನ್ನತ ಮಾರ್ಗಗಳನ್ನು ನಾವು ಅವನಿಗೆ ತೋರಿಸಿದ್ದೇವೆ.

ಸಾರ್ವತ್ರಿಕ ಸ್ವೀಕೃತಿಯ ಪುರಾವೆ! ಆನಂತರ ನಾನು ಪ್ರಸ್ತುತಪಡಿಸುವ ಪುರಾವೆ ಎಂದರೆ ಅದು ಕರ್ಮಗಳ ಸುವಿಕೃತಿಯ ಪುರಾವೆ ಆಗಿದೆ. ಈ ಪುರಾವೆಯೂ ಒಂದು ತತ್ವಾಧಾರಿತವಾಗಿದೆ. ಲೋಕದಲ್ಲಿ ಯಾವುದೇ ಮನುಭಾವ ಅಥವಾ ವಿಶ್ವಾಸ, ಜಾಗತಿಕ ಮನ್ನಣೆ ಪ್ರತಿಯೊಂದು ಯುಗದಲ್ಲಿ ಖಾಯಂ ಆಗಿರುತ್ತದೆ. ಅದು ಈ ಮಾತಿಗೆ ಸಾಕ್ಷ್ಯವಾಗಿದೆ. ಆ ಮನೋಭಾವ ಮತ್ತು ವಿಶ್ವಾಸ ನಿಜಾರ್ಥದಲ್ಲಿ ಸತ್ಯ ಆಧಾರಿತವಾಗಿದೆ ಎಂದು.

ಈ ವಾಸ್ತವದ ಅಡಿಯಲ್ಲಿ ನಾವು ಈ ಪ್ರಶ್ನೆಯ ಮೇಲೆ ದೃಷ್ಟಿ ಹಾಯಿಸಿದರೆ ಅಲ್ಲಾಹನ ಮೇಲೆ ವಿಶ್ವಾಸ ಒಂದು ಎಂತಹ ವಿಶ್ವಾಸ ಆಗಿದೆ ಎಂದರೆ ಅದನ್ನು ಯಾವ ವಿವೇಕವಂತನಿಂದಲೂ ನಿರಾಕರಿಸಲು ಸಾಧ್ಯವಿಲ್ಲ. ಲೋಕದಲ್ಲಿಯೇ ಎಷ್ಟೆಲ್ಲ ಸಮುದಾಯಗಳಿವೆ. ಅದು ದೊಡ್ಡದಾಗಲಿ, ಸಣ್ಣದಾಗಲಿ, ಶಿಸ್ತು, ಸಂಸ್ಕೃತವಾಗಲಿ, ಅಸಂಸ್ಕೃತವಾಗಲಿ, ವಿದ್ಯಾವಂತರಾಗಲಿ, ಅವಿದ್ಯಾವಂತರಾಗಲಿ, ಒಟ್ಟು ಎಷ್ಟೇ ಸಮುದಾಯಗಳಿದ್ದರೂ ಮತ್ತು ಎಲ್ಲಿದ್ದರೂ ಅವು ಅಸಂಖ್ಯಾತ ಭಿನ್ನಾಭಿಪ್ರಾಯ ಹೊಂದಿದ್ದರು. ಇಹಲೋಕವು ಸ್ವಯಂ ತಂತಾನೆ ಉಂಟಾಗಿಲ್ಲ ಎಂಬ ವಿಷಯದಲ್ಲಿ ಒಮ್ಮತ ಹೊಂದಿವೆ. ಬದಲು ಅದರ ಒಬ್ಬ ಸೃಷ್ಟಿಕರ್ತನು ಮಾಲೀಕನು ಇದದಾನೆ. ಈ ಅಭಿಪ್ರಾಯ ಕೇವಲ ಈ ಕಾಲದ ಸಮುದಾಯಳವರೆಗೆ ಸೀಮಿತವಲ್ಲ. ಅಲ್ಲದೇ ಯವ ಯಾವ ಕಾಲದ ಇತಿಹಾಸವು ನಮ್ಮ ಮುಂದಿದೆ. ಅವು ತಾರತಮ್ಯವಿಲ್ಲದೆ ಸುರಕ್ಷಿತವಾಗಿದೆ. ಇದರಿಂದ ಯಾವ ಸಮುದಾಯವು ಹೊರತಾಗಿಲ್ಲ. ಈ ಲೋಕವು ಒಬ್ಬ ಸರ್ವಶಕ್ತನ ಸೃಷ್ಟಿಯಾಗಿದೆ.

**ಅಲ್ಲಾಹನ ಮೇಲೆ ವಿಶ್ವಾಸ ಅಂಧಾಭಿಮಾನದ ಪರಿಣಾಮವೇ?**

ಇದೀಗ ಯಾರಿಗಾದರೂ ಈ ಸಂಶಯ ಉಂಟಾದರೆ ಅದು ಕೆಲ ಪಾಶ್ಚಿಮಾತ್ಯ ವಿದ್ವಾಂಸರ ಅಭಿಮತವಾಗಿದೆ. ಲೋಕದಲ್ಲಿ ಕೆಲವು ಇಂತಹ ಸಮುದಾಯಗಳು ಇವೆ. ಅದು ಒಂದು ಸಮುದಾಯದ ನೆಲೆಯಲ್ಲಿ, ಅಲ್ಲಾಹ್ ವಿಶ್ವಾಸದಿಂದ ದೂರವಾಗಿದ್ದಾನೆ. ನಿಸ್ಸಂಶಯವಾಗಿಯೂ ವಿದ್ವಾಂಸರು ಈ ಅಭಿಪ್ರಾಯ ಹೊಂದಿದ್ದಾರೆ. ಅದರ ಮೇಲೆ ಗಾಢವಾಗಿ ಯೋಚಿಸಿದರೆ ತಿಳಿದುಬರುವುದು. ಆ ವಿದ್ವಾಂಸರ ತಪ್ಪಾಭಿಪ್ರಾಯವಾಗಿದೆ. ಅವರು ಪೂರ್ಣ ಸಂಶೋಧನೆಯಿಂದ ಕಾರ್ಯ ಮಾಡಲಿಲ್ಲ. ವಿಶೇಷವಾಗಿ ಅವರಿಗೆ ಇರುವ ತಪ್ಪು ಕಲ್ಪನೆ ಎಂದರೆ ಅವರು ಕೆಲವು ಪುರಾತನ ಬಹುದೇವಾರಾಧನ ಸಮುದಾಯಗಳಿಂದ ಬಹುದೇವರಾಧನೆಯ ವಿಶ್ವಾಸಗಳು ಕೇವಲ ಭಯ ಮತ್ತು ಅಜ್ಞಾನತೆಯಿಂದ ಅಂಧಾಭಿಮಾನಕ್ಕೆ ಗುರಿಯಾಗಿದ್ದಾರೆ ಮತ್ತು ತಪ್ಪು ಅಭಿಪ್ರಾಯ ಹೊಂದಿದ್ದಾರೆ. ಅವರು ತಿಳಿದುಕೊಂಡದ್ದು ಏಕದೇವನ ವಿಶ್ವಾಸ ಎಂಬುದು ಅವರಲ್ಲಿ ಇರಲಿಲ್ಲ ಎಂದು. ಅದಾಗ್ಯೂ ಈ ಮಾತು ಸರ್ವಥಾ ತಪ್ಪಾಗಿದೆ. ನಿಜವೇನೆಂದರೆ ಬಹುದೇವಾರಾಧನೆಯ ವಿಶ್ವಾಸ ನಿಸ್ಸಂಶಯವಾಗಿಯೂ ಅಲ್ಲಾಹನ ವಿಶ್ವಾಸದ ಒಂದು ಭಾಗವಾಗಿದೆಯೇ ಹೊರತು ಮೂಲವಲ್ಲ. ಅಂದರೆ ಬಹುದೇವಾರಾಧನೆಯ ವಿಶ್ವಾಸ ಎಂದಿಗೂ ಅಲ್ಲಾಹನ ಮೇಲೆ ವಿಶ್ವಾಸ ದೂರ ಆಗುವ ಪರಿಣಾಮವಾಗಿರುತ್ತದೆ. ಅಲ್ಲಾಹನ ವಿಶ್ವಾಸ ಪೂರ್ಣ ಮಾಯವಾದಾಗಲೂ ಅಲ್ಲಾಹನ ಅಸ್ತಿತ್ವದ ವಿಶ್ವಾಸ ಪೂರ್ಣ ರೀತಿಯಲ್ಲಿ ಅಳಿದು ಹೋಗುವುದಿಲ್ಲ. ಆದುದರಿಂದ ಲೋಕದ ಇತಿಹಾಸದಲ್ಲಿ ಇಂತಹ ಹಲವು ಉದಾಹರಣೆಗಳಿವೆ. ಒಂದು ಸಮುದಾಯವು ಅಲ್ಲಾಹನ ವಿಶ್ವಾಸದ ಮೇಲೆ ಸ್ಥಿರವಾಗಿದ್ದರೆ ಮತ್ತೆ ನಿಧಾನವಾಗಿ ಬಹುದೇವಾರಾಧನೆಯ ಭಾವನೆಗಳು ಮೂಡಲು ಪ್ರಾರಂಭವಾಗುತ್ತದೆ.

**ಪ್ರವಾದಿಗಳ ವಿಜಯದ ಪುರಾವೆ**

ಯಾವಾಗಲು ಲೋಕದ ಇತಿಹಾಸ ಸುರಕ್ಷಿತವಾಗಿಯೇ ನಾವು ಕಾಣುತ್ತಿದ್ದೇವೆ. ಎಂದೆಂದು ಅಲ್ಲಾಹನ ಮೇಲೆ ವಿಶ್ವಾಸ ತಂದಿರುವವರು, ಅಲ್ಲಾಹನನ್ನು ನಿರಾಕರಿಸುವವರ ಮಧ್ಯೆ ಈ ಸ್ಪರ್ಧೆ ಆದಾಗಲೆಲ್ಲ ಯಾವಾಗಲೂ ವಿಶ್ವಾಸ ತಂದವರ ವಿಜಯವೇ ಆಗಿದೆ.

ಇದರಿಂದ ತಿಳಿದುಬರುವುದೇನೆಂದರೆ ವಿಶ್ವಾಸ ತಂದವರ ಮೇಲೆ ಅಗೋಚರ ಅಭಯವಿರುತ್ತದೆ. ನನ್ನ ಅಭಿಪ್ರಾಯವು ಭಿನ್ನಾಭಿಪ್ರಾಯ ಹೊಂದಿದ ಎಲ್ಲ ಸತ್ಯ ವಿಶ್ವಾಸಿಗಳು ವಿಜಯಗಳಾಗುತ್ತಾರೆಯಂದಲ್ಲ ಏಕೆಂದರೆ ಸಾಮಾನ್ಯ

ಸ್ಥಿತಿಯಲ್ಲಿ ಸೋಲು, ಗೆಲುವು, ದೇವ ನಿಯಮದ ಅಡಿಯಲ್ಲಿರುತ್ತದೆ. ಒಬ್ಬ ಅವಿಶ್ವಾಸಿಯೂ ವಿಜಯೀಯಾಗ ಬಯಸುತ್ತಾನೆ. ಅದಕ್ಕಾಗಿ ಪ್ರಯತ್ನವೇ ಮಾಡುತ್ತಾನೆ. ಒಬ್ಬ ಸತ್ಯ ವಿಶ್ವಾಸಿ ಪ್ರಯತ್ನ ಮಾಡಲಿಲ್ಲವಾದರೂ ಅವನಿಗೆ ವಿಜಯ ದೊರೆಯಬಹುದು. ಸಾಮಾನ್ಯ ಸ್ಥಿತಿಯಲ್ಲಿ ಎಂದೂ ಹೀಗಾಗುವುದಿಲ್ಲ ಬದಲು ಯಶಸ್ವಿಯ ಹಾದಿಯಲ್ಲಿ ನಡೆಯುವವನಿಗೆ ಮಾತ್ರ ವಿಜಯ ದೊರೆಯುವುದು. ಆದುದರಿಂದ ಈ ಜಾಗದಲ್ಲಿ ಲೋಕದ ಸಾಮಾನ್ಯ ಭಿನ್ನಾಭಿಪ್ರಾಯಗಳು ಮತ್ತು ಸ್ಪರ್ಧೆಗಳು ನನ್ನ ದೃಷ್ಟಿಯಲ್ಲಿಲ್ಲ. ಬದಲು ನನ್ನ ತಾತ್ಪರ್ಯದಲ್ಲಿ ಒಬ್ಬ ಸತ್ಯವಂತನು ಅಲ್ಲಾಹನಿಗಾಗಿ ಅಲ್ಲಾಹನ ವತಿಯಿಂದ ನಾನು ನಿಯುಕ್ತಗೊಂಡಿದ್ದೇನೆ ಎಂದು ದಾವೆ ಹೂಡಿದರೆ ಅವಶ್ಯವಾಗಿ ಅವನು ವಿಜಯಿಯಾಗುತ್ತಾನೆ. ಲೋಕದ ಯಾವ ಶಕ್ತಿಯೂ ಅದನ್ನು ತಡೆಯಲು ಸಾಧ್ಯವಿಲ್ಲ. ಆ ಬಗ್ಗೆ ಪವಿತ್ರ ಖುರ್‌ಆನ್ ಹೇಳುತ್ತದೆ. "ಕತ್‌ಬಲ್ಲಾಹು ಲ ಅಗಲಿಬನ್ನ ಅಸವರು ಸೂಲಿ. ಅಂದರೆ, ಅಲ್ಲಾಹನು ಈ ವಿಧಿ ಬರೆದಿಟ್ಟವನು. ನಾನು ಮತ್ತು ನನ್ನ ಪ್ರವಾದಿಯೇ ವಿಜಯಿಯಾಗುವುದು.

**ಸಜ್ಜನರ ಹುತಾತ್ಮರ ಸಾಕ್ಷಿ**

ಅಂತಿಮ ಬೌದ್ಧಿಕ ಪುರಾವೆಯಾಗಿ ನಾನು ಈ ಪ್ರಬಂಧದಲ್ಲಿ ದೇವಾಸ್ತಿತ್ವ ಕುರಿತು ಹೇಳಬಯಸುತ್ತೇನೆ. ಅದು ಸಜ್ಜನರ ಹುತಾತ್ಮರ ಸಂಬಂಧಸಿದ್ದಾಗಿದೆ. ಅಂದರೆ ಈ ತತ್ವದಡಿಯಲ್ಲಿ ಹಲವು ಜನರ ಪ್ರಮಾಣೀಕತೆ ಮಾನವೀಯ ಯೋಗ್ಯವಾಗಿದೆ. ಮತ್ತು ಅವರ ಸಜ್ಜನಿಕೆಯಲ್ಲಿ ಯಾವ ಸಂಶಯವೂ ಇಲ್ಲ. ಅವರು ಸಾಕ್ಷ್ಯ ನೀಡುತ್ತಾರೆ. ನಿಜವಾಗಿಯೂ ನಮಗೆ ಒಬ್ಬ ಪ್ರಭುವಿದ್ದಾನೆ. ಅವನನ್ನು ನಾವು ಇತರ ಅಗೋಚರ ವಸ್ತುಗಳಂತೆಯೇ ಕಂಡಿದ್ದೇವೆ ಮತ್ತು ಗುರುತಿಸುತ್ತೇನೆ.

**ಅಲ್ಲಾಹನ ಮೇಲೆ ವಿಶ್ವಾಸದ ಮಹೋನ್ನತ ಪ್ರಯೋಜನಗಳು**

ಅದಾದ ನಂತರ ನಾನು ದೇವಾಸ್ತಿತ್ವ ಕುರಿತು ಕೆಲವು ಸಾಕ್ಷ್ಯಾಧಾರಗಳನ್ನು ಮಂಡಿಸ ಬಯಸುತ್ತೇನೆ. ಅದು ಅಲ್ಲಾಹನ ಮೇಲೆ ವಿಶ್ವಾಸ ಹೊಂದುವ ಬಗ್ಗೆ ಆಗಿದೆ. ಅದು ಹಲವು ಪ್ರಯೋಜನಗಳು ಒಳಗೊಂಡಿರುತ್ತದೆ. ಅದು ವಿಶ್ವಾಸ ಹೊಂದದೆ ಇನ್ನಾವುದೋ ಮಾರ್ಗದಿಂದ ಸಾಧ್ಯವಿಲ್ಲ.

**ಅಲ್ಲಾಹನ ಮೇಲೆ ವಿಶ್ವಾಸ ಏಕತ್ವ ಮತ್ತು ಸಹೋದರತೆ ಉಂಟು ಮಾಡುವುದು.**

ಅಲ್ಲಾಹನ ಮೇಲೆ ವಿಶ್ವಾಸದ ಪ್ರಥಮ ಪ್ರಯೋಜನ ವಿವರಿಸ ಬಯಸುತ್ತೇನೆ. ಅದೇನೆಂದರೆ ಅಲ್ಲಾಹನ ಭಾವ ಜನರ ಹೃದಯಗಳಲ್ಲಿ ಏಕತ್ವ ಮತ್ತು ಸಹೋದರತೆ ಉಂಟು ಮಾಡುವ ಅತ್ಯಂತ ಉತ್ತಮ ಮಾರ್ಗವಾಗಿದೆ. ಈ ಭಾವನೆಗಳು ಮಾನವ ಸಂತಾನದ ಅಬಿವೃದ್ಧಿಗಾಗಿ ಅತ್ಯಂತ ಅವಶ್ಯ ಹಾಗೂ ಪ್ರಯೋಜನಕಾರಿಯಾಗಿದೆ. ಈ ಜಾಗದಲ್ಲಿ ಯಾವೊಬ್ಬ ವ್ಯಕ್ತಿಯ ಮನದಲ್ಲಿ ಈ ಸಂಶಯ ಹುಟ್ಟಬಹುದು. ಅಲ್ಲಾಹನನ್ನು ನಿರಾಕರಿಸುವವರು ಸಹ ಕೆಲವೊಮ್ಮೆ ಇತರರೊಡನೆ ಪ್ರೀತಿಯಿಂದ ವರ್ತಿಸುತ್ತಾರೆ ಮತ್ತು ಬಲಹಿತ ಕಾರ್ಯಗಳಲ್ಲಿ ಆಸಕ್ತಿ ವಹಿಸುತ್ತಾರೆ ಆದ್ದರಿಂದ ತಿಳಿದುಬರುವುದೇನೆಂದರೆ ಈ ಭಾವನೆಗಳನ್ನು ಉಂಟುಮಾಡಲು ಅಲ್ಲಾಹನ ಮೇಲೆ ವಿಶ್ವಾಸ ಹೊಂದುವುದು ಅವಶ್ಯವಲ್ಲ. ಅದರ ಉತ್ತರವೇನೆಂದರೆ ನಾವು ಅಲ್ಲಾಹನ ಮೇಲೆ ವಿಶ್ವಾಸ ತರದ ಹೊರತು ಈ ಭಾವನೆಗಳು ಇರುವುದಿಲ್ಲವೆಂದು ಪ್ರತಿಪಾದಿಸಿಲ್ಲ. ಬದಲು ಸ್ವಯಂ ನಾವು ಈ ಮಾತನ್ನು ಒಪ್ಪುತ್ತೇವೆ. ಹೆಚ್ಚು ಕಡಿಮೆ ಹಲವೂ ವಸ್ತುಗಳು ಇದಕ್ಕೆ ಕಾರಣವಾಗುತ್ತವೆ. ಆದರೆ ನಾವು ಅವಶ್ಯವಾಗಿ ಹೇಳುವೆವು. ಎಲ್ಲ ಮಾನವ ಕುಲಗಳಲ್ಲಿ ಸಾಮೂಹಿಕವಾಗಿ ಪರಿಪೂರ್ಣ ರೂಪದಲ್ಲಿ ಈ ಭಾವನೆಗಳು ಕೇವಲ ಅಲ್ಲಾಹನ ಮೇಲೆ ವಿಶ್ವಾಸ ಹೊಂದುವ ಪರಿಣಾಮವಾಗಿಯೇ ಹುಟ್ಟಬಹುದಾಗಿದೆ. ಮತ್ತು ಉಳಿದ ಮಾರ್ಗಗಳು ಇದರ ವಿರುದ್ಧ ನಿಲ್ಲಲಾರದು.

**ಅಲ್ಲಾಹನ ಮೇಲಿನ ವಿಶ್ವಾಸ ದುಷ್ಕರ್ಮಗಳಿಂದ ತಡೆಯುತ್ತದೆ ಮತ್ತು ಸತ್ಕರ್ಮದೆಡೆ ಸೆಳೆಯುತ್ತದೆ.**

ಅಲ್ಲಾಹನ ಮೇಲೆ ವಿಶ್ವಾಸ ತರುವ ಎರಡನೆಯ ಮುಖ್ಯ ಪ್ರಯೋಜನವೆಂದರೆ ಅಲ್ಲಾಹನ ಮೇಲೆ ವಿಶ್ವಾಸ ತರುವುದರಿಂದಲೂ ಮನುಷ್ಯನು ದುಷ್ಕರ್ಮಗಳಿಂದ ದೂರ ಉಳಿಯುತ್ತಾನೆ ಏಕೆದರೆ ಅಲ್ಲಾಹನ ಮೇಲೆ ವಿಶ್ವಾಸ ತಂದವನು ಯಾರೇ ಆಗಲಿ ಈ ಮಾತಿನ ಮೇಲೆಯೂ ದೃಡ ವಿಶ್ವಾಸ ಹೊಂದಿರುತ್ತಾನೆ. ನಾನು ಕೆಟ್ಟ ಕೆಲಸ ಮಾಡಿದರೆ ಅಲ್ಲಾಹನು ನನ್ನಿಂದ ಅಸಂತುಷ್ಟನಾಗುವನು. ಮತ್ತು ಅದರ ಪರಿಣಾಮವಾಗಿ ನನಗೆ ಶಿಕ್ಷೆ ಅನುಭವಿಸಬೇಕಾಗುವುದು. ಕೆಟ್ಟ ಕೆಲಸದಿಂದ ದೂರ ಉಳಿದರೆ ಅಲ್ಲಾಹನು ನನ್ನಿಂದ ಸಂತುಷ್ಟನಾಗುವನು ಮತ್ತು ನನಗೆ ಅವನ ಅನುಗ್ರಹ ದೊರೆಯುವುದು. ಈ ಭಾವನೆಯಿಂದ ಅಲ್ಲಾಹನ ಮೇಲೆ ವಿಶ್ವಾಸ ತಂದ ಪ್ರತಿಯೊಬ್ಬನು ನಿಸ್ಸಂಶಯವಾಗಿ ಇತರರಿಂದ ಹೆಚ್ಚು ಪಾಪಗಳಿಂದ ರಕ್ಷಿಸಲ್ಪಡುವನು.

**ಅಲ್ಲಾಹನ ಮೇಲೆ ವಿಶ್ವಾಸ ವಸ್ತುಗಳ ವಸ್ತು ಸ್ತಿತಿಗಳನ್ನು ಕಂಡು ಹಿಡಿಯಲು ಸಹಾಯಕವಾಗುವುದು.**

ಅಲ್ಲಾಹನ ಮೇಲೆ ವಿಶ್ವಾಸ ತಂದ ವ್ಯಕ್ತಿಯ ಮನವು ಈ ದೃಢತೆಯಿಂದ ತುಂಬಿರುತ್ತದೆ. ಲೋಕದ ಪ್ರತಿ ಒಂದು ವಸ್ತು ನನ್ನ ಪ್ರಭುವಿನ ಸೃಷ್ಟಿಯಾಗಿದೆ. ಮತ್ತು ಅಲ್ಲಾಹನು ಪ್ರತಿ ಒಂದು ವಸ್ತುವನ್ನು ಒಂದು ವಿಶೇಷವಾದ ಉದ್ದೇಶಕ್ಕಾಗಿ ಸೃಷ್ಟಿಸಿರುವನು. ಆದುದರಿಂದ ಲೋಕದ ಯಾವ ವಸ್ತು ಸಹ ನಿರುಪಯುಕ್ತ ಹಾಗೂ ನಿರರ್ಥಕವಲ್ಲ ಬದಲು ತನ್ನ ತನ್ನ ಸೃಷ್ಟಿಯ ಉದ್ದೇಶವನ್ನು ಹೊಂದಿ ತನ್ನ ಕಾರ್ಯಗಳನ್ನು ನಿರ್ವಹಿಸುತ್ತಿದೆ. ಇದರಿಂದ ವಸ್ತುಗಳ ವಸ್ತುಸ್ಥಿತಿ ಕಂಡುಹಿಡಿಯಲು ಮನುಷ್ಯರಲ್ಲಿ ಒಂದು ವಿಶೇಷವಾದ ಕುತೂಹಲ ಉಂಟು ಮಾಡುತ್ತದೆ. ಮತ್ತು ಒಂದು ಭರವಸೆಯನ್ನು ಉಂಟು ಮಾಡುತ್ತದೆ. ಅದು ಇದರ ಹೊರತುಪಡೆಯಲಾಗದು.

**ಅಲ್ಲಾಹನ ಮೇಲೆ ವಿಶ್ವಾಸ ಮನವನ್ನು ತಣಿಸುತ್ತದೆ.**

ಅಲ್ಲಾಹನ ಮೇಲೆ ವಿಶ್ವಾಸದ ಐದನೆಯ ಮುಖ್ಯ ಪ್ರಯೋಜನೆ ಏನೆಂದರೆ ಅದರಿಂದ ಮನುಷ್ಯನ ಮನವು ಒಂದು ರೀತಿಯ ಸಂತೃಪ್ತಿ ಪಡೆಯುವುದು. ಈ ಸಂತೃಪ್ತಿಯೂ ಜೀವನದ ಎಲ್ಲ ಭಾಗಗಳಲ್ಲಿ ಸಹಕಾರಿಯಾಗುವುದು.

**ಅಲ್ಲಾಹನ ಮೇಲೆ ವಿಶ್ವಾಸದಿಂದ ನೈತಿಕ ಮಟ್ಟ ಸುಧಾರಿಸುವುದು.**

ಅಲ್ಲಾಹನ ಮೇಲೆ ವಿಶ್ವಾಸ ಹೊಂದುವ ಆರನೆಯ ಮುಖ್ಯ ಪ್ರಯೋಜನವೆಂದರೆ ಅಲ್ಲಾಹನ ಮೇಲೆ ವಿಶ್ವಾಸ ಹೊಂದುವುದರಿಂದ ಲೋಕದಲ್ಲಿ ನೈತಿಕ ಮಟ್ಟ ಸ್ಥಾಪಿತವಾಗುವುದು. ಅದು ಅಲ್ಲಾಹನ ಮೇಲೆ ವಿಶ್ವಾಸ ಹೊಂದದಿರಲು ಸಾಧ್ಯ. ಏಕೆಂದರೆ ಮನುಷ್ಯನು ಒಬ್ಬ ಸರ್ವಶಕ್ತನ ಸೃಷ್ಟಿಯಾಗಿದ್ದಾನೆ. ಹೀಗಿರುವಾಗ ಮನುಷ್ಯನಿಗೆ ಆ ಸರ್ವಶಕ್ತನಲ್ಲಿ ನಂಬಿಕೆ ಹೊಂದದೆ ಯಾರೂ ಸಹ ಮಾದರಿಯಾಗಲಾರರು. ಆದುದರಿಂದ ಆ ಪ್ರಭುವಿನ ಮಾದರಿ ಹೊರತಾಗಿ ಬೇರೆ ಮಾದರಿ ಇರಲಾರದು. ಅವನು ತನ್ನಲ್ಲಿ ತನ್ನ ಸೃಷ್ಟಿಕರ್ತ ಹಾಗೂ ಮಾಲೀಕನ ಗುಣಗಳನ್ನು ಅಳವಡಿಸಿಕೊಳ್ಳದೇ ನಿರ್ವಾಹವಿರುವುದಿಲ್ಲ. ಆದುದರಿಂದ ಹಝ್ರತ್ ರಸೂಲುಲ್ಲಾಹ್(ಸ) ಹೇಳುತ್ತಾರೆ. **ತಖಲ್ಲಖು ಬಿ ಅಖ್ಲಾಖಿಲ್ಲಾಹ್** ಅಂದರೆ "ಓ ಜನರೇ! ನೀವು ತಮ್ಮ ಆಚಾರಗಳನ್ನು ಅಲ್ಲಾಹನ ಆಚಾರಗಳಂತೆ ರೂಪಿಸಿಕೊಳ್ಳಿ."

*********************

**ದೇವನು ತನಗೆ ನಿಷ್ಠರಾದವರೊಂದಿಗೆ ವರ್ತಿಸುವ ರೀತಿ**

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ:

"ದೇವನು ಯಥಾರ್ಥವಾಗಿಯೂ ಬಹಳ ಬಲಿಷ್ಠನೂ ಶಕ್ತಿ ಸಾಮರ್ಥ್ಯಗಳನ್ನು ಹೊಂದಿದವನೂ ಆಗಿದ್ದಾನೆ. ಅವನ ಕಡೆಗೆ ಪ್ರೇಮ ಮತ್ತು ನಿಷ್ಠೆಯಿಂದ ಬಾಗುವವರು ಎಂದೂ ನಾಶಗೊಳಿಸಲ್ಪಡಲಾರರು. ಶತ್ರು ಹೀಗೆ ಹೇಳುತ್ತಾನೆ: "ನಾನು ನನ್ನ ಕುತಂತ್ರಗಳಿಂದ ಅವರನ್ನು ನಾಶಗೊಳಿಸುವೆನು" ಮತ್ತು ದುಷ್ಟಭಾವನೆಗಳನ್ನು ಹೊಂದಿರುವವನು ಅವರನ್ನು ನಜ್ಜುಗುಜ್ಜಾಗಿಸಲು ನಿರ್ಧರಿಸುತ್ತಾನೆ. ಆದರೆ ದೇವನು ಹೀಗೆ ಹೇಳುತ್ತಾನೆ: "ಎಲವೋ ಮೂರ್ಖ, ನೀನು ನನ್ನ ವಿರುದ್ಧ ಹೋರಾಡಬಲ್ಲೆಯಾ? ನನಗೆ ಪ್ರಿಯನಾದವನನ್ನು ನೀನು ಅಪಮಾನಕ್ಕೊಳಪಡಿಸಬಲ್ಲೆಯಾ?" ವಾಸ್ತವಿಕ ಸಂಗತಿಯೇನೆಂದರೆ, ಆಕಾಶದಲ್ಲಿ ನಿರ್ಧಾರಿತವಾಗದೆ ಯಾವುದೇ ಘಟನೆ ಭೂಮಿಯಲ್ಲಿ ಆಗಲಾರದು. ಲೋಕದಲ್ಲಿ ಯಾವುದೇ ಕೈಯು ಆಕಾಶದಲ್ಲಿ ಅದಕ್ಕೆ ಚಾಚಲು ವಿಧಿಸಲಾದ ಪರಿಧಿಗಿಂತ ಹೆಚ್ಚಿನ ದೂರಕ್ಕೆ ಚಾಚಲಾರದು. ಆದುದರಿಂದ ದೌರ್ಜನ್ಯದ ಯೋಜನೆಗಳನ್ನು ಹಮ್ಮಿಕೊಳ್ಳುವವರು ತಿಳಿಗೇಡಿಗಳಾಗಿದ್ದಾರೆ.ಅವರು ತಮ್ಮ ದುಷ್ಟ ಮತ್ತು ನಿಂದಾರ್ಹವಾದ ತಂತ್ರಗಳನ್ನು ಯೋಜಿಸುವಾಗ ಆ ಮಹತ್ತಾದ ಶಕ್ತಿಶಾಲಿ ದೇವನನ್ನು ನೆನಪಿನಲ್ಲಿಟ್ಟುಕೊಳ್ಳುವುದಿಲ್ಲ. ಅವನ ನಿರ್ಧಾರಕ್ಕೆ ಹೊರತಾಗಿ ಒಂದು ಎಲೆ ಸಹ ಬೀಳಲಾರದು. ಆದುದರಿಂದ ತಮ್ಮ ನಿರ್ಧಾರಗಳನ್ನು ಈಡೇರಿಸಿಕೊಳ್ಳುವುದರಲ್ಲಿ ಅವರು ಯಾವಾಗಲೂ ಪರಾಜಿತರೂ ಅಪಮಾನಿತರೂ ಆಗುತ್ತಾರೆ. ಅವರ ದುಷ್ಕೃತ್ಯಗಳಿಂದ ಸತ್ಯವಂತರಿಗೆ ಯಾವುದೇ ಹಾನಿಯುಂಟಾಗುವುದಿಲ್ಲ. ಅದಕ್ಕೆ ಪ್ರತಿಯಾಗಿ ದೇವನ ಅನೇಕ ದೃಷ್ಟಾಂತಗಳು ಪ್ರಕಟವಾಗುತ್ತವೆ ಮತ್ತು ಜನರಿಗೆ ದೇವನ ಬಗ್ಗೆ ಜ್ಞಾನ ವರ್ಧಿಸುತ್ತದೆ. ಶಕ್ತಿಶಾಲಿಯೂ ಸರ್ವಸಮರ್ಥನೂ ಆದ ದೇವನು ಈ ಕಣ್ಣುಗಳಿಗೆ ಕಾಣಿಸಿಕೊಳ್ಳುವುದಿಲ್ಲವಾದರೂ ಅವನು ತನ್ನ ಅದ್ಭುತ ದೃಷ್ಟಾಂತಗಳಿಂದ ತನ್ನ ಇರುವಿಕೆಯನ್ನು ಬಹಿರಂಗಪಡಿಸುತ್ತಾನೆ.

***(ಕಿತಾಬುಲ್ ಬರ‍್ರಿಯಾ – ಮುಖದ್ದಿಮ; ರೂಹಾನೀ ಖ಼ಝ಼ಾಇನ್ ಸಂಪುಟ 13, ಪುಟ 19 – 20)***

# ಅಲ್ಲಾಹನ ಗುಣಗಳು – ಪವಿತ್ರ ಖುರ್‌ಆನ್, ನಬಿವರ್ಯರ ಹದೀಸ್ ಹಾಗೂ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಅಧ್ಯಾಪನೆಗಳ ಪ್ರಕಾಶದಲ್ಲಿ:–

**ಮಾಮೂನ್ ಅರ್‌ರಶೀದ್ ತಬ್ರೇಝ್, ಮುರಬ್ಬಿ ಸಿಲ್‌ಸಿಲ, ತಾರೀಖ್ ವಿಭಾಗ ಖಾದಿಯಾನ್**

ಅಲ್ಲಾಹನು ತನ್ನ ಗುಣಗಳ ಪರಿಚಯ ಸ್ವಯಂ ಪವಿತ್ರ ಖುರ್‌ಆನಿನಲ್ಲಿ ಹೀಗೆ ನೀಡಿರುತ್ತಾನೆ: **"ವಲ್ಲಾಹಿಲ್ ಅಸ್ಮಾಉಲ್‌ಹುಸ್‌ನ ಫದ್‌ಊಹು ಬಿಹಾ. ವಝುರುಲ್ಲಝೀನ ಯುಲ್‌ಹಿದೂನ ಫೀ ಅಸ್ಮಾಇಹೀ. ಸಯಜ್‌ಝೂನ ಮಾ ಕಾನೂ ಯಅ್‌ಮಲೂನ್."** (ಅಲ್‌ಅರಾಫ್: 181) ಅತ್ಯಾಕರ್ಷಕವಾದ ಗುಣನಾಮಗಳು ಅಲ್ಲಾಹನಿಗೆ ಮಾತ್ರ ಇವೆ. ಆದುದರಿಂದ ಅವುಗಳ ಮೂಲಕ ನೀವು ಅವನನ್ನು ಕರೆದು ಪ್ರಾರ್ಥಿಸಿರಿ. ಅವನು ಗುಣನಾಮಗಳ ಬಗ್ಗೆ ತಪ್ಪು ತಿಳಿದುಕೊಳ್ಳುವವರನ್ನು ಬಿಟ್ಟುಬಿಡಿರಿ, ಅವರ ಕೃತ್ಯಕ್ಕೆ ಅವರಿಗೆ ಪ್ರತಿಫಲ ನೀಡಲಾಗುವುದು.

ಅಲ್ಲಾಹನು ತನ್ನ ಗುಣನಾಮಗಳ ಜ್ಞಾನವನ್ನು ಮನುಷ್ಯನಿಗೆ ಸ್ವಯಂ ತನ್ನೊಳಗೆ ಜನ್ಮ ತಾಳುವಂತೆ ಮಾಡಿಕೊಳ್ಳುವುದಕ್ಕೆ ನೀಡಿರುವನು. ಹದೀಸಿನಲ್ಲಿ ವರದಿಯಾಗಿದೆ, ಅಲ್ಲಾಹನ 99 ಗುಣನಾಮಗಳಿವೆ ಯಾರು ತನ್ನ ಜೀವನದಲ್ಲಿ ಅದನ್ನು ಅಳವಡಿಸಿಕೊಳ್ಳುವನೋ ಮತ್ತು ಅದನ್ನು ಪ್ರಕಟಪಡಿಸಲು ಇಚ್ಛಿಸುವನೋ ಅವನು ಸ್ವರ್ಗಕ್ಕೆ ಪ್ರವೇಶಿಸುವನು. ಆ ಗುಣನಾಮಗಳು ಕೆಳಗಿನಂತಿವೆ:

1. **ಅರ್ರಹ್ಮಾನ್:** ಪವಿತ್ರ ಖುರ್‌ಆನಿನ ಮೊದಲ ವಚನ **"ಬಿಸ್ಮಿಲ್ಲಾಹಿರ್ರಹ್ಮಾನ್ ನಿರ್ರಹೀಮ್"**ನಲ್ಲಿ ಇದನ್ನು ಪ್ರಸ್ತಾಪಿಸಲಾಗಿದೆ. ಈ ನಾಮಗುಣವು ವ್ಯಕ್ತಪಡಿಸುವುದೇನೆಂದರೆ ಅಲ್ಲಾಹನು ಮನುಷ್ಯನಿಗೆ ಬೇಡದಿದ್ದ ವಸ್ತುಗಳು ಸಹ ನೀಡಿದವನಾಗಿದ್ದಾನೆ. ಅದಕ್ಕಾಗಿ ಯಾವ ಶರತ್ತು ಒಡ್ಡಲಿಲ್ಲ. ಉದಾಹರಣೆಗೆ ನೀರು, ಬೆಳಕು, ವಾಯು ಮುಂತಾದವು ಎಲ್ಲ ಮಾನವ ಕುಲಕ್ಕೆ ಸಮಾನ ರೂಪದಲ್ಲಿ ಪ್ರಯೋಜನ ನೀಡುತ್ತಿವೆ. ರಹ್ಮಾನ್ ನಾಮಗುಣದನ್ವಯ ಅವನು ಸೃಷ್ಟಿಗೆ ಜಾತಿ, ವರ್ಣ ಭೇದವಿಲ್ಲದೆ ಪ್ರಯೋಜನ ನೀಡುತ್ತಿದ್ದಾನೆ.
2. **ಅರ್ರಹೀಮ್:** ಮೊದಲ ವಚನದಲ್ಲಿಯೇ: ಅರ್ರಹೀಮ್**"** ನಾಮಗುಣದ ವಿವರ ದೊರೆಯುತ್ತಿದೆ ಅದರ ಅರ್ಥ ಸತ್ಕರ್ಮಗಳನ್ನು ವ್ಯರ್ಥಗೊಳಿಸಲಾಗುವುದು, ತನ್ನ ಸೃಷ್ಟಿಗೂ ತನ್ನ ಕರುಣೆಯಿಂದ ಫಲಗಳನ್ನು ದಯಪಾಲಿಸುವನು.
3. **ಅಲ್–ಮಲಿಕು:** ಎಲ್ಲ ಪ್ರಪಂಚಗಳ ಮೇಲೆ ಎಲ್ಲ ವಸ್ತುಗಳ ಹಾಗೂ ಕಣದ ಮೇಲೂ ಅವನ ಪ್ರಭುತ್ವವಿದೆ. ಅಲ್ಲದೆ ಎಲ್ಲ ಸೃಷ್ಟಿಗಳ ಮೇಲೆ, ಸೃಷ್ಟಿಸಲು ಮತ್ತು ಅದನ್ನು ಕಾಪಾಡಲು ಶಕ್ತನಾಗಿದ್ದಾನೆ.
4. **ಅಲ್–ಖುದ್ದೂಸ್:** ಎಲ್ಲ ದೋಷಗಳಿಂದ ಮುಕ್ತ ಪರಿಶುದ್ಧನು. ಮನುಷ್ಯನ ಭಾವನೆಗಳಿಗೆ ಸಿಲುಕದಂತಹ, ಅವನೆಡೆ ಸೆಡೆಯಲ್ಪಡುವಂತಹ ಪರಿಶುದ್ಧನು.
5. **ಅಸ್ಸಲಾಮು:** ಎಲ್ಲ ನಷ್ಟಗಳಿಂದ ಸುರಕ್ಷಿತಗೊಳಿಸುವವನು. ಸಮಾಧಾನ ಕೇಂದ್ರ ಶಾಂತಿ ಸಮಾಧಾನ ನೀಡುವವನು.

ಇದು ಮೂಲಧಾತು ಆಗಿದೆ ಸದರ ಅರ್ಥ ಸುಖವಾಗಿದೆ ಆದರೆ ಅಲ್ಲಾಹನ ಗುಣನಾಮಗಳಲ್ಲಿ ಇದು ಸಾಲಿಮ್ ಎಂಬರ್ಥದಲ್ಲಿ ಬರುತ್ತದೆ. ಅಂದರೆ ಪ್ರತಿಯೊಂದು ನ್ಯೂನ್ಯತೆಗಳಿಂದ ಹಾಗೂ ನಷ್ಟಗಳಿಂದ ಸುರಕ್ಷಿತವಾಗಿರುವವನು.

6. **ಅಲ್‌ಮುಮಿನ್:** ತನ್ನ ವಾಗ್ದಾನಗಳಲ್ಲಿ ಸತ್ಯಾವಂತ. ತನ್ನ ಶಿಕ್ಷೆಯಿಂದ ಮತ್ತು ಎಲ್ಲ ರೀತಿಯ ದುಃಖ ಹಾಗೂ ತೊಂದರೆಗಳಿಂದ ಶಾಂತಿ ನೀಡುವವನು. ತನ್ನ ವೈಶಿಷ್ಟ್ಯದಲ್ಲಿ ಹಾಗು ಏಕದೈವತ್ವದ ಸಾಕ್ಷ್ಯಗಳನ್ನು ಖಾಯಮ್‌ಗೊಳಿಸುವನು. ಎಲ್ಲಾ ಸತ್ಯಾಂಶಗಳನ್ನು ಒಪ್ಪುಕೊಳ್ಳುವವನು.
7. **ಅಲ್ ಮುಹೈಮಿನ್:** ಎಲ್ಲರ ಕೃತ್ಯಗಳನ್ನು ಸಂರಕ್ಷಿಸುವವನು ಮತ್ತು ತಿಳಿದುಕೊಂಡಿರುವನು ಮತ್ತು ಸಾಕ್ಷಿ ನೀಡುವವನು.
8. ಅಲ್ ಅಝೀಝ್: ಅದ್ಭುತ. ಎಲ್ಲರ ಮೇಲೆ ವಿಜಯಶಾಲಿ. ಕಣ ಕಣದ ಮೇಲೆ ತನ್ನ ಸ್ವಾಧಿನತೆ ಸಾಧಿಸುವವನು. ಗೌರವಾನ್ವಿತಗೊಳಿಸುವವನು. ಅವನ ಬಳಿ ಯಾವ ಸಮಸ್ಯೆಯು ಅಸಾಧ್ಯವಲ್ಲ. ಆತನ ಸಾಮರ್ಥ್ಯದಲ್ಲಿ ಯಾವುದೇ ನ್ಯೂನ್ಯತೆ ಇಲ್ಲ.
9. **ಅಲ್‌ಜಬ್ಬಾರ್:** ಅಲಂಕರಿಸುವವ. ಮಾನವನ ತಪ್ಪುಗಳನ್ನು ಸರಿಪಡಿಸುವವನು. ದರ್ಪವುಳ್ಳವ.

ಜಬ್ಬಾರ್ ಎಂಬುದು ಅತಿಶಯೋಕ್ತಿಯ ಧಾತುರೂಪವಾಗಿದೆ ಅದು ಜಬರ್‌ನಿಂದ ಬಂದಿದೆ. ಜಬರ್ ಎಂದರೆ ಮುರಿದು ಹೋಗಿರುವುದನ್ನು ಪುನಃ ಜೋಡಿಸುವವನು ಮತ್ತು ಯಾವೊಬ್ಬನನ್ನು ಒತ್ತಾಯಪೂರ್ವಕವಾಗಿ ಕೆಲಸ ಮಾಡಿಸುವುದು.

10. **ಅಲ್‌ಮುತಕಬ್ಬಿರ್:** ಎಲ್ಲಾ ಸೃಷ್ಟಿಗಳ ನ್ಯೂನ್ಯತೆಗಳಿಂದ ಹಾಗೂ ಗುಣಗಳಿಂದ ಪರಿಶುದ್ಧನು. ಎಲ್ಲಾ ರೀತಿಯ ಚಿಕ್ಕ ಹಾಗೂ ದೊಡ್ಡ ಶಿರ್ಕ್‌ಗಳಿಂದ ಆತನು ಪರಿಶುದ್ಧನು ಮತ್ತು ಉತ್ತುಂಗನು. ಶ್ರೇಷ್ಠನು ಹಾಗೂ ಗೌರವಾನ್ವಿತನೂ, ಯಜಮಾನನೂ ಆಗಿದ್ದಾನೆ.
11. **ಅಲ್‌ಖಾಲಿಕ್:** ಪ್ರತಿಯೊಂದನ್ನು ಸಂಪೂರ್ಣ ಕೌಶಲ್ಯದಿಂದ ಊಹಿಸುವವನು. ಈ ಬ್ರಹ್ಮಾಂಡದಲ್ಲಿರುವ ಎಲ್ಲ ವಸ್ತುಗಳನ್ನು ಸೃಷ್ಟಿಸುವವನು.
12. **ಅಲ್‌ಬಾರಿ:** ಪ್ರತಿಯೊಂದು ವಸ್ತುವಿನಿಂದ ಉತ್ತಮ ಸಾರಾಂಶವನ್ನು ಬೇರ್ಪಡಿಸುವವನು. ಅಸ್ತಿತ್ವದಲ್ಲಿಲ್ಲದ್ದನ್ನು ಅಸ್ತಿತ್ವಕ್ಕೆ ತರುವವನು. ಶೂನ್ಯತೆಯನ್ನು ಅಸ್ತಿತ್ವಕ್ಕೆ ತರುವವನು.
13. **ಅಲ್‌ಮುಸವ್ವಿರ್:** ಸೃಷ್ಟಿಯ ಬೇರೆ ಬೇರೆ ರೀತಿಯ ಚಹರೆ ಸೃಷ್ಟಿಸುವವನು. ರೂಪ ನೀಡುವವನು. ಆಕಾರ ನೀಡುವವನು.

ಖಾಲಿಖ್, ಬಾರಿ ಮತ್ತು ಮುಸವ್ವಿರ್ ಉರ್ದು ಭಾಷೆಯಲ್ಲಿ ವೈಶಲ್ಯತೆ ಇಲ್ಲದಿರುವ ಕಾರಣದಿಂದ ಏಕಾರ್ಥ ಪದ ಎಂದು ತಿಳಿದುಕೊಳ್ಳುತ್ತಾರೆ ಮತ್ತು ಮೂರನ್ನು ಹುಟ್ಟುವುದು ಎಂದು ಒಂದೇ ಅರ್ಥದಲ್ಲಿ ಪರಿಗಣಿಸುತ್ತಾರೆ. ಆದರೆ ಇದು ಹುಟ್ಟಿನ ಮೂರು ಬೇರೆ ಬೇರೆ ಪರಿಸ್ಥಿತಿಗಳನ್ನು ವ್ಯಕ್ತಗೊಳಿಸುವುದಕ್ಕೆ ಈ ಗುಣಗಳನ್ನು ಉಪಯೋಗಿಸಲಾಗುತ್ತದೆ. ಉದಾಹರಣೆಗೆ: ಖಲಕ ಎಂಬ ಪದವು ಹುಟ್ಟುವುದಕ್ಕು ಮುಂಚೆ ಅದರ ಇರುವಿಕೆಯನ್ನು ಊಹಿಸಲಾಗುತ್ತದೆ. ಮತ್ತು ಬಾರಿ ಎಂಬ ಪದ ಕೆತ್ತಿ ಸೃಷ್ಟಿಯನ್ನು ಒಂದು ಸುಂದರವಾದ ಆಕಾರ ನೀಡುವ ಅರ್ಥಗಳಲ್ಲಿ ಉಪಯೋಗಿಸಲಾಗುತ್ತದೆ. ಇದು ಹುಟ್ಟಿನ ಎರಡನೇಯ ಹಂತವಾಗಿದೆ. ಮತ್ತೆ ಮುಸವ್ವಿರ್ ಎಂಬ ಪದವು ಕೊನೆಯ ಹಂತದ ಅರ್ಥದಲ್ಲಿ ಉಪಯೋಗಿಸಲಾಗುತ್ತದೆ ಅಂದರೆ ಭಾವಚಿತ್ರ ಬಿಡಿಸುವುದು ಮತ್ತು ಒಂದು ಆಕಾರ ನೀಡುವ ಅರ್ಥದಲ್ಲಿ ವ್ಯಕ್ತವಾಗುತ್ತದೆ.

ಕ್ರಮ ಸಂಖ್ಯೆ 5 ರಿಂದ 12ರ ವರೆಗಿರುನ ಗುಣನಾಮಗಳ ಬಗ್ಗೆ ಪವಿತ್ರ ಖುರ್‌ಆನಿನ ಸೂರಃ ಹಶರ್‌ನ ಕೊನೆಯಲ್ಲಿ ಹೀಗೆ ಬರುತ್ತದೆ: **ಹುವಲ್ಲಾಹುಲ್ಲಝಿ ಲಾ ಇಲಾಹ ಇಲ್ಲಾ ಹುವ. ಅಲ್‌ಮಲಿಕುಲ್ ಖುದ್ದೂಸು ಸ್ಸಲಾಮುಲ್ ಮುಮಿನುಲ್ ಮುಹೈಮಿನುಲ್ ಅಝೀಝುಲ್ ಜಬ್ಬಾರುಲ್ ಮುತಕಬ್ಬಿರ್. ಸುಬ್‌ಹಾನಲ್ಲಾಹಿ ಅಮ್ಮಾ ಯುಶ್ರಿಕೂನ್.**
**ಹುವಲ್ಲಾಹುಲ್ ಖಾಲಿಖುಲ್ ಬಾರಿಯುಲ್ ಮುಸವ್ವಿರು ಲಹುಲ್ ಅಸ್ಮಾಉಲ್ ಹುಸ್ನ. ಯುಸಬ್ಬಿಹು ಲಹೂ ಮಾಫಿಸ್ಸಮಾವಾತಿ ವಲ್‌ಅರ್‌ಝ್. ವಹುವಲ್ ಅಝೀಝುಲ್ ಹಕೀಮ್.** (ಅಲ್‌ಹಶರ್: 23–24)

14. **ಅಲ್‌ಗಫ್ಫಾರ್:** ಬಹಳ ಕ್ಷಮಿಸುವನು. ಪಾಪಗಳನ್ನು ಮುಚ್ಚುವವನು.

ಪವಿತ್ರ ಖುರ್‌ಆನಿನಲ್ಲಿ ಅಲ್ಲಹನು ಹೀಗೆಂದಿರುವನು: **ರಬ್ಬಿಸ್ಸಮಾವಾತಿ ವಲ್ ಅರ್‌ಝಿ ವಮಾ ಬೈನಹುಮಲ್ ಅಝೀಝುಲ್ ಗಫ್ಫಾರ್** (ಸಾದ್: 67) ಅಂದರೆ ಅವನು ಆಕಾಶಗಳ, ಭೂಮಿಯ ಮತ್ತು ಅವುಗಳ ಮಧ್ಯೆ ಇರುವ ಎಲ್ಲವುಗಳ ಪ್ರಭು. ಅವನು ಪ್ರತಾಪಶಾಲಿಯೂ ಕ್ಷಮಾಶೀಲನೂ ಆಗಿದ್ದಾನೆ.

15. **ಅಲ್‌ಖಹ್ಹಾರ್:** ಸಂಪೂರ್ಣ ಪ್ರಾಬಲ್ಯ ಇರಿಸಿಕೊಂಡಿರುವವನು. ಅಧಿಕಾರಿ.

ಖಹರ ಎಂಬ ಪದದ ಅರ್ಥ ಅರಬಿ ಭಾಷೆಯಲ್ಲಿ ಪ್ರಾಬಲ್ಯ ಹಾಗೂ ಶಕ್ತಿ ಎಂದಿದೆ. ಖಾಹಿರದ ಅರ್ಥ ಜಯಶಾಲಿ ಹಾಗೂ ಶಕ್ತಿಶಾಲಿ ಎಂದಿದೆ. ಅಲ್‌ಖಾಹಿರ ಇದು ಅಲ್ಲಾಹನ ಗುಣನಾಮವಾಗಿದೆ ಅದರ ಅರ್ಥ ಅಲ್ಲಾಹನ ಪರಿಶುದ್ಧ ಅಸ್ತಿತ್ವವು ಎಲ್ಲರ ಮೇಲೆ ಜಲಶಾಲಿ ಆಗಿದೆ. ಅಲ್‌ಖಹ್ಹಾರ್ ಅಲ್‌ಖಾಹಿರ್‌ನ ಅತಿಶಯೋಕ್ತಿ ಧಾತುರೂಪವಾಗಿದೆ. ಪವಿತ್ರ ಖುರ್‌ಆನಿನಲ್ಲಿ ಅಲ್‌ಖಾಹಿರ್ ಎಂಬ ಪದದ ಅರ್ಥವಿದೆ. ಅಲ್ಲಾಹನು ಹೀಗೆ ಹೇಳುತ್ತಾನೆ: **ಯಾಸಾಹಿಬಿಸ್ಸಿಜ್‌ನಿನ್ ಅ ಅರ್‌ಬಾಬುಮ್ಮುತಫರ್ರಿಖೂನ ಖೈರುನ್ ಅಮಿಲ್ಲಾಹಿಲ್ ವಾಹಿದುಲ್‌ಖಹ್ಹಾರ್** (ಯುಸುಫ್: 40) ಎಲೈ ಸೆರೆಮನೆಯ ನನ್ನ ಒಡನಾಡಿಗಳೇ, ನೀವು ಯೋಚಿಸಿರಿ. ಮತಭೇದವಿರುವ ಅನೇಕ ದೇವರುಗಳು ಸತ್ಯವೇ ಅಥವಾ ಸರ್ವಾಧಿಪತಿಯಾದ ಏಕದೇವನೇ?

16. **ಅಲ್‌ವಹ್ಹಾಬ್:** ನೀಡುವವನು. ನೀಡುವುದಕ್ಕೆ ವಹಬ್ ಮತ್ತು ಹಿಬ ಎಂದು ಹೇಳಲಾಗುತ್ತದೆ. ಅಹ್ಹಾಬ್ ಅತಿಶಯೋಕ್ತಿ ಆಗಿದೆ ಅಂದರೆ ಅತೀ ಹೆಚ್ಚಾಗಿ ನೀಡುವುದು ಮತ್ತು ಅತಿದೊಡ್ಡ (ಅನುಗ್ರಹ) ದಾತ. ಹೀಗಾಗಿ ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳುತ್ತಾನೆ: **ರಬ್ಬನಾ ಲತುಝಿಗ್ ಖುಲೂಬನಾ ಬಅದ ಇಝ್ ಹದೈತನಾ ವಹಬ್‌ಲನಾ ಮಿಲ್ಲದುನ್‌ಕ ರಹಮತನ್, ಇನ್ನಕ ಅಂತಲ್ ವಹ್ಹಾಬ್.** (ಆಲಿ ಇಮ್ರಾನ್: 9) ಅಂದರೆ ನಮ್ಮ ಪ್ರಭೂ, ನೀನು ನಮಗೆ ಮಾರ್ಗದರ್ಶನವನ್ನು ಮಾಡಿದ ಬಳಿಕ ನಮ್ಮ ಹೃದಯಗಳಲ್ಲಿ

ವಕ್ರಬುದ್ಧಿಯುಂಟಾಗುವಂತೆ ಮಾಡದಿರು. ನೀನು ನಮಗೆ ನಿನ್ನಿಂದ ಕರುಣೆಯನ್ನು ದಯಪಾಲಿಸು. ನಿಸ್ಸಂದೇಹವಾಗಿಯೂ ನೀನೇ ಅತಿದೊಡ್ಡ (ಅನುಗ್ರಹ) ದಾತ.

17. **ಅರ್ರಝ್ಝಾಖ್–** ಸೃಷ್ಠಿಯನ್ನು ಜೀವನಾಧಾರ ನೀಡುವವನು.

ಈ ಗುಣನಾಮವು ರಝ್ಝಾಖ್ ಎಂಬ ಪದದ ಅತಿಶಯೋಕ್ತಿ ಆಗಿದೆ. ಅಂದರೆ ಅಲ್ಲಾಹನು ಎಲ್ಲಾ ಸೃಷ್ಠಿಯನ್ನು ಪರಿಸ್ಥಿತಿಗೆ ಹಾಗೂ ಕೌಶಲ್ಯದಿಂದ ಜೀವನಾಧಾರ ಕಲ್ಪಿಸಿ ಕೊಡುತ್ತಾನೆ. ರಿಝ್ಖ್‌ನ ಎರಡು ವಿಧವಿದೆ, ಭಾವಿಸುವುದು ಮತ್ತು ಯೋಗ್ಯ. ಈ ಪದದ ಅರ್ಥವು ಪವಿತ್ರ ಖುರ್‌ಆನಿನಲ್ಲಿ ಅನೇಕ ಜಾಗಗಳಲ್ಲಿ ಬಂದಿದೆ. ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೀಗೆಂದಿರುವನು: **ಇನ್ನಲ್ಲಾಹ ಹುವರ್ರಝ್ಝಾಖು ಝುಲ್ ಖುವ್ವತಿಲ್ ಮತೀನ್** (ಅಝ್ಝಾರಿಯಾತ್:59) ಅಂದರೆ ನಿಸ್ಸಂದೇಹವಾಗಿಯು ಅಲ್ಲಾಹನೇ ಎಲ್ಲರಿಗೂ ಆಹಾರ ನೀಡುವವನು ಶಕ್ತಿಶಾಲಿಯೂ ಬಲಿಷ್ಠನೂ ಆಗಿದಾನೆ.

18. **ಅಲ್‌ಫತ್ತಾಹು:** ಸಂಕಷ್ಟಗಳನ್ನು ದೂರಗೊಳಿಸುವವನು. ದಾಸರ ಮೇಲೆ ಆದೇಶಗಳನ್ನು ಮಾಡುವವನು.

'ಫತಹ' ಪದ ತೆರೆಯುವುದು ಮತ್ತು ಆದೇಶ ಮಾಡುವುದು ಎಂಬರ್ಥದಲ್ಲಿದೆ. ಪವಿತ್ರ ಖುರ್‌ಆನಿನಲ್ಲಿ ಈ ಗುಣನಾಮವನ್ನು ಹೀಗೆ ವಿವರಿಸಲಾಗಿದೆ: **ಸುಮ್ಮ ಯಫ್‌ತಹು ಬೈನನ ಬಿಲ್‌ಹಖ್ಖಿ ವಹುವಲ್ ಫತ್ತಾಹುಲ್ ಅಲೀಮ್** (ಸಬಾ:27) ಅಂದರೆ ಹೇಳು: ನಮ್ಮ ಪ್ರಭು ನಮ್ಮನ್ನೆಲ್ಲ ಒಟ್ಟು ಗೂಡಿಸುವನು. ಅನಂತರ ನಮ್ಮ ಮಧ್ಯೆ ಸತ್ಯದ ಆಧಾರದಲ್ಲಿ ತೀರ್ಮಾನಿಸುವನು. ಅವನು ಸರ್ವಜ್ಞನಾದ ನ್ಯಾಯಾಧಿಪತಿಯಾಗಿದ್ದಾನೆ.

19. **ಅಲ್‌ಅಲೀಮ್:** ಸರ್ವಜ್ಞ, ಸರ್ವಜ್ಞಾನಿ.

ಅಲೀಮ್ ಆಲಿಮ್ ಪದದ ಅತಿಶಯೋಕ್ತಿಯಾಗಿದೆ ಅಂದರೆ ಅಲ್ಲಾಹನು ಬಾಹ್ಯ ಹಾಗೂ ಗೌಪ್ಯ ಮತ್ತು ಮನಸ್ಸಿನಲ್ಲಿ ಹುಟ್ಟಿರದ ವಿಷಯಗಳ ಬಗ್ಗೆಯೂ ತಿಳಿದಿರುವವನಾಗಿದ್ದಾನೆ. ಅದರ ಪ್ರಸ್ತಾವನೆ ಪವಿತ್ರ ಖುರ್‌ಆನಿನ ಮೇಲ್ಕಂಡ ಆಯತ್‌ನಲ್ಲಿ ಪ್ರಸ್ತಾಪಿಸಲಾಗಿದೆ.

20. **ಅಲ್‌ಖಾಬಿಝ್:** ಜನರ ಜೀವನಾಧಾರವನ್ನು ತಡೆಯುವವನು.

21. **ಅಲ್‌ಬಾಸಿತ್:** ಜನರ ಜೀವನಾಧಾರವನ್ನು ಹೆಚ್ಚಿಸುವವನು, ವೈಶಾಲ್ಯಗೊಳಿಸುವವನು.

ಇವೆರಡು ಗುಣನಾಮಗಳು ಒಂದಕ್ಕೊಂದು ತದ್ವಿರುದ್ಧವಾಗಿ ಬರುತ್ತದೆ. ಖಬ್‌ಝ್ ಮತ್ತು ಬಸ್ತ್ ಪದಗಳ ಅರ್ಥ ಹೀಗೂ ಇದೆ ಅಂದರೆ ಓರ್ವ ಮನುಷ್ಯ ಏನಾದರೂ ಅಲ್ಲಾಹನಿಗೆ ಅರ್ಪಿಸಿದರೆ ಅದು ಅಲ್ಲಾಹನು ಸ್ವತಃ ಅದನ್ನು ತನ್ನ ವಶದಲ್ಲಿ ಪಡೆಯಬಹುದಾಗಿದೆ ಮತ್ತೆ ಬಸ್ತ್ ಗುಣನಾಮದ ಅಡಿಯಲ್ಲಿ ಅದನ್ನು ಹೆಚ್ಚಿಸುತ್ತಾನೆ ಮತ್ತು ಹರಡಿಸುತ್ತಾನೆ. ಹೀಗೆ ಈ ಎರಡು ಗುಣನಾಮಗಳ ಬಗ್ಗೆ ಪವಿತ್ರ ಖುರ್‌ಆನಿನಲ್ಲಿ ಅಲ್ಲಾಹನು ಹೀಗೆ ನುಡಿಯುತ್ತಾನೆ: **ವಲ್ಲಾಹು ಯಖ್‌ಬಿಝು ವ ಯಬ್ಸಿತು ವ ಇಲೈಹಿ ತುರ್‌ಜೂನ್** (ಅಲ್‌ಬಖರ: 246) ಅಂದರೆ ಅಲ್ಲಾಹನು ಅದನ್ನು ಅವನಿಗೆ ಅನೇಕ ಪಟ್ಟು ಹೆಚ್ಚಿಸಿ ಕೊಡುವನು. ಅಲ್ಲಾಹನು ಪಡೆದು ಅದನ್ನು ವೃದ್ಧಿಗೊಳಿಸಿ ಕೊಡುತ್ತಾನೆ. (ಕೊನೆಗೆ) ಅವನೆಡೆಗೆಯೇ ನೀವು ಮರಳಿಸಲ್ಪಡುವಿರಿ.

22. **ಅಲ್‌ಖಾಫಿಝು:** ಅವಿಧೇಯರನ್ನು ಕ್ಷೀಣಗೊಳಿಸುವನು. ಮತ್ತು ಮೃತನಾದ ನಂತರ ಅವರ ದರ್ಜೆಯನ್ನು ಅವನತಿಗೊಳಿಸುವನು.

23. **ಅರ್ರಾಫೆ:** ವಿಧೇಯರ ದರ್ಜೆಗಳನ್ನು ಉನ್ನತಗೊಳಿಸುವನು. ಮತ್ತು ನಿಧನ ಹೊಂದಿದ ನಂತರ ಅವರ ದರ್ಜೆಯನ್ನು ಉನ್ನತಗೊಳಿಸುವನು.

ಈ ಎರಡು ಗುಣನಾಮಗಳ ಅರ್ಥ ಅಲ್ಲಾಹನು ತನ್ನ ವಿಧೇಯ ದಾಸರನ್ನು ಲೋಕದಲ್ಲಿ ತನ್ನ ಸಮೀಪದ ಸ್ಥಾನ ಅನುಗ್ರಹಿಸುತ್ತಾನೆ ಮರಣ ಹೊಂದಿದ ನಂತರ ಅವರ ದರ್ಜೆಯನ್ನು ಉನ್ನತಗೊಳಿಸುತ್ತಾನೆ. ಅದರ ವಿರುದ್ಧ ಅವಿಧೇಯರನ್ನು ಮತ್ತು ಪಿತೂರರ ದರ್ಜೆಯನ್ನು ಉನ್ನತಿಗೊಳಿಸುವುದಿಲ್ಲ. ಪವಿತ್ರ ಖುರ್‌ಆನಿನಲ್ಲಿ ಈಸ ಮಸೀಹ್(ಅ)ರ ಬಗ್ಗೆ ಹೀಗೆ ಪ್ರಸ್ತುತಪಡಿಸಲಾಗಿದೆ: **ಯಾ ಈಸ ಇನ್ನಿ ಮುತವಫ್ಫೀಕ ವ ರಾಫಿಊಕ ಇಲೈಯ** (ಆಲಿ ಇಮ್ರಾನ್:56) ಎಲೈ ಈಸಾ, ನಾನು ನಿನ್ನನ್ನು ಮೃತಪಡಿಸುವೆನು ಮತ್ತು ನನ್ನೆಡೆಗೆ ಎತ್ತುವೆನು.

24. **ಅಲ್‌ಮುಇಝ್ಝು:** ಗೌರವ ನೀಡುವನು.

25. **ಅಲ್‌ಮುಝಿಲ್ಲು:** ಅವಮಾನಿಸುವನು.

ಅಲ್ಲಾಹನು ಯಾರನ್ನು ಇಷ್ಟಪಡುತ್ತಾನೋ ಆತನನ್ನು ಯೊಗ್ಯನನ್ನಾಗಿಸುತ್ತಾನೆ. ಲೋಕದಲ್ಲಿ ಶಕ್ತಿಯನ್ನೀಡಿ ಮತ್ತು ಪರಲೋಕದಲ್ಲಿ ಉನ್ನತಿಯನ್ನೀಡಿ, ಸ್ವರ್ಗದ ಅನುಗ್ರಹಗಳನ್ನು ನೀಡಿ ಅದೇ ರೀತಿ ತನ್ನಿಚ್ಛೆಯಂತೆ ಯಾರನ್ನಾದರೂ ಅವಮಾನಿಸುತ್ತಾನೆ. ಈ ಎರಡು ಗುಣನಾಮಗಳು ಪವಿತ್ರ ಖುರ್‌ಆನಿನಲ್ಲಿ ಹೀಗೆ ಪ್ರಸ್ತಾಪಿಸಲಾಗಿದೆ: **ವತುಈಝ್ಝುಮನ್‌ತಶಾಉ ವತುಝಿಲ್ಲು ಮನ್‌ತಶಾ** (ಆಲಿ ಇಮ್ರಾನ್; 27) ನೀನು ಬಯಸುವವರಿಗೆ ಉನ್ನತ ಸ್ಥಾನವನ್ನು ನೀಡುತ್ತಿ. ನೀನು ಬಯಸುವವರನ್ನು ಅಪಮಾನಿತರನ್ನಾಗಿ ಮಾಡುತ್ತಿ.

26. **ಅಸ್ಸಮೀಉ:** ಎಲ್ಲವನ್ನು ಕೇಳುವವನು. ಎಲ್ಲರನ್ನು ಕೇಳುವವನು. ದುಆಗಳನ್ನು (ಪ್ರಾರ್ಥನೆಗಳನ್ನು) ಕೇಳುವವನು.

ಪವಿತ್ರ ಖುರ್‌ಆನಿನಲ್ಲಿ ಹಝ್ರತ್ ಇಬ್ರಾಹೀಮ್(ಅ)ರವರ ಪ್ರಾರ್ಥನೆಯು ಹೀಗಿದೆ.: **ರಬ್ಬನಾ ತಖಬ್ಬಲ್‌ಮಿನ್ನ ಇನ್ನಕ ಅನ್ತಸ್ಸಮೀಉಲ್ ಅಲೀಮ್** (ಅಲ್‌ಬಖರ: 128) 'ನಮ್ಮ ಒಡೆಯಾ, ನಮ್ಮ ಈ ಸೇವೆಯನ್ನು ನೀನು ಸ್ವೀಕರಿಸು; ನೀನು ಎಲ್ಲವನ್ನು ಕೇಳುವವನೂ ಎಲ್ಲವನ್ನು ಬಲ್ಲವನೂ ಆಗಿರುವೆ.

27. **ಅಲ್‌ಬಸೀರ್:** ಎಲ್ಲವನ್ನು ನೋಡುವವನು. ಆಳವಾದ ನಿಗಾವಹಿಸುವನು.

ಈ ನಾಮವೂ ಅನೇಕ ಸಲ ಅಲ್ಲಾಹನ ಗುಣನಾಮಗಳ ನಿಟ್ಟಿನಲ್ಲಿ ಪವಿತ್ರ ಖುರ್‌ಆನಿನಲ್ಲಿ ಉಪಯೋಗಿಸಲಾಗಿದೆ. ಅಲ್ಲಾಹನು ಹೀಗೆಂದಿರುವನು: ವಲ್ಲಾಹು ಬಸೀರುಮ್ ಬಿಲ್ ಇಬಾದ್ (ಆಲಿ ಇನ್ರಾನ್: 16) ಅಲ್ಲಾಹನು ಅವನ ದಾಸರ ಸ್ಥಿತಿಗತಿಯನ್ನು ಚೆನ್ನಾಗಿ ಕಾಣುತ್ತಿದ್ದಾನೆ.

28. **ಅಲ್‌ಹಕಮು:** ಸೃಷ್ಠಿಯ ನ್ಯಾಯಾಧಿಕಾರಿ. ಸ್ಪಷ್ಠವಾಗಿ ನ್ಯಾತೀರ್ಪು ನೀಡುವವನು.

ಪವಿತ್ರ ಖುರ್‌ಆನಿನ ಸೂರಃ ರಅದ್‌ನಲ್ಲಿ ಹೀಗೆ ಬರುತ್ತದೆ: **ವಲ್ಲಾಹು ಯಹ್‌ಕುಮು ಲಾ ಮುಅಖ್ಖಿಬ ಲಿಹುಕ್‌ಮಿಹಿ** (ಅರ್‌ರಅದ್: 42) ಅಲ್ಲಾಹನು ವಿಧಿಸುತ್ತಾನೆ. ಅವನ ತೀರ್ಮಾನವನ್ನು ತಿದ್ದುಪಡಿ ಮಾಡಬಲ್ಲವನು ಯಾರೂ ಇಲ್ಲ.

29. **ಅಲ್‌ಅದ್ಲು:** ನ್ಯಾಯ ಮಾಡುವವನು. ನ್ಯಾಯ ಮಾಡುವುದರಲ್ಲಿ ಅನ್ಯಾಯ ಮಾಡುವವನಲ್ಲ.

30. **ಅಲ್ಲತೀಫ್:** ಮೃಧುತ್ವ ಹಾಗೂ ಸೌಮ್ಯವಾಗಿ ವರ್ತಿಸುವವನು. ತೀಕ್ಷ್ಣತೆಯಿಂದ ನೋಡುವವನು.

31. **ಅಲ್‌ಖಬೀರ್:** ಎಲ್ಲ ಅರಿತುಕೊಂಡಿರುವವನು, ವಿಜ್ಞಾನಿ, ಸರ್ವಜ್ಞಾನಿ, ತಿಳಿದುಕೊಂಡಿರುವವನು.

ಇದು "ಖಬರ್" ಪದದ ಧಾತು ಆಗಿದೆ. ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳಲಾಗಿದೆ: **ಲಾತುದ್ರಿಕುಹುಲ್ ಅಬ್ಸಾರು, ವಹುವ ಯುದ್ರಿಕುಲ್ ಅಬ್ಸಾರ್, ವುವಲ್ಲತೀಫುಲ್ ಖಬೀರ್** (ಅಲ್‌ಅನ್‌ಆಮ್:104) ಕಣ್ಣುಗಳು ಅವನನ್ನು ಕಾಣಲಾರವು, ಆದರೆ ಅವನು ಕಣ್ಣುಗಳನ್ನು ಕಾಣುತ್ತಾನೆ. ಅವನು ಅತ್ಯಂತ ಸೌಮ್ಯನೂ, ಸೂಕ್ಷ್ಮಜ್ಞನೂ ಆಗಿರುತ್ತಾನೆ.

32. **ಅಲ್‌ಹಲೀಮ್:** ತಾಳ್ಮೆಯುಳ್ಳವ, ಸಹಿಷ್ಣು.

ಹಲೀಮ್ ಎಂದು ಯಾರಿಗೆ ಹೇಳಲಾಗುತ್ತದೆ ಅಂದರೆ ಕೋಪಕ್ಕೀಡಾಗಿರುವುದಿಲ್ಲವೋ, ಸೇಡು ತೀರಿಸಿಕೊಳ್ಳುವುದರಲ್ಲಿ ಅತೀ ಬೇಗನೇ ಮುಂದೆ ಬರದಿರುವನು ಬದಲಿಗೆ ಸೇಡು ತೀರಿಸಿಕೊಳ್ಳಲು ಶಕ್ತನಿದ್ದರೂ ಕ್ಷಮಾದಾನದಿಂದ ವರ್ತಿಸುವನು. ಆದ್ದರಿಂದ ಅಲ್ಲಾಹನನ್ನು ಹಲೀಮ್ ಎಂದು ಕರೆಯಲಾಗುತ್ತಾದೆ ಏಕೆಂದರೆ ಅಲ್ಲಾಹನು ದಾಸರ ಪಾಪಗಳಿಗೆ ಶಿಕ್ಷೆ ನೀಡುವುದರಲ್ಲಿ ಅವಸರ ಪಡುವುದಿಲ್ಲ.

33. **ಅಲ್‌ಅಝೀಮ್:** ಹಿರಿಯ, ಶ್ರೇಷ್ಠನು, ಮಹಾಮಹಿಮನೂ ಆಗಿದ್ದಾನೆ.

ಪವಿತ್ರ ಖುರ್‌ಆನಿನ ಸೂರಃ ಬಖರದಲ್ಲಿ ಇ ಗುಣನಾಮವು ಹೀಗೆ ಬಂದಿದೆ: **ವಸಿಅ ಕುರ್‌ಸಿಯ್ಯುಹುಸ್ಸಮಾವಾತಿ ವಲ್‌ಅರ್‌ಝ ವಲಾಯೂದುಹು ಹಿಫ್‌ಝುಹುಮಾ. ವಹುವಲ್‌ಅಲಿಯ್ಯುಲ್ ಅಝೀಮ್** (ಅಲ್‌ಬಖರ:256) ಅವನ ಸಿಂಹಾಸನ ಆಕಾಶಗಳಲ್ಲೂ ಭೂಮಿಯಲ್ಲೂ ವ್ಯಾಪಿಸಿಕೊಂಡಿದೆ. ಅವುಗಳ ಸಂರಕ್ಷಣೆ ಅವನನ್ನು ಆಯಾಸಗೊಳಿಸುವುದಿಲ್ಲ. ಅವನು ಅತ್ಯುನ್ನತನೂ ಮಹಾಮಹಿಮನೂ ಆಗಿದ್ದಾನೆ.

34. **ಅಲ್‌ಗಫೂರ್:** ಕ್ಷಮಿಸುವವನು, ಪಾಪಗಳನ್ನು ಮುಚ್ಚಿಡುವವನು.

ಗಫ್ಫಾರ್ ಮತ್ತು ಗಫೂರ್ ಈ ಎರಡು ಪದಗಳ ಅತಿಶಯೋಕ್ತಿ ಅಗಿವೆ. ಆದರೆ ಗಫೂರ್‌ನಲ್ಲಿ ಅತೀ ಹೆಚ್ಚಾಗಿ ಅತಿಸಯೋಕ್ತಿ ಕಾಣಿಸುತ್ತದೆ. ಅಂದರೆ ಅಲ್ಲಾಹನ ಕ್ಷಮಾದಾನವೂ ಪೂರ್ಣವಾಗಿದೆ.

35. **ಅಶ್ಶಕೂರು:** ಗೌರವಿಸುವವನು.

ಅಲ್‌ಗಫೂರ್ ಮತ್ತು ಅಶ್ಶಕೂರ್ ಈ ಎರಡು ಗುಣನಾಮಗಳು ಒಂದೆ ಸಮಯದಲ್ಲಿಯೂ ಉಪಯೋಗಿಸಲಾಗುತ್ತದೆ. ಸೂರಃ ಫಾತಿರ್‌ನಲ್ಲಿ ಹೀಗೆ ಹೇಳುತ್ತಾನೆ: **ವಖಾಲು ಲ್‌ಹಮ್‌ದು ಲಿಲ್ಲಾಹಿಲ್ಲಝಿ ಅಝ್‌ಹಬ ಅನ್ನಲ್‌ಹಝುನ ಇನ್ನ ರಬ್ಬನಾ ಲಗಫೂರುರ್ ಶಕೂರ್** (ಫಾತಿರ್: 35) ಅಂದರೆ: ಅವರು ನಮ್ಮಿಂದ ದುಃಖವನ್ನು ದೂರೀಕರಿಸಿದ ಅಲ್ಲಾಹನಿಗೆ ಸರ್ವಸ್ತಿತಿ. ಖಂಡಿತ ನಮ್ಮ ಪ್ರಭು ಮಹಾಕ್ಷಮಾದಾನಿಯೂ ಕೃತಕ್ಞತೆಯನ್ನು ಸ್ವೀಕರಿಸುವವನೂ ಆಗಿರುತ್ತಾನೆ.

36. **ಅಲ್‌ಅಲಿಯ್ಯು:** ಬಹಳ ಉತ್ಕೃಷ್ಟತೆಯುಳ್ಳವವನು.

ಅಲ್ಲಾಹನು ಎಲ್ಲರಿಂದ ಉತ್ಕೇಷ್ಠನಾಗಿದ್ದರಿಂದ ಆತನ ಹೆಸರು ಅಲ್ ಅಲಿ ಎಂದಿದೆ.

37. **ಅಲ್‌ಕಬೀರ್:** ಯಜಮಾನ, ಹಿರಿಯ, ಗೌರವಾನ್ವಿತ.

ಅಲ್‌ಅಲಿಯ್ಯು ಅಲ್‌ಕಬೀರ್ ಇ ಎರಡು ಗುಣನಾಮಗಳು ಸಾನಾನ್ಯವಾಗಿ ಜೊತೆಯಾಗಿಯೇ ಬರುತ್ತದೆ. ಲಅಲ್ಲಲ್‌ಅಝೀಮ್ ಸಹ ಬರುತ್ತದೆ ಮತ್ತು ಅಲ್‌ಅಲಿಯ್ಯುಲ್ ಹಕೀಮ್ ಎಂದು ಸಹ ಬರುತ್ತದೆ. ಮೊದಲನೇಯ ಪದದ ಉದಾಹರಣೆ ಪವಿತ್ರ ಖುರಾನಿನ ಸೂರಃ ಸಬಾದಲ್ಲಿ ಹೀಗೆ ಬರುತ್ತದೆ: **ಖಾಲುಲ್ ಹಖ್ಖ ಹುವಲ್ ಅಲಿಯ್ಯುಲ್ ಕಬೀರ್** (ಸಬಾ: 24) ಅವನು ಹೇಳಿದ್ದು ಸತ್ಯವೇ, ಅವನು ಮಹೋನ್ನತನೂ, ಮಹಾನನೂ ಆಗಿರುತ್ತಾನೆ.

38. **ಅಲ್‌ಹಫೀಝು:** ಸಂರಕ್ಷಕ, ಎಲ್ಲರನ್ನು ರಕ್ಷಿಸುವವನು.

ಹೀಗಾಗಿ ಪವಿತ್ರ ಖುರ್‌ಆನಿನಲ್ಲಿ ಹೀಗೆ ಬರುತ್ತದೆ: **ಶಯನ್, ಇನ್ನ ರಬ್ಬಿ ಅಲಾ ಕುಲ್ಲಿ ಶೈಯಿನ್ ಹಫೀಝ್** (ಹೂದ್: 58) ನಿಸ್ಸಂದೇಹವಾಗಿಯು ನನ್ನ ಪ್ರಭು ಸಕಲ ವಸ್ತುಗಳ ಸಂರಕ್ಷಕನಾಗಿದ್ದಾನೆ.

39. **ಅಲ್‌ಮುಖೀತ್:** ಮೇಲ್ವಿಚಾರಕ, ಎಲ್ಲ ಕಾರ್ಯಗಳಲ್ಲೂ ಪೂರ್ಣ ಸಾಮರ್ಥ್ಯವುಳ್ಳವನು.

ಅಲ್‌ಮುಖೀತ್ ಪದವು ಖುವ್ವತ್ ಎಂಬ ಪದದಿಂದ ಗ್ರಹಿಸಲಾಗಿದೆ.

ಖುವ್ವತ್ ಶಕ್ತಿ ನೀಡುವ ಅರ್ಥದಲ್ಲಿಯು ಇದನ್ನು ಉಪಯೋಗಿಸಲಾಗುತ್ತದೆ ಅದೇ ರೀತಿ ಕೆಲವೊಮ್ಮೆ ಶಕ್ತಿಶಾಲಿ, ಸಾಕ್ಷಿ ಹೇಳುವವ, ಮೇಲ್ವಿಚಾರಕ ಎಂಬ ಅರ್ಥಗಳಲ್ಲಿಯೂ ಬರುತ್ತದೆ. ಪವಿತ್ರ ಖುರ್‌ಆನಿನ ಸೂರ ನಿಸಾಅದಲ್ಲಿ ಈ ಗುಣನಾಮವೂ ಹೀಗೆ ವ್ಯಕ್ತವಾಗಿದೆ: **ವಕಾನಲ್ಲಾಹು ಅಲಾಕುಲ್ಲಿ ಶೈಯಿನ್ ಮುಖೀತ** (ಅನ್ನಿಸಾಅ: 86) ಅಲ್ಲಾಹನು ಎಲ್ಲ ಕಾರ್ಯಗಳಲ್ಲೂ ಪೂರ್ಣ ಸಾಮರ್ಥ್ಯವುಳ್ಳವನಾಗಿದ್ದಾನೆ.

40. **ಅಲ್‌ಹಸೀಬ್:** ಲೆಕ್ಕ ತೆಗೆಯುವವನು, ಸಾಕಷ್ಟು.

ಈ ಗುಣನಾಮವೂ ಎರಡೂ ಅರ್ಥದಲ್ಲಿ ಉಪಯೋಗಿಸಲಾಗುತ್ತದೆ. ಒಂದರ್ಥದಲ್ಲಿ ಯಾವುದಾದರು ವಸ್ತುವನ್ನು ಸಾಕಷ್ಟು ಅರ್ಥದಲ್ಲಿ. ಉದಾಹರಣೆಗೆ ಹಸ್ಬಿ ಅಶ್ಶಯ ಅಂದರೆ ಈ ವಸ್ತು ನನಗೆ ಸಾಕು ಎಂಬ ಅರ್ಥದಲ್ಲಿ. ಕೆಲವು ವಿದ್ವಾಂಸರು ಇದರ ಅರ್ಥ ಮುಹಾಸಿಬ್ ಎಂದು ಸಹ ಮಾಡಿದ್ದಾರೆ. ಪವಿತ್ರ ಖುರ್‌ಆನಿನ ಸೂರ ನಿಸಾಅದಲ್ಲಿ ಬರುತ್ತದೆ: **ಇನ್ನಲ್ಲಾಹ ಕಾನ ಅಲಾ ಕುಲ್ಲಿ ಶೈಯಿನ್ ಹಸೀಬ** (ಅನ್ನಿಸಾಅ: 87) ನಿಸ್ಸಂದೇಹವಾಗಿ ಅಲ್ಲಾಹನು ಎಲ್ಲ ವಿಚಾರಗಳ ಬಗ್ಗೆ ಲೆಕ್ಕ ತೆಗೆಯುವವನಾಗಿದ್ದಾನೆ.

41. **ಅಲ್‌ಜಲೀಲ್:** ಪ್ರತಾಪವಂತ, ಯಜಮಾನ.

42. **ಅಲ್‌ಕರೀಮ್:** ಗೌರವಾನ್ವಿತ.

ಕರೀವ್ ಯಾರೆಂದರೆ ಶಿಕ್ಷೆ ನೀಡುವ ಸಾಮರ್ಥ್ಯವಿದ್ದರು ಕ್ಷಮಿಸುವವನು. ವಾಗ್ದಾನ ಮಾಡಿದರೆ ಅದನ್ನು ಪೂರ್ಣಗೊಳಿಸುವನು. ಅದೇ ರೀತಿ ನೀಡಿದರೆ ಆಕಾಂಕ್ಷೆಗಿಂತ ಹೆಚ್ಚಾಗಿ ನೀಡುವವನು. ಯಾರಾದರು ಆತನ ಬಳಿ ತನ್ನ ದುಃಖ ಪ್ರಕಟಿಸಿದರೆ ಆತನನ್ನು ವ್ಯರ್ಥಗೊಳಿಸಲಾರನು. ಪವಿತ್ರ ಖುರ್‌ಆನಿನಲ್ಲಿ ಹೀಗೆ ವ್ಯಕ್ತವಾಗಿದೆ: **ಅಮನ್ ಕಫರ ಫಿನ್ನ ರಬ್ಬಿ ಗನೀಯ್ಯುನ್ ಕರೀಮ್** (ಅಲನ್ನಮ್ಲ್: 41) ಯಾರು ಕೃತಜ್ಞತೆ ತೋರುತ್ತಾರೋ, ನನ್ನ ಪ್ರಭು ನಿರಪೇಕ್ಷನೂ ಉತ್ಕೃಷ್ಟನೂ ಆಗಿರುತ್ತಾನೆ.

43. **ಅಲ್‌ಮುಜೀಬ್:** ಪ್ರಾರ್ಥನೆಗಳನ್ನು ಸ್ವೀಕರಿಸುವವನು, ಉತ್ತರ ನೀಡುವನು.

ಉತ್ತರ ನೀಡುವಲ್ಲಿ ಹಾಗೂ ಪ್ರಾರ್ಥನೆಗಳನ್ನು ಸ್ವೀಕರಿಸುವುದಕ್ಕೆ ಇಜಾಬತ್ ಎಂದು ಕರೆಯಲಾಗುತ್ತದೆ. ಅಂದರೆ ಯಾರು ಅಲ್ಲಾಹನಲ್ಲಿ ಶುದ್ಧ ಮನಸ್ಸಿನಿಂದ ಕರೆಯುತ್ತಾನೋ ಆತನು ಆತನ ಕೂಗಿಗೆ ಉತ್ತರ ನೀಡುತ್ತಾನೆ ಮತ್ತು ಆತನ ಪ್ರಾರ್ಥನೆಯನ್ನು ಸ್ವೀಕರಿಸುತ್ತಾನೆ. ಆ ಸ್ವೀಕಾರವೂ ಯಾವುದೇ ರೂಪದಲ್ಲಾಗಲಿ. ಪವಿತ್ರ ಖುರ್‌ಆನಿನಲ್ಲಿ ಹೀಗೆ ವ್ಯಕ್ತವಾಗಿದೆ: **ಇನ್ನ ರಬ್ಬುಇ ಖರೀಬುನ್ ಮುಜೀಬ್** (ಹೂದ್: 62) ನಿಸ್ಸಂದೇಹವಾಗಿಯೂ ನನ್ನ ಪ್ರಭೂ ಸೃಷ್ಟಿಗಳಿಗೆ ನಿಕಟನೂ ಮತ್ತು ಪ್ರಾರ್ಥನೆಗಳಿಗೆ ಉತ್ತರ ನೀಡುವವನೂ ಆಗಿರುತ್ತಾನೆ.

45. **ಅಲ್‌ವಾಸಿಉ:** ವಿಶಾಲತೆ ನೀಡುವವನು.

ಈ ಗುಣನಾಮ ಸಅತುನ್ ನಿಂದ ಗ್ರಹಿಸಲಾಗಿದೆ. ಅದರ ಅರ್ಥ ವೈಶಾಲ್ಯ, ವಿಶಾಲಗೊಳಿಸುವ ಮತ್ತು ಆವರಿಸಿಕೊಳ್ಳುವುದು ಎಂದಾಗಿದೆ. ಪವಿತ್ರ ಖುರ್‌ಆನಿನಲ್ಲಿ ಅದರ ಅರ್ಥ ವಿಶಾಲ ಬುದ್ಧಿ, ವಿಶಾಲ ಅನುಗ್ರಹ, ವಿಶಾಲ ಜ್ಞಾನದ ಅರ್ಥಗಳಲ್ಲಿ ಪ್ರಸ್ತುತಪಡಿಸಲಾಗಿದೆ.

ಅದರ ಬಬಗ್ಗೆ ಪವಿತ್ರ ಖುರ್‌ಆನಿನಲ್ಲಿ ಹೀಗೆ ವ್ಯಕ್ತವಾಗಿದೆ **ವಕಾನಲ್ಲಾಹು ವಾಸಿಉನ್ ಹಕೀಮ. (ಅನ್ನಿಸಾಅ: 131)**

**ಇನ್ನ ರಬ್ಬಕ ವಾಸಿಉಲ್‌ಮಗ್‌ಫಿರತಿ (ಅನ್ನಜನ್: 33)**

ಜ್ಞಾನ ವೈಶಾಲ್ಯದ ಬಗ್ಗೆ ಹೀಗೆ ವ್ಯಕ್ತವಾಗಿದೆ: **ಇನ್ನಲ್ಲಾಹ ವಾಸಿಉನ್ ಅಲೀಮ್ (ಅಲ್‌ಬಖರ: 116)**

ಅನುಗ್ರಹಗಳ ವೈಶಾಲ್ಯದ ಬಗ್ಗೆ ಹೀಗೆ ಹೇಳಲಾಗಿದೆ: **ಫಖುಲ್ ರಬ್ಬುಕುಮ್ ಝುರಹ್ಮತಿನ್ ವಾಸಿಅತಿನ್ (ಅಲ್‌ಅನ್‌ಆಮ್: 148)**

46. **ಅಲ್‌ಹಕೀಮ್:** ಯುಕ್ತಿಯಿಂದ ವರ್ತಿಸುವವನು. ಸಕಲ ವಸ್ತುಗಳ ಸತ್ಯತೆಯನ್ನು ಅರಿತುಕೊಂಡಿರುವವನು.

ಈ ಪದವು ಹಿಕ್ಮತ್ ಪದದಿಂದ ಬಂದಿದೆ ಮತ್ತು ಯಾವುದಾದರು ಕಾರ್ಯದಲ್ಲಿ ಉತ್ತಮ ಪ್ರತಿಫಲ ನೀಡುವುದು ಹಿಕ್ಮತ್ ಎನ್ನಲಾಗುತ್ತದೆ. ಹಕೀಮ್ ಅಂದರ ಸಕಲ ವಸ್ತುಗಳ ಸತ್ಯಾಂಶವನ್ನು ಅರಿತುಕೊಂಡಿರುವವನು ಮತ್ತು ಸೃಷ್ಟಿಯನ್ನು ಬಹಳ ತೀಕ್ಷ್ಣದಿಂದ ತಿಳಿದಿರುವವನು. ಹೀಗಾಗಿ ಪವಿತ್ರ ಖುರ್‌ಆನಿನಲ್ಲಿ ದೇವಧೂತರು ಹೇಳುತ್ತಾರೆ: **ಖಾಲೂ ಸುಬ್‌ಹಾನಕ ಲಾ ಇಲ್ಮಲನಾ ಇಲ್ಲಾ ಮಾ ಅಲ್ಲಮ್‌ತನಾ ಇನ್ನಕ ಅನ್ತಲ್ ಅಲೀಮುಲ್ ಹಕೀಮ್ (ಅಲ್‌ಬಖರ: 33)** ಆಗ ಅವರು, 'ನೀನು ಪವಿತ್ರನು. ನೀನು ನಮಗೆ ಕಲಿಸಿದ ವಿನಾ ನಮಗೆ ಬೇರೇನೂ ಅರಿವಿಲ್ಲ. ಖಂಡಿತವಾಗಿಯೂ ನೀನು ಸಕಲವನ್ನು ಬಲ್ಲವನೂ ಪ್ರಾಜ್ಞನೂ ಆಗಿರುವಿ' ಎಂದು ಹೇಳಿದರು.

47. **ಅಲ್‌ವದೂದ್:** ಪ್ರೀತಿಸುವವನು. ಸಜ್ಜನ ದಾಸರನ್ನು ಸ್ನೇಹಿತನನ್ನಾಗಿ ಇರಿಸಿಕೊಳ್ಳುವನು.

ವಿದಾದ್ ಮತ್ತು ಮವದ್ದತ್ ಒಂದೇ ಅರ್ಥದಲ್ಲಿ ಬರುತ್ತದೆ. ಪವಿತ್ರ ಖುರ್‌ಆನಿನಲ್ಲಿ ಈ ಗುಣನಾಮವನ್ನು ಹೀಗೆ ಪ್ರಸ್ತಾಪಿಸಲಾಗಿದೆ: **ವಹುವಲ್ ಗಫೂರುಲ್ ವದೂದ್ (ಅಲ್‌ಬುರೂಜ್:15)** ಅವನು ಪಾಪ ವಿನಾಶಕನೂ ಅತ್ಯಂತ ಪ್ರೀತಿಸುವವನೂ ಆಗಿರುವನು.

48. **ಅಲ್‌ಮಜೀದ್:** ಯಜಮಾನ, ಗೌರವಾನ್ವಿತ, ಮಹಿಮಾವಂತನೂ.

ಮಜೀದ್ ಯಾರೆಂದರೆ ಆತನು ಗೌರವಾನ್ವಿತನೂ, ಸುಂದರ ಕಾರ್ಯಗಳನ್ನು ಮಾಡುವವನಾಗಿರಬೇಕು. ಪವಿತ್ರ ಖುರ್‌ಆನಿನಲ್ಲಿ ಹಝ್ರತ್ ಇಬ್ರಾಹೀಮಿನ ಅತಿಥಿಗಳ ಮಾತುಗಳು ಹೀಗಿವೆ: **ಖಾಲೂ ಅತಅ್‌ಜಬೀನ ಮಿನ್ ಅಮ್‌ರಿಲ್ಲಾಹಿ ರಹ್ಮತುಲ್ಲಾಹಿ ವಬರಕಾತಹೂ ಅಲೈಕುಮ್ ಅಹ್‌ಲಲ್ ಬೈತಿ. ಅನ್ನಹೂ ಹಮೀದುಮ್ಮಜೀದ್. (ಹೂದ್:74)** ಅವರು ಹೀಗೆ ಹೇಳಿದರು; ಅಲ್ಲಾಹನ ಕಾರ್ಯದ ಬಗ್ಗೆ ಆಶ್ಚರ್ಯ ಪಡುತ್ತೀರ? ಓ ಮನೆಯವರೇ, ನಿಮ್ಮ ಮೇಳೆ ಅಲ್ಲಾಹನ ದಯೇ ಮತ್ತು ಸಮೃದ್ಧಿ ಉಂಟಾಗಲಿ. ನಿಜವಾಗಿಯೂ ಅಲ್ಲಾಹನು ಪರಮ ಸತ್ಯಾರ್ಹನೂ ಮಹಿಮಾವಂತನೂ ಆಗಿರುತ್ತಾನೆ.

49. **ಅಲ್‌ಬಾಯಿಸ್:** (ಮೃತರನ್ನು) ಮತ್ತೆ ಜೀವಂತಗೊಳಿಸುವನು. ಲೋಕದಲ್ಲಿ ಆಧ್ಯಾತ್ಮಿಕ ಮರಣವು ಆವರಿಸಿದ ನಂತರ ಜೀವನದ ಆತ್ಮವನ್ನು ನೀಡುವವನು. ಪ್ರವಾದಿಗಳನ್ನು ಕಳುಹಿಸುವವನು, ನಿದ್ರಿಸುತ್ತಿರುವವರನ್ನು ಎಬ್ಬಿಸುವವನು.

ಹೀಗಾಗಿ ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳಲಾಗಿದೆ: **ಹುವಲ್ಲಝಿ ಬಅಸ ಫಿಲ್ ಉಮ್ಮೀಈನ ರಸೂಲನ್ (ಅಲ್‌ಜುಮುಅ:3)** ಅವನೇ ಅನಕ್ಷರಸ್ತರಲ್ಲಿ ಅವರಿಂದಲೇ ಒಬ್ಬ ಸಂದೇಶವಾಹಕರನ್ನು ನಿಯೋಗಿಸಿದವನು.

50. **ಅಶ್ಶಹೀದ್:** ಉಪಸ್ತಿತ ಇರುವವನು, ಮೇಲ್ ನೋಟಗಾರ.

ಈ ಗುಣನಾಮವು ಶಹೂದ್ ಅಥವ ಶಹಾದತ್ ಎಂಬ ಪದದಿಂದ ಬಂದಿದೆ. ಶಹೂದ್ ಎಂದರೆ ಉಪಸ್ತಿತ ಇರುವುದು ಮತ್ತು ಶಹಾದತ್ ಎಂದರೆ ಸಾಕ್ಷಿ. ಆದ್ದರಿಂದ ಶಹೀದ್ ಎಂಬ ಅಲ್ಲಾಹನ ಗುಣನಾಮವೂ ಸೃಷ್ಟಿಯನ್ನು ಪ್ರತಿಯೊಂದು ಸಂದರ್ಭದಲ್ಲಿಯೂ ಅವರ ಬಗ್ಗೆ ತಿಳಿದುಕೊಂಡಿರುವುದು. ಪವಿತ್ರ ಖುರ್‌ಆನಿನಲ್ಲಿ ಹಝ್ರತ್ ಈಸ ನಬಿಯವರ ಮಾತು ಹೀಗಿದೆ; **ವಕುನ್‌ತು ಅಲೈಹಿಮ್ ಶಹೀದ ಮಾದುಮ್‌ತು ಫೀಹಿಮ್ ಫಲಮ್ಮ ತವಫ್ಫಯತನೀ ಕುನ್‌ತ ಅನ್‌ತರ್ರಖೀಬ ಅಲೈಹಿಮ್; ವ ಅನ್‌ತ ಅಲಾ ಕುಲ್ಲಿ ಶೈಯಿನ್ ಶಹೀದ (ಅಲ್‌ಮಾಯಿದ: 118)** ನಾನು ಅವರೊಂದಿಗೆ ಇದ್ದ ಕಾಲದ ವರೆಗೆ ನಾನು ಅವರಿಗೆ ಸಾಕ್ಷಿಯಾಗಿದ್ದೆ. ಆದರೆ ನೀನು ನನ್ನನ್ನು ಮೃತಪಡಿಸಿದಾಗ ಅವರ ಮೇಲ್ನೋಟಗಾರನು ನೀನೇ ಆದೆ. ನೀನು ಸರ್ವ ಸಂಗತಿಗಳಿಗೂ ಸಾಕ್ಷಿಯಾಗಿರುವೆ.

51. **ಅಲ್‌ಹಖ್ಖು:** ಸತ್ಯಾವಂತನೂ ಮತ್ತು ಸತ್ಯಾಂಶದ ಮೂಲ. ತನ್ನ ಅಸ್ತಿತ್ವದಲ್ಲಿ ಸ್ಥಿರವಾಗಿರುವನು ಅದರಲ್ಲಿ ಯಾವುದೇ ರೀತಿಯ ನಶ್ವರ ಅಥವಾ ಬದಲಾವಣೆ ಇಲ್ಲ. ಈ ಗುಣನಾಮದ ಬಗ್ಗೆ ಪವಿತ್ರ ಖುರ್‌ಆನಿನಲ್ಲಿ ಹೀಗೆ ವ್ಯಕ್ತವಾಗಿದೆ: **ಸುಮ್ಮ ರದ್ದೂ ಇಲಲ್ಲಾಹಿ ವೌಲಾಹುಮುಲ್‌ಹಖ್ಖ್. (ಅಲ್‌ಅನ್‌ಆಮ್:63)** ಅಂದರೆ ಅನಂತರ ಅವರ ನಿಜವಾದ ರಕ್ಷಕನಾದ ಅಲ್ಲಾಹನೆಡೆಗೆ ಅವರು ಮರಳಿಸಲ್ಪಡುವರು.

52. **ಅಲ್‌ವಕೀಲ್:** ಕಾರ್ಯನಿರ್ವಾಹಕ.

ಯಾರ ಬಳಿ ನಾವು ನಮ್ಮ ಎಲ್ಲಾ ಕಾರ್ಯಗಳನ್ನು ಅರ್ಪಿಸುತ್ತೇವೊ ಆತನ ಕೈಯಲ್ಲಿ ಎಲ್ಲಾ ರೀತಿಯ ಅಧಿಕಾರವಿರುತ್ತದೆ ಅವನನ್ನು ವಕೀಲ್ ಎನ್ನುತ್ತೇವೆ. ಹೀಗಾಗಿ ಅಲ್ಲಾಹನು ತನ್ನ ಅನುಗ್ರಹದಿಂದ ತನ್ನ ವಿಧೇಯ ದಾಸರ ಎಲ್ಲಾ ಕಾರ್ಯಗಳನ್ನು ತನ್ನ ಕೈಯಲ್ಲಿರಿಸಿಕೊಂಡಿರುತ್ತಾನೆ. ಆದ್ದರಿಂದ ಆತನು ಉತ್ತಮ ಕಾರ್ಯನಿರ್ವಾಹಕನಾಗಿದ್ದಾನೆ. ಹೀಗಾಗಿ ಪವಿತ್ರ ಖುರ್‌ಆನಿನಲ್ಲಿ ಹೀಗೆ ಪ್ರಸ್ತುತ ಪಡಿಸಲಾಗಿದೆ: **ವಖಾಲೂ ಹಸ್ಬುನಲ್ಲಾಹು ವ ನಿಮಲ್ ವಕೀಲ್**

**(ಆಲಿ ಇಮ್ರಾನ್: 174)** 'ನಮಗೆ ಅಲ್ಲಾಹನು ಸಾಕು; ಅವನು ಅತಿಶ್ರೇಷ್ಠನಾದ ರಕ್ಷಕನು' ಎಂದು ಅವರು ಹೇಳಿದರು.

53. **ಅಲ್‌ಖವಿಯ್ಯು:** ಶಕ್ತಿವಂತನೂ.

ಪವಿತ್ರ ಖುರ್‌ಆನಿನಲ್ಲಿ ಈ ಗುಣನಾಮದ ಬಗ್ಗೆ ಹೀಗೆ ಬಂದಿದೆ: **ಅಲ್ಲಾಹು ಲತೀಫುನ್ ಬಿಲ್ ಇಬಾದಿಹಿ ಯರ್‌ಝುಖು ಮೈಂಯಶಾಉ, ವಹುಲ್ ಖವಿಯ್ಯುಲ್ ಅಝೀಝ್ (ಅಶ್ಶೂರ:20)** ಅಲ್ಲಾಹನು ತನ್ನ ದಾಸರಲ್ಲಿ ಅತ್ಯಂತ ಕರುಣೆಯುಳ್ಳವನಾಗಿದ್ದಾನೆ. ತಾನಿಚ್ಛಿಸಿದವರಿಗೆ ಅವನು ಆಹಾರ ನೀಡುತ್ತಾನೆ. ಅವನು ಅತಿ ಪ್ರಬಲನೂ, ಪ್ರತಾಪಶಾಲಿಯೂ ಆಗಿರುತ್ತಾನೆ.

54. **ಅಲ್‌ಮತೀನ್:** ಸದೃಢ ಗುಣವುಳ್ಳವನು, ಶಕ್ತಿಶಾಲಿ,

ಈ ಗುಣನಾಮದ ಪ್ರಸ್ತಾವನೆ ಪವಿತ್ರ ಖುರ್‌ಆನಿನಲ್ಲಿ ಹೀಗೆ ಬಂದಿದೆ: **ಇನ್ನಲ್ಲಾಹ ಹುವರ್ರಝ್ಝಾಖು ಝುಲ್ ಖುವ್ವತಿಲ್ ಮತೀನ್** (ಅಝ್ಝಾರಿಯಾತ್:59) ಅಂದರೆ ನಿಜವಾಗಿಯು ಅಲ್ಲಾಹನು ಮಹಾ ಅನ್ನದಾತನು, ಶಕ್ತಿಶಾಲಿಯು ಮತ್ತು ಪ್ರಚಂಡನೂ ಆಗಿರುವನು.

55. **ಅಲ್‌ವಲಿಯ್ಯು:** ಗೆಳೆಯ, ಸ್ನೇಹಿತ, ಯಜಮಾನ, ರಕ್ಷಕ.

ಅಲ್ಲಾಹನು ಭಯಭಕ್ತಿವುಳ್ಳವರ ಹಾಗೂ ಪ್ರಾಮಾಣಿಕತೆವುಳ್ಳವರ ಸ್ನೇಹಿತನಾಗಿರುತ್ತಾನೆ. ಮತ್ತು ಅವರಿಗೆ ರಕ್ಷಣೆ ನೀಡುತ್ತಾನೆ.

56. **ಅಲ್‌ಹಮೀದ್:** ಪ್ರತಿಯೊಂದು ರೀತಿಯ ಸ್ತುತಿಗಳಿಗೆ ಅರ್ಹನು, ಸ್ತುತ್ಯಾರ್ಹನು. ಈ ಗುಣನಾಮದ ಬಗ್ಗೆ ಪವಿತ್ರ ಖುರ್‌ಆನಿನಲ್ಲಿ ಅನೇಕ ಕಡೆ ಪ್ರಸ್ತಾಪಿಸಲಾಗಿದೆ. ಸೂರ ಶುರಃ ದಲ್ಲಿ ವಲಿ ಮತ್ತು ಹಮೀದ್ ಇ ಎರಡು ಗುಣನಾಮಗಳು ಪ್ರಸ್ತಾಪಿಸಲಾಗಿದೆ: **ವಯನ್‌ಶುರು ರಹ್ಮತಹು. ವಹುವಲ್ ವಲೀಯ್ಯುಲ್ ಹಮೀದ್**. (ಅಶ್ಶೂರ: 29) ಅಲ್ಲಾಹನು ತನ್ನ ಕೃಪೆಯನ್ನು ಹರಡುವವನೂ. ಪ್ರಶಂಸಾರ್ಹನಾದ ರಕ್ಷಕ ಮಿತ್ರನೂ ಆಗಿದ್ದಾನೆ.

57. **ಅಲ್‌ಮುಹ್‌ಸಿ:** ಸಕಲ ವಸ್ತುಗಳನ್ನು ತನ್ನ ಜ್ಞಾನದಲ್ಲಿರಿಕೊಂಡಿರುವನು, ಎಣಿಸುವವನು.

ಅಲ್ಲಾಹನು ಸಕಲ ವಸ್ತುಗಳ ತಿರುಳನ್ನು ಅರಿಕೊಂಡಿರುವವನಾಗಿದ್ದಾನೆ. ಈ ಗುಣನಾಮದ ಬಗ್ಗೆ ಪವಿತ್ರ ಖುರ್‌ಆನಿನಲ್ಲಿ ಹೀಗೆ ಪ್ರಸ್ತಾಪಿಸಲಾಗಿದೆ; **ವಹಾತ ಬಿಮಾ ಲದೈಹಿಮ ವ ಅಹ್‌ಸಾ ಕುಲ್ಲ ಶೈಯಿನ್ ಅದದ** (ಅಲ್‌ಜಿನ್ನ್: 29) ಅವರಲ್ಲಿರುವ ಎಲ್ಲವನ್ನೂ ಅವನು ಸುತ್ತುವರಿಯುತ್ತಾನೆ. ಸರ್ವವನ್ನೂ ಅವನು ಎಣಿಸಿಟ್ಟಿರುತ್ತಾನೆ.

58. **ಅಲ್‌ಮುಬ್ದಿಉ:** ಮೊದಲ ಬಾರಿ ಸೃಷ್ಟಿಸಿದವನು, ಪುನರಾವರ್ತಿಸುವವನು.

59. **ಅಲ್‌ಮುಈದು:** ಪುನಃ ಸೃಷ್ಟಿಸುವವನು.

ಮೇಲ್ಕಂಡ ಎರಡು ಗುಣನಾಮಗಳ ಪ್ರಸ್ತಾವನೆ ಪವಿತ್ರ ಖುರ್‌ಆನಿನಲ್ಲಿ ಸೂರಃ ಬುರೂಜಿನಲ್ಲಿ ಹೀಗೆ ವ್ಯಕ್ತವಾಗಿದೆ: **ಇನ್ನಹು ಹುವ ಯುಬ್ದಿ ವ ಯುಈದ್** (ಅಲ್‌ಬುರೂಜ್: 14) ನಿಸ್ಸಂದೇಹವಾಗಿಯೂ ಅಲ್ಲಾಹನು ಸೃಷ್ಟಿಯನ್ನು ಆರಂಭಿಸುವವನೂ ಅದನ್ನು ಪುನರಾವರ್ತನೆಗೊಳಿಸುವವನೂ ಅವನೇ ಆಗಿದ್ದಾನೆ.

60. **ಅಲ್‌ಮುಹ್‌ಯೀ:** ಸೃಷ್ಟಿಯನ್ನು ಜೀವಂತವಾಗಿಡುವವನು.

ಸೂರ ರೂಮಿನಲ್ಲಿ ಹೀಗೆ ಪ್ರಸ್ತಾಪಿಸಲಾಗಿದೆ: **ಇನ್ನ ಝಾಲಿಕ ಲಮುಹ್‌ಯೀಲ್ ಮೌತ. ವಹುವ ಅಲಾ ಕುಲ್ಲಿ ಶೈಯಿಂ ಖದೀರ್**. (ಅರ್‍ರೂಮ್: 51) ದಿಟವಾಗಿಯೂ ಅವನೇ ಮೃತರನ್ನು ಜೀವಂತಗೊಳಿಸುವವನು. ಎಲ್ಲವುಗಳ ಮೇಲೆ ಅವನಿಗೆ ಸರ್ವಾಧಿಕಾರವಿದೆ.

61. **ಅಲ್‌ಮುಮೀತು:** ಮೃತಪಡಿಸುವವನು.

ಇದರ ಪ್ರಸ್ತಾವನೆ ಪವಿತ್ರ ಖುರ್‌ಆನಿನಲ್ಲಿ ಹೀಗೆ ಬಂದಿದೆ: **ವಲ್ಲಾಹು ಯುಹ್‌ಯೀ ವಯುಮೀತು** (ಆಲಿ ಇಮ್ರಾನ್: 157) ಬದುಕಿಸುವವನೂ ಮೃತಪಡಿಸುವವನೂ ಅಲ್ಲಾಹನೇ ಆಗಿದ್ದಾನೆ.

62. **ಅಲ್‌ಹೈಯ್ಯು:** ಸ್ವತಃ ಜೀವಂತ ಹಾಗೂ ಅನ್ಯರ ಜೀವನಕ್ಕೆ ಆಶ್ರಯ, ಶಾಶ್ವತವಾಗಿ ಜೀವಂತವಾಗಿರುವವನು.

53. **ಅಲ್‌ಖಯ್ಯೂಮ್:** ಶಾಶ್ವತವಾಗಿರುವ ಅಸ್ತಿತ್ವ, ನೆಲೆನಿಲ್ಲುವವನು ಮತ್ತು ನೆಲೆನಿಲ್ಲಿಸುವವನು.

ಖಯ್ಯೂಮ್ ಪದವು ಖಯ್ಯಮ ಪದದ ಅತಿಶಯೋಕ್ತಿ ಆಗಿದೆ. ಖಯ್ಯಮ ಎಂದರೆ ಯಾವುದಾದರೂ ವಿಷಯದಲ್ಲಿ ಸ್ಥಿರವಾಗಿ ನಿಲ್ಲುವುದು.

ಪವಿತ್ರ ಖುರ್‌ಆನಿನ ಸೂರ ಆಲಿ ಇಮ್ರಾನ್‌ನಲ್ಲಿ ಈ ಎರಡು ಗುಣನಾಮಗಳ ಬಗ್ಗೆ ಹೀಗೆ ಪ್ರಸ್ತಾಪಿಸಲಾಗಿದೆ: **ಅಲ್ಲಾಹು ಲಾಇಲಾಹ ಇಲ್ಲ ಹುವಲ್ ಹಯ್ಯುಲ್ ಖಯ್ಯೂಮ್** (ಆಲಿ ಇಮ್ರಾನ್: 03) ಅಲ್ಲಾಹ್ ಅವನ ಹೊರತು ಬೇರೆ ಆರಾಧ್ಯನಿಲ್ಲ. ಅವನು ಸದಾ ಜೀವಂತನೂ ಸ್ವತಃ ನೆಲೆ ನಿಂತಿರುವವನೂ (ಎಲ್ಲವನ್ನೂ) ನೆಲೆನಿಲ್ಲಿಸುವವನೂ ಆಗಿದ್ದಾನೆ.

64. **ಅಲ್‌ವಾಜಿದ್:** ಶೋಧಕ, ಉದ್ದೇಶದಲ್ಲಿ ಯಶಸ್ಸು ಹಾಗೂ ಯಶಸ್ಸು ನೀಡುವವನು.

65. **ಅಲ್‌ಮಾಜಿದ್:** ಶ್ರೇಷ್ಠತೆವುಳ್ಳವವನು.

66. **ಅಲ್‌ವಾಹಿದ್:** ಏಕನು.

ವಾಹಿದ್ ಎಂದರೆ ಅದನ್ನು ವಿಂಗಡಿಸಲು ಸಾಧ್ಯವಾಗದು. ಪವಿತ್ರ ಖುರ್‌ಆನಿನಲ್ಲಿ ಈ ಗುಣನಾಮದ ಬಗ್ಗೆ ಹೀಗೆ ಪ್ರಸ್ತಾಪಿಸಲಾಗಿದೆ: **ವಮಾಮಿನ್ ಇಲಾಹಿನ್ ಇಲ್ಲಲ್ಲಾಹುಲ್ ವಾಹಿದುಲ್ ಖಹ್ಹಾರ್** (ಸ್ವಾದ್:66) ಏಕನೂ ಪರಮಾಧಿಕಾರಿಯೂ ಆಗಿರುವ ಅಲ್ಲಾಹನ ಹೊರತು ಬೇರೆ ದೇವನಿಲ್ಲ.

67. **ಅಲ್‌ಅಹದ್:** ಏಕೈಕನು, ಅವನ ಹಾಗೆ ಬೇರೆ ಯಾರೂ ಇಲ್ಲ.

ಪವಿತ್ರ ಖುರ್‌ಆನಿನ ಸೂರಃ ಇಖ್ಲಾಸ್‌ನಲ್ಲಿ ಹೀಗೆ ಪ್ರಸ್ತಾಪಿಸಲಾಗಿದೆ: **ಖುಲ್ ಹುವಲ್ಲಾಹು ಅಹದ್** (ಅಲ್‌ಇಖ್ಲಾಸ್:02) 'ಅವನು ಅಲ್ಲಾಹನು; ಏಕನು.

68. **ಅಸ್ಸಮದ್:** ಸ್ವಆಶ್ರಿತ, ಎಲ್ಲರಿಗೂ ಆಶ್ರಯದಾತನು, ನಿರಪೇಕ್ಷನು.

ಪವಿತ್ರ ಕುರ್‌ಆನಿನಲ್ಲಿ ಇ ಗುಣನಾಮದ ಬಗ್ಗೆ ಹೀಗೆ ಪ್ರಸ್ತಾಪಿಸಲಾಗಿದೆ: **ಅಲ್ಲಾಹುಸ್ಸಮದ್** (ಅಲ್‌ಇಖ್ಲಾಸ್: 2,3) 'ಅವನು ನಿರಪೇಕ್ಷನು (ಮತ್ತು ಸರ್ವರಿಗೂ ಆಶ್ರಯದಾತನು).

69. **ಅಲ್‌ಖಾದಿರು:** ಸರ್ವಶಕ್ತನು.

ಪವಿತ್ರ ಖುರ್‌ಆನಿನ ಸೂರ: ಅನ್‌ಆಮ್‌ನಲ್ಲಿ ಹೀಗೆ ಪ್ರಸ್ತಾಪಿಸಲಾಗಿದೆ: **ಖುಲ್ ಹುವಲ್ ಖಾದಿರು ಅಲಾ ಅಯ್ಯಬ್‌ಅಸ ಅಲೈಕುಮ್ ಅಝಾಬಮ್ಮಿನ್ ಫೌಖಿಕುಮ್ ಔ ಮಿನ್ ತಹ್‌ತಿ ಅರ್ಜುಲಿಕುಮ್** (ಅಲ್‌ಅನ್‌ಆಮ್:66) ಹೇಳು: 'ನಿಮ್ಮ ಮೇಲ್ಭಾಗದಿಂದಾಗಲಿ ನಿಮ್ಮ ಕಾಲಡಿಯಿಂದಾಗಲಿ ನಿಮ್ಮ ಮೇಲೆ ಒಂದು ಶಿಕ್ಷೆಯನ್ನು ಇಳಿಸಲಿಕ್ಕೆ ಅಥವಾ ನಿಮ್ಮನ್ನು ವಿವಿಧ ಪಂಗಡಗಳಾಗಿ ಬೇರ್ಪಡಿಸಿ ನಿಮ್ಮ ಪೈಕಿ ಕೆಲವರ ದುಷ್ಕೃತ್ಯಗಳನ್ನು ಬೇರೆ ಕೆಲವರು ಅನುಭವಿಸುವಂತೆ ಮಾಡಲಿಕ್ಕೆ ಅವನಿಗೆ ಶಕ್ತಿ ಇದೆ.

70. **ಅಲ್‌ಮುಖ್‌ತದಿರ್:** ಪ್ರಭುತ್ವವುಳ್ಳವನು.

ಪವಿತ್ರ ಖುರ್‌ಆನಿನಲ್ಲಿ ಈ ಗುಣನಾಮದ ಬಗ್ಗೆ ಹೀಗೆ ಪ್ರಸ್ತಾಪಿಸಲಾಗಿದೆ: **ಇನ್ನ ಮುತ್ತಖೀನ ಫಿ ಜನ್ನಾತಿವ್ವನಹರಿಂ. ಫೀ ಮಖ್‌ಅದಿ ಸಿದ್‌ಖಿನ್ ಇಂದ ಮಲೀಕಿಮ್ಮುಖ್‌ತದಿರ್**. (ಅಲ್ಖಮರ್: 55–56) ನಿಶ್ಚಯವಾಗಿಯೂ ಸಜ್ಜನರು ಸ್ವರ್ಗೀಯ ತೋಟಗಳಲ್ಲೂ ನದೀತಟಗಳಲ್ಲೂ ಇರುವರು. ಸತ್ಯದ ಆಸನದಲ್ಲಿ, ಸರ್ವಶಕ್ತನಾದ ರಾಜನ ಸಮೀಪದಲ್ಲಿ.

71. **ಅಲ್‌ಮುಖದ್ದಿಮ್:** ಮುಂದಕ್ಕೆ ಹಾಕುವವನು.

72. **ಅಲ್‌ಮುಅಖ್ಖಿರ್:** ಹಿಂದಕ್ಕೆ ಹಾಕುವವನು. (ವೈರಿಗಳನ್ನು ತನ್ನ ದರ್ಪದಿಂದ ಹಿಂದಕ್ಕೆ ಸರಿಸುವವನು)

73. **ಅಲ್‌ಅವ್ವಲು:** ಅತ್ಯಂತ ಮೊದಲಿಗ.

ಅಲ್ಲಾಹನ ಬಗ್ಗೆ ಹೀಗೆ ಬರುತ್ತದೆ **"ಹುವಲ್ ಅವ್ವಲು ಲೈಸ ಖಬ್‌ಲುಹು ಶೈಉನ್"** ಅಂದರೆ ಅವನು ಅತ್ಯಂತ ಮೊದಲಿಗನು. ಸೃಷ್ಟಿಯಲ್ಲಿ ಅಲ್ಲಾಹನಿಂದ ಮೊದಲು ಯಾವ ವಸ್ತುವೂ ಇಲ್ಲ.

74. **ಅಲ್‌ಆಖಿರು:** ಅತ್ಯಂತ ಕೊನೆಯವನು.

ಅಲ್ಲಾಹನ ಬಗ್ಗೆ ಹೀಗೂ ಸಹ ಬರುತ್ತದೆ **ಹುವಲ್ ಆಖಿರು ಲೈಸ ಬಅದಹೂ ಶೈಉನ್** ಅಂದರೆ ಸಕಲ ವಸ್ತುಗಳ ನಶಿಸಿ ಹೋದ ನಂತರ ಅವನ ಅಸ್ತಿತ್ವವೂ ಉಳಿದಿರುವುದು.

75. **ಅಝ್ಝಾಹಿರ್:** ಪ್ರತ್ಯಕ್ಷವಾಗಿವುಳ್ಳವನು. ವ್ಯಕ್ತವಾಗಿರುವುದು.

76. **ಅಲ್‌ಬಾತಿನ್:** ಪರೋಕ್ಷವಾಗಿವುಳ್ಳವನು, ಅಂತರಂಗ, ಆಂತರಿಕ.

ಈ ಗುಣನಾಮದ ಬಗ್ಗೆ ಪವಿತ್ರ ಖುರ್‌ಆನಿನಲ್ಲಿ ಹೀಗೆ ವ್ಯಕ್ತವಾಗಿದೆ: **ಹುವಲ್‌ಅವ್ವಲು ವಲ್ ಆಖಿರು ವಝ್ಝಾಹಿರು ವಲ್‌ಬಾತಿನು. ವಹುವ ಬಿಕುಲ್ಲಿ ಶೈಯಿಂ ಅಲೀಮ್**. (ಅಲ್‌ಹದೀದ್: 04) ಅವನೇ ಆದಿ, ಅವನೇ ಅಂತ್ಯ, ಅವನು ಪ್ರತ್ಯಕ್ಷನೂ ಗೌಪ್ಯನೂ ಆಗಿದ್ದಾನೆ. ಅವನು ಎಲ್ಲ ಸಂಗತಿಗಳನ್ನು ಬಲ್ಲವನೂ ಆಗಿದ್ದಾನೆ.

77. **ಅಲ್‌ವಾಲಿ:** ಎಲ್ಲ ವಿಷಯಗಳ ಸಂರಕ್ಷಕ ಮತ್ತು ಎಲ್ಲರ ಯಜಮಾನ, ಮೇಲ್ವಿಚಾರಕ.

ಪವಿತ್ರ ಖುರ್‌ಆನಿನಲ್ಲಿ ಈ ಗುಣನಾಮದ ಬಗ್ಗೆ ಹೀಗೆ ಪ್ರಸ್ತಾಪಿಸಲಾಗಿದೆ: **ವಇಝಾ ಅರಾದಲ್ಲಾಹು ಬಿಖೌಮಿನ್ ಸೂಅನ್ ಫಲಾ ಮರದ್ದಲಹೂ, ವಮಾ ಲಹುಮ್ ಮಿನ್ ದೂನಿಹೀ ಮಿವ್ವಾಲ್** (ಅರ್‍ರ‌ಅದ್: 12) ಅಲ್ಲಾಹನು ಒಂದು ಸಮುದಾಯವನ್ನು ಶಿಕ್ಷೆಗೆ ಗುರಿಪಡಿಸಲು ಬಯಸಿದರೆ ಅದನ್ನು ಹೋಗಲಾಡಿಸಲು ಯಾರಿಂದಲೂ ಸಾಧ್ಯವಿಲ್ಲ. ಅವನ ಹೊರತು ಅವರಿಗೆ ಸಹಾಯಕನಾಗಿಯೂ ಯಾರೂ ಇಲ್ಲ.

78. **ಅಲ್‌ಮುತಾಲಿ:** ಉದಾತ್ತನಾದವನು.

ಪವಿತ್ರ ಖುರ್‌ಆನಿನಲ್ಲಿ ಈ ಗುಣನಾಮದ ಬಗ್ಗೆ ಹೀಗೆ ಪ್ರಸ್ತುತವಾಗಿದೆ: **ಆಲಿಮುಲ್ ಗೈಬಿ ವಶ್ಶಹಾದತಿಲ್‌ಕಬೀರುಲ್ ಮುತಾಲಿ** (ಅರ್‍ರ‌ಅದ್:10) ಪರೋಕ್ಷ ಮತ್ತು ಪ್ರತ್ಯಕ್ಷ ವಿಚಾರಗಳನ್ನೆಲ್ಲ ಅವನು ಬಲ್ಲನು. ಅವನು ಮಹಾಮಹಿಮನೂ ಸರ್ವೋನ್ನತನೂ ಆಗಿದ್ದಾನೆ..

79. **ಅಲ್‌ಬರ್‍ರು:** ತನ್ನ ಮೃಧುತ್ವದ ಸ್ವಭಾವದಿಂದ ದಾಸರೊಂದಿಗೆ ವರ್ತಿಸುವವನು, ಪ್ರಯೋಜನಕಾರಿ, ಒಳಿತನ್ನು ಗೌರವಿಸುವವನು.

ಈ ಗುಣನಾಮದ ಬಗ್ಗೆ ಪವಿತ್ರ ಖುರ್‌ಆನಿನ ಸೂರಃ ತೂರ್‌ನಲ್ಲಿ ಹೀಗೆ ವ್ಯಕ್ತವಾಗಿದೆ: **ಇನ್ನ ಕುನ್ನ ನದ್‌ಊಹು, ಇನ್ನಹೂ ಹುಲ್‌ಬರ್‍ರು ರ್‍ರಹ್ಮಾನ್ನಿರ್‍ರಹೀಮ್** (ಅತ್ತೂರ್: 29) ನಿಶ್ಚಯವಾಗಿಯೂ ಅವನು ಅತಿ ಉದಾರಿಯೂ ಕಾರುಣ್ಯನಿಧಿಯೂ ಆಗಿದ್ದಾನೆ.'

80. **ಅತ್ತವ್ವಾಬ್:** ದಾಸರ ಪಾಪಗಳ ಪಶ್ಚಾತಾಪವನ್ನು ಸ್ವೀಕರಿಸುವವ, ಅತ್ಯಾಧಿಕವಾಗಿ ಪಶ್ಚಾತ್ತಾಪಗಳನ್ನು ಸ್ವೀಕರಿಸುವವನು.

ಅತ್ತವ್ವಾಬ್ ಅತಿಶಯೋಕ್ತಿ ಆಗಿದೆ. ತೌಬ ಎಂದರೆ ಮರುಳಿ ಬರುವುದು. ಈ ಗುಣನಾಮವೂ ಪವಿತ್ರ ಖುರ್‌ಆನಿನಲ್ಲಿ ಅನೇಕ ರೀತಿಯಲ್ಲಿ ಬಂದಿದೆ. ಸೂರಃ ಬಖರದಲ್ಲಿ ಹೀಗೆ ಪ್ರಸ್ತಾಪಿಸಲಾಗಿದೆ: **ಇಲ್ಲಲ್ಲಝೀನ ತಾಬೂ ವ ಅಸ್‌ಲಹೂ ವ ಬಯ್ಯನೂ ಫಉಲಾಇಕ ಅತೂಬು ಅಲೈಹಿಮ್. ವ ಅನತ್ತವ್ವಾಬುರ್‍ರಹೀಮ್** (ಅಲ್‌ಬಖರ: 161) ಆದರೆ ಪಶ್ಚಾತ್ತಾಪಪಟ್ಟು ತಮ್ಮನ್ನು ತಿದ್ದಿಕೊಂಡು (ಬಚ್ಚಿಟ್ಟ ಸತ್ಯವನ್ನು) ಬಹಿರಂಗ ಪಡಿಸುವವರು ಅವರಲ್ಲಿ ಸೇರುವುದಿಲ್ಲ. ಅವರ ಮೇಲೆ ನಾನು ಕರುಣೆ ತೋರಿಸುವೆನು. ನಾನು ಪಶ್ಚಾತ್ತಾಪವನ್ನು ಸ್ವೀಕರಿಸುವವನೂ ಕಾರುಣ್ಯನಿಧಿಯೂ ಆಗಿದ್ದೇನೆ.

81. **ಅಲ್‌ಮುನ್‌ತಖಿಮು:** ಅವಿಧೇಯರನ್ನು ಶಿಕ್ಷಿಸುವವನು.

ಪವಿತ್ರ ಖುರ್‌ಆನಿನಲ್ಲಿ ಹೀಗೆ ಪ್ರಸ್ತುತಪಡಿಸಲಾಗಿದೆ: **ವಮನ್ ಅಝ್‌ಲಮ ಮಿಮ್ಮನ್ ಝುಕ್ಕಿರ ಬಿಆಯಾತಿ ರಬ್ಬಿಹೀ ಸುಮ್ಮ ಅರಝ ಅನ್‌ಹಾ, ಇನ್ನ ಮಿನಲ್ ಮುಜ್ರಿಮೀನ ಮುನ್ತಖಿಮೂನ್**. (ಅಸ್ಸಜದಹ್: 23) ತನ್ನ ಪ್ರಭುವಿನ ದೃಷ್ಟಾಂತಗಳ ಬಗ್ಗೆ ನೆನಪು ಮಾಡಿಕೊಟ್ಟ ನಂತರವೂ ಅದರಿಂದ ಮುಖ ತಿರುಗಿಸುವವನಿಗಿಂತ ದೊಡ್ಡ ದುಷ್ಕರ್ಮಿ ಬೇರೆ ಯಾರು? ನಾವು ಖಂಡಿತವಾಗಿಯೂ ಅಪರಾಧಿಗಳನ್ನು ಶಿಕ್ಷಿಸುವೆವು.

82. **ಅಲ್‌ಅಫುವ್ವು:** ಪಾಪಗಳಿಂದ ಕ್ಷಮೆ ನೀಡುವವನು, ಪಾಪಗಳನ್ನು ನಶಿಸುವವನು, ಕ್ಷಮಿಸುವವನು.

ಈ ಗುಣನಾಮದ ಬಗ್ಗೆ ಪವಿತ್ರ ಖುರ್‌ಆನಿನಲ್ಲಿ ಹೀಗೆ ವ್ಯಕ್ತವಾಗಿದೆ: **ವಕಾನಲ್ಲಾಹು ಅಫುವ್ವುನ್ ಗಫೂರ** (ಅನ್ನಿಸಾಅ: 100) ಅಲ್ಲಾಹನು ಅತಿ ಹೆಚ್ಚು ಕ್ಷಮಿಸುವವನೂ ಕಾರುಣ್ಯನಿಧಿಯೂ ಆಗಿದ್ದಾನೆ.

83. **ಅರ್‍ರಊಫು:** ಅನುಕಂಪ ಉಳ್ಳವನು.

ಇದರ ಮೂಲ ಧಾತು ರಅಫ್‌ತ ಆಗಿದೆ ಅದರ ಅರ್ಥದಲ್ಲಿ ಕರುಣೆಗೆ ಬಹಳ ಒತ್ತು ನೀಡಲಾಗಿದೆ. ಆದ ಕಾರಣ ಈ ಗುಣನಾಮವೂ ಪವಿತ್ರ ಖುರ್‌ಆನಿನಲ್ಲಿ ಅನೇಕ ರೀತಿಯಲ್ಲಿ ಪ್ರಸ್ತಾಪಿಸಲಾಗಿದೆ. **ವಲೌಲಾ ಫಜ್‌ಲುಲ್ಲಾಹಿ ಅಲೈಕುಮ್ ವ ರಹ್ಮತಹೂ ವನ್ನಲ್ಲಾಹ ರೌಫುರ್‍ರಹೀಮ್** (ಅನ್ನೂರ್: 21) ನಿಮ್ಮ ಮೇಲೆ ಅಲ್ಲಾಹನ ಅನುಗ್ರಹ ಮತ್ತು ಕರುಣೆ ಇಲ್ಲದಿರುತ್ತಿದ್ದರೆ ಹಾಗೂ ಅಲ್ಲಾಹನು ದಯಾವಂತನೂ ಕಾರುಣ್ಯವಂತನೂ ಅಲ್ಲದಿರುತ್ತಿದ್ದರೆ (ನೀವು ಸಂಕಷ್ಟಕ್ಕೊಳಗಾಗುತ್ತಿದ್ದಿರಿ).

84. **ಮಾಲಿಕುಲ್ ಮುಲ್‌ಕಿ:** ರಾಜಾಧಿರಾಜ, ಅಧಿಪತಿ.

ಪವಿತ್ರ ಖುರ್‌ಆನಿನಲ್ಲಿ ಈ ಗುಣನಾಮದ ಬಗ್ಗೆ ಹೀಗೆ ಪ್ರಸ್ತಾಪಿಸಲಾಗಿದೆ: **ಖುಲಿಲ್ಲಾಹುಮ್ಮ ಮಾಲಿಕುಲ್ ಮುಲ್‌ಕಿ ತೂತಿಲ್ ಮುಲ್‌ಕ ಮನ್‌ತಶಾಉ ವತನ್‌ಝಿಉಲ್ ಮುಲ್‌ಕು ಮಿಮ್ಮನ್‌ತಶಾಉ** (ಆಲಿ ಇಮ್ರಾನ್: 27) ಹೇಳಿರಿ: 'ಸರ್ವಾಧಿಪತ್ಯದ ಪ್ರಭುವಾದ ಅಲ್ಲಾಹನೇ, ನೀನು ಬಯಸುವವರಿಗೆ, ಆಧಿಪತ್ಯ ನೀಡುತ್ತಿ. ನೀನು ಬಯಸುವವರಿಂದ ಅಧಿಕಾರವನ್ನು ಕಿತ್ತುಕೊಳ್ಳುತ್ತಿ. ನೀನು ಬಯಸುವವರಿಗೆ ಉನ್ನತ ಸ್ಥಾನವನ್ನು ನೀಡುತ್ತಿ.

85. **ಝುಲ್ ಜಲಾಲಿ ವಲ್‌ಇಕ್ರಾಮ್:** ಪ್ರತಾಪವಂತನೂ ಮತ್ತು ಆದರಣೀಯನು.

ಪವಿತ್ರ ಖುರ್‌ಆನಿನ ಸೂರಃ ರಹ್ಮಾನ್‌ನಲ್ಲಿ ಹೀಗೆ ಪ್ರಸ್ತಾಪಿಸಲಾಗಿದೆ: **ತಬಾರಕಸ್ಮು ರಬ್ಬಿಕ ಝಿಲ್ ಜಲಾಲಿ ವಲ್‌ಇಕ್ರಾಮ್** (ಅರ್‍ರಹ್ಮಾನ್: 79) ಪ್ರತಾಪಶಾಲಿಯೂ ಗೌರವಾರ್ಹನೂ ಆದ ನಿನ್ನ ಪ್ರಭುವಿನ ನಾಮ ಅತ್ಯಧಿಕ ಅನುಗ್ರಹಪೂರ್ಣವಾಗಿದೆ.

86. **ಅಲ್‌ಮುಖ್‌ಸಿತ್:** ನ್ಯಾಯ ಒದಗಿಸುವನು, ನ್ಯಾಯಾಧಿಕಾರಿ.

ಪವಿತ್ರ ಖುರ್‌ಆನಿನ ಸೂರಃ ಆಲಿ ಇಮ್ರಾನ್‌ನಲ್ಲಿ ಈ ಗುಣನಾಮದ ಬಗ್ಗೆ ಹೀಗೆ ಪ್ರಸ್ತಾಪಿಸಲಾಗಿದೆ: **ಶಹಿದಲ್ಲಾಹು ಅನ್ನಹು ಲಾ ಇಲಾಹ ಇಲ್ಲ ಹುವ ವಲ್‌ಮಲಾಇಕತು ವೂಲುಲ್ ಇಲ್‌ಮಿ ಖಾಯಿಮನ್ ಬಿಲ್ ಖಿಸ್ತಿ, ಲಾ ಇಲಾಹ ಅಲ್ಲ ಹುವಲ್ ಅಝೀಝುಲ್ ಹಕೀಮ್**. (ಆಲಿ ಇಮ್ರಾನ್:19) ತಾನಲ್ಲದೆ ಬೇರೆ ಆರಾಧ್ಯನಿಲ್ಲವೆಂದು ನ್ಯಾಯೋಚಿತವಾಗಿ ಅಲ್ಲಾಹನು ಸಾಕ್ಷ್ಯ ವಹಿಸುತ್ತಾನೆ. (ಅದೇ ಪ್ರಕಾರ) ದೇವದೂತರು ಮತ್ತು ಜ್ಞಾನಿಗಳು ಸಹ (ಸಾಕ್ಷ್ಯ ವಹಿಸುತ್ತಾರೆ). ಪ್ರತಾಪಶಾಲಿಯೂ ಅಗಾಧಜ್ಞಾನಿಯೂ ಆದ ಅವನಲ್ಲದೆ ಬೇರೆ ಆರಾಧ್ಯನಿಲ್ಲ.

87. **ಅಲ್‌ಜಾಮಿ:** ಎಲ್ಲ ಸೃಷ್ಠಿಯನ್ನು ಒಗ್ಗೂಡಿಸುವವನು, ಒಗ್ಗೂಡಿಸುವವನು.

ಸೂರಃ ಆಲಿ ಇಮ್ರಾನ್‌ನಲ್ಲಿ ಈ ಗುಣನಾಮದ ಬಗ್ಗೆ ಹೀಗೆ ಬಂದಿರುವುದು: **ರಬ್ಬನ ಇನ್ನಕ ಜಾಮಿಉನ್ನಾಸಿ ಲಿಯೌಮಿಲ್ಲಾ ರೈಬ ಫೀಹಿ** (ಆಲಿ ಇಮ್ರಾನ್: 10) ನಮ್ಮ ಪ್ರಭೂ, ನೀನು ಖಂಡಿತವಾಗಿಯೂ ಒಂದು ದಿನ ಮನುಷ್ಯರನ್ನೆಲ್ಲ ಒಂದುಗೂಡಿಸುವವನಾಗಿರುವೆ. ಅದರಲ್ಲೇನೂ ಸಂಶಯವಿಲ್ಲ.

88. **ಅಲ್‌ಗನಿಯ್ಯು:** ಪ್ರತಿಯೊಂದು ರೀತಿಯ ಅವಶ್ಯಕತೆಗಳನ್ನು ಪೂರೈಸುವವನು, ಸಂಪನ್ನ.

ಪವಿತ್ರ ಖುರ್‌ಆನಿನ ಸೂರಃ ಹಜ್ಜ್‌ನಲ್ಲಿ ಈ ಗುಣ ನಾಮವನ್ನು ಹೀಗೆ ಪ್ರಸ್ತಾಪಿಸಲಾಗಿದೆ: **ಲಹೂ ಮಾಫಿಸ್ಸಮಾವಾತಿ ವಮಾ ಫಿಲ್‌ಅರ್‌ಝಿ ವ ಇನ್ನಲ್ಲಾಹ ಲಹುವಲ್ ಗನಿಯ್ಯುಲ್ ಹಮೀದ್** (ಅಲ್‌ಹಜ್ಜ್:65) ಆಕಾಶಗಳಲ್ಲಿ ಮತ್ತು ಭೂಮಿಯಲ್ಲಿರುವ ಎಲ್ಲವೂ ಅವನದ್ದಾಗಿದೆ. ನಿಶ್ಚಯವಾಗಿಯೂ ಅಲ್ಲಾಹನು ಸ್ವಯಂಪೂರ್ಣನೂ ಸ್ತುತ್ಯರ್ಹನೂ ಆಗಿದ್ದಾನೆ.

89. **ಅಲ್‌ಮುಗ್‌ನಿ:** ಸಂಪತ್ತು ನೀಡುವವನು.

ಪವಿತ್ರ ಖುರ್‌ಆನಿನ ಸೂರಃ ನೂರಿನಲ್ಲಿ ನಿಕಾಹ್ ಸಾಮರ್ಥ್ಯ ಇಲ್ಲದವರ ಬಗ್ಗೆ ಹೀಗೆ ಪ್ರಸ್ತಾಪಿಸಲಾಗಿದೆ: **ವಲ್‌ಯಸ್‌ತಅ್‌ಫಿಫಿಲ್ಲಝೀನ ಲಾ ಯಜಿದೂನ ನಿಕಾಹನ್ ಹತ್ತಾ ಯುಗ್‌ನಿಯಹುಮುಲ್ಲಾಹು ಮಿನ್ ಫಝ್‌ಲಿಹಿ** (ಅನ್ನೂರ್: 34) ಮದುವೆಯಾಗಲು ಅನುಕೂಲವಿಲ್ಲದವರು ಅಲ್ಲಾಹನು ತನ್ನ ಅನುಗ್ರಹದಿಂದ ಅವರನ್ನು ಸಂಪನ್ನಗೊಳಿಸುವ ತನಕ ತಮ್ಮ ಚಾರಿತ್ರ್ಯವನ್ನು ಕಾಪಾಡಿಕೊಳ್ಳಲಿ.

90. **ಅಲ್‌ಮಾನಿಉ:** ತಡೆ ಹಿಡಿಯುವವನು, ತನ್ನ ದಾಸರ ತೊಂದರೆಗಳನ್ನು ತಡೆಹಿಡಿಯುವವನು.

91. **ಅಝ್ಝಾರ್‍ರು:** ಶಿಕ್ಷೆ ಕೊಡುವವನು, ಕೆಟ್ಟ ಕಾರ್ಯಗಳಿಗೆ ಕೆಟ್ಟ ಪ್ರತಿಫಲ ನೀಡುವವನು.

92. **ಅನ್ನಾಫಿಉ:** ಫಲ ನೀಡುವವನು.

93. **ಅನ್ನೂರು:** ಪ್ರಕಾಶಮಯನು.

ಈ ಗುಣನಾಮದ ಬಗ್ಗೆ ಪವಿತ್ರ ಖುರ್‌ಆನಿನ ಸೂರಃ ನೂರಿನಲ್ಲಿ ಹೀಗೆ ಪ್ರಸ್ತಾಪಿಸಲಾಗಿದೆ: **ಅಲ್ಲಾಹು ನೂರುಸ್ಸಮಾವಾತಿ ವಲ್ ಅರ್ಝ್** (ಅನ್ನೂರ್:36) ಅಲ್ಲಾಹನು ಆಕಾಶಗಳ ಮತ್ತು ಭೂಮಿಯ ಪ್ರಕಾಶವಾಗಿದ್ದಾನೆ.

94. **ಅಲ್‌ಹಾದಿ:** ಮಾರ್ಗ ದರ್ಶನ ನಿಡುವವನು, ನೇರವಾದ ಮಾರ್ಗ ನೀಡುವವನು.

ಪವಿತ್ರ ಖುರ್‌ಆನಿನಲ್ಲಿ ಹೀಗೆ ಪ್ರಸ್ತಾಪಿಸಲಾಗಿದೆ: ಅಲ್ಲಾಹನು ತಾನಿಚ್ಛಿಸುವವರನ್ನು ನೇರವಾದ ದಾರಿಯಲ್ಲಿ ನಡೆಸುತ್ತಾನೆ.

95. **ಅಲ್‌ಬದೀಉ:** ಉಗಮ ಸ್ಥಾನ.

ಈ ಗುಣನಾವುದ ಬಗ್ಗೆ ಪವಿತ್ರ ಖುರ್‌ಆನಿನಲ್ಲಿ ಹೀಗೆ ಪ್ರಸ್ತಾಪಿಸಲಾಗಿದೆ: **ಬದೀಉಸ್ಸಮಾವಾತಿ ವಲ್‌ಅರ್‌ಝ್, ವ ಇಝಾ ಖಝಾ ಅಮ್‌ರನ್ ಫಿನ್ನಮಾ ಯಖೂಲೂಲಹು ಕುನ್ ಫ ಯಕೂನ್** (ಅಲ್ ಬಖರ: 118) ಆಕಾಶಗಳ ಮತ್ತು ಭೂಮಿಯ ನಿರ್ಮಾತೃ ಅವನೇ. ಯಾವುದಾದರೊಂದು ಕಾರ್ಯ ಆಗಬೇಕೆಂದು ಅವನು ನಿರ್ಣಯಿಸಿದರೆ, 'ಆಗು' ಎಂದು ಮಾತ್ರ ಅವನು ಹೇಳುತ್ತಾನೆ. ಆಗ ಅದು ಆಗುತ್ತದೆ.

96. **ಅಲ್‌ಬಾಖಿ:** ಶಾಶ್ವತವಾದವನು.

ಸೂರಃ ರಹ್ಮಾನಿನಲ್ಲಿ ಹೀಗೆ ಪ್ರಸ್ತಾಪವಿದೆ: **ವಯಬ್‌ಖ ವಜ್‌ಹು ರಬ್ಬಿಕ ಝುಲ್ ಜಲಾಲಿ ವಲ್‌ಇಕ್ರಾಮ್** (ಅರ್‍ರಹ್ಮಾನ್:28) ಪ್ರತಾಪಶಾಲಿಯೂ ಅತ್ಯಂತ ಆದರಣೀಯನೂ ಆದ ನಿನ್ನ ಪ್ರಭುವಿನ ವದನ (ಉದ್ದೇಶಿತ ಕಾರ್ಯಗಳು) ಮಾತ್ರ ಬಾಕಿಯುಳಿಯುವುದು.

97. **ಅಲ್‌ವಾರಿಸು:** ಉತ್ತರಾಧಿಕಾರಿ, ವಾರಿಸುದಾರ.

ಸೂರಃ ಅಲ್‌ಹಿಜರ್‌ನಲ್ಲಿ ಹೀಗೆ ಪ್ರಸ್ತಾವನೆ ಇದೆ: **ವಿನ್ನ ಲನಹ್‌ನು ನುಹ್‌ಯಿ ವ ನುಮೀತು ವನಹ್‌ನುಲ್ ವಾರಿಸೂನ್** (ಅಲ್‌ಹಿಜರ್:24) ದಿಟವಾಗಿಯೂ ಜೀವನೀಡುವವರೂ ಮರಣ ಪಡಿಸುವವರೂ ನಾವೇ ಆಗಿದ್ದೇವೆ. ವಾರಸುದಾರರು ಸಹ ನಾವೇ.

98. **ಅರ್‍ರಶೀದ್:** ಸನ್ಮಾರ್ಗದಲ್ಲಿ ನಡೆಸುವವನು, ಮಾರ್ಗದರ್ಶಕ.

ಈ ಗುಣನಾವುದ ಬಗ್ಗೆ ಪವಿತ್ರ ಖುರ್‌ಆನಿನಲ್ಲಿ ಹೀಗೆ ಪ್ರಸ್ತಾಪಿಸಲಾಗಿದೆ: **ವಲಖದ್ ಆತೈನಾ ಇಬ್ರಾಹೀಮ ರುಶ್‌ದಹು ಮಿನ್ ಖಬ್ಲು ಕುನ್ನಾ ಬಿಹೀ ಆಲಿಮೀನ್** (ಅಲ್‌ಅಂಬಿಯಾ:52) ನಿಶ್ಚಯವಾಗಿಯೂ ಇದಕ್ಕಿಂತ ಮುಂಚೆ ನಾವು ಇಬ್‌ರಾಹೀಮರಿಗೆ ಅವರ (ಶ್ರೇಷ್ಠತೆಗೆ ತಕ್ಕುದಾದ) ಮಾರ್ಗದರ್ಶನ ನೀಡಿದ್ದೆವು. ಅವರ ಬಗ್ಗೆ ನಾವು ಚೆನ್ನಾಗಿ ಅರಿತಿದ್ದೆವು.

99. **ಅಸ್ಸಬೂರು:** ತಾಳ್ಮೆವುಳ್ಳವನು. ಶಿಕ್ಷೆ ನೀಡುವುದರಲ್ಲಿ ನಿಧಾನ.

*************

# ದೇವಾಸ್ತಿತ್ವದ ಮಹೋನ್ನತ ಪ್ರೇಮಿ ಪ್ರವಾದಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮ್

**ಸಲೀಖ್ ಅಹ್ಮದ್ ಸಾಯಕ್, ಮುರಬ್ಬಿ ಸಿಲ್‌ಸಿಲಾ, ನಝಾರತ್ ಉಲಿಯಾ, ಖಾದಿಯಾನ್**

**ಖಲಾಎಖ್ ಕೆ ದಿಲ್ ಥೇ ಯಖೀನ್ ಸೇ ತಹೀ**
**ಬುತೋಂ ನೇ ಥೀ ಹಖ್ ಕೀ ಜಗಹ್ ಘೇರ್ ಲೀ**
**ಝಲಾಲತ್ ಥೀ ದುನಿಯಾಂ ದುನಿಯಾ ಪೇ ವೊ ಛಾ ರಹೀ**
**ಹುವಾ ಆಪ್ಕೇ ದಮ್ ಸೇ ಉಸ್ಕಾ ಖಿಯಾಮ್**
**ಅಲೈಕಸ್ಸಲಾತು ಅಲೈಕಸ್ಸಲಾಮ್**

ಜನರ ಹ್ರದಯಗಳು ವಿಶ್ವಾಸದಿಂದ ಮುಕ್ತವಾಗಿದ್ದವು. ಸತ್ಯದ ಜಾಗವನ್ನು ವಿಗ್ರಹಗಳು ಹಿಡಿದಿದ್ದವು. ಮೂಡತೆ ಎಷ್ಟೊಂದು ಆವರಿಸಿತ್ತೆಂದರೆ ದೇವ ಏಕತ್ವ ಹುಡುಕಿದರೂ ಸಿಗುತ್ತಿರಲಿಲ್ಲ ಅದು ಅವರಿಂದ ಸ್ಥಾಪನೆಯಾಯಿತು. **ಅಲೈಕಸ್ಸಲಾತು ಅಲೈಸ್ಸಲಾಮ್**

ಲೋಕೋದ್ಧಾರಕರಾದ ಹಝ್ರತ್ ಅಖ್‌ದಸ್ ಮುಹಮ್ಮದ್ ಮಸ್ತಫಾ(ಸ) ರವರ ಅಸ್ತಿತ್ವವು ಅಲ್ಲಾಹನ ಅಸ್ತಿತ್ವದ ಪ್ರಕಟಿತ ರೂಪದಂತಿತ್ತು. ಅವರ ಪ್ರತಿ ನಡೆ ನುಡಿ ಅಲ್ಲಾಹನ ಪ್ರೇಮದಿಂದ ಪ್ರೇರಿತವಾಗಿತ್ತು. ಅವರ ಜೀವನ ಅಲ್ಲಾಹನ ಸಂಪ್ರೀತಿಗೆ ಮಾತ್ರ ಮೀಸಲಾಗಿತ್ತು. ಆ ಕಾರಣದಿಂದಲೇ ಅಲ್ಲಾಹನು ಸಹ ಆಕಾಶದಿಂದ ಸಾಕ್ಷಿ ನುಡಿದನು. ಹೇಳು, ನನ್ನ ನಮಾಝ್, ನನ್ನ ತ್ಯಾಗ, ನನ್ನ ಜೀವನ, ನನ್ನ ಮರಣ ಎಲ್ಲವೂ ಸರ್ವಲೋಕ ಪರಿಪಾಲಕನಾದ ಅಲ್ಲಾಹನಿಗಾಗಿವೆ. ಅವನಿಗೆ ಯಾರು ಸಹಭಾಗಿ ಇಲ್ಲ. ನಾನು ಹಾಗೆ ಆಜ್ಞಾಪಿಸಲ್ಪಟ್ಟಿರುವೆನು. ಆಜ್ಞಾನುಸಾರಿಗಳಲ್ಲಿ ನಾನು ಮೊದಲಿಗನು. (ಅಲ್‌ಅನ್‌ಆಂ:163–164)

ಅವರ ಪರಿಶುದ್ಧ ವ್ಯಕ್ತಿತ್ವದ ವೈಶಿಷ್ಟ್ಯವೇನಿತ್ತೆಂದರೆ ಅವರ ಮೇಲೆ ಅಲ್ಲಾಹನು ತನ್ನ ರಹಸ್ಯಗಳನ್ನು ಅರುಹುತ್ತಿದ್ದನು. ಅದು ಅವರ ಹೊರತು ಯಾರ ಮೇಲೂ ಆಗಿರಲಿಲ್ಲ. ಆದುದರಿಂದ ಅವರು ಹೇಳಿದರು. ಅಲ್ಲಾಹನು ನನ್ನ ಮೇಲೆ ತನ್ನ ಸ್ತುತಿ ಮಹಿಮೆಯ ಪರಿಜ್ಞಾನ ವ್ಯಕ್ತಪಡಿಸಿದಂತೆ ಯಾರ ಮೇಲೂ ವ್ಯಕ್ತಪಡಿಸಲಿಲ್ಲ. (ಸಹೀಹ್ ಬುಖಾರಿ, ಕಿತಾಬುತ್ತಫ್‌ಸೀರ್, ಸೂರ ಬನೀ ಇಸ್ರಾಈಲ್)

ಅಲ್ಲಾಹನ ಅಸ್ತಿತ್ವದ ಕುರಿತು ಅವರಿಗೆ ಅವರ ಹೃದಯದಲ್ಲಿ ಎಷ್ಟೊಂದು ವ್ಯಾಮೋಹ ಆವರಿಸಿತ್ತೆಂದರೆ ಅವರ ಜೀವನ ಅತಿ ಸಣ್ಣ ಭಾಗದಿಂದ ಹಿಡಿದು ಅತಿ ದೊಡ್ಡ ಕ್ರಮಗಳಿಂದ ಬಹು ಸ್ಪಷ್ಟವಾಗಿ ಗೋಚರವಾಗುತ್ತದೆ ಅದರ ಕೆಲವು ಘಟನೆಗಳು ಓದುಗರ ಸೇವೆಯಲ್ಲಿ ಪ್ರಸ್ತುತವಿದೆ.

ಹಝ್ರತ್ ರಸೂಲುಲ್ಲಾಹ್(ಸ) ರವರ ಆರಾಧನೆಗಳ ಮಟ್ಟ ತುಂಬ ಉನ್ನತಮಟ್ಟವೂ ಉತ್ತಮವೂ ಆಗಿತ್ತು. ಪ್ರಾರಂಭದಿಂದಲೇ ಅವರು ಅಲ್ಲಾಹನ ಪರಿಪೂರ್ಣ ಮತ್ತು ಆತ್ಮಭರಿತ ಪ್ರೀತಿಯಿಂದ ಅಲ್ಲಾಹನನ್ನು ಪ್ರೀತಿಸುತ್ತಿದ್ದರು ಅದು ಬಾಲ್ಯಾವಸ್ಥೆಯಾಗಲೀ, ಯೌವನಾವಸ್ಥೆಯಾಗಲೀ, ಎಲ್ಲ ಕಾಲಗಳಲ್ಲೂ ಕೇವಲ ದೇವಸ್ಮರಣೆ, ಆರಾಧನೆಗಳು ಅವರ ಉದ್ದೇಶವಾಗಿತ್ತು. ಲೋಕದಿಂದ ಪ್ರತ್ಯೇಕಗೊಂಡು ಏಕಾಂತದಲ್ಲಿ ತಮ್ಮ ಪ್ರಿಯನೊಡನೆ ಸಂಪರ್ಕ ನಡೆಸುವುದರಲ್ಲಿಯೇ ಅವರ ಮನಸ್ಸಿಗೆ ಶಾಂತಿ ಹಾಗೂ ಸಮಾಧಾನದ ವಿಷಯವಾಗಿತ್ತು. ಆದುದರಿಂದ ಯೌವನದಲ್ಲಿಯೇ ಅವರು ಸತ್ಯ ಸಜ್ಜನಿಕೆಯ ಸ್ವಪ್ನಗಳನ್ನು ಕಾಣುವ ಶ್ರೇಣಿ ಪ್ರಾರಂಭವಾಗಿತ್ತು. (ಸಹೀಹ್ ಬುಖಾರಿ, ಭಗ ಬದಅಲ್ ವಹೀ).

ಯೌವನದಲ್ಲಿ ಹಝ್ರತ್ ರಸೂಲುಲ್ಲಾಹ್(ಸ) ಪ್ರತಿ ವರ್ಷದ ಒಂದು ತಿಂಗಳಾದರೂ ಇಹ್‌ತಿಕಾಫ್ (ದೇವಸ್ಮರಣೆಗಾಗಿ ಮೀಸಲು) ಮಾಡುತ್ತಿದ್ದರು. ಮತ್ತು ಏಕಾಂತದಲ್ಲಿ ಅಲ್ಲಾಹನನ್ನು ಸ್ಮರಿಸುತ್ತಿದ್ದರು. ಮೂಢತೆಯ ಕಾಲದಲ್ಲಿ ಖುರೈಶರ ಇಹ್‌ತಿಕಾಫ್ ಮುಗಿಸಿ ಮರಳಿ ಬಂದು ಕಾನಕಅ್‌ಬದ ತವಾಫ್ ಮಾಡುತ್ತಿದ್ದರು. ಮತ್ತೆ ಮನೆಗೆ ಮರಳುತ್ತಿದ್ದರು. ಹುಝೂರ್(ಸ) ರವರಿಗೆ ಮೊದಲ ದೇವವಾಣಿ (ವಹಿ) ಆದಾಗ ಅದು ರಂಝಾನ್ ತಿಂಗಳಾಗಿತ್ತು. ಆಗ ಅವರು ಇಹ್‌ತಿಕಾಫ್‌ನಲ್ಲಿದ್ದರು. (ಅಸ್ಸೀರತುನ್ನಬವೀಯ ಲಿಇಬ್ನೆ ಹಿಶ್ಶಾಮ್, ಸಂಪುಟ–1, ಪುಟ–250–251)

ಆರಾಧನೆಯ ಈ ಕ್ರಮ ಕೇವಲ ಫರ್ಜ್ ನಮಾಝುಗಳಿಗೆ ಮಾತ್ರವಿರಲಿಲ್ಲ. ವಿಶೇಷವಾಗಿ ರಾತ್ರಿಯ ಸಮಯ ಅವರು ಅಲ್ಲಾಹನ ಆಳವಾದ ಪ್ರೀತಿಯಿಂದ ತುಂಬಿ ತುಳುಕಿಸಿ ಅತ್ಯಂತ ಶ್ರದ್ಧಾಭಾವ ನಮ್ರತೆಯಿಂದ ದೀರ್ಘವಾದ ಮತ್ತು ಸುಂದರವಾದ ಆರಾಧನೆಗಳು ಮಾಡುತ್ತಿದ್ದರು. ಅವರ ಕಾಲುಗಳು ಸಹ ಬಾತು ಹೋಗುತ್ತಿದ್ದವು. ತನ್ನ ಪರಿಪಾಲಕನ ಆರಾಧನೆ ಅವರಿಗೆ ಎಲ್ಲ ಇತರ ವಸ್ತುಗಳಿಗಿಂತ ಅಧಿಕ ಪ್ರಿಯವಾಗಿದ್ದವು.

ಅವರು ಏಕಕಾಲಕ್ಕೆ 9 ಪತ್ನಿಯರು ಹೊಂದಿದ್ದರು. ಅವರ ಅತ್ಯಂತ ಪ್ರೀತಿಯ ಪತ್ನಿ ಹಝ್ರತ್ ಆಯಿಶಾ(ರ) ರ ಬಳಿ ಒಂಬತ್ತನೇ ದಿವಸಕ್ಕೆ ಪಾಳಿ ಬರುತ್ತಿತ್ತು. ಒಮ್ಮೆ ಚಳಿಗಾಲದ ಚಳಿಹಿಡಿದ ರಾತ್ರಿಯಲ್ಲಿ ಅವರ ಹೊದಿಕೆಯಲ್ಲಿ ಸೇರಿದ ನಂತರ ಅವರೊಂದಿಗೆ ಕೇಳಿದರು. ಆಯಿಶಾ(ರ)! ನೀವು ಅನುಮತಿ ನೀಡಿದರೆ ಇಂದಿನ ರಾತ್ರಿ ನಾನು ನನ್ನ ಪರಿಪಾಲಕನಾದ ದೇವನ ಆರಾಧನೆಯಲ್ಲಿ ಕಳೆಯುವೆನು. ಅವರು ಸಂತೋಷದಿಂದ ಅನುಮತಿ ನೀಡಿದರು. ಅವರು ರಾತ್ರಿಯೆಲ್ಲ ಆರಾಧನೆಯಲ್ಲಿ ಕಳೆದರು. ಮತ್ತು ಅಳುತ್ತ ಸಾಷ್ಟಾಂಗದ ಸ್ಥಳವನ್ನು ಕಣ್ಣೀರಿನಿಂದ ಒದ್ದೆಗೊಳಿಸಿದರು. (ದುರ್ರೆ ಮನ್ಸೂರ್ ಫಿತ್ತಫ್‌ಸೀರ್ ಅಲ್‌ಮನ್‌ಸೂರ್ ಲಿಲ್‌ಸುಯೂತಿ, ಸಂಪುಟ–6, ಪುಟ–27, ಬೈರೂತ್)

ಪ್ರೇಮದ ಈ ಪರಿ ನಬಿ(ಸ) ರವರ ದೇವ ಏಕತ್ವ ಸ್ಥಾಪನೆಯ ಪ್ರಯತ್ನಗಳಿಂದಲೂ ಸ್ಪಷ್ಟವಾಗುತ್ತವೆ. ಅವರ ಶರೀಅತ್ತಿನ ಮೊದಲ ಪಾಠವೇ ಕಲಿಮ ತೌಹಿದ್ ಲಾ ಇಲಾಹ ಇಲ್ಲಲ್ಲಾಹ್ ಆಗಿತ್ತು. ಅಂದರೆ ಅಲ್ಲಾಹನ ಹೊರತು ಯಾರೂ ಆರಾಧ್ಯನಿಲ್ಲ. ಅವರ ಹಾಸಿಗೆ ಹೊದಿಕೆ ಎಲ್ಲವು ಏಕದೇವತ್ವವಾಗಿತ್ತು. ಹಗಲಿರುಳು ಅಲ್ಲಾಹನ ಏಕತ್ವ ಸ್ಥಾಪನೆಗಾಗಿಯೇ ಮಿಡಿಯುತ್ತಿದ್ದರು.

ಹಗಲೇರಿದರೆ ಅವರ ತುಟಿಗಳಲ್ಲಿ ಈ ದುಆ ಇರುತಿತ್ತು. ನಾವು ಇಸ್ಲಾಮಿನ ಪ್ರಕೃತಿ ಮತ್ತು ಕಲಿಮ ಇಖ್ಲಾಸ್ (ಅಂದರೆ ಏಕತ್ವ)ದ ಮೇಲೆ ಮತ್ತು ತನ್ನ ನಬಿ ಮುಹಮ್ಮದ್(ಸ) ರವರ ಧರ್ಮ ಮತ್ತು ತನ್ನ ಪಿತ ಇಬ್ರಾಹಿಮ್‌ರವರ ಸಂಪ್ರದಾಯದ ಮೇಲೆ ಹಗಲು ಪಡೆದಿರುವೆನು. ಅವರು ಏಕದೇವ ವಾದಿಗಳಾಗಿದ್ದರು. ಬಹುದೇವಾರಾಧ್ಯರಾಗಿರಲಿಲ್ಲ." (ಮುಸ್ನದ್ ಅಹ್ಮದ್, ಸಂಪುಟ–3, ಪುಟ–406, ಬೈರೂತ್)

ಸಂಜೆ ಆಗುತ್ತಿದ್ದರೆ ಈ ದುಆ ನಾಲಿಗೆಯ ಮೇಲೆ ಇರುತಿತ್ತು. "ನಾವು ಮತ್ತು ಪ್ರಪಂಚವೆಲ್ಲ ಅಲ್ಲಾಹನಿಗಾಗಿ ಸಂಧ್ಯಾಕಾಲ ಪ್ರವೇಶಿಸಿದೆವು. ಎಲ್ಲ ಸ್ತುತಿಗಳು ಅಲ್ಲಾಹನಿಗೆ ಮಾತ್ರ ಸಲ್ಲುತ್ತದೆ. ಅಲ್ಲಾಹನ ಹೊರತು ಯಾರೂ ಆರಾಧ್ಯನಲ್ಲ. ಅವನು ಏಕನು. ಅವನ ಯಾರೂ ಸಹಭಾಗಿಗಳಲ್ಲ. ಅವನೇ ರಾಜಾಧಿರಾಜ. ಎಲ್ಲ ಸ್ತುತಿಗಳಿಗೆ ಅವನು ಮಾತ್ರ ಅರ್ಹನಾಗಿರುವನು. ಅವನು ಸರ್ವ ಸಮೃದ್ಧನು. (ಮ'ುುಸ್ಲಿಂ, ಕಿತಾಬುಝ್ಝಿಕರ್: 4901)

ಯಾವುದೇ ಆಪತ್ತು ಎದುರಾದರೆ ಈ ದುಆ ಮಾಡುತ್ತಿದ್ದರು. "ಅಲ್ಲಾಹನ ಹೊರತು ಯಾರೂ ಆರಾಧ್ಯನಲ್ಲ. ಅವನು ಮಹೋನ್ನತ ಆಕಾಶದ ಸೃಷ್ಟಿಕರ್ತನಾಗಿದ್ದಾನೆ. ಅಲ್ಲಾಹನ ಹೊರತು ಯಾರೂ ಆರಾಧ್ಯನಲ್ಲ. ಅವನು ಭೂಮ್ಯಾಕಾಶಗಳ ಪ್ರಬು ಆಗಿದ್ದಾನೆ. ಅಲ್ಲಾಹನ ಹೊರತು ಯಾರೂ ಆರಾಧ್ಯನಲ್ಲ. ಅವನು ಮಹೋನ್ನತ ಆಕಾಶಗಳ ಸೃಷ್ಟಿಕರ್ತನಾಗಿದ್ದಾನೆ. (ಬುಖಾರಿ. ಕಿತಾಬುದ್ದಅವಾತ್, ಭಾಗ ಅದ್ದುಆಉ ಇಂದಲ್‌ಕರ್ಬ್: 5869)

ಹಝ್ರತ್ ಮುಹಮ್ಮದ್ ಮುಸ್ತಫಾ(ಸ) ಅವರೇ ಆಗಿದ್ದರು. ಅವರು ಬಹುದೇವರಾಧನೆ ವಿಗ್ರಹಪೂಜೆಗಳ ವಾತಾವರಣದಲ್ಲಿ ಏಕದೇವನ ಕಹಳೆ ಊದಿದರು. ಮತ್ತು ಮನಸ್ಸು ಪೂರ್ತಿ ಏಕದೇವನ ಪತಾಕೆ ಎತ್ತಿಹಿಡಿದರು ಎಂದು ಅದರ ಮೇಲೆ ಅಡ್ಡಿ ಬರಲು ಬಯಸಲಿಲ್ಲ ಈ ಏಕದೇವತ್ವ ಕಲಿಮಗೋಸ್ಕರ ಎಲ್ಲ ತರಹದ ದು:ಖಗಳನ್ನು ಸಹಿಸಿ

ಕೊಂಡರು, ಕಷ್ಟಗಳನ್ನು ಎದುರಿಸಿದರು. ತನ್ನ ಆಪ್ತಮಿತ್ರರನ್ನು ಬಲಿಕೊಟ್ಟರು. ಸ್ವಯಂ ತನ್ನ ಪ್ರಾಣ ತ್ಯಾಗ ಮಾಡಲು ಎಂದೂ ಹಿಂಜರಿಯಲಿಲ್ಲ. ಯಾವಾಗಲೂ ಏಕದೇವತ್ವದ ಸ್ಥಾಪನೆಗೋಸ್ಕರ ಸ್ಥಿರಚಿತ್ತರಾಗಿ ಎಲ್ಲ ಆಪತ್ತುಗಳನ್ನು ಎದುರಿಸಿದರು. ಅವರು ಏಕದೇವತ್ವ ವಿಶ್ವಾಸದಿಂದಲೇ ಮುಕ್ತಿ ಸಾಧ್ಯ ಎಂದು ಸಾರಿದರು. ಮತ್ತು ಹೇಳಿದರು. ಯಾರು ಸತ್ಯ ಮನಸ್ಸಿನಿಂದ ಏಕದೇವತ್ವವನ್ನು ಸಾರುವರೇ ಅವನು ಸ್ವರ್ಗಪ್ರಾಪ್ತಿ ಮಾಡುವನು. (ಮುಸ್ನದ್ ಅಹ್ಮದ್, ಸಂಪುಟ–4, ಪುಟ–411, ಬೈರೂತ್)

ಅದಲ್ಲದೇ ಜೀವನದ ಅತಿ ಭಯಂಕರವಾದ ಸ್ಥಿತಿಗಳನ್ನು ಸ್ವಯಂ ರಸೂಲುಲ್ಲಾಹ್(ಸ) ಮತ್ತು ಅವರ ಸಹಾಬರುಗಳ ಪ್ರಾಣಗಳು ಅಪಾಯದಲ್ಲಿದ್ದರೂ ಅವರು ಏಕದೇವತ್ವದ ರಕ್ಷಣೆಗೋಸ್ಕರ ಕಿಂಚಿತ್ತೂ ಪ್ರಯತ್ನ ಬಿಡಲಿಲ್ಲ. ಬದಲು ಅವರು ಏಕದೇವತ್ವ ಘನತೆ ಸ್ಥಾಪಿಸಲು ಅಪರಿಮಿತ ವೈಭವ ತೋರಿಸಿದರು. ಒಂದು ವರದಿಯಲ್ಲಿ ಬರುತ್ತದೆ. ಹಝ್ರತ್ ಬಿರಾ ಹೇಳುತ್ತಾರೆ. ರಸೂಲುಲ್ಲಾಹ್(ಸ) ಉಹುದ್ ಯುದ್ಧದ ದಿನ ಹಝ್ರತ್ ಅಬ್ದುಲ್ಲ ಬಿನ್ ಜಬೀರ್(ರ) ರವರನ್ನು ಭೂ ಸೈನ್ಯದ 50 ಜನರೊಂದಿಗೆ ನಿಯುಕ್ತಿಗೊಳಿಸಿದರು ಮತ್ತು ಉಪದೇಶಿಸಿದರು. ನೋಡಿ ನಮ್ಮನ್ನು ಜಾನುವಾರುಗಳು ಕಿತ್ತು ತಿಂದರೂ ಈ ಸ್ಥಳ ಬಿಡಬಾರದು. ನಾನು ನಿಮಗೆ ಹೇಳಿ ಕಳುಹಿಸುವವರೆಗೆ. ಶತ್ರು ಸೈನ್ಯ ಸೋಲು ಅನುಭವಿಸಿದೆ ಎಂದು ಒಂದು ವೇಳೆ ನಿಮಗೆ ತಿಳಿದರು. ನಾನು ಹೇಳಿ ಕಳುಹಿಸುವವರೆಗೆ ಈ ಸ್ಥಳ ಬಿಡಬಾರದು. ಅನಂತರ ಯುದ್ಧವಾಯಿತು. ಮುಸಲ್ಮಾನರು ಅವಿಶ್ವಾಸಿಗಳನ್ನು ಸೋಲಿಸಿದರು. ಇದನ್ನು ನೋಡಿ ಹಝ್ರತ್ ಅಬ್ದುಲ್ಲ ಬಿನ್ ಜಾಬೀರರ ಸಂಗಡಿಗರು ಹೇಳಿದರು. ಓ ನನ್ನ ಸಹೋದರರೇ ವಿಜಯವಾಯಿತು. ವಿಜಯದ ಸಮಯವಿದು. ನಮ್ಮ ಸಂಗಡಿಗರು ವಿಜಯಿಯಾದರು ಮತ್ತಿನ್ನೇನು ನಿರೀಕ್ಷಿಸುತಿದ್ದೀರಿ. ಆಗ ಅಬ್ದುಲ್ಲ ಬಿನ್ ಜಬೀರ್(ರ) ಹೇಳಿದರು. ನೀವು ರಸೂಲುಲ್ಲಾಹ್(ಸ) ಅವರ ಆಜ್ಞೆ ಮರೆತುಬಿಟ್ಟಿರೇ. ಅವರು ಹೇಳಿದರು. ಅಲ್ಲಾಹನಿಗೆ ನಾವು ಸಹ ಇತರ ಸೈನ್ಯದೊಡನೆ ಸೇರಿ ಯುದ್ಧ ಸಾಮಗ್ರಿಗಳನ್ನು ಪಡೆಯುವೆವು ಸೈನ್ಯದೊಡನೆ ಸೇರಿಕೊಂಡಾಗ ಅವರ ಮುಖಗಳು ಮರಳಿದವು. ಮತ್ತು ಸೋಲನ್ನನುಭವಿಸಿ ಓಡತೊಡಗಿದರು. ಪವಿತ್ರ ಖುರ್‌ಆನ್‌ನಲ್ಲಿ ಈ ವಚನ ಅವತರಿಸಿತು. “ನೆನಪಿಸಿರಿ. ರಸೂಲುಲ್ಲಾಹ್(ಸ) ನಿಮಗೆ ಹಿಂದೆ ಬರಲು ಕರೆ ನೀಡುತ್ತಿದ್ದರು. ರಸೂಲುಲ್ಲಾಹ್(ಸ) ರೊಂದಿಗೆ ಕೇವಲ 12 ಜನರಿದ್ದರು. ಮತ್ತೆ ಯಾರೂ ಇರಲಿಲ್ಲ. ಆಗ ಅವಿಶ್ವಾಸಿಗಳು ನಮ್ಮ 70 ಸೈನಿಕರು ನಷ್ಟವನ್ನುಂಟು ಮಾಡಿದರು. ರಸೂಲುಲ್ಲಾಹ್(ಸ) ಮತ್ತು ಅವರ ಸಹಾಬರು ಬದರ್ ಯುದ್ಧದಲ್ಲಿ ಅವಿಶ್ವಾಸಿಗಳ 140 ಸೈನಿಕರ ನಷ್ಟವನ್ನುಂಟು ಮಾಡಿದರು. 70 ಜನ ಹತರಾಗಿದ್ದರು ಮತ್ತು 70 ಜನ ಸೆರೆಹಿಡಿಯಲ್ಪಟ್ಟಿದ್ದರು.

ಒಟ್ಟಿನಲ್ಲಿ ಸೈನ್ಯವು ಚದುರಿದಾಗ ರಸೂಲುಲ್ಲಾಹ್(ಸ) ಅವರ ಬಳಿ ಕೇವಲ ಒಂದು ಸಣ್ಣದಾದ ಗುಂಪು ಬಾಕಿ ಉಳಿದಿತ್ತು ಅಗ ಅಬುಸುಫಿಯಾನ್ ಕೂಗಿ ಹೇಳಿದನು. ನಿಮ್ಮಲ್ಲಿ ಮುಹಮ್ಮದ್(ಸ) ಇದ್ದಾರೆಯೇ, ಈ ಮಾತನ್ನು ಮೂರು ಸಲ ಉಚ್ಛರಿಸಿದನು. ಆದರೆ ರಸೂಲುಲ್ಲಾಹ್(ಸ) ಅವನಿಗೆ ಉತ್ತರ ನೀಡಲು ಅನುಮತಿ ನೀಡಲಿಲ್ಲ. ಅನಂತರ ಅಬುಸುಫಿಯಾನ್ ಮೂರು ಸಲ ಗಟ್ಟಿ ಸ್ವರದಲ್ಲಿ ಹೇಳಿದನು. ನಿಮ್ಮಲ್ಲಿ ಇಬ್ನು ಅಬಿ ಖಹಾಫ್ (ಹ. ಅಬೂಬಕರ್) ಇದ್ದಾರೆಯೇ, ಅದಕ್ಕೂ ಉತ್ತರ ನೀಡಲಾಗಲಿಲ್ಲ. ಮತ್ತೆ ಅವನು ಮೂರು ಸಲ ಹೇಳಿದ. ನಿಮ್ಮಲ್ಲಿ ಇಬ್ನು ಖತ್ತಾಬ್ (ಹ. ಉತುರ್) ಇದ್ದಾರೆಯೇ, ಅದಕ್ಕೂ ಉತ್ತರ ದೊರೆಯಲಿಲ್ಲ. ಆಗ ಅವನು ತನ್ನ ಸಂಗಡಿಗರಿಗೆ ಸಂಬೋಧಿಸಿ ಹೇಳಿದನು. ಈ ಜನರು ಹತರಾಗಿದ್ದಾರೆ. ಈ ಮಾತನ್ನು ಕೇಳಿ ಹಝ್ರತ್ ಉಮರ್ ಅವರಿಗೆ ಸಹಿಸಲಾಗಲಿಲ್ಲ. ಹೇಳಿದರು. ಓ ಅಲ್ಲಾಹನ ಶತ್ರುವೇ ನೀನು ಸುಳ್ಳು ಹೇಳುತಿದ್ದಿ, ನೀನು ಹೇಳಿದ ಹೆಸರುಗಳೆಲ್ಲವು ಜೀವಂತರಾಗಿದ್ದಾರೆ. ನೀನು ಇಷ್ಟಪಡದವರೆಲ್ಲರೂ ಇನ್ನೂ ಬಾಕಿ ಇದ್ದಾರೆ. ಈ ಉತ್ತರವನ್ನು ಕೇಳಿ ಅಬೂಸುಫಿಯಾನ್ ಹೇಳಿದನು. ಇಂದಿನ ದಿನ ಬದರ್ ಯುದ್ಧದ ಸೇಡು ತೀರಿಸಿಕೊಂಡಂತಾಯಿತು. ಯುದ್ಧಗಳ ಸ್ಥಿತಿಯು ಡೋಲಿನಂತಿರುತ್ತವೆ. ನೀವು ನಿಮ್ಮ ಹತರಾದವರಲ್ಲಿ ಕೆಲವರನ್ನು ಮೂಗು ಕಿವಿ ಕತ್ತರಿಸಿದ್ದನ್ನು ಕಾಣುವಿರಿ. ನಾನು ಈ ಮಾತಿಗೆ ಆಜ್ಞೆ ಅಂತೂ ನೀಡಿರಲಿಲ್ಲ. ಆದರೆ ನಾನು ಇದನ್ನು ಅನಿಷ್ಟ ಎಂತಲೂ ಪರಿಗಣಿಸುವುದಿಲ್ಲ. ಮತ್ತೆ ಗರ್ವದಿಂದ ಉಚ್ಛಸ್ವರದಲ್ಲಿ ಹೇಳಿದ. ಉಲೂ ಹಬ್ಲೂ ಉಲೂ ಹಬ್ಲು ಅಂದರೆ ಓ ಡುಬ್ಲು ವಿಗ್ರಹವೇ ನಿನ್ನ ಹೆಸರು ಉನ್ನತವಾಗಿರಲಿ, ಆಗ ರಸೂಲುಲ್ಲಾಹ್(ಸ) ಹೇಳಿದರು. ನೀವು ಅವರಿಗೆ ಉತ್ತರ ಏಕೆ ಕೊಡುತ್ತಿಲ್ಲ. ಸಹಾಬರು ಹೇಳಿದರು. ಓ ಪ್ರವಾದಿವರ್ಯರೇ!! ನಾವು ಅದಕ್ಕೆ ಏನು ಹೇಳಬೇಕು? ಅವರು ಹೇಳಿದರು. **ಅಲ್ಲಾಹು ಆಲ ವಅಜಲ್ಲ** ಅಲ್ಲಾಹನ ಸ್ಥಾನವೇ ಉನ್ನತವಾದುದು ಮತ್ತು ಪ್ರತಾಪ ಶಾಲಿಯಾದವನು. ಅಬೂಸುಫಿಯಾನ್ ಇದನ್ನು ಕೇಳಿ ಹೇಳಿದನು. ನಮಗೆ ಒಂದು ವಿಗ್ರಹ “ಉಝ್ಝೂ’ ಎಂತಿದೆ. ನಿಮಗೆ ಯಾವ ‘ಉಝ್ಝೂ’ ಇಲ್ಲ. ಅಗ ಸಾಹಬರು ಮೌನವಾಗಿದ್ದರು. ರಸೂಲುಲ್ಲಾಹ್(ಸ) ಹೇಳಿದರು. ನೀವು ಏಕೆ ಉತ್ತರ ಕೊಡುತ್ತಿಲ್ಲ. ಸಹಾಬರು ಹೇಳಿದರು. ಪ್ರವಾದಿವರ್ಯರೇ ಏನು ಉತ್ತರ ಕೊಡಬೇಕು ಅವರು ಹೇಳಿದರು ಅವರಿಗೆ ಹೇಳಿ “ಅಲ್ಲಾಹು ಮೌರಾನ ವ. ಲಾಮೌಲಾ ಲಕುಮ್.” ಅಲ್ಲಾಹನು ನಮ್ಮ ಮಿತ್ರ ಎಲ್ಲ ಕಾರ್ಯಸಾಧನೆ ಮಾಡಿಕೊಡುವವನಾಗಿದ್ದಾನೆ. ನಿಮಗೆ ಯಾವ ಮಿತ್ರನೂ ಇಲ್ಲ. (ಸಹೀ ಬುಖಾರಿ, ಕಿತಾಬುಲ್ ಜಿಹಾದ್)

ಹಝ್ರತ್ ಅಬ್ದುಲ್ ಬಿನ್ ಉಮರ್(ರ) ಹೇಳುತ್ತಾರೆ. ಹಝ್ರತ್ ರಸೂಲುಲ್ಲಾಹ್(ಸ) ಮೆಟ್ಟಿಲ ಮೇಲೆ ಖುತುಬ ನೀಡುತ್ತ ಈ ವಚನ ಪಠಿಸಿದರು. “ಆಕಾಶವು ಅವನ ಬಲಗೈಯಲ್ಲಿದೆ. ಅವನು ಪರಿಶುದ್ಧನು, ಉನ್ನತನೂ, ಆ ಎಲ್ಲ ಬಹುದೇವಾರಾಧಕರಲ್ಲಿ.

ಮತ್ತೆ ಹುಝೂರ್(ಸ) ಹೇಳಿದರು. “ಅಲ್ಲಾಹನು ಹೇಳಿದನು “ನಾನು ಬೃಹತ್ ಶಕ್ತಿಗಳಿಂದ ಆಗುವ ನಷ್ಟಗಳ ಪರಿಹಾರ ನೀಡುವವನಾಗಿದ್ದಾನೆ. ಎಲ್ಲ ಸ್ತುತಿಯು ನನಗಾಗಿದೆ. ರಸೂಲುಲ್ಲಾಹ್(ಸ) ಈ ವಚನಗಳನ್ನು ಪದೆ ಪದೇ ಉಚ್ಛರಿಸಿದರು. ತುಂಬ ಉತ್ಸಾಹದಿಂದ ಉಚ್ಛರಿಸುತ್ತಿದ್ದರು ಮೆಟ್ಟಿಲು ಅಲುಗಾಡಲು ಪ್ರಾರಂಭವಾಯಿತು ನಮಗೆ ಆ ಮೆಟ್ಟಿಲು ಬೀಳುವುದೇ ಎಂದು ಭಾಸವಾಯಿತು.
(ಮುಸ್ನದ್ ಅಹ್ಮದ್ ಬಿನ್ ಹಂಬಲ್, ಸಂಪುಟ–2, ಪುಟ–88)

ಹಝ್ರತ್ ಮುಹಮ್ಮದ್ ಮುಸ್ತಫಾ(ಸ) ಅವರಿಂದ ಆ ಬಹುದೇವಾರಾಧನೆ ವಿಗ್ರಹಪೂಜೆಗಳ ಅಂಧಕಾಮರಮಯ ಕಾಲದಲ್ಲಿ ಏಕದೇವತ್ವ ಸ್ಥಾಪನೆಯಂತಹ ಮಹೋನ್ನತ ಕಾರ್ಯ ತೆಗೆದುಕೊಳ್ಳಬೇಕಾಯಿತು ಆದುದರಿಂದ ಅಲ್ಲಾಹನು ಪ್ರಾರಂಭದಿಂದಲೇ ಅವರ ಹೃದಯದಲ್ಲಿ ಏಕದೇವನ ಪ್ರೀತಿ ಮತ್ತು ಬಹುದೇವರಾಧನೆಯಿಂದ ದ್ವೇಷಬಿಟ್ಟಿದ್ದನು. ತನ್ನ ವಿಶೇಷವಾದ ಯುಕ್ತಿಯಿಂದ ಅವರನ್ನು ಎಲ್ಲ ಬಗೆಯ ಬಹುದೇವಾರಾಧನೆಯಿಂದ ರಕ್ಷಿಸಿದ್ದನು.

ರಸೂಲುಲ್ಲಾಹ್(ಸ) ರವರನ್ನು ಊಟ ಮಾಡಿಸುತ್ತಿದ್ದ ಉಮ್ಮೆ ಏಮನ್ ಹೇಳುತ್ತಾರೆ. “ಬುವಾನ” ಎಂಬ ವಿಗ್ರಹವನ್ನು ಖುನ್ಯೆರರು ತುಂಬ ಆದರಿಸುತ್ತಿದ್ದರು. ಅವರ ಬಳಿ ಹಾಜರಾಗಿ ಬಲಿದಾನ ನೀಡುತ್ತಿದ್ದರು ಮತ್ತು ವರ್ಷದಲ್ಲಿ ಒಂದು ದಿನ ಅಲ್ಲಿ ಇಹ್‌ತಿಕಾಫ್ ಮಾಡುತ್ತಿದ್ದರು. ಅಬೂ ತಾಲಿಬರು ಸಹ ತಮ್ಮ ಸಮುದಾಯದ ಜೊತೆಯಲ್ಲಿ ಹೋಗುತ್ತಿದ್ದರು. ಮತ್ತು ರಸೂಲುಲ್ಲಾಹ್(ಸ) ಅವರನ್ನು ಸಹ ಕರೆದುಕೊಂಡು ಹೋಗ ಬಯಸುತ್ತಿದ್ದರು. ಆದರೆ ಅವರು ನಿರಾಕರಿಸುತ್ತಿದ್ದರು. ಕೆಲವು ಸಮಯ ಅವರ ಪಿತ್ರು ಸಹೋದರಿಯರು ಮತ್ತು ಅಬೂ ತಾಲಿಬ್ ಅವರೊಂದಿಗೆ ಕೋಪಗೊಳ್ಳುತ್ತಿದ್ದರು. ಮತ್ತು ಹೇಳುತ್ತಿದ್ದರು. ಅವರ ಈ ವಿಗ್ರಹಗಳಿಂದ ದೂರವಿರುವ ಕಾರಣ ನಮಗೆ ಅವರ ಪ್ರತಿ ಭಯ ಉಂಟಾಗುತ್ತದೆ.

ಒಮ್ಮೆ ತನ್ನ ಪಿತ್ರು ಸಹೋದರಿಯರ ಒತ್ತಾಯದ ಮೇರೆಗೆ ಅವರು ಅಲ್ಲಿಗೆ ಹೋದರಾದರೂ ಹೆದರಿಕೊಂಡು ಅಲ್ಲಿಂದ ಮರಳಿ ಬಂದು ಹೇಳಿದರು ನಾನು ಅಲ್ಲಿ ವಿಚಿತ್ರವಾದ ದೃಶ್ಯ ಕಂಡಿದ್ದೇನೆ. ಪಿತ್ರು ಸಹೋದರಿಯರು ಹೇಳಿದರು. ಇಂತಹ ಒಬ್ಬ ಸಜ್ಜನ ವ್ಯಕ್ತಿಯ ಮೇಲೆ ಶೈತಾನನು ಪ್ರಭಾವ ಬೀರಲು ಸಾಧ್ಯವಿಲ್ಲ ಯಾವ ದೃಶ್ಯ ನೋಡಿದೆ? ಅವರು ಹೇಳಿದರು. ನಾನು ವಿಗ್ರಹದ ಹತ್ತಿರ

ಹೋಗುತ್ತಿದ್ದಂತೆಯೇ ಬಿಳಿ ಬಣ್ಣದ ಮತ್ತು ಉದ್ದವಾದ ಒಬ್ಬ ವ್ಯಕ್ತಿ ಚೀರುತ್ತ ಹೇಳುತ್ತಿದ್ದನು. ಓ ಮುಹಮ್ಮದ್(ಸ)! ಹಿಂದೆ ಇರಿ ಮತ್ತು ಆ ವಿಗ್ರಹವನ್ನು ಮುಟ್ಟಿ ನೋಡಿರಿ. ಅನಂತರ ಅವರ ಪಿತೃ ಸಹೋದರಿಯರು ಸಹ ವಿಗ್ರಹಗಳ ಬಳಿ ಹೋಗಲು ಒತ್ತಾಯಿಸಲಿಲ್ಲ. ಹೀಗೆ ಅಲ್ಲಾಹನು ಸದಾಕಾಲಕ್ಕೂ ಅವರಿಗೆ ಇಂತಹ ವಿಗ್ರಹ ಚಟುವಟಿಕೆಗಳಿಂದ ರಕ್ಷಿಸಿದನು. (ದಲಾಯಿಲನ್ನಬವೀಯ, ಸಂಪುಟ–2, ಪುಟ–26–29. ಬೈರೂತ್)

ಅವರ ದೈವಿಕ ಪ್ರೇಮ ಈ ಮಾತಿನಿಂದಲೂ ಸ್ಪಷ್ಟವಾಗುತ್ತದೆ. ಅವರು ಅಲ್ಲಾಹನ ಆಜ್ಞೆಗಳನ್ನು ಪಾಲಿಸುವ ರೀತಿಯಾಗಿತ್ತು. ಅವರು ಅಲ್ಲಾಹನ ಆಜ್ಞೆ ಆಗುವವರೆಗೆ ಮಕ್ಕದಿಂದ ಹೊರಡುತ್ತಿರಲಿಲ್ಲ. ಹಜ್‌ರತ್ ಆಮಿರಾ(ರ) ಹೇಳುತ್ತಾರೆ. ನಾವು ಒಂದು ದಿನ ಕುಳಿತುಕೊಂಡಿದ್ದೆವು. ಮಧ್ಯಾಹ್ನದ ಸಮಯವಾಗಿತ್ತು. ರಸೂಲುಲ್ಲಾಹ್(ಸ) ಆಗಮಿಸಿದರು. ತಲೆಗೆ ಬಟ್ಟೆ ಸುತ್ತಿಕೊಂಡಿದ್ದರು. ಅದಾಗ್ಯೂ ಅವರು ಈ ಸಮಯ ಎಂದೂ ಬರುತ್ತಿರಲಿಲ್ಲ. ಹಝ್ರತ್ ಅಬೂಬಕರ್(ರ) ಹೇಳೀದರು. ನನ್ನ ತಂದೆ ತಾಯಿಯರು ನಿಮ್ಮ ಮೇಲೆ ಬಲಿಯಾಗಲಿ, ನೀವು ಈ ಸಮಯ ಯಾವುದೇ ಮಹಾಕಾರ್ಯ ನಿಮಿತ್ತ ಬಂದಿರಬಹುದು. ಹಝ್ರತ್ ಆಯಿಶಾ(ರ) ಹೇಳುತ್ತಾರೆ ರಸೂಲುಲ್ಲಾಹ್(ಸ) ಅನುಮತಿ ಕೇಳಿದರು. ಅನುಮತಿ ದೊರೆತ ನಂತರ ಮನೆ ಒಳಗೆ ಬಂದರು ಮತ್ತು ಹೇಳಿದರು. "ಯಾರು ಇಲ್ಲಿ ಕುಳಿತಿರುವವರು, ಅವರಿಗೆ ಎಬ್ಬಿಸಿರಿ, ಹಜ್‌ರತ್ ಅಬೂಬಕರ್ ಹೇಳಿದರು. ಓ ನಬಿಯವರೆ ಅವರೆಲ್ಲರೂ ನಿಮ್ಮವರೇ ಆಗಿದ್ದಾರೆ. ಅವರು ಹೇಳಿದರು. ಒಳ್ಳೆಯದು. ಆದರೆ ನನಗೆ ಹಿಝ್ರತ್ (ವಲಸೆ) ಮಾಡುವ ಆಜ್ಞೆ ಬಂದಿದೆ. ಹಜ್‌ರತ್ ಅಬೂಬಕರ್(ರ) ಹೇಳಿದರು. ನಬಿಯವರೇ! ನಾನು ನಿಮ್ಮ ಜೊತೆಯಲ್ಲಿರಬಹುದೆ, ಅವರು ಈ ಬೇಡಿಕೆ ಸ್ವೀಕರಿಸಿ ಹೇಳಿದರು. ಹೌದು. (ಬುಖಾರಿ, ಕಿತಾಬುಲ್ ಮನಾಖಿಬ್)

ಈ ಘಟನೆಯಿಂದ ತಿಳಿದುಬರುವುದೇನೆಂದರೆ, ಅವರು ಅಲ್ಲಾಹನ ಆಜ್ಞೆ ಆಗುವವರೆಗೂ ಮಕ್ಕದಿಂದ ಹೊರಡಲಿಲ್ಲ ಕೊನೆಯವರೆಗೆ ಅಲ್ಲೆ ಇದ್ದರು. ಅಂದರೆ ಅಲ್ಲಾಹನ ಆಜ್ಞೆಯಿಲ್ಲದೇ ಯಾವ ಕೆಲಸವು ಮಾಡುತ್ತಿರಲಿಲ್ಲ.

ಮತ್ತೆ ಪ್ರೀತಿಯನ್ನು ವ್ಯಕ್ತಪಡಿಸಲು ಇದೊಂದು ಕಾರಣವಾಗುತ್ತದೆ. ತನ್ನ ಪ್ರಿಯತಮನ ಪ್ರೀತಿ ಮತ್ತು ಭಯ ಎರಡೂ ಜೊತೆಯಲ್ಲಿಯೇ ಇರುತ್ತವೆ. ಅಂದ ಹಾಗೆ ಭಯದ ಒಂದು ಅದ್ಭುತವಾದ ಘಟನೆ ಹೀಗಿದೆ. ಅದರ ಒಂದು ಉನ್ನತವಾದ ಉದಾಹರಣೆ ಬದರ್ ಯುದ್ಧದಲ್ಲಿ ಕಾಣಸಿಕ್ಕಿತು. ಬದರ್ ಯುದ್ಧಕ್ಕಾಗಿ ಅವರು ತಮ್ಮ ಸಂಗಡಿಗರೊಂದಿಗೆ ಶತ್ರುಗಳ ವಿರುದ್ಧ ನಿಂತಿದ್ದರು. ದೈವಿಕ ಸಹಕಾರ ಸ್ಪಷ್ಟವಿತ್ತು. ಅವಿಶ್ವಾಸಿಗಳು ತಮ್ಮ ಹೆಜ್ಜೆ ಊರಲು ಡೇರೆ ಹಾಕಿಕೊಂಡಿದ್ದರು. ಮುಸಲ್ಮಾನರಿಗೆ ಮರುಭೂಮಿ ಬಿಟ್ಟಿದ್ದರು. ಆದರೆ ಅಲ್ಲಾಹನು ಮಳೆ ಸುರಿಸಿ ಅವಿಶ್ವಾಸಿಗಳ ಡೇರೆಗಳಲ್ಲಿ ಕೆಸರಾಗುವಂತೆ ಮಾಡಿದ್ದನು. ಮತ್ತು ಮುಸಲ್ಮಾನರ ಸ್ಥಳವು ಗಟ್ಟಿಯಾಗಿತ್ತು. ಅದೇ ರೀತಿ ಇನ್ನು ದೈವಿಕ ಪುಷ್ಟಿಯ ಚಿಹ್ನೆಗಳು ಗೋಚರವಾಗಿದ್ದವು. ಆದರೂ ರಸೂಲುಲ್ಲಾಹ್(ಸ) ರವರ ಮೇಲೆ ದೇವನ ಭಯ ಎಷ್ಟೊಂದು ಆವರಿಸಿತ್ತೆಂದರೆ ಅವೆಲ್ಲ ಭರವಸೆಗಳ ನಂತರವೂ ಅವರು ಅವನ ನಿರಪೇಕ್ಷೆಯ ಗುಣ ಮನದಲ್ಲಿಟ್ಟುಕೊಂಡು ಗಾಬರಿಗೊಳ್ಳುತ್ತ ಹೀಗೆ ದುಆ ಮಾಡುತ್ತಿದ್ದರು. ಓ ಅಲ್ಲಾಹ್ ಮುಸಲ್ಮಾನರಿಗೆ ವಿಜಯಿಯನ್ನಾಗಿ ಮಾಡು. ಅವರು ಹೀಗೆ ದುಆ ಮಾಡುತ್ತಿದ್ದರು ಮತ್ತು ಎಷ್ಟೊಂದು ಭಯಭೀತರಾಗಿ ದುಆ ಮಾಡುತ್ತಿದ್ದರೆಂದರೆ ಅವರ ಹೆಗಲ ಮೇಲಿನ ಚಾದರ ಕೆಳಗೆ ಬೀಳುತಿತ್ತು.

ಓ ನನ್ನ ಪ್ರಭು! ತನ್ನ ವಾಗ್ದಾನ ತನ್ನ ಸಹಾಯ ಪೂರ್ತಿಕರಿಸು. ಓ ನನ್ನ ಪ್ರಭು! ಮುಸಲ್ಮಾನರ ಈ ಜಮಾಅತ್ ಇಂದು ನಾಶಗೊಂಡರೆ ನಿನ್ನ ಆರಾಧಿಸುವವರು ಯಾರೂ ಇರಲಿಕ್ಕಿಲ್ಲ.

ಆ ಸಮಯ ಅವರು ಎಷ್ಟೊಂದು ಕಳವಳಗೊಂಡಿದ್ದರೆಂದರೆ ಒಮ್ಮೆ ಸಾಷ್ಟಾಂಗ ಎರಗುವವರಾದರೆ ಒಮ್ಮೆ ಎದ್ದು ನಿಲ್ಲುತ್ತಿದ್ದರು ಮತ್ತು ಅಲ್ಲಾಹನನ್ನು ಕರೆ ನೀಡುತ್ತಿದ್ದರು. ಅವರ ಚಾದರ ಅವರ ಹೆಗಲಿನಿಂದ ಕೆಳಗೆ ಬೀಳುತಿತ್ತು. ಹಝ್ರತ್ ಅಲಿ(ರ) ಹೇಳುತ್ತಾರೆ! ನನಗೆ ಯುದ್ಧ ಮಾಡುತ್ತ ಹಝ್ರತ್ ರಸೂಲುಲ್ಲಾಹ್(ಸ) ಅವರ ಕಡೆ ಧ್ಯಾನ ಬಂದಾಗ ಓಡಿ ಹೋಗಿ ಅವರ ನಾಲಿಗೆಯ ಮೇಲೆ **"ಯಾ ಹಯ್ಯು ಯಾ ಖಯ್ಯೂಮ್"** ಎಂಬ ಪದಗಳು ಜಾರಿಯಲ್ಲಿರುತ್ತಿದ್ದವು ಹಝ್ರತ್ ಅಬೂಬಕರ್ ಆವೇಶಭರಿತರಾಗಿ ಅವರ ಸ್ಥಿತಿ ಕಂಡು ವಿಚಲಿತರಾಗುತ್ತಿದ್ದರು. ಮತ್ತು ಹೇಳುತ್ತಿದ್ದರು. ಅಲ್ಲಾಹನು ಅವಶ್ಯವಾಗಿ ತನ್ನ ವಾಗ್ದಾನ ಈಡೇರಿಸುವನು. ಆದರೂ ಈ ಕಥಾನುಸಾರವಾಗಿ ಅಥವಾ "ಹರ್‌ಕೆ ತುರಾಅಸ್ತ್ ತರಸಾಂತರ್" ಸತತವಾಗಿ ರೋಧನೆಯಲ್ಲಿದ್ದು ದುಆ ಮಾಡುತ್ತಿದ್ದರು. ಅವರ ಹೃದಯದಲ್ಲಿ ದೈವಿಕ ಭಯ ಆಳವಾಗಿ ಊರಿತ್ತು. ಮತ್ತು ಭಾವಿಸುತ್ತಿದ್ದರು. ಅಲ್ಲಾಹನು ವಾಗ್ದನ ಯಾವುದಾದರೊಂದು ಅಂಶ ಗೌಪ್ಯದಲ್ಲಿದ್ದರೆ ಅದರ ಆಜ್ಞಾತೆಯಿಂದಾಗಿ ವಿಧಿ ಬಿಡಬಾರದು. (ಸಹೀ ಬುಖಾರಿ, ಕಿತಾಬುಲ್ ಜಿಹಾದ್)

ಅದೇ ರೀತಿ ನಬಿ(ಸ) ರವರ ದೈವಿಕ ಪ್ರೀತಿಯು ಸ್ಪಷ್ಟವಾಗಿ ಗೋಚರಿಸುತಿತ್ತು. ಅದನ್ನು ಕಂಡು ಮಕ್ಕದವರು ಹೇಳುತ್ತಿದ್ದರು. "ಮುಹಮ್ಮದ್ ತನ್ನ ದೇವನ ಮೇಲೆ ಮಾರು ಹೋಗಿದ್ದಾನೆ." ನಿಜವಾಗಿಯೂ ಅವರು ದೇವನ ಪ್ರೀತಿಯಲ್ಲಿ ಮಾರು ಹೋಗಿದ್ದರು. ಅವರ ಈ ಪ್ರೀತಿಯು ನಮಾಝ್, ಆರಾಧನೆ, ದುಆ ದೇವಸ್ಮರಣೆಯಿಂದ ಸ್ಪಷ್ಟವಾಗುತಿತ್ತು. ರಸೂಲುಲ್ಲಾಹ್(ಸ) ರವರ ದೈವಿಕ ಪ್ರೀತಿಯ ಸ್ಥಿತಿ ಹೇಗಿತ್ತೆಂದರೆ ಹಝ್ರತ್ ದಾವೂದ್(ಅ) ರವರ ಈ ಪ್ರಾರ್ಥನೆ ತುಂಬ ಇಷ್ಟಪೂರ್ವಕವಾಗಿ ತಮ್ಮ ಪ್ರಾರ್ಥನೆಗಳಲ್ಲಿ ಸೇರಿಸಿಕೊಳ್ಳುತ್ತಿದ್ದರು. ಅಲ್ಲಾಹುಮ್ಮಾ ಇನ್ನಿ.

"ಓ ಅಲ್ಲಾಹ್ ನಾನು ನಿನ್ನಿಂದ ನಿನ್ನ ಪ್ರೀತಿ ಯಾಚಿಸುವೆನು ಮತ್ತು ಯಾರು ನಿನ್ನನ್ನು ಪ್ರೀತಿಸುತ್ತಾರೆ ಅವರ ಪ್ರೀತಿಯೂ ಯಾಚಿಸುವೆನು. ನಾನು ನಿನ್ನ ಸಾಮಿಪ್ಯ ಪಡೆಯುವಂತಹ ಕರ್ಮಗಳನ್ನು ಯಾಚಿಸುವೆನು. ಓ ಅಲ್ಲಾಹ್! ನನ್ನ ಮನದಲ್ಲಿ ನನಗಿಂತ, ನನ್ನ ಸಂಪತ್ತಿಗಿಂತ, ನನ್ನ ಕುಟುಂಬಕ್ಕಿಂತ ಮತ್ತು ಶೀತಲ ಜಲಕ್ಕಿಂತ ಹೆಚ್ಚು ಪ್ರೀತಿ ಹಾಕು. (ತಿರ್ಮಿದಿ, ಕಿತಾಬುದ್ದಅವಾತ್, ಹದೀಸ್–3412)

ಆದರೆ ರಸೂಲುಲ್ಲಾಹ್(ಸ) ರು ಕಲಿಸಿದ ದುಆ, ಹಝ್ರತ್ ದಾವೂದ್(ಅ) ರವರ ದುಆಗಿಂತ ಎಷ್ಟೋ ಪಾಲು ಮಿಗಿಲಾದುದಾಗಿದೆ. ಅವರು ಹೇಳುತ್ತಾರೆ. **ಅಲ್ಲಾಹುಮ್ಮರ್ ಝುಖ್‌ನಿ ಹುಬ್ಬಕ ವಹುಇಬ್ಬಮಯ್ಯನ್‌ಫುನಿ ಹುಬ್ಬಹು ಇಂದಕ ಅಲ್ಲಾಹುಮ್ಮ ಮಾ ರಝುಖತನಿ ಮಿಮ್ಮಾ ಉಹಿಬ್ಬು ಫಜ್‌ಅಲಹೂ ಖುವ್ವತಂಲ್ಲಿ ಫೀಮಾ ತುಹಿಬ್ಬು, ವಮಾ ಝುವೈತ ಅನ್ನಿ ಮಿಮ್ಮಾ ಉಹಿಬ್ಬು ಫಜ್‌ಅಲಹೂ ಫರಾಗಂಲ್ಲೀ ಫೀ ಮಾ ತುಹಿಬ್ಬು** ಓ ಅಲ್ಲಾಹ್! ನನಗೆ ನಿನ್ನ ಪ್ರೀತಿಯನ್ನು ನೀಡು, ನನಗೆ ನಿನ್ನ ಪ್ರತಿಫಲನ್ನೀಡುವಂತಹ ಪ್ರೀತಿ ದಯಪಾಲಿಸು. ಓ ಅಲ್ಲಾಹ್! ನನ್ನ ಮನದಲ್ಲೇನಿದೆಯೋ ಅದನ್ನು ನೀಡು. ಅದನ್ನು ನಿನ್ನ ಪ್ರೀತಿಯ ವಸ್ತುಗಳನ್ನು ಪಡೆಯಲು ಶಕ್ತಿಯ ಮಾರ್ಗವನ್ನಾಗಿ ಮಾಡು ಮತ್ತು ನಿನ್ನಿಂದ ಪ್ರತ್ಯೇಕಿಸುವ ವಸ್ತುಗಳ ಪ್ರೀತಿಯಿಂದ ರಕ್ಷಿಸು. ಅದರ ಬದಲು ತನ್ನ ಪ್ರೀತಿಯ ವಸ್ತುಗಳನ್ನು ನೀಡು. (ತಿರ್ಮಿದಿ, ಕಿತಾಬುದ್ದಅವಾತ್, ಹದೀಸ್–3413)

**ವಫಾತಿನ ಮೊದಲ ಕೊನೆಯ ಇಚ್ಛೆ**

ಇದು ಅವರ ಏಕದೇವತ್ವ ಸ್ಥಾಪನೆಯ ಅಂತಿಮ ಪ್ರಯತ್ನವು ಆಗಿತ್ತು. ಮತ್ತು ಇಚ್ಛೆಯೂ ಆಗಿತ್ತು. ಆಗ ಆ ಕಾರಣದಿಂದಲೇ ಈ ದುಆ ಮಾಡುತ್ತಿದ್ದರು. ಓ ಅಲ್ಲಾಹ್ ನನ್ನ ಸಮಾಧಿಯನ್ನು ಪೂಜಾ ಸ್ಥಳವನ್ನಾಗಿ ಮಾಡಬೇಡ. (ಮುಸ್ನದ್ ಅಹ್ಮದ್, ಸಂಪುಟ–2, ಪುಟ–246, ಬೈರೂತ್)

ಮತ್ತೆ ನೋಡಿ ಅಲ್ಲಾಹನು ತನ್ನ ಈ ಏಕದೇವನ ಪ್ರೀತಿಯ ದಾಸನನ್ನು ಅವನ ಅಭಿಯಾನದ ರಕ್ಷಣೆಯನ್ನು ಹೀಗೆ ಸಾಧಿಸಿದರು. ಇಂದಿಗೂ ಸಹ ಏಕದೇವನ ಬಾದಶಾಹನ ಸಮಾಧಿ ಎಲ್ಲ ರೀತಿಯ ಪೂಜೆ ಪುರಸ್ಕಾರಗಳಿಂದ ಸುರಕ್ಷಿತವಾಗಿದೆ.

ಅಲ್ಲಾಹನು ನಮ್ಮೆಲ್ಲರ ಹೃದಯಗಳನ್ನು ದೈವಿಕ ಪ್ರೀತಿಯ ಪ್ರಕಾಶದಿಂದ ಪ್ರಕಾಶಿತರನ್ನಾಗಿ ಮಾಡಲಿ ಮತ್ತು ನಮ್ಮ ಹೃದಯಗಳಲ್ಲಿ ಅಲ್ಲಾಹನ ಭಯ ಮತ್ತು ಪ್ರೀತಿಯಿಂದ ತುಂಬಿಸಲಿ, ಆಮೀನ್!

************************

# ದೇವಾಸ್ತಿತ್ವ, ಪ್ರಾರ್ಥನೆ ಸ್ವೀಕೃತಿಯ ನೆಲೆಯಲಿ

**ಸಯ್ಯದ್ ಕಲೀಮುದ್ದೀನ್ ಅಹ್ಮದ್, ಖಾಝಿ–ಎ–ಸಿಲ್‌ಸಿಲಾ ಖಾದಿಯಾನ್**

**ವ ಇಝಾ ಸಅಲಕ ಇಬಾದಿ ಅನ್ನಿ ಫಇನ್ನಿ ಖರೀಬ್, ಉಜೀಬು ದಅವತಿದ್ದಾಇ ಇಝಾ ದಆನ್, ಫಲ್‌ಯಸ್ತಜೀಬೂ ಲೀ ವಲ್ ಯೂಮಿನೂ ಬೀ ಲಅಲ್ಲಹುಮ್ ಯರ್‌ಶುದೂನ್**. (ಅಲ್‌ಬಖರ–187)

( ಓ ಪ್ರವಾದಿ) ನನ್ನ ಬಗ್ಗೆ ನನ್ನ ದಾಸರು ನಿನ್ನೊಡನೆ ಕೇಳಿದರೆ! ಹೇಳು–ಖಂಡಿತವಾಗಿಯೂ ನಾನು ಸಮೀಪದಲ್ಲೇ ಇದ್ದೇನೆ. ನನ್ನನ್ನು ಕರೆದು ಪ್ರಾರ್ಥಿಸುವಾಗ ಪ್ರಾರ್ಥಿಸುವವನ ಪ್ರಾರ್ಥನೆಗೆ ನಾನು ಉತ್ತರ ನೀಡುವೆನು. ಆದ್ದರಿಂದ ಅವರು ಸತ್ಪಥವನ್ನ ಪಡೆಯಲಿಕ್ಕಾಗಿ ನನ್ನ ಕರೆಗೆ ಓಗೋಡಿರಿ ಮತ್ತು ನನ್ನ ಮೇಲೆ ನಂಬಿಕೆ ಇರಿಸಲಿ.

ಅಲ್ಲಾಹನ ಒಂದು ಗುಣನಾಮ **"**ಸ್ವೀಕರಿಸುವವನು**"** ಮುಜೀಬ್ ಎಂದಾಗಿದೆ. ಅದರನ್ವಯ ಅವನು ತನ್ನ ದಾಸರ ಕರೆಯನ್ನು ಆಲಿಸುವವನಾಗಿದ್ದಾನೆ ಮತ್ತು ಕರೆಯನ್ನು ಸ್ವೀಕರಿಸುವ ಮೂಲಕ ತನ್ನ ಅಸ್ತಿತ್ವ ತೋರ್ಪಡಿಸುವವನಾಗಿದ್ದಾನೆ. ಒಂದೆಡೆ ಅಲ್ಲಾಹನು ನಿರ್ಗತಿಕರ, ಅಬಲರ, ನಿರಾಶ್ರಿತರ ಮತ್ತು ದುಃಖಿತರ ಪ್ರಾರ್ಥನೆ (ದುಆ) ಗಳನ್ನು ಕೇಳಿ ಅವರ ಆಶೆಗಳನ್ನು ಈಡೇರಿಸುವವನಾದರೆ ಇನ್ನೊಂದೆಡೆ ವಿಶೇಷ ಅನುಗ್ರಹದಿಂದ ತನ್ನ ಸಂದೇಶವಾಹಕರಿಗೆ ಪ್ರಾರ್ಥನೆ ಸ್ವೀಕೃತಿಯ ಶ್ರೇಯ ದಯಪಾಲಿಸಿದ್ದಾನೆ. ತನ್ಮೂಲಕ ತನ್ನ ಅಸ್ತಿತ್ವದ ಪುರಾವೆಯನ್ನು ಒದಗಿಸುತ್ತಾನೆ.

ಹಝ್‌ರತ್ ಅಖದಸ್ ಮಸೀಹ್ ಮೌಊದ್(ಅ) ಪ್ರಾರ್ಥನೆ ಸ್ವೀಕೃತಿಯನ್ನು ದೇವನ ಅಸ್ತಿತ್ವಕ್ಕೆ ಆಧಾರವನ್ನಾಗಿ ಪ್ರಸ್ತುತಪಡಿಸಿದ್ದಾರೆ. ಅವರ ಗ್ರಂಥಗಳಲ್ಲಿ ಹಲವು ಕಡೆ ಹಲವು ರೀತಿಯಲ್ಲಿ ಅದರ ವಿವರ ಕಾಣಬಹುದಾಗಿದೆ. ಉದಾಹರಣೆಗೆ ಅವರು ಹೇಳುತ್ತಾರೆ.

**"**ನಮ್ಮ ಸಮಾಧಾನಕ್ಕೆ ಪುರಾವೆಯಂತೆ ಪುರಾತನ ಕಾಲದಿಂದ ಅಲ್ಲಾಹನು ಒಂದು ಆಧ್ಯಾತ್ಮಿಕ ದೈವಿಕ ನಿಯಮ ಮಾಡಿದ್ದಾನೆ. ದುಆ ನಂತರ ಅವನ ಅನುಗ್ರಹ ಉಕ್ಕಿ ಬರುತ್ತದೆ ಮತ್ತು ಶಾಂತಿ ಸಮಾಧಾನ ಹಾಗೂ ನಿಜವಾದ ಸಂತಸ ದೊರೆಯುತ್ತದೆ. ನಮ್ಮ ಬೇಡಿಕೆಯಲ್ಲಿ ಏನು ತಪ್ಪಿಲ್ಲವಾಗಿದ್ದರೆ ಅದೇ ಬೇಡಿಕೆ ಪೂರ್ಣಗೊಳ್ಳುತ್ತದೆ. ಇಲ್ಲ ನಾವು ಆ ಮುಗ್ಧ ಮಗುವಿನಂತೆ ತನ್ನ ಮಾತೆಯಿಂದ ಹಾವು ಅಥವಾ ಬೆಂಕಿಯ ಕೆಂಡವನ್ನು ಬಯಸಿದರೆ? ತಮ್ಮ ದುಆ ಮತ್ತು ಬೇಡಿಕೆಯಲ್ಲಿ ತಪ್ಪಿದರೆ ಅಲ್ಲಾಹನು ನಮಗೆ ಹಿತವಾಗಿದ್ದನ್ನು ನೀಡುತ್ತಾನೆ ಅಂದರೆ ಎರಡೂ ರೂಪದಲ್ಲಿ ನಮ್ಮ ವಿಶ್ವಾಸದಲ್ಲಿ ವೃದ್ಧಿಗೆ ಕಾರಣವಾಗುತ್ತದೆ. ಏಕೆಂದರೆ ನಾವು ಪ್ರಾರ್ಥನೆಗಳ ಮೂಲಕ ಮುಂಚಿತವಾಗಿ ಅಲ್ಲಾಹನಿಂದ ಅರಿವು ಪಡೆಯುತ್ತೇವೆ. ಆ ಮೂಲಕ ನಮ್ಮ ವಿಶ್ವಾಸ ಎಷ್ಟರಮಟ್ಟಿಗೆ ಉನ್ನತವಾಗುತ್ತದೆಂದರೆ ನಾವು ಅಲ್ಲಾಹನನ್ನು ದರ್ಶನ ಪಡೆದಂತೆಯೇ ಸರಿ. ದುಆ ಮತ್ತು ಸ್ವೀಕೃತಿಯಲ್ಲಿ ಒಂದು ಸಂಬಂಧವಿದೆ. ಅದು ಆದಿಯಿಂದ ಇಲ್ಲಿಯವರೆಗೆ ಅಂದರೆ ಮನುಷ್ಯ ಹುಟ್ಟಿದಾಗಿನಿಂದ ಸತತವಾಗಿ ಪ್ರಚಲಿತದಲ್ಲಿದೆ. ಯಾವಾಗಲೆಲ್ಲ ಅಲ್ಲಾಹನು ಯಾವುದಾದರು ಕಾರ್ಯ ಮಾಡಲು ಇಚ್ಛಿಸುವುದಾದರೆ ದೈವಿಕ ನಿಯಮ ಪ್ರಕಾರ. ಅವನ ಆಪ್ತವಾದ ದಾಸನೊಬ್ಬ ವ್ಯಾಕುಲಗೊಂಡು ಮತ್ತು ನೋವಿನಿಂದ ದುಆ ಮಾಡಲು ತೊಡಗುತ್ತಾನೆ. ಮತ್ತು ತಮ್ಮೆಲ್ಲ ಶಕ್ತಿ ಸಾಹಸ ಗಮನಹರಿಸಿ ಬೇಡಿಕೆ ಪೂರೈಸಲು ಬೇಡಿಕೊಳ್ಳಲು ಮಗ್ನನಾಗುತ್ತಾನೆ. ಆಗ ಆ ವಿನೀತನ ಪ್ರಾರ್ಥನೆಗಳು ಅಲ್ಲಾಹನ ಅನುಗ್ರಹಗಳನ್ನು ಆಕಾಶದಿಂದ ಸೆಳೆದುಕೊಳ್ಳುತ್ತಿದ್ದೆ ಮತ್ತು ಅಲ್ಲಾಹನು ಆ ಕಾರ್ಯ ಆಗುವಂತಹ ಸಾಧನೆಗಳನ್ನು ಒದಗಿಸುತ್ತಾನೆ. ಈ ದುಆ ನೋಡಲಿಕ್ಕೆ ಮನುಷ್ಯನ ಮಾಧ್ಯಮವಾಗಿರುತ್ತದೆ. ಆದರೆ ಆ ಮನುಷ್ಯನು ನಿಜ ಅರ್ಥದಲ್ಲಿ ಅಲ್ಲಾಹನಲ್ಲಿ ತನ್ನ ಅಸ್ತಿತ್ವವನ್ನು ಕಳಕೊಂಡಿರುತ್ತಾನೆ. ದುಆ ಮಾಡುವ ಸಮಯ ಅಲ್ಲಾಹನ ಆಸ್ಥಾನದಲ್ಲಿ ತನ್ನನ್ನು ಸಂಪೂರ್ಣ ಶರಣ ಮಾಡಿಕೊಳ್ಳುತ್ತಾನೆ. ಆಗ ಅಲ್ಲಾಹನು ಯಾವ ರೀತಿ ಕರುಣಿಸುತ್ತಾನೆಂದರೆ ಅವನ ಕೈ ಅವನ ಕೈ ಆಗಿರುವುದಿಲ್ಲ. ಬದಲು ಅಲ್ಲಾಹನ ಕೈ ಆಗಿರುತ್ತದೆ. ಇಂತಹ ದುಆ ದಿಂದಲೇ ಅಲ್ಲಾಹನು ಗುರುತಿಸಲ್ಪಡುತ್ತಾನೆ ಮತ್ತು ಅವನ ಅಸ್ತಿತ್ವ ದೃಢಪಡುತ್ತದೆ. ಅವನು ಸಾವಿರಾರು ಪರದೆಗಳಲ್ಲಿ ಗುಪ್ತನಾಗಿದ್ದಾನೆ.

(ಅಯ್ಯಾಮುಸ್ಸುಲಹ್, ರೂಹಾನಿ ಖಜಾಈನ್, ಸಂಪುಟ–14, ಪುಟ–238)

ಅದೇ ರೀತಿ ಅವರು ಹೇಳುತ್ತಾರೆ: ಮೂಢನು ಭಾವಿಸುವುದೇನೆಂದರೆ ದುಆ ಎಂಬುದು ಒಂದು ನಿಷ್ಪ್ರಯೋಜಕ ಮತ್ತು ವಿನೋದವಾಗಿದೆ ಎಂದು. ಆದರೆ ಅವನು ತಿಳಿದಿಲ್ಲ. ಕೇವಲ ದುಆ ಇಂತಹ ಮಾಧ್ಯಮವಾಗಿದೆ. ಆ ಮೂಲಕ ಅಲ್ಲಾಹನನ್ನು ಪಡೆಯ ಬಯಸುವವನ ಮೇಲೆ ಅಲ್ಲಾಹನು ಕರುಣೆ ತೋರುತ್ತಾನೆ. ಮತ್ತು **"ಅನಲ್ ಖಾದಿರ್"** ಎಂಬ ದೇವವಾಣೀ ಅವರ ಹೃದಯಗಳಲ್ಲಿ ಹಾಕುತ್ತಾನೆ. ಪ್ರತಿಯೋರ್ವ ವಿಶ್ವಾಸಿಗನು, ವಿಶ್ವಾಸದ ದಾಹ ಉಳ್ಳವನು ನೆನಪಿಡಲಿ. ಅವನ ಜೀವನದಲ್ಲಿ ಆಧ್ಯಾತ್ಮಿಕ ಪ್ರಕಾಶ ಪಡೆಯಬಯಸುವವನಾದರೆ ದುಆ ಏಕಮಾತ್ರ ಮಾಧ್ಯಮವಾಗಿದೆ. ಅದು ಅಲ್ಲಾಹನ ಅಸ್ತಿತ್ವದ ಮೇಲೆ ವಿಶ್ವಾಸ ವೃದ್ಧಿಸುತ್ತದೆ ಮತ್ತು ಎಲ್ಲ ಸಂಶಯಗಳನ್ನು ದೂರ ಮಾಡುತ್ತದೆ. (ಅಯ್ಯ ಮುಸುಲಹ್, ರೂಹಾನಿ ಖಝಾಈನ್, ಸಂಪುಟ–14, ಪುಟ–239)

ಮತ್ತೆ ಅವರು ಹೇಳುತ್ತಾರೆ. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಒಂದೆಡೆ ತನ್ನ ಅಸ್ತಿತ್ವದ ಸಂಕೇತ ಹೀಗೆ ನೀಡುತ್ತಾನೆ. ನಿಮ್ಮ ಪ್ರಭು ನಿಮ್ಮ ಕಳವಳಕಾರಿ ಪ್ರಾರ್ಥನೆಗಳನ್ನು ಆಲಿಸಿದವನಾಗಿದ್ದಾನೆ. ಅವನು ಹೇಳಿದಂತೆ. **ಅಮ್ಮೆಂ ಯುಜೀಬುಲ್ ಮುಝ್‌ತರ್ರ ಇಝಾದಾಹೂ**. ಅದಾಗಿ ದುಆ ಸ್ವೀಕೃತಿಯನ್ನು ಅಲ್ಲಾಹನು ತನ್ನ ಅಸ್ತಿತ್ವಕ್ಕೆ ಹಿಡಿದ ಕನ್ನಡಿಯಾಗಿದೆ ಎನ್ನುವನು. ಹೀಗಿರುವಾಗ ಹೇಗೆ ತಾನೇ ಬುದ್ಧಿವಂತನಾದನು ಭಾವಿಸಬಹುದು. ದುಆ ಮಾಡಿದ ನಂತರ ಸ್ವೀಕಾರದ ಯಾವ ಪ್ರಭಾವವು ಕಾಣದಾಗುತ್ತದೆ ಎಂದು. ಆದರೆ ದುಆ ಕಾಟಾಚಾರಕ್ಕೆ ಆಗಿರಬಾರದು. ನನ್ನ ದೃಷ್ಟಿಯಲ್ಲಿ ಈ ರೀತಿಯ ಅಲಕ್ಷ್ಯ ಸತ್ಯ ವಿಶ್ವಾಸ ಹೊಂದಿದವನು ಮಾಡಲಿಕ್ಕೆ ಸಾಧ್ಯವಿಲ್ಲ. ಅದಾಗ್ಯೂ ಅಲ್ಲಾಹನು ನುಡಿದನು. ಯಾವ ರೀತಿ ಭೂಮ್ಯಾಕಾಶದ ಮೇಲೆ ವಿಚಾರ ಮಾಡಿದಾಗ ಸತ್ಯ ದೇವನನ್ನು ಗುರುತಿಸಬಹುದೋ ಅದೇ ರೀತಿ ದುಆ ಸ್ವೀಕೃತಿಯಿಂದಲು ಅಲ್ಲಾಹನ ಮೇಲೆ ವಿಶ್ವಾಸ ಮೂಡಿ ಬರುತ್ತದೆ. ಒಂದು ವೇಳೆ ದುಆ ಮಾಡುವುದರಲ್ಲಿ ಯಾವ ಆಧ್ಯಾತ್ಮಿಕ ಭಾವನೆಯಿಲ್ಲ ಮತ್ತು ನೈಜತೆಯಿಲ್ಲದಿದ್ದರೆ ಅದು ಅನುಗ್ರಹಿತವಾಗುವುದಿಲ್ಲ. ಹೀಗಾಗಿದ್ದಲ್ಲಿ ಹೇಗೆ ಅಲ್ಲಾಹನನ್ನು ಗುರುತಿಸಲು ಭೂಮ್ಯಾಕಾಶಗಳು ಮಾಧ್ಯಮವಾಗಿರಲು ಸಾಧ್ಯ? ಬದಲು ಪವಿತ್ರ ಖುರ್‌ಆನ್‌ನಿಂದ ತಿಳಿದು ಬರುತ್ತದೆ. ದುಆ ಅಲ್ಲಾಹನನ್ನು ಗುರುತಿಸುವ ಪ್ರಬಲ ಮಾಧ್ಯಮವಾಗಿದೆ ಮತ್ತು ಅಲ್ಲಾಹನ ಅಸ್ತಿತ್ವ ಹಾಗೂ ಗುಣನಾಮಗಳ ಸಂಪೂರ್ಣ ಜ್ಞಾನ ಕೇವಲ ದುಆದಿಂದ ಮಾತ್ರ ಪಡೆಯಲು ಸಾಧ್ಯ. ಇನ್ನಾವುದೇ ಮಾಧ್ಯಮದಿಂದ ಸಾಧ್ಯವಿಲ್ಲ ಅದು ವಿದ್ಯುತ್ ಪ್ರಕಾಶ, ತಕ್ಷಣದಿಂದ ಮನುಷ್ಯನನ್ನು ಅಂಧಕಾರದಿಂದ ಎಳೆದು ಪ್ರಕಾಶದೆಡೆ ತಂದು ಅಲ್ಲಾಹನ ಮುಂದೆ ನಿಲ್ಲಿಸುತ್ತದೆ. ಅದು ದುಆ ಆಗಿದೆ. ದುಆ ಮೂಲಕವೇ ಸಾವಿರಾರು ಅಸಭ್ಯರು ಸಭ್ಯರಾಗುತ್ತಾರೆ. ಸಾವಿರಾರು ಪಥ ಭ್ರಷ್ಟರೂ ಸತ್ಪಥ ಪಡೆಯುತ್ತಾರೆ. (ಅಯ್ಯಾಮು ಸುಲಹ್, ರೂಹಾನಿ ಖಝಾಈನ್, ಸಂಪುಟ–14, ಪುಟ–259)

ಈ ವಿನೀತನು ದೇವಾಸ್ತಿತ್ವದ ಈ ವಿಷಯವನ್ನು ನಮ್ಮ ನೇತಾರರಾದ ಹಜ್‌ರತ್ ಅಖದಸ್ ಮುಹಮ್ಮದ್ ಮುಸ್ತಫ(ಸ) ಮತ್ತು ಅವರ ಆಧ್ಯಾತ್ಮಿಕ ಪುತ್ರ ಹಝ್‌ರತ್ ಮಸೀಹ್ ಮೌಊದ್(ಅ) ಮತ್ತು ಅವರ ಖಲೀಫರುಗಳ ದುಆ ಸ್ವೀಕೃತಿಯ ವಿಶ್ವಾಸ ವರ್ಧಕ ಮತ್ತು ಮಹೋನ್ನತವಾದ ದೃಷ್ಟಾಂತಗಳನ್ನು ಪ್ರಸ್ತುತಪಡಿಸುವೆನು. **ಇನ್‌ಶಾಅಲ್ಲಾಹ್**.

ಪ್ರೀತಿಯ ಓದುಗರೇ! ನಾವು ಹಝ್‌ರತ್ ರಸೂಲುಲ್ಲಾಹ್(ಸ) ಅವರ ಚರಿತ್ರೆಯಿಂದ ಹಾಗೂ ಹದೀಸುಗಳಿಂದ ಪ್ರಾರ್ಥನೆ ಸ್ವೀಕೃತಿಯ ಘಟನೆಗಳನ್ನು ಅಧ್ಯಯನ ಮಾಡಲು ಹೊರಟಾಗ ಆಶ್ಚರ್ಯಕ್ಕೆ ಮಿತಿ ಇರುವುದಿಲ್ಲ. ವಿನೀತನು ಅವುಗಳಿಂದ ಕೇವಲ ಒಂದೆರಡು ದೃಷ್ಟಾಂತಗಳನ್ನು ಪ್ರಸ್ತುತಪಡಿಸುವನು.

ಹಝ್‌ರತ್ ಅಬೂಹುರ್ರೈರ(ರ) ಹಝ್‌ರತ್ ರಸೂಲುಲ್ಲಾಹ್(ಸ) ಅವರ ಪ್ರಾರ್ಥನೆ ಫಲವಾಗಿಯೇ ತನ್ನ ಮಾತೆಯ ಇಸ್ಲಾಮ್ ಸ್ವೀಕಾರದ ಘಟನೆ ಹೀಗೆ ವಿವರಿಸುತ್ತಾರೆ. ನನ್ನ ಮಾತೆ ಬಹುದೇವಾರಾಧಕರಾಗಿದ್ದಳು. ನಾನು ಅವರನ್ನು ಇಸ್ಲಾಮ್ ಧರ್ಮಕ್ಕೆ ಆಹ್ವಾನಿಸುತ್ತಿದ್ದೆ. ಒಂದು ಸಂದರ್ಭದಲ್ಲಿ ನಾನು ಅವರಿಗೆ ಸತ್ಯ ಸಂದೇಶ ಹೇಳಿಕೊಡುವಾಗ ಅವರು ಹಝ್‌ರತ್ ರಸೂಲುಲ್ಲಾಹ್(ಸ) ರವರ ಬಗ್ಗೆ ಹೇಳಿದರು. ಅದು ನನಗೆ ಇಷ್ಟವಾಗಲಿಲ್ಲ. ನಾನು ಅಳುತ್ತ ಹಝ್‌ರತ್ ರಸೂಲುಲ್ಲಾಹ್(ಸ) ರವರ ಸಮ್ಮುಕದಲ್ಲಿ ಹಾಜರಾಗಿ ಹೇಳಿದೆ. ನಾನು ನನ್ನ ತಾಯಿಯನ್ನು ಇಸ್ಲಾಮ್ ಧರ್ಮದೆಡೆ ಆಹ್ವಾನಿಸುತ್ತಿದ್ದೆ. ಅವರು ನಿರಾಕರಿಸುತ್ತಿದ್ದರು. ಇಂದು ಅದೇ ಆಹ್ವಾನ ನೀಡಿದಾಗ ಅವರು ತಮ್ಮ ಕುರಿತು ನನಗೆ ಅಪ್ರಿಯವಾದಂತಹ ಮಾತುಗಳನ್ನು ಹೇಳಿದ್ದಾರೆ. ತಾವು ದುಆ ಮಾಡಿರಿ. ನನ್ನ ತಾಯಿಗೆ ಅಲ್ಲಾಹನು ಹಿದಾಯತ್ (ಸನ್ಮಾರ್ಗ) ದಯಪಾಲಿಸಲಿ. ಆಗ ರಸೂಲುಲ್ಲಾಹ್(ಸ) ದುಆ ಮಾಡಿದರು. **"ಅಲ್ಲಾಹುಮ್ಮ ಇಹ್ದಿ ಉಮ್ಮಿ ಅಬಿ ಹುರೈರ"** ಓ ಅಲ್ಲಾಹ್ ನೀನು ಅಬುಹುರೈರ ತಾಯಿಗೆ ಹಿದಾಯತ್ (ಸನ್ಮಾರ್ಗ) ದಯಪಾಲಿಸು.

ಹಝ್‌ರತ್ ಅಬು ಹುರೈರ ಹೇಳುತ್ತಾರೆ. ನಾನು ಈ ದುಆ ಕೇಳಿ ಸಂತೋಷದಿಂದ ಮನೆಯತ್ತ ಹೊರಟೆ. ಮನೆಯ ಬಾಗಿಲಿಗೆ ತಲುಪಿದಾಗ ಬಾಗಿಲು ಮುಚ್ಚಿತ್ತು. ನನ್ನ ತಾಯಿ ನನ್ನ ಹೆಜ್ಜೆಗಳ ಸದ್ದು ಕೇಳಿ ಹೇಳಿದರು. ಓ ಅಬುಹುರೈರ ಅಲ್ಲೇ ನಿಲ್ಲು ಅಷ್ಟರಲ್ಲಿಯೇ ನೀನು ನೀರು ಬೀಳುವ ಸದ್ದು ಕೇಳಿದೆ. ಅವರು ಹೇಳುತ್ತಾರೆ. ಆಕೆ ಸ್ನಾನ ಮಾಡಿದಳು. ಬಟ್ಟೆ ಧರಿಸಿ, ದುಪಟ್ಟ ಹೊದ್ದುಕೊಂಡು ಬಾಗಿಲು ತೆರೆದಳು ಮತ್ತು ಹೇಳಿದಳು. ಓ **ಅಬೂಹುರೈರ ಅಶ್‌ಹದು ಅಲ್ಲ ಇಲಾಹ್ ಇಲ್ಲಲ್ಲಾಹ್. ವ ಅಶ್‌ಹದು ಅನ್ನ ಮುಹಮ್ಮದನ್ ಅಬ್ದುಹು ವ ರಸೂಲುಹೂ"** ಹಝ್‌ರತ್ ಅಬುಹುರೈರ ಹೇಳುತ್ತಾರೆ. ನಾನು ತಕ್ಷಣ ಸಂತೋಷದಿಂದ ಅಳುತ್ತ ಹಝ್‌ರತ್ ರಸೂಲುಲ್ಲಾಹ್(ಸ) ರವರ ಸೇವೆಯಲ್ಲಿ ಹಾಜರಾದೆ ಮತ್ತು ಶುಭವನ್ನು ಕೋರಿದೆ. ಅಲ್ಲಾಹನು ಅವರ ದುಆ ಆಲಿಸಿದನು. ಮತ್ತು ಅಬುಹುರೈರ ತಾಯಿಗೆ ಹಿದಾಯತ್ ನೀಡಿದರು. ಆಗ ಅವರು ಅಲ್ಲಾಹನ ಸ್ತುತಿಯನ್ನು ಮಾಡಿದರು ಮತ್ತು ಹೇಳಿದರು ಒಳ್ಳೆಯದಾಯಿತು. ಆಗ ನಾನು ಹೇಳಿದೆ. ಓ ಪ್ರವಾದಿಯರೇ! ತಾವು ಈ ದುಆ ಸಹ ಮಾಡಬೇಕು ಅವನು ನನಗೆ ಮತ್ತು ನನ್ನ ತಾಯಿಗೆ ಸತ್ಯವಿಶ್ವಾಸಿಗಳಲ್ಲಿ ಪ್ರಿಯರನ್ನಾಗಿ ಮಾಡಲಿ ಮತ್ತು ಅವರು ನಮಗೆ ಪ್ರಿಯವಾಗಿರಲಿ. ಅವರು ದುಆ ಮಾಡಿದರು. ಓ ಅಲ್ಲಾಹ್! ತನ್ನ ಈ ದಾಸನನ್ನು ಮತ್ತು ಅವನ ತಾಯಿಗೆ ಸತ್ಯವಿಶ್ವಾಸಿಗಳೊಡನೆ ಮತ್ತು ಸತ್ಯ ವಿಶ್ವಾಸಿಗರಿಗೆ ಪ್ರಿಯವಾಗುವಂತೆ ಮಾಡು. ಹಝ್‌ರತ್ ಅಬುಹುರೈರ ಹೇಳುತ್ತಾರೆ. ನನ್ನನ್ನು ನೋಡಿಯೇ ಇಲ್ಲದಂತಹ ಸತ್ಯವಿಶ್ವಾಸಿ ಸಹ ನನ್ನೊಡನೆ ಪ್ರೀತಿಸುತ್ತಿದ್ದ. (ಸಹೀ ಮುಸ್ಲಿಂ, ಕಿತಾಬ್ ಫಝಾಎಲುಸ್ಸಹಾಬ)

ಈ ಹದೀಸಿನಿಂದ (ದುಆ) ಪ್ರಾರ್ಥನೆ ಸ್ವೀಕೃತಿಯ ಎರಡು ಮಹೋನ್ನತ ದೃಷ್ಟಾಂತಗಳು ಮತ್ತು ದೇವಾಸ್ತಿತ್ವ ಸಾಕ್ಷ್ಯ ಕಂಡು ಬರುತ್ತವೆ. ಅದೇ ರೀತಿ ಬುಖಾರಿಯ

ಒಂದು ವರದಿ ಇದೆ. ಹಝ್ರತ್ ಅನಸ್(ರ) ವರದಿ ಮಾಡುತ್ತಾರೆ. “ಒಮ್ಮೆ ಒಬ್ಬ ವ್ಯಕ್ತಿ ಮಸ್ಜಿದ್ ನಬ್ವಿಯ ಮೆಟ್ಟಿಲ ಬಳಿ ಬಾಗಿಲಿನಿಂದ ಪ್ರವೇಶಿಸಿದ. ರಸೂಲುಲ್ಲಾಹ್(ಸ) ಆ ಸಮಯ ನಿಂತು ಖುತುಬ ನೀಡುತ್ತಿದ್ದರು. ಆ ವ್ಯಕ್ತಿಯು ಹುಝೂರ್(ಸ) ರವರ ಗಮನ ಸೆಳೆಯುತ್ತ ಹೇಳಿದನು. ಓ ಪ್ರವಾದಿ ವರ್ಯರೇ! ಜಾನುವಾರುಗಳು ಸಾಯುತ್ತಿವೆ, ರಸ್ತೆಗಳೆಲ್ಲ ಕತ್ತರಿಸಿ ಹೋಗಿವೆ. ನೀವು ಅಲ್ಲಾಹನಲ್ಲಿ ದುಆ ಮಾಡಿ. ಅವನು ನಮ್ಮ ಮೇಲೆ ಮಳೆ ಸುರಿಸಲಿ. ಆಗ ಹುಝೂರ್(ಸ) ಕೈ ಎತ್ತಿ ದುಆ ಮಾಡಿದರು. ಅಲ್ಲಾಹುಮ್ಮ ಅಸ್‌ಖಿನಕಾ, ವರದಿಗಾರರು ಹೇಳುತ್ತಾರೆ. ಆ ಸಮಯ ಆಕಾಶದ ಮೇಲೆ ಮೋಡವಾಗಲಿ ಮೋಡದ ಗುರುತು ಸಹ ಇರಲಿಲ್ಲ. ಆಕಸ್ಮತ್ತಾಗಿ ಸಲ್‌ಅ ಪರ್ವತದ ಹಿಂದಿನಿಂದ ಒಂದು ಮೋಡದ ಚಾದರ ಪ್ರಕಟವಾಯಿತು. ಅದು ಆಕಾಶದ ಮಾಧ್ಯ ಬಂದು ಹರಡಿತು. ಮತ್ತು ಮಳೆ ಸುರಿಸಲು ಆರಂಭಿಸಿತು. ಸತತ ಆರು ದಿನಗಳವರೆಗೆ ಸೂರ್ಯ ಕಾಣದಂತಾಯಿತು. ಮತ್ತೆ ಅದೇ ವ್ಯಕ್ತಿ ಮುಂದಿನ ಜುಮುಅಕ್ಕೆ ಹಾಜರಾದ ಮತ್ತು ಮಳೆಯನ್ನು ತಡೆಯಲು ದುಆ ಮಾಡಲು ಬೇಡಿಕೊಂಡ. ಆಗ ಹುಝೂರ್(ಸ) ಕೈ ಎತ್ತಿ ದುಆ ಮಾಡಿದರು. ವರದಿಗಾರರು ಹೇಳುತ್ತಾನೆ. ಅವರು ದುಆ ಮಾಡಿದ್ದಕ್ಕೆ ಮಳೆ ನಿಂತು ಹೋಯಿತು. ಜುಮಅ ನಿರ್ವಹಿಸಿ ಹೊರ ಬಂದಾಗ ಬಿಸಿಲು ಬಂದಿತ್ತು. (ಸಹೀಹ್ ಬುಖಾರಿ, ಕಿತಾಭುಲ್ ಜುಮುಅ)

ಸುಬ್ಹಾನಲ್ಲಾಹ್ ಪ್ರಾರ್ಥನೆ ಸ್ವೀಕೃತಿಯ ಮಹೋನ್ನತ ದೃಷ್ಟಾಂತವು ದೇವಾಸ್ತಿತ್ವಕ್ಕೆ ಸಾಕ್ಷಿಯಲ್ಲವೇ? ಇದೆ ಮತ್ತು ಖಂಡಿತ ಇದೆ. ಆದರೆ ವಿವೇಕಯುಳ್ಳವರೇ ಉಪದೇಶ ಪಡೆಯುತ್ತಾರೆ.

ಈಗ ವಿನೀತನು ಹಝ್ರತ್ ಅಖದಸ್ ಮಸೀಹ್ ಮೌಊದ್ ಕಾಲಘಟ್ಟದ ಇಮಾಮ್(ಅ) ರವರ ಒಂದೆರಡು ಪ್ರಾರ್ಥನೆ ಸ್ವೀಕಾರದ ದೃಷ್ಟಾಂತಗಳನ್ನು ವಿವರಿಸುವೆನು. ಅದನ್ನು ತಿಳಿದು ಮನವು ರೋಮಾಂಚನಗೊಳ್ಳುವುದು.

ಹಝ್ರತ್ ಹಕೀಮ್ ಫಝುಲ್ ದೀನ್ ಸಾಹಿಬ ಅವರ ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್‌ರವರ ಸಹೋದರ ಪುತ್ರ ಮತ್ತು ಅಳಿಯರಾಗಿದ್ದರು. ಹಝ್ರತ್ ಮಸೀಹ್ ಮೌಊದ್(ಅ) ರವರ ಪ್ರಾರ್ಥನೆ ಸ್ವೀಕೃತಿಯ ಒಂದು ಅಚ್ಚರಿದಾಯಕ ಹಾಗೂ ಅಪರೂಪದ ಘಟನೆ ವರದಿ ಮಾಡುತ್ತಾರೆ. 1907 ರಲ್ಲಿ ನನ್ನ ಎರಡನೇ ಪುತ್ರ ಅಬ್ದುಲ್ ಹಫೀಝುನ್ ಜನನವಾಯಿತು. ಚಳಿಗಾಲದ ದಿನಗಳಾಗಿದ್ದವು ಮತ್ತು ಆ ದಿನಗಳಲ್ಲಿ ಹಲವು ಹೆರಿಗೆಯಾದ ಮಹಿಳೆಯರು ಸಂಕಿಚಿತ (ತಶ್‌ಂಜ್) ರೋಗದಿಂದ ಮರಣ ಹೊಂದುತ್ತಿದ್ದರು. ಹೆರಿಗೆಯಾದ ತಾಯಿಯವರಿಗೆ ಈ ರೋಗ ಬಹಳ ಅಪಾಯಕರವಾಗಿತ್ತು. ನೂರರಲ್ಲಿ ಒಂದು ಬದುಕುಳಿದರೆ ಪುಣ್ಯ ಅಂತಿದ್ದರು. ನನ್ನ ಪತ್ನಿ ಹಫ್‌ಸ (ಪ್ರಥಮ ಖಲೀಫರ ಪುತ್ರಿ) ಮಗು ಜನಿಸಿದ ಏಳನೇ ದಿನ ಮಗ್ರಿಬ್ ನಮಾಝಿನ ಸಮಯ ಆ ರೋಗದ ಚಿಹ್ನೆಗಳು ಗೋಚರವಾಯಿತು. ಆದಾಗ್ಯೂ ಆ ದಿನಗಳಲ್ಲಿ ಈ ರೋಗ ಮಹಾಮಾರಿಯ ರೂಪ ತಾಳಿತು. ಆದುದರಿಂದ ಆ ಕಡೆ ಗಮನ ಸೆಳೆಯಬೇಕಾಯಿತು. ನಾನು ಮಗ್ರಿಬ್ ನಂತರ ಹಝ್ರತ್ ಸಾಹಿಬರ ಬಳಿ ಓಡಿಕೊಂಡು ಹೋದೆ ಮತ್ತು ವಿನಂತಿಸಿಕೊಂಡೆ. ಅವರು ಹೇಳಿದರು. ಇದು ತುಂಬ ಅಪಾಯಕರ ರೋಗವಾಗಿದೆ. ನೀವು ತಕ್ಷಣ ಹತ್ತು ಕಾಳಿನಷ್ಟು ಹೀಂಗ್ ಕೊಡಿ ಮತ್ತು ಒಂದು ಗಂಟೆ, ಒಂದೂವರೆ ಗಂಟೆ ನಂತರ ನನಗೆ ತಿಳಿಸಿ. ನಾನು ಇಶಾಅ ನಂತರ ಮತ್ತೆ ಹೋಗಿ ಹೇಳಿದೆ. ಈಗ ಸ್ವಲ್ಪ ಆರಮ ಇದೆ. ಹತ್ತು ಕಾಳಿನಷ್ಟು ಮುಶ್ಕ್ ಕೊಡಿ. ಒಂದು ಗಂಟೆಯ ನಂತರ ಮತ್ತೆ ತಿಳಿಸಿ ನಾನು ಮಲಗಿದ್ದೇನೆ ಎಂದು ಭಾವಿಸಬೇಡಿ. ಸಂಕೋಚಪಡದೇ ಪುರುಷರ ಮೆಟ್ಟಿಲ ಕಡೆಯಿಂದ ಧ್ವನಿ ಮಾಡಿ, ನಾನು ಹೇಳಿದೆ. ಈ ಸಮಯ ನಾನು ಮುಶ್ಕ್ ಎಲ್ಲಿಂದ ತರಲಿ. ಹುಝೂರ್ ಒಂದು ಮುಷ್ಠಿ ತುಂಬ ಮುಶ್ಕ್ ತೆಗೆದುಕೊಂಡು ಬಂದರು ಮತ್ತು ಹೇಳಿದರು. ತೆಗೆದುಕೊಳ್ಳಿ. ಇದು ಹತ್ತು ಗ್ರಾಂ ಆಗಬಹುದು. ನಾನು ಹೇಳಿದೆ. ಹುಝೂರ್ ಹೆಚ್ಚಿದೆ. ಹೇಳಿದರು. ತೆಗೆದುಕೊಂಡು ಹೋಗಿ. ಮತ್ತೆ ಕೆಲಸಕ್ಕೆ ಬರಬಹುದು. ನಾನು ಅದನ್ನು ತೆಗೆದುಕೊಂಡೆ ಮತ್ತು ರೋಗಿಗೆ ಕೊಟ್ಟಾಯಿತು. ಒಂದು ಗಂಟೆಯ ನಂತರ ಮತ್ತೆ ಹೋದೆ ಮತ್ತು ಹೇಳಿದೆ. ರೋಗ ಇನ್ನಷ್ಟು ಹೆಚ್ಚಾಗಿದೆ. ಹೇಳಿದರು. ಹತ್ತು ತೊಲೆ ಈಸ್ಟರ್ ಆಯಿಲ್ ಕೊಡಿ. ನಾನು ಬಂದು ಹತ್ತು ತೊಲೆ ಈಸ್ಟರ್ ಆಯಿಲ್ ಕೊಟ್ಟೆ. ಅದಾದ ನಂತರ ಭಾರಿ ಪ್ರಮಾಣದ ವಾಂತಿಯಾಯಿತು. ವಾಂತಿ ಈ ರೋಗದ ಅಂತಿಮ ಚರಣವಾಗಿರುತ್ತದೆ. ವಾಂತಿ ನಂತರ ಉಸಿರುಗಟ್ಟಲು ಪ್ರಾರಂಭವಾಯಿತು. ಕುತ್ತಿಗೆ ಹಿಂದಕ್ಕೆ ಸೆಳೆದುಕೊಂಡಿತು. ಕಣ್ಣ ಮುಂದೆ ಕತ್ತಲೆ ಆವರಿಸಿತು. ಮತ್ತು ನಾಲಿಗೆ ಬಂದ್ ಆಯಿತು. ನಾನು ಮತ್ತೆ ಓಡಿಕೊಂಡು ಹೋಗಿ ಮೆಟ್ಟಿಲು ಏರಿದೆ, ಹುಝೂರ್ ನನ್ನ ಸದ್ದು ಕೇಳುತ್ತಲೇ ಬಾಗಿಲು ತೆರೆದರು ಮತ್ತು ಹೇಳಿದರು. ಏನು ಹೇಗಿದೆ! ನಾನು ಹೇಳಿದೆ. ಈಗ ಸ್ಥಿತಿ ತುಂಬ ಗಂಭೀರವಾಗಿದೆ. ಉಸಿರುಗಟ್ಟಿದೆ. ಕುತ್ತಿಗೆ ಸೆಳೆದುಕೊಂಡಿದೆ. ಕಣ್ಣುಗಳಲ್ಲಿ ಬೆಳಕಿಲ್ಲ, ನಾಲಿಗೆ ಬಂದ್ ಆಗಿದೆ. ಹೇಳಿದರು. ಲೌಕಿಕವಾಗಿ ಏನೆಲ್ಲ ಮಾಡಬಹುದಿತ್ತು. ಅದೆಲ್ಲ ಮಾಡಿ ಆಗಿದೆ. ಇನ್ನೂ ಕೇವಲ ಒಂದೇ ಮಾರ್ಗ ಉಳಿದಿದೆ. ಅದು ದುಆ (ಪ್ರಾರ್ಥನೆ) ಮಾತ್ರ. ನೀವು ಹೋಗಿ. ನಾನು ಅವರಿಗೆ ಆರೋಗ್ಯ ದೊರೆತ ಮೇಲೆ ದುಆದಿಂದ ತಲೆ ಎತ್ತುವೆನು. ನಾನು ಇದನ್ನು ಕೇಳಿ ಮರಳಿ ಬಂದೆ ಮತ್ತು ಹೇಳಿದೆ. ಈಗ ನಿನಗೆ ಏನು ಚಿಂತೆಯಿಲ್ಲ. ಗುತ್ತಿಗೆದಾರನು ಸ್ವಯಂ ಗುತ್ತಿಗೆ ಹಿಡಿದುಕೊಂಡಿದ್ದಾನೆ. ಆ ಸಮಯ ರಾತ್ರಿಯ ಎರಡು ಗಂಟೆ ಆಗಿತ್ತು ನಾನು ಮನಗೆ ಬಂದೆ ಮತ್ತು ರೋಗಿಯನ್ನು ಅದೇ ಸ್ಥಿತಿಯಲ್ಲಿ ಬಿಟ್ಟು ಬೇರೆ ಕೋಣೆಯಲ್ಲಿ ಮಂಚದ ಮೇಲೆ ಮಲಗಿಬಿಟ್ಟೆ. ಮುಂಜಾನೆ ಯಾವುದೋ ಪಾತ್ರೆಯ ಸದ್ದಿನಿಂದ ನನ್ನ ಕಣ್ಣು ತೆರೆಯಿತು. ನಾನು ನೋಡುತ್ತೇನೆ. ನನ್ನ ಕಾಲುಗಳ ಹತ್ತಿರ ಪಾತ್ರೆಗಳನ್ನು ಸರಿಯಾಗಿ ಜೋಡಿಸಿಡುತ್ತಿದ್ದಳು ನಾನು ಕೇಳಿದೆ. ಈಗ ಹೇಗಿದೆ! ಹೇಳಿದಳು. ನೀವಂತೂ ಮಲಗಿಬಿಟ್ಟಿರಿ. ನನಗೆ ಎರಡು ಗಂಟೆ ನಂತರ ಅಲ್ಲಾಹನ ಅನುಗ್ರಹವಾಯಿತು. ಅಲ್ಹಮ್ದು ಲಿಲ್ಲಾಹಿ ರಬ್ಬುಲ್‌ಆಲಮೀನ್. (ಸೀರತ್ ಅಹ್ಮದ್, ಲೇಖಕ ಖುದ್ರತುಲ್ಲಾ ಸನ್ನೋರಿ ಸಾಹಿಬ್, ಪುಟ–170–172)

ಸಯ್ಯದನಾ ಹಝ್ರತ್ ಅಖದಸ್ ಮಸೀಹ್ ಮೌಊದ್(ಅ) ತನ್ನ ಮೇರು ಕೃತಿ ಹಖೀಖತುಲ್ ವಹೀಯಲ್ಲಿ ಪ್ರಾರ್ಥನೆ ಸ್ವೀಕೃತಿಯ ಒಂದು ಮಹೋನ್ನತ ದೃಷ್ಟಾಂತದ ವಿವರಣೆ ನೀಡುತ್ತಾ ಹೇಳುತ್ತಾರೆ. ಅಬ್ದುಲ್‌ಕರೀಂ ಹೆಸರು, ತಂದೆ ಅಬ್ದುರ್ರಹ್ಮಾನ್ ಹೈದರಾಬಾದ್ ದಖಿನ್ ನಿವಾಸಿ, ನಮ್ಮ ಮದರಸದಲ್ಲಿ ಒಬ್ಬ ವಿದ್ಯಾರ್ಥಿ, ವಿಧಿಯನ್ವಯ ಅವನಿಗೆ ಹುಚ್ಚು ನಾಯಿ ಕಡಿಯಿತು. ನಾವು ಅವನ ಚಿಕಿತ್ಸೆಗಾಗಿ ಕಸೋಲಿ ಕಳುಹಿಸಿದೆವು. ಕೆಲ ದಿನಗಳವರೆಗೆ ಕಸೋಲಿಯಲ್ಲಿ ಚಿಕಿತ್ಸೆ ನಡೆಯಿತು. ಮತ್ತೆ ಅವನು ಖಾದಿಯಾನಿಗೆ ಮರಳಿ ಬಂದನು. ಕೆಲವು ದಿನಗಳ ನಂತರ ಮತ್ತೆ ಅವನಲ್ಲಿ ಹುಚ್ಚುತನದ ಚಿಹ್ನೆಗಳು ಗೋಚರಿಸಿದವು. ಅದು ಹುಚ್ಚು ನಾಯಿ ಕಡಿತದಿಂದ ಉಂಟಾಗುತ್ತವೆ. ನೀರು ನೋಡಿ ಹೆದರತೊಡಗಿದ ಸ್ಥಿತಿ ಗಂಭೀರವಾಯಿತು. ಆಗ ಆ ಪರದೇಶಿಯ ಮೇಲೆ ನನಗೆ ಮರುಕ ಹುಟ್ಟಿದಂತಾಯಿತು. ಅವನಿಗಾಗಿ ಪ್ರಾರ್ಥನೆಯ ಒಂದು ವಿಶೇಷ ಆಸಕ್ತಿ ಮೂಡಿತು. ಪ್ರತಿಯೊಬ್ಬರು ಆ ವ್ಯಕ್ತಿ ಕೆಲವು ಗಂಟೆಗಳಲ್ಲಿ ಸಾಯಬಹುದು ಅನ್ನುತ್ತಿದ್ದರು. ನಿರ್ವಾಹವಿಲ್ಲದೇ ಅವನಿಗೆ ಬೋರ್ಡಿಂಗ್‌ನಿಂದ ಹೊರಗೆ ಬಂದು ಪ್ರತ್ಯೇಕ ಮನೆಯಲ್ಲಿ ಇರಿಸಿದರು. ಕಸೋಲಿಯ ಬ್ರಿಟಿಷ್ ವೈದ್ಯರಿಗೆ ತಂತಿ ಸಂದೇಶ ಮೂಲಕ ಕೇಳಲಾಯಿತು. ಅವನಿಗಾಗಿ ಏನಾದರೂ ಚಿಕಿತ್ಸಾ ಕ್ರಮವಿದೆಯೇ ಎಂದು. ಅಲ್ಲಿಂದ ಉತ್ತರ ಬಂತು. ಈಗ ಅವನಿಗಾಗಿ ಯಾವ ಚಿಕಿತ್ಸೆಯೂ ಇಲ್ಲ. ನನ್ನ ಮನಸ್ಸಿನಲ್ಲಿ ಕಳವಳ ಉಮಟಾಯಿತು. ನನ್ನ ಮಿತ್ರರು ಸಹ ಅವನ ಕುರಿತು ದುಆ ಮಾಡಲು ಪ್ರೇರೇಪಿಸಿದರು. ಏಕೆಂದರೆ ಆ ಬಡವನ ಸ್ತಿತಿ ಕರುಣಾಜನಕವಾಗಿತ್ತು. ನನ್ನ ಮನಸ್ಸಿನಲ್ಲಿಯೂ ಭಯ ಉಂಟಾಯಿತು. ಒಂದು ವೇಳೆ ಇವನು ತೀರಿ ಹೋದರೆ ನಮ್ಮ ವಿರೋಧಿಗಳು ಕೆಟ್ಟ ರೀತಿಯಲಿ ಬಳಸಿಕೊಲ್ಲುವರು. ಆಗ ನನ್ನ ಮನಸ್ಸಿನಲ್ಲಿ ತುಂಬ ಕಳವಳ ಅಸಮಾಧಾನ ಉಂಟಾಯಿತು. ಮತ್ತು ಅಸಾಮಾನ್ಯ ರೀತಿಯ ಗಮನಹರಿಸಿದಂತಾಯಿತು. ಅದು ನನ್ನದ್ದಾಗದೇ ದೇವನಾಗ್ರಹದಂತಿತ್ತು. ಇಂತಹ ಸ್ಥಿತಿ ಅಲ್ಲಾಹನ ಅನುಗ್ರಹದಿಂದ ಉಂಟಾಗುತ್ತದೆ ಆಗ ಆ ಮೃತನನ್ನು ಜಿವಂತಗೊಳಿಸಲು ಪ್ರಾರ್ಥನೆಯ ಮೊರೆ ಹೋದೆ. ಅವನ ಸ್ಥಿತಿ ಮೃತನಂತೆಯೇ ಇತ್ತು. ಅವನು ನೀರಿನಿಂದ ಮತ್ತು ಬೆಳಕಿನಿಂದ ಹೆದರಿ ಓಡಿ ಹೋಗುತ್ತಿದ್ದ. ತಕ್ಷಣದಿಂದಾಗಿ ಸ್ಥಿತಿ ಪಲ್ಲಟಗೊಂಡಿತು. ಈಗ ಆರೋಗ್ಯವಾಯಿತು. ಅವನು ಹೇಳಿದ. ಈಗ ನನಗೆ ನೀರಿನಿಂದ ಹೆದರಿಕೆ ಆಗುತ್ತಿಲ್ಲ. ಅಗ ಅವನಿಗೆ ಕೊಡಲಾಯಿತು. ಅವನು ಏನೂ ಹೆದರಿಕೆಯಿಲ್ಲದೇ ನೀರು ಕುಡಿದನು. ಅಲ್ಲದೇ ನೀರಿನಿಂದ ವುಝು ಮಾಡಿ ನಮಾಝ್ ನಿರ್ವಹಿಸಿದನು. ರಾತ್ರಿಯೆಲ್ಲ ಸರಿಯಾಗಿ ನಿದ್ರೆ ಮಾಡಿದನು. ಮತ್ತು ಎಲ್ಲ ರೀತಿಯ ಹುಚ್ಚುತನ ಹಾಗೂ ಭಯ ದೂರವಾಯಿತು. ಕೆಲ ದಿನಗಳ ನಂತರವೇ ಪರಿಪೂರ್ಣ ಆರೋಗ್ಯದಂತನಾದನು. ನನ್ನ ಮನಸ್ಸಿನಲ್ಲಿ ಹಾಕಲಯಿತು.ಈ ಹಚ್ಚುತನದ ಸ್ಥಿತಿ ಅವನನ್ನು ನಾಶಗೊಳಿಸಲು ಆಗಿರಲಿಲ್ಲ. ಬದಲು ಅಲ್ಲಾಹನ ದೃಷ್ಟಾಂತಕ್ಕಾಗಿ ಈ ಸ್ಥಿತಿ ಉಂಟಾಗಿತ್ತು. (ರೂಹಾನಿ ಖಝಾಈನ್, ಸಂಪುಟ–22, ಹಖೀಖತುಲ್ ವಹಿ ಪುಟ 480–481)

ಈಗ ವಿನೀತನು ಹಝ್ರತ್ ಖಲೀಫತುಲ್ ಮಸೀಹ್ ಪ್ರಥಮ (ರ) ಪ್ರಾರ್ಥನೆ ಸ್ವೀಕೃತಿಯ ದೃಷ್ಟಾಂತಗಳಲ್ಲಿ ಒಂದೆರಡು ಘಟನೆಗಳು ಪ್ರಸ್ತುತಪಡಿಸುವೆನು. ಮುಹತರಂ ಚೌಧರಿ ಗುಲಾಂ ಮುಹಮ್ಮದ್ ಸಾಹಿಬ್ ಬಿ.ಎ. ಹೇಳುತ್ತಾರೆ. 1909 ರಲ್ಲಿ ಒಮ್ಮೆ ಸತತವಾಗಿ 8 ದಿನಗಳಿಂದ ಮಳೆ ಬರುತ್ತಿತ್ತು ಅದರಿಂದ ಖಾದಿಯಾನಿನ ಬಹಳಷ್ಟು ಮನೆಗಳು ಬಿದ್ದು ಹೋಗಿದ್ದವು. ಹಝ್ರತ್ ನವಾಬ್ ಮುಹಮ್ಮದ್ ಅಲಿ ಖಾನ್ ಸಾಹಿಬ್ ಖಾದಿಯಾನ್‌ನಿಂದ ಹೊರ ವಲಯದಲ್ಲಿ ಒಂದು ಹೊಸ ಕಟ್ಟಡ ನಿರ್ಮಿಸಿದ್ದರು. ಅದು ಸಹ ಬಿದ್ದು ಹೋಗಿತ್ತು. 8ನೇ ಅಥವಾ 9ನೇ ದಿನ ಹಝ್ರತ್ ಖಲೀಫತುಲ್ ಮಸೀಹ್ ಪ್ರಥಮ(ರ) ಝುಹರ್ ನಮಝ್ ನಂತರ ಹೇಳಿದರು. ನಾನು ದುಆ ಮಾಡುತ್ತೇನೆ. ನೀವೆಲ್ಲರೂ ಆಮೀನ್ ಎಂದು ಹೇಳಿ. ದುಆ ಮಾಡಿದ ನಂತರ ಅವರು ಹೇಳಿದರು. ನಾನು ಇಂದು ಆ ದುಆ ಮಾಡಿದ್ದೇನೆ. ಅದನ್ನು ಹಝ್ರತ್ ಮುಹಮ್ಮದ್(ಸ) ತನ್ನ ವಯಸ್ಸು ಪೂರ್ತಿಯಲ್ಲಿ ಒಮ್ಮೆ ಮಾತ್ರ ಮಾಡಿದ್ದರು. ದುಆ ಸಮಯಕ್ಕೆ ಮಳೆ ಜೋರಾಗಿ ಸುರಿಯುತ್ತಿತ್ತು. ಅನಂತರ ಮಳೆ ನಿಂತು ಹೋಯಿತು. ಮತ್ತು ಅಸರ್ ನಮಾಝಿನ ವೇಳೆ ಆಕಾಶ ಸ್ವಚ್ಛಗೊಂಡಿತು. ಮತ್ತು ಬಿಸಲು ಹೊರಟಿತು. (ಹಯಾತೆ ನುರ್ 440–441)

ಅದೇ ರೀತಿ “ಹಯಾತ್ ನೂರ್” ನಲ್ಲಿ ಹಝ್ರತ್ ಖಲೀಫತುಲ್ ಮಸೀಹ್ ಪ್ರಥವ (ರ) ರವರ ಪ್ರಾರ್ಥನೆ ಸ್ವೀಕೃತಿಯ ಒಂದು ಅತ್ಯಂತ ವಿಶ್ವಾಸವರ್ಧಕ ಘಟನೆ ಹೀಗೆ ವಿವರಿಸಲ್ಪಟ್ಟಿದೆ. ಈ ಕವನ ಅದರ ಪೈಕಿ ಹುಝೂರ್(ರ) ಹೇಳಿದರು. ಇದು ನನ್ನ ಮನಮುಟ್ಟಿದೆ. ತುಂಬ ಪ್ರಭಾವ ಬೀರಿದೆ ಅದು ಖಾಝಿ ಮುಹಮ್ಮದ್ ಝುಹೂರುದ್ದೀನ್ ಸಾಹಿಬ್ ಅಕ್ಮಲ್ ಅವರದ್ದಾಗಿತ್ತು. ಅವರು ಆ ದಿನಗಳಲ್ಲಿ ಅಕ್ಬಾರಿನ ಉಪ ಸಂಪಾದಕರಾಗಿದ್ದರು. ಆ ಕವನದ ಮೊದಲ ಸಾಲು ಇದಾಗಿತ್ತು.

‘ಆರ್ಝಿ ರಂಗ್ ಬಖಾ ಥಾ ಮುಝು ಮಾಲೂಮ್ ನ ಥಾ’
ಸುರ್ಮ ಚಶಮ್ ಫನಾ ಥಾ ಮುಝೀ ಮಾಲೂಮ್ ನ ಥಾ

ಮುಕರ್ರಮ್ ಖಾಝಿ ಸಾಹಿಬ್ ಇದಕ್ಕೆ ಸಂಬಂಧಿಸಿದಂತೆ ಹುಝೂರರ ಪ್ರಾರ್ಥನೆ ಸ್ವೀಕೃತಿಯ ಒಂದು ಅದ್ಭುತವಾದ ಘಟನೆ ಹೇಳುತ್ತಾರೆ. ನಾನು “ಬದರ್ ಕಚೇರಿಯಲ್ಲಿ” ಮಾಮೂಲು ಪ್ರಸಾರದ ಒಂದು ದಿನ ಮಂಚದ ಮೇಲೆ ಅಡ್ಡ ಬಿದ್ದು ಹಾಸಿಗೆಯನ್ನು ತಲೆದಿಂಬು ಮಾಡಿಕೊಂಡು, ನಿದ್ರಿಸುತ್ತಿದ್ದೆ, ಮುಂದೆ ಮೇಜಿತ್ತು. ಸಂಪಾದಕೀಯ ಕಾರ್ಯದ ಕರ್ತವ್ಯ ನಿರ್ವಹಿಸುತ್ತಿದ್ದೆ. ಆಗ ನನಗೆ ಹಝ್ರತ್ ಖಲೀಫ ಅವ್ವಲ್(ರ) ಅವರ ಒಂದು ಕಾಗದ ದೊರೆಯಿತು. ಅದರಲ್ಲಿ ಬರೆಯಲಾಗಿತ್ತು. ನಾನು ನಿಮಗಾಗಿ ತುಂಬ ದುಆ ಮಾಡಿದ್ದೇನೆ. ಅಲ್ಲಾಹನು ನಿಮಗೆ ಮರಳಿ ಅನುಗ್ರಹಿಸುವನು. ವಲೂ ಅಕುನ್ ಬಿದುಆಯಿಕ ಗಬ್ಬಿಶಖಿಯ್ಯ.” ನಾನು ಅಚ್ಚರಿಗೊಂಡೆ. ಏಕೆಂದರೆ ನನ್ನ ಇಬ್ಬರು ಮಕ್ಕಳು ಒಬ್ಬರ ನಂತರ ಇನ್ನೊಬ್ಬರು 40 ದಿನಗಳ

ಅಂತರದಲ್ಲಿ ಗೋಲೆಕಿ (ಗುಜರಾತ್) ನಲ್ಲಿ ತೀರಿ ಹೋಗಿದ್ದರು. ಜಮ್‌ಶೀದ್ 7 ಅಕ್ಟೋಬರ್ 1908 ಒಂಬತ್ತೂವರೆ ತಿಂಗಳಿನಲ್ಲಿ, ಮತ್ತು ಖುರ್‌ಶಿದ್ ಹಿರಿಯವನು 5 ವರ್ಷ 8 ತಿಂಗಳ ವಯಸ್ಸಿನಲ್ಲಿ. ಇದು ಸರಿಯಾಗಿತ್ತು. ಆದರೆ ನಾನು ಹುಝೂರರಿಗೆ ದುಆ ಮಾಡಲು ಆಗ್ರಹಿಸಿರಲಿಲ್ಲ. ಕೊನೆಗೆ ತಿಳಿಯಿತು. ನನ್ನ ಈ ಕವನ ದಿವಂಗತೆ ಅಬ್ದುಸ್ಸಲಾಮರ ತಾಯಿ ಹಝ್ರತ್ ಅಮ್ಮಾಜಿ ಅವರು ಮನೆಯಲ್ಲಿ ಸುಶ್ರಾವ್ಯವಾಗಿ ಹಾಡಿದ್ದರು. ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್(ರ) ಕಣ್ಣು ಮುಚ್ಚಿಕೊಂಡು ಮಲಗಿದ್ದರು. ಅಚಾನಕ್ಕಾಗಿ ಎದ್ದು ಕುಳಿತುಕೊಂಡು ಮತ್ತು ಹೇಳಿದರು ಅಲ್ಹಮ್ದುಲಿಲ್ಲಾಹ್.

ಅಮ್ಮಾಜಿ ಹೇಳಿದರು. ಈ ಕವನ ಅಕ್ಮಲ್ ಸಾಹೇಬರದ್ದಾಗಿದೆ. ಅವರು ನಿಮ್ಮ ಶಿಷ್ಯೆ. ಸಕೀನತುನ್ನಿಸಾರ ಪತಿ ಆಗಿದ್ದಾರೆ. ಪಾಪ ಅವರ ಇಬ್ಬರು ಮಕ್ಕಳು ಒಬ್ಬರ ಹಿಂದೆ ಒಂದು ತೀರಿಹೋದರು. ಹಝ್ರತ್ ಖಲೀಫ ಅವ್ವಲ್‌ರಿಗೆ ಅದು ತುಂಬಾ ಪ್ರಭಾವ ಬೀರಿತು. ಹುಝೂರರ ಗಮನ ದುಆ ಕಡೆ ಆಯಿತು. ಅನಂತರ ಹುಝೂರ್ ನನಗೆ ಈ ಕಾಗದ ಬರೆದಿದ್ದಾರೆ. ಅದನ್ನು ನಾನು ಮೇಲೆ ವಿವರಿಸಿದ್ದೇನೆ.

ಅನಂತರ 1910 ರಲ್ಲಿ ನನಗೆ ಅಲ್ಲಾಹನ ಅನುಗ್ರಹದಿಂದ ಗಂಡು ಮಗು ಹುಟ್ಟಿತು ಅವನ ಹೆಸರು ಅಬ್ದುರ್ ರಹ್ಮಾನ್ ಆಗಿದೆ. (ಜುನೇದ ಹಾಷ್ಮಿ ಬಿ.ಎ) ಅದರ ಎರಡು ವರ್ಷ 9 ತಿಂಗಳ ನಂತರ 1913 ರಲ್ಲಿ ಇನ್ನೊಂದು ಮಗು ಹುಟ್ಟಿತು. ಅವನ ಹೆಸರು ಅಬ್ದುರ್ ರಹೀಂ ಆಗಿದೆ (ಶಿಬ್ಲಿ ಎಂ.ಎ) ಹೀಗೆ ನಾವು ಅವರ ಪ್ರಾರ್ಥನೆ ಸ್ವೀಕಾರದ ದೃಷ್ಟಾಂತ ನೋಡಿದೆವು. ಫಲ್‌ಹಮ್ದುಲಿಲ್ಲಾಹ್ ಅಲಾ ಝಾಲಿಕ್." (ಹಯಾತ್‌ನೂರ್ ಪು. 431–432).

ಓದುಗರ ಮಹನಿಯರೇ ನಾವು ಖಲೀಫತುಲ್ ಮಸೀಹ್ ದ್ವಿತೀಯರ 52 ವರ್ಷಗಳ ಖಿಲಾಫತ್ ಅವಧಿಯ ಮೇಲೆ ದೃಷ್ಟಿ ಹಾಯಿಸಿದರೆ ಅವರ ಶುಭಕಾಲದಲ್ಲಿ ಜಾತಿಕ ಅಹ್ಮದಿಯಾ ಜಮಾಅತ್ ಬಾಂಧವರ ಪ್ರಾರ್ಥನೆ ಸ್ವೀಕೃತಿಯ ಅಸಂಖ್ಯಾತ ದೃಷ್ಟಾಂತಗಳನ್ನು ಕಂಡವರಾಗಿದ್ದಾರೆ. ಪೇಶ್ಗೋಯಿ ಮುಸ್ಲಿಹ್ ಮೌಊದ್‌ನಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ರವರ ದೇವವಾಣಿಯಲ್ಲಿ ಈ ಪದಗಳಿವೆ. ಅವನು ತನ್ನ ಮಸೀಹಿ ಆತ್ಮ ಮತ್ತು ರೂಹುಲ್ ಹಖ್ (ದೇವದೂತನ) ಅನುಗ್ರಹದಿಂದ ಹಲವರನ್ನು ರೋಗಗಳಿಂದ ಶಮನಗೊಳಿಸುವೆನು. ಅಂದ ಹಾಗೆಯೇ ದೃಷ್ಟಾಂತಗಳು ಗೋಚರವಾಗಿವೆ. ಅವುಗಳಲ್ಲಿ ಎರಡು ಮೂರು ದೃಷ್ಟಾಂತಗಳನ್ನು ಮಂಡಿಸುವೆನು.

ಮುಕರ್ರಮ್ ಸೇತ್ ಅಬ್ದುಲ್ಲ ಭಾಯಿ ಅಲಾದೀನ್ ಸಾಹಿಬ್ ಬರೆಯುತ್ತಾರೆ. 1918 ರಲ್ಲಿ ನಾನು ನನ್ನ ಮಗ ಅಲಿ ಮುಹಮ್ಮದ್ ಸಾಹಿಬ್ ಮತ್ತು ಸೇತ್ ಅಲ್ಲಾದೀನ್ ಇಬ್ರಾಹಿಂ ಭಾಯಿ ತನ್ನ ಮಗ ಫಾಝೀಲ್ ಭಾಯಿಗೆ ಶಿಕ್ಷಣ ಪಡೆಯಲು ಖಾದಿಯಾನ್‌ಗೆ ಕಳುಹಿಸಿದರು. ಅಲಿ ಮುಹಮ್ಮದ್ 1920 ರಲ್ಲಿ ಮೆಟ್ರಿಕ್ ಉತ್ತೀರ್ಣರಾದರು. ಅವರಿಗೆ ಲಂಡನ್ ಹೋಗಬೇಕಾಗಿತ್ತು. ಇಬ್ಬರು ಮಕ್ಕಳು ಮನೆಗೆ ಮರಳಿ ಬರುವ ತಯಾರಿಯಲ್ಲಿದ್ದರು. ಅಷ್ಟರಲ್ಲಿ ಫಾಝೀಲ್ ಭಾಯಿಗೆ Typhoid ಜ್ವರ ಬಂತು. ನೂರ್ ಆಸ್ಪತ್ರೆಯ ಗೌರವಾನ್ವಿತ ಡಾ. ಜನಾಬ್ ಹಶ್ಮತುಲ್ಲ ಸಾಹಿಬ್ ಸಾಧ್ಯವಾದಷ್ಟು ಅವರಿಗೆ ಚಿಕಿತ್ಸೆ ನೀಡಿದರು. ಆರೋಗ್ಯವು ಆಯಿತು. ಆದರೆ ಜಾಗ್ರತೆ ವಹಿಸದ ಕಾರಣ ಮತ್ತು ಅಸ್ವಸ್ಥರಾದರು. ಅಸ್ವಸ್ತರೆಂದರೆ ಉಳಿಯುವ ಭರವಸೆಯಿಲ್ಲದಂತಹ ಮಟ್ಟಕ್ಕೆ ಹೋಯಿತು. ಈ ಸುದ್ದಿ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಸಾನಿ ಅವರಿಗೆ ತಲುಪಿತು. ಹುಝೂರ್ ಸ್ವಯಂ ಬೋರ್ಡಿಂಗ್‌ಗೆ ಆಗಮಿಸಿದರು ಮತ್ತು ತುಂಬ ಹೊತ್ತು ದುಆ ಮಾಡಿದರು. ಅನಂತರ ಪವಾಡ ಸದೃಶ್ಯ ರೀತಿಯಲ್ಲಿ ಅವರ ಆರೋಗ್ಯ ಸುಧಾರಿಸತೊಡಗಿತು. ಹೀಗೆ ಅಲ್ಲಾಹನ ಅನುಗ್ರಹದಿಂದ ಅವರಿಗೆ ಮರುಜನ್ಮ ಸಿಕ್ಕಿದಂತಾಯಿತು. ಹಝ್ರತ್ ರಸೂಲುಲ್ಲಾಹ್(ಸ) ರವರು ಹೇಳಿದಂತೆ "ಮರಣ ತಲ್ಲಲು ಆಗುವುದಿಲ್ಲ. ಆದರೆ ದುಆದಿಂದ ಮಾತ್ರ" ಎಂಬ ಮಾತು ಎಷ್ಟು ಸತ್ಯವಾಗಿದೆ. ಈ ದೃಶ್ಯ ಕನ್ನಾರೆ ನೋಡಿದಂತಾಗಿದೆ. (ಅಲ್–ಹಕಮ್ ಡಿಸೆಂಬರ್ 1989, ಜ್ಯೋಬ್ಲಿ ನಂಬ್ರ, ಪುಟ 137)

ಅದೇ ರೀತಿ ಮುಕರ್ರಮ್ ಮಲಿಕ್ ಹಬೀಬುಲ್ಲಾಹ್ ಸಾಹಿಬ್ ನಿವೃತ್ತ Deputy Inspector of Shools ಹಝ್ರತ್ ಮುಸ್ಲಿಹ್ ಮೌಊದ್(ಅ) ಅವರ ಪ್ರಾರ್ಥನೆ ಸ್ವೀಕಾರದ ಕುರಿತು ಬರೆಯುತ್ತಾರೆ. "ಶುಜಾಬಾದ್ ವಾಸದ ನಡುವೆ ನನಗೆ ಒಂದು ರೋಗ ಹಿಡಿಯಿತು. ಅದು ನನ್ನನ್ನು ಅತ್ಯಂತ ನಿಶ್ಯಕ್ತನ ಶವದಂತೆ ಮಾಡಿತು. ಸ್ವಲ್ಪ ದಿನಗಳ ನಂತರ ಹೊಟ್ಟೆಯಲ್ಲಿ ಎಂತಹ ಸಂಕಟವಾಗುತ್ತಿದ್ದೆಂದರೆ ನಾನು ಮೂರ್ಛೆ ತಪ್ಪಿ ಬೀಳುತ್ತಿದ್ದೆ. ಸುಮಾರು ಎರಡು ವರ್ಷದವರೆಗೆ ನಾನ ರೀತಿಯ ಚಿಕಿತ್ಸೆ ಮಾಡಿ ನೋಡಿದೆನು ಆದರೆ ಫಲ ದೊರೆಯಲಿಲ್ಲ. ಕೊನೆಗೆ ಬೇಸತ್ತು ನಾನು ಅಮೃತಸರದ ಸರಕಾರಿ ಆಸ್ಪತ್ರೆಗೆ ದಾಖಲಾದೆ. ಅಲ್ಲಿ Test ಗಳಾದವು. ಅಲ್ಲಿ ನನ್ನ ರೋಗ ಕಂಡು ಹಿಡಿಯಲಾಯಿತು. ನನ್ನ ಪಿತ್ತಕೋಶ ಮತ್ತು ಅಪೆಂಡಿಕ್ಸ್ ಎರಡರ ಆಪರೇಷನ್ ಮಾಡಲು ಸಲಹೆ ನೀಡಿದರು. ಅದರಿಂದ ನನಗೆ ಗಾಬರಿ ಉಂಟಾಯಿತು ಮತ್ತು ಒಂದು ದಿನ ಆಸ್ಪತ್ರೆಗೆ ತಿಳಿಸದೇ ಖಾದಿಯಾನ್ ಬಂದುಬಿಟ್ಟೆ. ಮತ್ತು ಖಲಿಫತುಲ್ ಮಸೀಹರ ಸೇವೆಯಲ್ಲಿ ಹಾಜರಾಗಿ ಎಲ್ಲ ಸ್ತಿತಿ ಹೇಳಿದೆನು. ಹುಝೂರ್ ಗಮನವಹಿಸಿ ಎಲ್ಲವನ್ನು ಕೇಳಿದ ನಂತರ ಹೇಳಿದರು. ನಿಮಗೆ ಅಪೆಂಡಿಕ್ಸ್ ಇಲ್ಲ, ಪಿತ್ತಕೋಶದಲ್ಲಿ ಅವಶ್ಯ ತೊಂದರೆ ಇದೆ. ನೀವು ಚಿಕಿತ್ಸೆ ಮಾಡಿಕೊಳ್ಳಿ. ನಾನು ದುಆ ಮಡುವೆನು. ಇನ್‌ಶಾಅಲ್ಲಾಹ್ ಸ್ವಷ್ಟರಾಗುವಿರಿ. ಅನಂತರ ನನಗೆ ವಿಶ್ವಾಸ ಬಂತು. ನಾನು ಆರೋಗ್ಯ ಪಡೆಯುವೆನು ಎಂದು. ಅಂದ ಹಾಗೆ ನಾನು ತನ್ನ ಕೆಲಸಕ್ಕೆ ಮರಳಿ ಬಂದೆ ಮತ್ತು ಮುಲ್ತಾನಿನ ವೈದ್ಯರೊಬ್ಬರಿಂದ ಸಾಧಾರಣ ರೀತಿಯ ಔಷಧಿ ಪಡೆದು ಬಳಸಲು ಪ್ರಾರಂಭಿಸಿದ್ದೆ. ಮೂರು ನಾಲ್ಕು ತಿಂಗಳ ನಂತರ ರೋಗವು ಹೆಸರಿಲ್ಲದಂತೆ ಹೊರಟುಹೋಯಿತು. ಅದಾಗ್ಯೂ ಅದರ ಮುಂಚೆ ಸುಮಾರು ಎರಡು ವರ್ಷ ಯುನಾನಿ ಮತ್ತು ಇಂಗ್ಲೀಷ್ ಔಷಧಿಗಳನ್ನು ಉಪಯೋಗಿಸಿದೆ. ಅಂತೂ ಇದು ಕೇವಲ ಹುಜೂರ್(ಅ) ಅವರ ಪವಾಡ ಸದೃಶ್ಯ ಪ್ರಾರ್ಥನೆಯ ಫಲವೇ ಆಗಿತ್ತು. ಅದು ನನಗೆ ಸಾವಿನ ದವಡೆಯಿಂದ ತೆಗೆದು ಹೊಸ ಜೀವನ ನೀಡಿತು. ಅನಂತರ ಅನುಗ್ರಹದಿಂದ ಇವತ್ತಿಗೂ ನನಗೆ ಹೊಟ್ಟೆ ನೋವು ಆಗಲಿಲ್ಲ. ಅದಾಗ್ಯೂ ನನ್ನ ಆಹಾರದ ವಿಷಯದಲ್ಲಿ ಜಾಗೃತೆ ವಹಿಸುವುದಿಲ್ಲ." (ರೋಝಾಮಿ ಅಲ್‌ಫಝುಲ್ 20 ಮಾರ್ಚ್ 1966 ಪುಟ 5).

ಲಾಲ್ ಫಝುಲ್ International ಫೆಬ್ರವರಿ 1978 ರಲ್ಲಿ ಮುಕರ್ರಮ್ ಮುಹಮ್ಮದ್ ಅಹ್ಮದ್ ಮಲಿಕ್ ಸಾಹಿಬ್ ತನ್ನ ಒಂದು ಪ್ರಬಂಧದಲ್ಲಿ ಬರೆಯುತ್ತಾರೆ. ಒಂದು ಸಂದರ್ಭದಲ್ಲಿ ಡಾಕಾದ ಮಿತ್ರರೊಬ್ಬರು ಫೈಝ್ ಆಲಂ ಸಾಹಿಬ್ ಹಝ್ರತ್ ಖಲೀಫತುಲ್ ಮಸೀಹ್ ಸಾನಿ ಅವರ ಸೇವೆಯಲ್ಲಿ ಪ್ರಾರ್ಥನೆಗೋಸ್ಕರ ಒಂದು ಕಾಗದ ಬರೆದರು. ನನ್ನ ಪತ್ನಿ ಚಿಕಿತ್ಸೆಯೇ ಇಲ್ಲದಂತಹ ಸ್ತ್ರೀರೋಗಕ್ಕೆ ತುತ್ತಾಗಿದ್ದಾಳೆ. ಎಷ್ಟೇ ಚಿಕಿತ್ಸೆ ಮಾಡಿಸಿದರು ರೋಗವು ಹೆಚ್ಚುತ್ತಲೇ ಇದೆ. ಆಕೆ ಜೀವನದಿಂದ ನಿರಾಸೆ ಹೊಂದಿದ್ದಾರೆ. ಆಗ ಖಲೀಫತುಲ್ ಮಸೀಹ್ ಸಾನಿ ಅಲ್ಲಾಹನೊಡನೆ ಪ್ರಾರ್ಥಿಸಿ ಉತ್ತರ ನೀಡಿದರು. "ಗುಣವಾಗುವುದು", ಆ ನಡುವೆ ಅವರ ಪತ್ನಿ ಸ್ವಪ್ನದಲ್ಲಿ ಹಝ್ರತ್ ಮುಸ್ಲಿಹ್ ಮೌಊದ್(ರ) ಅವರಿಗೆ ಹೀಗೆ ಹೇಳುತ್ತಿದ್ದರು. ದುಆ ಅನ್ನು ಔಷಧಿ ರೂಪದಲ್ಲಿ ಉಪಯೋಗಿಸಿ, ಅಂದ ಹಾಗೆ ಈ ಚಿಕಿತ್ಸೆಯೇ ಇಲ್ಲದಂತಹ ರೋಗವು ಶಮನವಾಯಿತು ಮತ್ತು ಸಂತಾನವು ಆಯಿತು. (ಅಲ್‌ಫಝುಲ್ ಇಂಟರ್‌ನ್ಯಾಶ್ನಲ್ 20–02–1998)

ಗೈರ್ ಮುಮ್ಕಿನ್ ಕೋ ಏ ಮುಮ್ಕಿನ್ ಮೇ ಬದಲ್ ದೇತಿಹೈ
ಅಯ್ ಮೆರೆ ಫಲ್‌ಸಫಿಯೋಂ! ಝೋರೆ ಖುದಾ ದೆಖೋತೊ

ಅಂದರೆ: ಅಸಾಧ್ಯವಾದುದನ್ನು ಸಾಧ್ಯವಾಗಿಸುವುದು ದುಆ ಮಾತ್ರವಾಗಿದೆ. ಓ ತತ್ವಜ್ಞನಿಗಳೇ ಪ್ರಾರ್ಥನೆಯ ಫಲಗಳನ್ನು ನೋಡಿರಿ. (ಕಲಾಮೆ ಮಹ್ಮೂದ್)

ನಾವು ಹಝ್ರತ್ ಖಲಿಫತುಲ್ ಮಸೀಹ್ ಸಾಲಿಸ್(ರಹ) ಅವರ ಕಾಲಾವಧಿ ನೊಡಿದರೆ ಅವರ ಪ್ರಾರ್ಥನೆ ಸ್ವೀಕಾರದ ದೃಷ್ಟಾಂತಗಳು ಸಹ ಅದ್ಭುತವಾಗಿವೆ. ಮುಕರ್ರಮ್ ಮಿಯಾ ಮುಹಮ್ಮದ್ ಅಸ್ಲಮ್ ಪತ್ತು ಬರೆಯುತ್ತಾರೆ. ನಾನು 11 ನವೆಂಬರ್ 1963 ರಂದು ಅಹ್ಮದಿಯತ್ ಸ್ವೀಕರಿಸಿದೆ. 9 ಏಪ್ರಿಲ್ 1965 ರಂದು ನನ್ನ ಮದುವೆಯಾಯಿತು. 12 ವರ್ಷದವರೆಗೆ ಸಂತಾನ ಆಗಲಿಲ್ಲ. ಎಲ್ಲ ಸಂಬಂಧಿಕರು ಅಹ್ಮದಿಯೇತರಾಗಿದ್ದರು ಅವರು ನಮ್ಮನ್ನು ವಿರೋಧ ಮಾಡುತ್ತಿದ್ದರು. ಅವರು ಹಾಗೂ ಊರಿನವರು ಸಹ ಈತ ಖಾದಿಯಾನಿ ಆದ ಕಾರಣ ಸಂತಾನದಿಂದ ವಂಚಿತನಾಗಿದ್ದಾನೆ. ಇವನು ಸಂತಾನರಹಿತನಾಗಿಯೇ ಇರುವನು. (ನವೂಝುಬಿಲ್ಲಾಹ್) ಇವೆಲ್ಲ ಅವಧಿ ನಡುವೆ ಎಲ್ಲಾ ರೀತಿಯ ಚಿಕಿತ್ಸೆ ನಡೆಸಿ ನೋಡಿದೆ. ಆದರೆ ಸಂತನ ಆಗಲಿಲ್ಲ. ಇನ್ನೊಂದೇಡೆ ನನ್ನ ಪತ್ನಿಯೂ ಸಂಬಂಧಿಕರ ತೀಕ್ಷ್ಣ ಮಾತುಗಳನ್ನು ಕೇಳಿ ನನಗೆ ದ್ವಿತೀಯ ಮದುವೆ ಮಾಡಿಸಲು ಸಿದ್ಧರಾದರು.

ಆ ನಡುವೆ ಎಲ್ಲ ಪರಿಸ್ಥಿತಿಗಳನ್ನು ವಿವರಿಸಿ ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್ ಅವರಿಗೆ ಪತ್ರ ಬರೆದು ಸಂತಾನಕ್ಕಾಗಿ ದುಆ ಮಾಡಲು ವಿನಂತಿಸಿಕೊಂಡೆ. ಹುಝೂರ್ ಆ ಪತ್ರದ ಉತ್ತರದಲ್ಲಿ ಬರೆದಿದ್ದರು. ಅಲ್ಲಾಹನು ಎಂದೂ ನಿಮ್ಮನ್ನು ವ್ಯರ್ಥಗೊಳಿಸಲಾರನು ಮತ್ತು ಅವಶ್ಯವಾಗಿ ನಿಮಗೆ ಗಂಡು ಸಂತಾನವಾಗುವುದು. ಹುಝೂರರ ಈ ಪ್ರಾರ್ಥನೆಯ ಅನುಗ್ರಹದಿಂದ ಈಗ ನನಗೆ 4 ಗಂಡು ಮಕ್ಕಳಿವೆ.

ಲೇಡಿ ಡಾಕ್ಟರ್ ಹೇಳಿದ್ದರು. ಇವಳಿಗೆ ಸಂತಾನ ಆಗಲು ಸಾಧ್ಯವೇ ಇಲ್ಲ ಎಂದು. ಆದುದರಿಂದ ಎಲ್ಲಾ ಜನರು ಇವರಿಗೆ ಹೇಗೆ ಸಂತಾನವಾಯಿತೆಂದು ಅಚ್ಚರೊಗೊಂಡಿದ್ದರು. ಅವರೆಲ್ಲರಿಗೆ ನಾನು ಇದೇ ಇತ್ತರ ನೀಡುತ್ತಿದ್ದೆ. ಇದು ಹಝ್ರತ್ ಮಸೀಹ್ ಮೌಊದ್(ಅ) ರವರ ಸತ್ಯದ ಜೀವಂತ ದೃಷ್ಟಾಂತವಾಗಿದೆ. ಅದನ್ನು ಅಲ್ಲಾಹನು ಖಲೀಫತುಲ್ ಮಸೀಹ್ ಸಲಿಸ್(ರಹ) ರವರ ಪ್ರಾರ್ಥನೆಯ ಅನುಗ್ರಹದಿಂದ ನೀಡಿರುವನು. (ಮಾಹ್ನಾಮ ಖಾಲಿದ್ ಸಯ್ಯದನಾ ನಾಸಿರ್ ನಂಬರ್, ಏಪ್ರೆಲ್–ಮೇ 1983, ಪುಟ–292–293)

ಸುಬ್ಹಾನಲ್ಲಾಹ್ ನಮ್ಮ ಪ್ರಭು ಎಷ್ಟೊಂದು ಸತ್ಯ ಭರವಸೆಗಳನ್ನು ನೀಡುವವನಾಗಿದ್ದಾನೆ. ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೇಳಿದನು. **"ವ ಖಾಲ ರಬ್ಬುಕುಂ ಉದವೂನಿ ಅಸ್‌ತಜಿಬ್ ಲಕುಂ"** ಅಂದರೆ ನಿಮ್ಮ ಪ್ರಭು ಹೇಳುವನು. ನನ್ನಲ್ಲಿ ಪ್ರಾರ್ಥಸಿರಿ. ನಾನು ನಿಮ್ಮ ಪ್ರಾರ್ಥನೆಗಳನ್ನು ಆಲಿಸುವೆನು. (ನೂರ: ಅಲ್ ಮೂಮಿನ್–61) ಇದಾಗಿದೆ. ಅಲ್ಲಾಹನ ವಾಗ್ದಾನ, ನಿಮ್ಮ ವಿಶ್ವಾಸ ಸತ್ಯವಾಗಿದ್ದರೆ ಮತ್ತು ಪರಿಪೂರ್ಣವಾಗಿದ್ದರೆ ನಿಮ್ಮ ಪ್ರಾರ್ಥನೆಗಳು ಸ್ವೀಕಾರಗೊಳ್ಳುವುದು. ಆ ಮಾತು ಒಂದೆಡೆ ಆ ಸರ್ವಶಕ್ತ ದೇವನ ಅಸ್ತಿತ್ವಕ್ಕೆ ಸಾಕ್ಷಿಯಾದರೆ ಇನ್ನೊಂದೆಡೆ ಸತ್ಯವಿಶ್ವಾಸಿಗರ ವಿಶ್ವಾಸ ವೃದ್ಧಿಗೆ ಕಾರಣವಾಗಿದೆ.

ಅದೇ ರೀತಿ ಮುಕರ್ರಮ್ ಚೌಧರಿ ಮುಹಮ್ಮದ್ ಸಮೀದ್ ಕಲೀಂ ಸಾಹಿಬ್ ದಾರೂಲ್ ಉಲೂಮ್ ಗರ್ಬಿ ರಬ್ವಾ ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್(ರ) ಅವರ ಪ್ರಾರ್ಥನೆ ಸ್ವೀಕಾರದ ಒಂದು ದೃಷ್ಟಾಂತ ಹೀಗೆ ಬರೆಯುತ್ತಾರೆ. ನನ್ನ ಸೊಸೆ ಜರ್ಮನಿಯಲ್ಲಿದ್ದಾಳೆ. ಅವಳಿಗೆ ಹೊಟ್ಟೆ ನೋವು ಆಗುತಿತ್ತು. ಅಲ್ಲಿಯ ವೈದ್ಯರು ಆಪರೇಷನ್ ಮಾಡಿಸಲು ಸಲಹೆ ನೀಡಿದ್ದರು. ನಾನು ಹುಝೂರ್ ಹಝ್ರತ್ ಖಲಿಫತುಲ್ ಮಸೀಹ್ ಸಾಲಿಸ್ ಅವರಿಗೆ ಪತ್ರ ಬರೆದೆ. ನನ್ನ ಸೊಸೆಗೆ ಆಪರೇಷನ್ ಇಲ್ಲದೇ ಸ್ವಸ್ಥರಾಗಲು ದುಆ ಮಾಡಲು ಕೋರಿದೆ. ಅವರು ಹೇಳಿದರು. ಅವರಿಗೆ ತಿಳಿಸಿರಿ. ಆಪರೆಷನ್ ಮಾಡಿಸುವುದು ಬೇಡ. ನಾನು ದುಆ ಮಾಡುವೆನು. ಅವಳಿಗೆ ಗುಣವಾಗುವುದು. ಅಂದ ಹಾಗೆಯೆ ನಾನು ಹುಝೂರರ ಈ ಪದಗಳನ್ನು ಅವಳಿಗೆ ಬರೆದು ಕಳುಹಿಸಿದೆ. ಮತ್ತು ಆಪರೇಷನ್ ಇಲ್ಲದೆಯೇ ಗುಣವಾದಳು. ಇಂದಿಗೂ ಸ್ವಸ್ಥಳಾಗಿದ್ದಾಳೆ. ಅಲ್‌ಹಮ್ದುಲಿಲ್ಲಾಹ್ (ಮಾಹ್ನಾಮ ಖಾಲಿದ್ ಸಯ್ಯದನಾ

ನಾಸಿರ್ ನಂಬರ್, ಏಪ್ರೆಲ್–ಮೇ 1983, ಪುಟ–291)

ಮತ್ತೆ ಖಿಲಾಫತ್ ಚತುರ್ಥರ ಅವಧಿಯಲ್ಲಿಯೂ ಪ್ರಾರ್ಥನೆ ಸ್ವೀಕಾರದ ಅದ್ಭುತವಾದ ದೃಶ್ಯಗಳು ಕಾಣಸಿಗುತ್ತದೆ. ಹಝ್ರತ್ ಖಲೀಫತುಲ್ ಮಸೀಹ್ ಚತುರ್ಥರ ಪ್ರಾರ್ಥನೆ ಸ್ವೀಕಾರದ ದೃಷ್ಟಾಂತಗಳಲ್ಲಿ ಒಂದೆರಡು ಕೆಳಗೆ ನಮೂದಿಸಲಾಗುತ್ತದೆ.

ಡಾ॥ ಸಯ್ಯದ್ ಬರಕಾತ್ ಅಹ್ಮದ್ ಸಾಹಿಬ್ ಇಂಡಿಯನ್ ಫಾರಿನ್ ಸರ್ವೀಸಸ್‌ನಲ್ಲಿದ್ದುಕೊಂಡು ಹಲವು ಪುಸ್ತಕಗಳನ್ನು ಬರೆದಿದ್ದಾರೆ. ಹುಜೂರ್ ಅನ್ವರ್ ಹಝ್ರತ್ ಖಲೀಫತುಲ್ ಮಸೀಹ್ ಚತುರ್ಥರವರ ಧರ್ಮದ ಹೆಸರಿನಲ್ಲಿ ರಕ್ತಪಾತ" (ಮಝ್‌ಹಬ್‌ಕೆ ನಾಮ್ ಪರ್ ಖೂನ್) ಎಂಬ ಗ್ರಂಥದ ಇಂಗ್ಲೀಷ್ ಅನುವಾದ ಮಾಡಿದ್ದರು. ಅವರಿಗೆ ಮೂತ್ರಪಿಂಡದ ಕ್ಯಾನ್ಸರ್ ಇತ್ತು. ಅಮೇರಿಕದಲ್ಲಿ 8 ಗಂಟೆಯವರಿಗೆ ಆಪರೇಷನ್ ಆದರೂ ವಿಫಲವಾಯಿತು. ವೈದ್ಯರು 4 ರಿಂದ 6 ವಾರದವರೆಗೆ ಬದುಕಬಹುದಷ್ಟೇ ಎಂದು ಹೇಳಿದರು. ಹುಝೂರ್ ಅನ್ವರ್‌ರವರ ಸೇವೆಯಲ್ಲಿ ದುಆ ಮಾಡಲು ಬೇಡಿಕೊಂಡರು. ಉತ್ತರ ಬಂತು. ದುಆಗೋಸ್ಕರ ಬರೆದ ನಿಮ್ಮ ಕರುಣಾಜನ ಸ್ಥಿತಿಯ ವಿವರ ಒಳಗೊಂಡ ಪತ್ರವು ತುಂಬ ಪ್ರಭಾವ ಬೀರಿತ್ತು. ನಿಮಗಾಗಿ ಅತ್ಯಂತ ವಿನಮ್ರವಾಗಿ ಬಿಕ್ಷುಕನಂತೆ ದುಆ ಮಾಡುವ ಭಾಗ್ಯ ದೊರೆತಿದೆ. ಮತ್ತು ದುಆ ಮಾಡುವಾಗ ಒಂದು ಸಮಯ ಹೀಗೂ ಬಂತು. ನನ್ನ ಶರೀರ ಕಂಪಿಸತೊಡಗಿತು. ನಾನು ಅಲ್ಲಾಹನ ಅನುಗ್ರಹದ ಮೇಲೆ ಭರವಸೆಯನ್ನು ಹೊಂದಿದ್ದೇನೆ. ಇದು ಸ್ವೀಕೃತಿಯ ದೃಷ್ಟಾಂತವಾಗಿತ್ತು. ಅಂದ ಹಾಗೆ ಹುಜೂರರ ದುಆ ಸ್ವೀಕೃತಿಯ ಫಲವಾಗಿ ಅಲ್ಲಾಹನ ಅನುಗ್ರಹದಿಂದ ಅವರು ನಾಲ್ಕು ವರ್ಷದ ಸಕ್ರಿಯ ಶೈಕ್ಷಣಿಕ ಮತ್ತು ಸಂಶೋಧಾನಾತ್ಮಕ ಜೀವನ ನಡೆಸಿದರು. ಅವರ ಈ ಬದುಕಿನ ಮೇಲೆ ವೈದ್ಯರು ಬೆರಗಾಗಿ ಹೋದರು.  ಅಂತೆಯೇ ಬರಕಾತ್ ಸಾಹಿಬ್ ಹೇಳುತ್ತಾರೆ. ನಮ್ಮ ಆಧ್ಯಾತ್ಮಿಕ ನೇತಾರರ ಪ್ರಾರ್ಥನೆ ಅಲ್ಲಾಹನು ಸ್ವೀಕರಿಸಿದ್ದಾನೆ ಎಂದು ಹೇಳುವಾಗ ವೈದ್ಯರು ಶಿರ ಅಲ್ಲಾಡಿಸುತ್ತ ಹೇಳುತ್ತಾರೆ. ಹೌದು ಪವಾಡ ಆಗಿದೆ. ಪವಾಡ!" (ಅಲ್‌ಫಝ್ಲ್ 9–12–2000, ಅಲ್‌ಫಝ್ಲ್ 27–12–2003)

ಅದೇ ರೀತಿ ಇನ್ನೊಂದು ವಿಶ್ವಾಸವರ್ಧಕ ಘಟನೆ ಹೀಗಿದೆ. ಇಂದಿನಿಂದ ಡಾ॥ ಫಾತಿಮಾ ಝೂಹರ ಬರೆಯುತ್ತಾರೆ. ನನ್ನ ಏಕೈಕ ಪುತ್ರ ಕಾಲು ಬಾಧೆಯಿಂದ ಅಸ್ವಸ್ಥನಾದನು ಮತ್ತು ದಿನೇ ದಿನೇ ಸ್ಥಿತಿ ಹದಗೆಡುತ್ತ ಹೋಯಿತು. ಎಲ್ಲಿಯ ತನಕವೆಂದರೆ ಅವನು ಕುಂಟುತ್ತ ನಡೆಯಲು ಪ್ರಾರಂಭಿಸಿದ. ತಜ್ಞರಿಗೆ ತೋರಿಸಿದೆವು. ಆದರೆ ಯಾರೂ ಸಹ ಏನೆಂದೂ ಕಂಡು ಹಿಡಿಯಲಿಲ್ಲ.  ಎಲ್ಲರೂ ನಿರಾಶಗೊಂಡರು. ಅವರು ಹೇಳುತ್ತಾರೆ. ತಕ್ಷಣ ನನ್ನ ಗಮನ ದುಆ ಕಡೆ ಹೋಯಿತು. ಈ ಯೋಚನೆ ಬರುತ್ತಲೇ ನಾನು ದುಆ ಮಾಡುತ್ತಿದ್ದೆ. ಮತ್ತು ಹುಝೂರರಿಗೆ ಸಹ ದುಆ ಮಾಡಲು ಪತ್ರ ಬರೆದೆ. ಅಲ್ಲಾಹನ ಅನುಗ್ರಹದಿಂದ ಯಾರನ್ನು ವೈದ್ಯರು ನಿರಾಶಗೊಳಿಸಿದ್ದರೋ. ಅವನಿಗೆ ಆರೋಗ್ಯ ಬರತೊಡಗಿತು. ವೈದ್ಯರಿಗೆ ಏನು ರೋಗವೆಂದು ತಿಳಿಯುತ್ತಿರಲಿಲ್ಲ. ಹಾಗಾಗಿ ಚಿಕಿತ್ಸೆ ಮಾಡಲು ಆಗುತ್ತಿರಲಿಲ್ಲ. ಆದರೆ ಈಗ ಚಿಕಿತ್ಸೆಯಿಲ್ಲದೇ ನೋಡು ನೋಡುತ್ತಲೇ ಸ್ಥಿತಿ ಸುಧಾರಿಸತೊಡಗಿತು. ಅಲ್ಲಾಹನ ಅನುಗ್ರಹದಿಂದ ಈಗ ತುಂಬ ಸ್ವಸ್ತನಾಗಿದ್ದೇನೆ. (ಖುತ್‌ಬಾತೆ ತಾಹಿರ್, ಸಂಪುಟ–5, ಪುಟ–526, ಖುತ್‌ಬ ಜುಮುಅ 25–07–1986)

ಪ್ರಾರ್ಥನೆ ಸ್ವೀಕಾರ ಕುರಿತು ಹಝ್ರತ್ ಖಲೀಫತುಲ್ ಮಸೀಹ್ ಚತುರ್ಥರು ಹೇಳುತ್ತಾರೆ. ಇಂದು ಈ ಕ್ಷೇತ್ರ ಖಾಲಿಯಿದೆ. ಶತ ಕೋಟ್ಯಾಂತರ ಜನರು ಅಲ್ಲಾಹನಿಂದ ಬೆನ್ನು ತಿರುಗಿ ಮತ್ತು ಲೌಕಿಕ ಸಂತೋಷಗಳನ್ನು ಮುಂದಿಟ್ಟು ನಡೆಯುತ್ತಿದ್ದಾರೆ. ಅಲ್ಲಾಹನ ಮೇಲೆ ವಿಶ್ವಾಸವಿಟ್ಟು ಕರೆಯುವವರು ಯಾರಿದ್ದಾರೆ ಈ ಕ್ಷೇತ್ರದಲ್ಲಿ. ಆದುದರಿಂದ ಅಲ್ಲಾಹನನ್ನು ಮನಃ ಪೂರ್ವಕವಾಗಿ ಆತ್ಮೀಯವಾಗಿ ಸ್ಮರಿಸುವವರ ಕೂಗು ಅವನ ಮೇಲೆ ಪರಿಪೂರ್ಣ ವಿಶ್ವಾಸ ಹೊಂದಿರುವ ಕೂಗು ಅವರಿಗೆ ಶುಭವಾರ್ತೆ ನೀಡುತ್ತೇನೆ. ಅವರ ಕೂಗು ಅವಶ್ಯವಾಗಿ ಸ್ವೀಕಾರವಾಗುವುದು. ನಿಮ್ಮ ದುರ್ಬಲತೆಗಳಿದ್ದರೂ ಅಲ್ಲಾಹನು ನಿಮ್ಮಂದ ಪ್ರೀತಿಯ ವ್ಯವಹಾರ ಮಾಡುವನು. ಆದುದರಿಂದ ಈ ಕಾರ್ಯ ಕಠಿಣವಲ್ಲ. ಎಲ್ಲ ಕಡೆ ಪ್ರತಿಯೊಬ್ಬ ಅಹ್ಮದಿಗೆ ಆಧ್ಯಾತ್ಮಿಕ ಶಕ್ತಿಗಳನ್ನು ಬಲಗೊಳಿಸಲು, ಆಧ್ಮಾತ್ಮಿಕ ಶಕ್ತಿಗಳಲ್ಲಿ ಹೊಳಪು ತರಲು ಯಾವ ದೊಡ್ಡವರ ಅಗತ್ಯವಿಲ್ಲ. ನನ್ನ ಇಡೀ ಜೀವನದ ಅನುಭವವಾಗಿದೆ.  ಪ್ರೀತಿ, ಆತ್ಮೀಯತೆ, ನೋವಿನಿಂದ ತನ್ನ ಒಡೆಯನನ್ನು (ರಬ್) ಕರೆದು ನೋಡಿ, ನಿಮ್ಮನ್ನು ಪ್ರೀತಿಯಿಂದ, ಹೆಚ್ಚಿನ ಪ್ರೀತಿಯಿಂದ ಉತ್ತರ ನೀಡುವನು. ಇದು ಹಲವು ಸಲ ಅನುಭವಿಸಿದ ಮಾತಾಗಿದೆ. ಇದರಲ್ಲಿ ಕಠಿಣತೆಯೇನಿದೆ. ಎಂತಹ ಕಠಿಣ ಕಷ್ಟಗಳ ಕಾಲದಿಂದ ನಡೆಯಬೇಕಾದರೂ ಎಲ್ಲ ಕಷ್ಟ ಕಠಿಣತೆಯ ಪರಿಹಾರ ಅವನಲ್ಲಿದೆ. ಎಷ್ಟೆಲ್ಲ ಲೋಕದ ಕಷ್ಟಗಳು ಬಾಯಿ ತೆರೆದು ಮುಂಬರಲಿ, ಕಷ್ಟಗಳ ಸಮೂಹವೇ ಸುತ್ತುವರಿಯಲಿ ಅದೆಲ್ಲರ ಒಂದೇ ಉತ್ತರವಾಗಿದೆ. ಆ ಉತ್ತರ ಪವಿತ್ರ ಖುರ್‌ಆನ್ ಹೀಗೆ ವಿವರಿಸುತ್ತದೆ. ಅಮ್ಮ್ಯಂ ಯುಜೀಬುಲ್ ಮುಝ್‌ತರ್‍ರ ಇಝಾ ದಆಹು ವಯಕ್‌ಶಿಫುಸ್ಸೂಇ ವ ಯಜ್‌ಅಲಕುಮ್ ಖುಲಫಾಅಲ್ ಅರ್‌ಝಿ, ಇಲಾಹುಮ್ಮಅಲ್ಲಾಹಿ, ಖಲೀಲಮ್ಮಾ ತಝಕ್ಕರೂನ್(ಅನ್ನಮ್ಲ್–63)    (ಖುತುಬಾತೆ ತಾಹಿರ್ ಸಂಪುಟ 5, ಪುಟ 529–530)

ಈಗ ನಾನು ಪ್ರಸಕ್ತ ಇಮಾಮರಾದ ಹಝ್‌ರತ್ ಅಖದಸ್ ಮಿರ್ಝಾ ಮಸ್ರೂರ್ ಅಹ್ಮದ್ ಖಲಿಫತುಲ್ ಮಸೀಹ್ ಅಲ್‌ಖಾಯಿಸ್ (ಅಬಿಅ) ರವರ ಪ್ರಾರ್ಥನೆ ಸ್ವೀಕೃತಿ ದೃಷ್ಟಾಂತಗಳನ್ನು ಮಂಡಿಸುವೆನು. ಅದು ಪ್ರಸಕ್ತ ಕಾಲದಲ್ಲಿ ಜಾಗತಿಕ ಜಮಾಅತ್ ಅಹ್ಮದಿಯಾದ ಜನರು ಸ್ವಯಂ ಸಾಕ್ಷಿಯಾಗಿದ್ದಾರೆ.

ಜಲ್ಸ ಸಾಲಾನ ಜರ್ಮನಿ 2015 ರಲ್ಲಿ ಬಲ್ಗೇರಿಯಾದ ಓರ್ವ ನಿಷ್ಠಾವಂತ ನೌಮುಬಾಯಿನ್ ಅಹ್ಮದಿ ಮಿತ್ರರೊಬ್ಬ Etem ಸಾಹಿಬ್ ತಮ್ಮ ಕುಟುಂಬ ಸಮೇತ ಭಾಗವಹಿಸಿದ್ದರು. ಅವರು ಕೆಲ ವರ್ಷದ ಹಿಂದೆ ಅಷ್ಟೇ ಕ್ರೈಸ್ತ ಮತದಿಂದ ಇಸ್ಲಾಮ್ ಸ್ವೀಕರಿಸಿದರು. ನನಗೆ ಮೂರು ಪುತ್ರಿಯರಿದ್ದಾರೆ. ನನಗೆ ಗಂಡು ಮಗು ಒಂದಾದರೆ ನಾನೂ ಅಹ್ಮದಿ ಆಗುವೆನು. ಅವರು ಹಝ್‌ರತ್ ಖಲೀಫತುಲ್ ಮಸೀಹ್ ಖಾಮಿಸ್ (ಅಬಿಅ) ರವರ ಸೇವೆಯಲ್ಲಿ ಪತ್ರ ಬರೆದು ದುಆ ಮಾಡಲು ಹೇಳಿದರು.  ಮುಂದಿನ ವರ್ಷ ಮತ್ತೊಮ್ಮೆ ಜಲ್ಸಕ್ಕೆ ಬರುವಾಗ ಅವರಿಗೆ 7 ತಿಂಗಳಿನ ಗರ್ಭವಿತ್ತು. ಭೇಟಿಯಾದ ಸಮಯದಲ್ಲಿ ಅವರು ಮಗುವಿನ ನಾಮಕರಣ ಮಾಡಲು ಬೇಡಿಕೊಂಡಾಗ ಹುಝೂರ್ ಕೇವಲ ಹುಡುಗನ ಹೆಸರು– "ಜಾಬಿದ್" ಎಂದು ಹೆಸರಿಸಿದರು.

ಜಲ್ಸದಿಂದ ಹಿಂತಿರುಗಿ ಅವರು ಮುಬಲ್ಲಿಗ್ ಸಾಹಿಬರಿಗೆ ಹೇಳಿದರು. "ವೈದ್ಯರು "ಹೆಣ್ಣು ಮಗು" ಎಂದಿದ್ದಾರೆ.  ಆದುದರಿಂದ ಹುಝೂರರಿಗೆ ಮತ್ತೊಮ್ಮೆ ಪತ್ರ ಬರೆದು ಹುಡುಗಿಯ ಹೆಸರು ಹೇಳಲು ತಿಳಿಸಿ. ಆಗ ಮುಬಲ್ಲಿಗ್ ಸಾಹಿಬರು ಹೇಳಿದರು. ನೀವು ಹೇಳಿದ್ದಿರಲ್ಲ. ಗಂಡು ಮಗು ಆದರೆ ಅಹ್ಮದಿ ಆಗುತ್ತೇನೆ ಅಂತ ಅದಕ್ಕೆ ಹುಝೂರ್ ಸಹ ಕೇವಲ ಹುಡುಗನ ಹೆಸರು ಬರೆದಿದ್ದಾರೆ. ಆದುದರಿಂದ ಇನ್‌ಶ್‌ಅಲ್ಲಾಹ್ ಗಂಡು ಮಗುವೇ ಆಗುವುದು. ವೈದ್ಯರು ಏನೇ ಹೇಳಲಿ, ಅವರು ಏನೇ ತೋರಿಸಲಿ, ಆದರೆ ಈಗ ನಿಮಗೆ ಗಂಡು ಮಗುವೇ ಆಗುವುದು. ಏಕೆಂದರೆ ಖಲೀಫತುಲ್ ಮಸೀಹರು ಗಂಡು ಮಗುವಿನ ಹೆಸರು ಇಟ್ಟಿದ್ದಾರೆ. ಇದನ್ನು ಕೇಳಿ ಹೇಳಿದರು. ನಾನು ಮೊದಲೇ ಅಹ್ಮದಿಯಾಗಿದ್ದೇನೆ. ಅಂದ ಹಾಗೆ ಹೆರಿಗೆಯಾಯಿತು. ಅಲ್ಲಾಹನು ಗಂಡು ಮಗುವೇ ದಯಪಾಲಿಸಿದನು.

ಜಲ್ಸ ಸಂದರ್ಭದಲ್ಲಿ ಆ ಮಗುವಿನ ಜೊತೆಯಲ್ಲಿ ತಂದಿದ್ದರು ಜನರಿಗೆ ತೋರಿಸಿದ್ದಳು. ಇದು ನೋಡಿ ಖಲೀಫರ ಪ್ರಾರ್ಥನೆ ಸ್ವೀಕೃತಿಯ ದೃಷ್ಟಾಂತ. (ಅಲ್‌ಫಝ್ಲ್ 25–09–2015, ಪುಟ–15)

ಅದೇ ರೀತಿ ಹುಝೂರ್(ಅಬಿಅ) ರವರ ಪ್ರಾರ್ಥನೆ ಸ್ವೀಕೃತಿಯ ಇನ್ನೊಂದು ವಿಶ್ವಾಸವರ್ಧಕ ಹಾಗೂ ಅತ್ಯಂತ ರೋಚಕ ಘಟನೆ ಓದಲು ಹಾಗೆ ಕೇಳಲು ಅರ್ಹವಾಗಿದೆ. 2004 ರಲ್ಲಿ ಆಫ್ರಿಕ ಪ್ರವಾಸದ ನಡುವೆ ಹಝ್‌ರತ್ ಖಲಿಫತುಲ್ ಮಸೀಹ್ ಖಾಮಿಸ್(ಅಬಿಅ) ನಾಯ್‌ಜೇರಿಯಾದಿಂದ ಬನಿಯನ್ ತಲುಪಿ ಮಿಷನ್‌ಹೌಸ್‌ಗೆ ಆಗಮಿಸಿದಾಗ ಅಸರ್ ನಮಾಝಿನ ಸಮಯವಾಗಿತ್ತು. ಜೋರಾಗಿ ಮಳೆ ಸುರಿಯುತ್ತಿತ್ತು ನಮಾಝಿಗೋಸ್ಕರ ಅಂಗಳದಲ್ಲಿ ಮಾರ್ಕಿ ಹಾಕಲಾಗಿತ್ತು. ಅದು ನಾಲ್ಕೂ ಕಡೆಯಿಂದ ತೆರೆದಿತ್ತು. ಮಳೆಯ ಕಾರಣದಿಂದ ಅಲ್ಲಿ ನಮಾಝ್ ಮಾಡುವುದು ಕಷ್ಟವಾಗಿತ್ತು ಅಷ್ಟೇ. ಅಲ್ಲಿ ನಿಲ್ಲುವುದು ಸಹ ಕಷ್ಟವಿತ್ತು. ಹುಝೂರ್ ಹೊರಗೆ ಬಂದರು ಮತ್ತು ನಮಾಝ್ ಬಗ್ಗೆ ಪ್ರಸ್ತಾಪಿಸಿದರು. ಅಮೀರ್ ಸಾಹಿಬ್ ಹೇಳಿದರು. ಈಗ ಜೋರಾಗಿ ಮಳೆ ಬರುತ್ತಿದೆ. ಹೊರಗೆ ಮಾರ್ಕಿ ಹಾಕಲಾಗಿದೆ. ಆದುದರಿಂದ ತೊಂದರೆಯಾಗುತ್ತಿದೆ.

ಹುಝೂರ್ ಆಕಾಶದತ್ತ ದೃಷ್ಟಿ ಹಾರಿಸಿ ಹೇಳಿದರು. "ಹತ್ತು ನಿಮಿಷದ ನಂತರ ನಮಾಝ್ ಮಾಡೋಣ," ಅನಂತರ ಹುಝೂರ್ ಒಳಗೆ ಹೋದರು ಎರಡು ಮೂರು" ನಿಮಿಷ ಅಷ್ಟೇ ಆಗಿತ್ತು. ಮಳೆ ನಿಂತು ಹೋಯಿತು. ಮತ್ತು ಆಕಾಶ ಸ್ತಬ್ಧಗೊಂಡಿತು. ನೋಡು ನೊಡುತ್ತಲೇ ಬಿಸಿಲು ಬಂತು. ಅದೇ ಮಾರ್ಕಿನಲ್ಲಿ ನಮಾಝಿನ ವ್ಯವಸ್ಥೆ ಮಾಡಲಾಯಿತು. ಸ್ಥಳಿಯ ಬಾಂಧವರು ಈ ದೃಷ್ಟಾಂತ ನೋಡಿ ತುಂಬ ಅಚ್ಚರಿಗೊಂಡರು. ಇಲ್ಲಿ ಮಳೆ ಪ್ರಾರಂಭವಾದರೆ ಗಂಟೆಗಟ್ಟಲೆ ಬಿಡುವುದಿಲ್ಲ.  ಹುಝೂರ್ ಹತ್ತು ನಿಮಿಷ ಅಂದರು. ಮೂರೇ ನಿಮಿಷದಲ್ಲಿ ಕೊನೆಗೊಂಡಿತು. ಕೇವಲ ಕೊನೆಗೊಂಡಿದ್ದಲ್ಲ ಬದಲು ಮೋಡಗಳು ಮಾಯವಾದವು. (ಅಲ್‌ಫಝ್ಲ್ International 25 ಸೆಪ್ಟೆಂಬರ್ 2015, ಪುಟ 14)

ಈ ಕೆಲವು ದೃಷ್ಟಾಂತಗಳನ್ನು ನಮೂನೆ ರೂಪದಲ್ಲಿ ಪ್ರಸ್ತುತಪಡಿಸಿದ್ದೇನೆ. ಅದರಿಂದ ಅಲ್ಲಾಹನ ಪ್ರಾರ್ಥನೆ ಸ್ವೀಕೃತಿಯ ಗುಣ ಚೆನ್ನಾಗಿ ಅರಿಯಬಹುದಾಗಿದೆ ಮತ್ತು ದೃಢ ವಿಶ್ವಾಸ ಹೊಂದಬಹುದಾಗಿದೆ. ಮತ್ತು ಅವನ ಅಸ್ತಿತ್ವದ ಮೇಲೆ ಸಂಪೂರ್ಣ ವಿಶ್ವಾಸವೂ ಸಹ. ಅಲ್ಲಾಹನ ಪ್ರಾರ್ಥನೆ ಸ್ವೀಕೃತಿಯ ಈ ದೃಶ್ಯ ಎಲ್ಲ ಕಾಲದಲ್ಲೂ ಎಲ್ಲ ದೇಶಗಳಲ್ಲೂ, ಎಲ್ಲ ಕಡೆಯೂ ದಯಪಾಲಿಸಿದ್ದಾನೆ. ಮತ್ತು ಮುಂದೆಯೂ ದಯಪಾಲಿಸುವನು. ಅದು ಅವನ ವಾಗ್ದಾನವಾಗಿದೆ ಮತ್ತು ಅವನ ಅಸ್ತಿತ್ವದ ಮಹೋನ್ನತವಾದ ಸಾಕ್ಷಿಯಾಗಿದೆ. ಅದನ್ನು ಇಸ್ಲಾಮ್ ಧರ್ಮ ಪ್ರಸ್ತುತಪಡಿಸಿದೆ ಮತ್ತು ಅದುವೇ ಅಲ್ಲಾಹನ ಅನುಗ್ರಹದಿಂದ ಅಹ್ಮದಿಯಾ ಜಮಾಅತ್ ಒಂದು ಶತಮಾನಕ್ಕಿಂತ ಹೆಚ್ಚಿನ ಅವಧಿಯಲ್ಲಿ ಲೋಕದ ಮುಂದೆ ಪ್ರಸ್ತುತಪಡಿಸುತ್ತ ಬಂದಿದೆ. ನಮ್ಮ ಪ್ರಬು ಪ್ರಾರ್ಥನೆಗಳನ್ನು ಆಲಿಸುವವನಾಗಿದ್ದಾನೆ ಮತ್ತು ಉತ್ತರ ನೀಡುವವನಾಗಿದ್ದಾನೆ. ಅದರ ಸಿಹಿ ಫಲಗಳು ನೀಡುವವನಾಗಿದ್ದಾನೆ.

ಕೊನೆಯಲ್ಲಿ ಹಝ್‌ರತ್ ಅಖದಸ್ ಮಸೀಹ್ ಮೌಊದ್(ಅ) ರವರ ಒಂದು ಅಧ್ಯಾಪನೆ ಪ್ರಸ್ತುತಪಡಿಸಿ ತನ್ನ ಈ ಪ್ರಬಂಧವನ್ನು ಮುಗಿಸುತ್ತೇನೆ. ಹುಝೂರ್(ಅ)  ಹೇಳುತ್ತಾರೆ.

ನಾನು ಸತ್ಯವಾಗಿ ಹೇಳುತ್ತೇನೆ. ಅಲ್ಲಾಹನ ಮುಂದೆ ನಮ್ಮ ಕೂಗು ನೋವಿನಿಂದ ಕೂಡಿದ್ದಾದರೆ ಅದು ಅವನ ಅನುಗ್ರಹ ಔದಾರ್ಯವನ್ನು ಉತ್ತೇಜಿಸುತ್ತದೆ ಮತ್ತು ಅದನ್ನು ಎಳೆದು ತರುತ್ತದೆ. ನಾನು ನನ್ನ ಅನುಭವದ ಮೇರೆಗೆ ಹೇಳುತ್ತೇನೆ. ಅಲ್ಲಾಹನ ಔದಾರ್ಯ ಮತ್ತು ಅನುಗ್ರಹ ಪ್ರಾರ್ಥನೆ ರೂಪದಲ್ಲಿ ಬರುತ್ತದೆ. ನಾನು ನನ್ನೆಡೆ ಬರುವುದೆಂದು ಭಾವಿಸಿದ್ದೇನೆ ಅನ್ನುವ ಬದಲು ನಾನು ಹೇಳುವೆನು. ಕಂಡಿತವಾಗಿ ಕಂಡಿದ್ದೇನೆ. ಹೌದು. ಇಂದಿನ ಕಾಲದ ಅಂಧಕಾರದಲ್ಲಿರುವ ತತ್ವಜ್ಞಾನಿಗಳು ಆ ರೀತಿ ಭಾವಿಸದಿದ್ದರೆ ಭಾವಿಸದಿರಲಿ ಅಥವಾ ನೋಡದಿರಲಿ, ಅದರೆ ಅದರಿಂದ ಈ ಸತ್ಯ ಲೋಕದಿಂದ ಉತ್ತರಿಸಲ್ಪಡುವುದಿಲ್ಲ. ವಿಶೇಷವಾಗಿ ಈ ಪರಿಸ್ಥಿತಿಯಲ್ಲಿ ಪ್ರಾರ್ಥನೆ ಸ್ವೀಕಾರದ ದೃಷ್ಟಾಂತದ ಸಾಕ್ಷಿ ಕೊಡಲು ನಾನು ಯಾವಾಗಲು ಸಿದ್ದನಿದ್ದೇನೆ.

(ಮಲ್ಫೂಝಾತ್ ಸಂಪುಟ 1, ಪುಟ 128, ಮುದ್ರಣ 2003)

******************

# ದೇವಾಸ್ತಿತ್ವ ಕುರಿತು ಬೌದ್ಧಿಕ ಸಾಕ್ಷ್ಯಗಳು:

**ಮುಹಮ್ಮದ್ ಶರೀಫ್ ಕೌಸರ್, ಮುರಬ್ಬಿ ಸಿಲ್‌ಸಿಲಾ, ಜಾಮಿಯ ಅಹ್ಮದಿಯಾ ಖಾದಿಯಾನ್**

ಪ್ರಸಕ್ತ ಕಾಲದಲ್ಲಿ ಲೋಕದ ಬಹು ದೊಡ್ಡ ಸಂಖ್ಯೆ ಧರ್ಮ ನಿರಪೇಕ್ಷೆ ಹಾಗೂ ನಾಸ್ತಿಕತೆಯ ಕಡೆ ವಾಲುತ್ತಿದ್ದಾರೆ. ಅವರ ಭಾವನೆ ಏನೆಂದರೆ ಈ ಲೋಕವು ತನ್ನಷ್ಟಕ್ಕೆ ತಾನೇ ಸ್ವಯಂ ಅಸ್ತಿತ್ವಕ್ಕೆ ಬಂದಿದೆ. ಇದರ ಯಾರು ಸೃಷ್ಟಿಕರ್ತನೂ ಇಲ್ಲ. ಮತ್ತು ಈ ಸೃಷ್ಟಿ ಯಾರ ಸೃಷ್ಟಿಯೂ ಅಲ್ಲ. ಅವರು ದೇವಾಸ್ತಿತ್ವ ಮತ್ತು ವಿಶ್ವಾಸವನ್ನು ದಿಕ್ಕರಿಸುತ್ತಾರೆ. ಅದರ ಬಹು ದೊಡ್ಡ ಕಾರಣವೆಂದರೆ ಅವರ ಪ್ರಶ್ನೆಗಳಿಗೆ ಅನುಮಾನಗಳಿಗೆ ತೃಪ್ತಿಕರ ಉತ್ತರ ನೀಡುವವರು ಯಾರೂ ಸಿಗುವುದಿಲ್ಲ. ಅಂತೆಯೇ ಇದು ಕೂಡ ಸತ್ಯವಾಗಿ ಒಂದು ವೇಳೆ ಹಝ್ರತ್ ಮಸೀಹ್ ಮೌಊದ್(ಅ) ಆಗಮಿಸುತ್ತಿರಲಿಲ್ಲವಾಗಿದ್ದರೆ ಬಹುಶಃ ಯಾರ ಹೃದಯದಲ್ಲೂ ಅಲ್ಲಾಹನ ನಂಬಿಕೆ ಬಾಕಿ ಉಳಿಯುತ್ತಿರಲಿಲ್ಲ. ಇದು ಅಲ್ಲಾಹನ ಅಪರಿಮಿತ ಕರುಣೆಯಾಗಿದೆ. ಅವನು ಹಝ್ರತ್ ಮಸೀಹ್ ಮೌಊದ್(ಅ) ರನ್ನು ಪವಿತ್ರ ಖುರ್‌ಆನ್‌ನ ದಿವ್ಯಜ್ಞಾನ ನೀಡಿದನು. ಅದರ ಫಲವಾಗಿ ಅವರು ನಾಸ್ತಿಕರಿಗೆ ಎಲ್ಲ ಪ್ರಶ್ನೆಗಳ ಸಾಕ್ಷ್ಯ ಸಹಿತ ಉತ್ತರ ನೀಡಿದರು. ಎಲ್ಲ ಅನುಮಾನಗಳನ್ನು ದೂರ ಮಾಡಿದರು. ಇದು ಸಹ ಅಲ್ಲಾಹನ ಉಪಕಾರವಾಗಿದೆ. ಅವರ ಗ್ರಂಥಗಳ ಅಧ್ಯಯನದಿಂದ ಹಲವು ಸಜ್ಜನರು ನಾಸ್ತಿಕತೆಯಿಂದ ಧರ್ಮ ನಿರಪೇಕ್ಷತೆಯಿಂದ ಹೊರ ಬಂದು ನಿಜವಾದ ದೇವನ ಜ್ಞಾನ ಪಡೆದರು.

ಹಝ್ರತ್ ಮಿಯಾ ಮುಹಮ್ಮದ್ ದೀನ್ ಪಟ್ವಾರಿ(ರ) ತಮ್ಮ ಘಟನೆ ಬರೆಯುತ್ತಾರೆ. ಆರ್ಯ, ಬ್ರಹ್ಮ, ನಾಸ್ತಿಕರ ಲೆಕ್ಚರುಗಳ ದುಷ್ಪರಿಣಾಮಗಳಿಂದ ನಾನು ಮತ್ತು ನನ್ನಂತೆ ಹಲವರು ನಾಶವಾದರು. ಈ ದುಷ್ಟಭಾವದಿಂದ ಬೇಸತ್ತು. ಅರ್ಥವಿಲ್ಲದ ಬದುಕು ಬದುಕುತ್ತಿದ್ದೆ. ಬರಾಹೀನ್ ಅಹ್ಮದಿಯಾ ಓದುತ್ತ ಓದುತ್ತ ದೇವನ ಅಸ್ತಿತ್ವದ ಸಾಕ್ಷ್ಯಗಳನ್ನು ಓದುತ್ತ 90ರ ಪುಟ ಟಿಪ್ಪಣಿ ಸಂಖ್ಯೆ 1, ಮತ್ತು ಪುಟ 149 ರ ಟಿಪ್ಪಣಿ ಸಂಖ್ಯೆ 11ರ ಮೇಲೆ ತಲುಪಿದಾಗ ತಕ್ಷಣದಿಂದ ನನ್ನ ನಾಸ್ತಿಕತೆ ಮಾಯವಾಯಿತು. ಮತ್ತು ನನ್ನ ಕಣ್ಣುಗಳು ಮಲಗಿದವನು ನಿದ್ರೆಯಿಂದ ಎಚ್ಚೆತ್ತುಕೊಳ್ಳುವಂತೆ ಅಥವಾ ಮರಣ ಹೊಂದುವವನು ಜೀವಂತಗೊಂಡಂತೆ ತೆರೆದುಕೊಂಡವು." (ಅಖ್ಬಾರ್ ಅಲ್‌ಹಕಮ್ 14 ಅಕ್ಟೋಬರ್ 1938)

ಇದು ಹಝ್ರತ್ ಮಸೀಹ್ ಮೌಊದ್(ಅ) ರವರ ಗ್ರಂಥದ ಚಮತ್ಕಾರವಾಗಿದೆ. ಅದರಿಂದ ಆಧ್ಯಾತ್ಮಿಕ ಹಾಗೂ ಧಾರ್ಮಿಕತೆಯ ಶವಗಳು ಪುನರ್ಜನ್ಮ ಪಡೆಯುತ್ತವೆ. ಇದು ಆ ಮೃತ ಆಧ್ಯಾತ್ಮಿಕ ಜ್ಞಾನವಿಲ್ಲದವರನ್ನು ಸಹ ಸುಜ್ಞಾನಗಳ ಪ್ರಭಾವ ಬೀರುವಂತೆ ಮಾಡುವ ಔಷಧಿ ಆಗಿದೆ. ಆದುದರಿಂದ ಜಮಾಅತ್ ಬಾಂಧವರಿಗೆ ಹಝ್ರತ್ ಮಸೀಹ್ ಮೌಊದ್(ಅ) ರವರ ರೂಹಾನಿ ಖಝಾಇನ್ ಸ್ವಯಂ ಅಧ್ಯಯನ ಮಾಡಬೇಕು ಮತ್ತು ನಾಸ್ತಿಕತೆಯ ರೋಗ ಹೊಂದಿದವರಿಗೆ ಶಮನ ನೀಡಲು ಈ ಗ್ರಂಥಗಳನ್ನು ಅಧ್ಯಯನ ಮಾಡಲು ನೀಡಬೇಕಾಗಿದೆ.

ಈ ಸಂಕ್ಷಿಪ್ತ ಪೀಠಿಕೆಯ ನಂತರ ನಾನು ಹಝ್ರತ್ ಮಸೀಹ್ ಮೌಊದ್(ಅ) ಮತ್ತು ಖಲೀಫರುಗಳ ಶಿಕ್ಷಣವನ್ನು ಪ್ರಸ್ತುತಪಡಿಸುವೆನು. ಅದರಲ್ಲಿ ಅಲ್ಲಾಹನ ಅಸ್ತಿತ್ವಕ್ಕೆ ಬೇಕಾದ ಬೌದ್ಧಿಕ ಸಾಕ್ಷ್ಯಗಳನ್ನು ಪ್ರಸ್ತುತಪಡಿಸಲಾಗಿದೆ. ಈ ಸಾಕ್ಷ್ಯಗಳನ್ನು ಯಾವೊದೇ ಅವಿಶ್ವಾಸಿಯು ಒಳ್ಳೆಯ ಮನಸ್ಸಿನಿಂದ ಗಮನ ವಹಿಸಿ ಓದಿದರೆ ಖಂಡಿತವಾಗಿಯೂ ದೇವಾಸ್ತಿತ್ವವನ್ನು ನಂಬುವವನಾಗುವನು.

ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್(ಅಬಿಅ) ಲೋಕದಲ್ಲಿ ಹೆಚ್ಚುತ್ತಿರುವ ನಾಸ್ತಿಕ ಭಾವನೆಗಳ ಕುರಿತು ಹೇಳುತ್ತಾರೆ. ಇಂದು ಮಸೀಹಿಯತ್ (charichamity) ಅಂತೂ ದುರ್ಬಲತೆಯತ್ತ ಸಾಗಿದೆ. ಒಂದು ರೀತಿಯಲ್ಲಿ ಅವರನ್ನು ಸಹ ಎದುರಿಸುತ್ತಿದ್ದೇವೆ. ಆದರೆ ಅದರ ಜೊತೆಯಲ್ಲಿ ಹೆಚ್ಚುತ್ತಿರುವ ಅಪಾಯವೆಂದರೆ ಅದು ನಾಸ್ತಿಕತೆ ಆಗಿದೆ. ಇತರ ಧರ್ಮಗಳು ಅಲ್ಲಾಹನೊಡನೆ ಸಂಬಂಧ ಇಲ್ಲದ ಕಾರಣ ಧರ್ಮದಿಂದ ದೂರ ಸರಿಯಲು ಪ್ರಾರಂಭಿಸಿದ್ದಾರೆ. ಹೆಚ್ಚಿನವರು ಅವರಲ್ಲಿ ಧರ್ಮಭ್ರಷ್ಟರಾಗಿದ್ದಾರೆ. ಅಲ್ಲದೇ ನಾಸ್ತಿಕರಾಗಿದ್ದಾರೆ. ಇಂದು ನಿಮಗೆ ನಾಸ್ತಿಕತೆಯನ್ನು ಕೊನೆಗಾಣೀಸಬೇಕಾಗಿದೆ. ಏಕದೇವತ್ವ ಸ್ಥಾಪಿಸಬೇಕಾಗಿದೆ (ತಖ್ರೀಬ್ ತಖ್ಸೀಮ್ ಅಸ್ನಾದ್ ಜಾಮಿಅ ಅಹ್ಮದಿಯಾ ಯು.ಕೆ, 25–03–2018)

ಹುಝೂರ್(ಅಬಿಅ) ಹೇಳುತ್ತಾರೆ. ನೀವು ಇಂದು ನಾಸ್ತಿಕತೆಯನ್ನು ಕೊನೆಗಾಣಿಸಬೇಕಾಗಿದೆ. ಹಾಗೂ ಏಕದೇವತ್ವವನ್ನು ಸ್ಥಾಪಿಸಬೇಕಾಗಿದೆ." ನಾಸ್ತಿಕನು ಧರ್ಮಗ್ರಂಥಗಳ ಸಾಕ್ಷ್ಯಗಳನ್ನು ಒಪ್ಪುವುದಿಲ್ಲ. ಇದೊಂದು ಸತ್ಯವಾದ ಮಾತಾಗಿದೆ. ಆದುದರಿಂದ ಅವರಿಗೆ ಬೌದ್ಧಿಕ ಸಾಕ್ಷ್ಯಗಳಿಂದಲೇ ಒಪ್ಪಿಸಬೇಕಾಗಿದೆ. ಬೌದ್ಧಿಕ ಸಾಕ್ಷ್ಯಗಳಿಂದ ಮೊದಲು ಸಹಜ ರೀತಿಯಲ್ಲಿ ಅವರಿಗೆ ಮನವರಿಕೆ ಮಾಡಿಕೊಡಬೇಕಾಗಿದೆ.

### ಸಹಜ ಪ್ರಕೃತಿಯ ಸಾಕ್ಷ್ಯ

ಒಬ್ಬ ನಾಸ್ತಿಕನಿಗೆ ಇದು ಮನವರಿಕೆ ಮಾಡಿಕೊಡಬೇಕಾಗಿದೆ ಮತ್ತು ಅವನ ಆತ್ಮಾಭಿಮಾನವನ್ನು ಜಾಗೃತಗೊಳಿಸಬೇಕಾಗಿದೆ. ಅಲ್ಲಾಹನ ಅಸ್ತಿತ್ವ ಸಾದರಪಡಿಸಲು ಅತ್ಯಂತ ಮುಖ್ಯವಾದುದೇನೆಂದರೆ ಮನುಷ್ಯನ ಸಹಜ ಗುಣವಾಗಿದೆ. ಮನುಷ್ಯನ ಆತ್ಮಾಭಿಮಾನ ಪ್ರಕೃತಿ ಸ್ವಯಂ ಈ ಪ್ರಶ್ನೆ ಹುಟ್ಟು ಹಾಕುತ್ತಿರುತ್ತದೆ. ಈ ಪ್ರಪಂಚದ ಯಾರಾದರೂ ಸೃಷ್ಟಿಕರ್ತನು ಮೂಲತಃ ಇದ್ದಾನೋ ಅಥವಾ ಇಲ್ಲ? ನಮ್ಮನ್ನು ಯಾರು ಮತ್ತು ಏಕೆ ಸೃಷ್ಟಿಸಿದ್ದಾನೆ?

ಈ ಸಹಜ ಗುಣ ಆಧರಿಸಿ ಹೊರಟ ಧ್ವನಿ ನಂತರ ಬಹಳಷ್ಟು ಜನರಲ್ಲಿ ಇನ್ನೂ ಹೆಚ್ಚು ಸಂಶೋಧಿಸಲು ಉತ್ಸುಕತೆ ಹುಟ್ಟುತ್ತದೆ. ಇಂತಹವನು ತನ್ನ ಮನಸ್ಸಿನಲ್ಲಿ ಈ ಪ್ರಶ್ನೆ ಕೇಳುತ್ತಾನೆ. ನನ್ನ ಅಸ್ತಿತ್ವ ಕೇವಲ ಒಂದು ಆಕಸ್ಮಿಕವೋ ಅಥವಾ ಯಾವುದೊಂದು ದೊಡ್ಡ ಶಕ್ತಿ ನಮ್ಮನ್ನು ಸೃಷ್ಟಿಸಿದ್ದಾನೋ. ಈ ಪ್ರಶ್ನೆಯ ಉತ್ತರಕ್ಕಾಗಿ ಅವನು ಬೌದ್ಧಿಕ ನೆಲೆಯಲ್ಲಿ ಯೋಚಿಸದೇ ತನ್ನದೇ ಅಭಿಪ್ರಾಯ ಹೊಂದಲು ನಿಶ್ಚಯವಾಗಿಯೂ ತನ್ನದೊಂದು ಸೃಷ್ಟಿಕರ್ತನಿದ್ದಾನೆ ಎಂಬ ತರ್ಕಕ್ಕೆ ತಲುಪುವನು, ಅಲ್ಲಾಹನೇ ಈ ಪ್ರಪಂಚವನ್ನು ಸೃಷ್ಟಿಸಿದ್ದಾನೆ ಎಂದು. ಕೆಲ ಜನರು ತನ್ನ ಈ ಸುಪ್ತ ಧ್ವನಿಯನ್ನು ಉಪೇಕ್ಷಿಸುತ್ತಾರೆ. ಮತ್ತು ನಾಸ್ತಿಕತೆಯ ರಸ್ತೆ ಹಿಡಿಯುತ್ತಾರೆ. ಒಟ್ಟಿನಲ್ಲಿ ಮನುಷ್ಯನ ಪ್ರಕೃತಿ ಮನುಷ್ಯನ ಅಸ್ತಿತ್ವ, ಅವನ ಸೃಷ್ಟಿ, ದೇವನ ಅಸ್ತಿತ್ವಕ್ಕೆ ಒಂದು ಶಕ್ತಿಯುತ ಪುರಾವೆಯಾಗಿದೆ. ಆದರಿಂದ ಯವ ವಿವೇಕವಂತನು ನಿರಾಕರಿಸುವವರ ಮತ್ತು ನಮ್ಮ ಮೇಲೆ ಅಲ್ಲಾಹನ ಅಪಾರವಾದ ಅನುಗ್ರಹವಿದೆ. ಅವನು ನಮ್ಮ ಮಾರ್ಗದರ್ಶನಕ್ಕಾಗಿ ನಮ್ಮ ಪ್ರಕೃತಿಯಲ್ಲಿಯೇ ವಿಶ್ವಾಸದ ಬೀಜ ಬಿತ್ತಿರುವನು.

ಅಲ್ಲಾಹನು ಹೇಳುತ್ತಾನೆ: ಅವಲಮ್ ಯರಲ್ ಇನ್ಸಾನು ಅನ್ನಾ ಖಲಖ್‌ನಾಹು ಮಿನ್ ನುತ್‌ಫತಿನ್ ಫ ಇಝಾ ಹುವ ಖಸೀಮುಮ್ಮುಬೀನ್, ವಝರಬಲನಾ ಮಸಲೌಂ ವನಸಿಅ ಖಲ್‌ಖಹೂ (ಯಾಸೀನ್: 78–79) "ನಾವು ಅವನನ್ನು (ಕೇವಲ) ಒಂದು ವೀರ್ಯಾಣುವಿನಿಂದ ಸೃಷ್ಟಿಸಿರುವನೆಂದು ಮನುಷ್ಯನಿಗೆ ಗೊತ್ತಿಲ್ಲವೇ? ಈಗ ಅದೋ ಅವನು ದೊಡ್ಡ ಜಗಳಗಂಟಿಯಾಗಿ ಬಿಟ್ಟಿದ್ದಾನೆ. ನಮ್ಮ ಬಗ್ಗೆ ಅವನು ಹೋಲಿಕೆಗಳನ್ನು ಕೊಡುತ್ತಾನೆ ಹಾಗೂ ತಾನು ಸೃಷ್ಟಿಸಲ್ಪಟ್ಟ ಬಗ್ಗೆ ಅವನು ಮರೆತು ಬಿಡುತ್ತಾನೆ.

ಈ ವಚನದ ಅಂಗವಾಗಿ ಒಟ್ಟು ನಾಸ್ತಿಕತೆಗೆ ಇದು ಮನವರಿಕೆ ಮಾಡಿಕೊಡಬೇಕಾಗಿದೆ:

(ಅ) ಮನುಷ್ಯನನ್ನು ಅಲ್ಲಾಹನು ವೀರ್ಯಾಣುವಿನಿಂದ ಸೃಷ್ಟಿಸಿದನು. ಅದು ತಾಯಿಯ ಗರ್ಭ ಸೇರಿದಾಗ ಅವನಿಗೆ ಶ್ವಾಸ ಪಡೆಯಲು ಆಕ್ಸಿಜನ್ (ಆಮ್ಲಜನಕ) ಬೇಕಾಗುತ್ತದೆ. ಈ ಆಮ್ಲಜನಕವು ಸ್ವಯಂ ಆಗಿಬಿಟ್ಟಿದೆಯೇ, ಅದರ ಬದಲಿಗೆ ಯಾವುದೇ ವಿಷಪೂರಿತ ಗ್ಯಾಸ್ ಇರುತ್ತಿದ್ದರೆ ಶ್ವಾಸ ಪಡೆಯಬಹುದಿತ್ತೆ? ಜನ್ಮ ನಂತರ ಅವನ ನಾಜೂಕಾದ ಜಠರಕ್ಕೆ ಆಹಾರದ ಅವಶ್ಯಕತೆಯಿತ್ತು. ಅದಕ್ಕಾಗಿ ತಾಯಿಯ ಹಾಲಿನ ವ್ಯವಸ್ಥೆ ಮಾಡಿದ. ಅವನಗೆ ಹಾಲು ದೊರೆಯುವುದಿಲ್ಲ ಎಂದಾದರೆ ರೊಟ್ಟಿ ಅಥವಾ ಸಸ್ಯ ಜಾನುವಾರುಗಳ ಮೇವು ತಿಂದು ಬದುಕಬಹುದಾಗಿತ್ತೆ? ಖಂಡಿತ ಇಲ್ಲ.

ಆದುದರಿಂದ ಪ್ರಶ್ನೆ ಏಳುತ್ತದೆ. ಈ ವ್ಯವಸ್ಥೆ ಕ್ರಮ, ಸಮಯಾನುಸಾರ ಜೀವನ ಕ್ರಮ ಅದರ ಪೋಷಣೆಗಾಗಿ ಬೇಕಾದ ವಸ್ತುಗಳು ಸ್ವಯಂ ದೊರೆತಿದೆಯೇ? ಖಂಡಿತ ಅಲ್ಲ. ಬದಲು ರಬ್ಬುಲ್ ಆಲಮೀನ್ ಗುಣದಿಂದ ಪೋಷಣೆಯಿಂದಾಗಿ ಜೀವನ ಖಾಯಂ ಆಗಿರುತ್ತದೆ. ಒಬ್ಬ ನಾಸ್ತಿಕನಿಗೆ ಮತ್ತು ಅಲ್ಲಾಹನ ಮೇಲೆ ಪರಿಪೂರ್ಣ ವಿಶ್ವಾಸ ಹೊಂದಿದವನಿಗೆ ಈ ಸಾಕ್ಷ್ಯಗಳ ಮೇಲೆ ಆಳವಾಗಿ ಯೋಚಿಸಿದರೆ ಖಂಡಿತವಾಗಿಯೂ ಅವನಿಗೆ ಅಲ್ಲಾಹನ ಪರಿಜ್ಞಾನ ಮತ್ತು ಅವನ ದಿವ್ಯಜ್ಞಾನ ಪಡೆಯಬಹುದು.

ಪ್ರಪಂಚ ಸೃಷ್ಟಿಯ ಬೌದ್ಧಿಕ ಸಾಕ್ಷ್ಯ:

ಪವಿತ್ರ ಖುರ್‌ಆನ್‌ನಲ್ಲಿ ಅಸಂಖ್ಯಾತ ವಚನಗಳಿವೆ. ಅದರ ಮೇಲೆ ಒಬ್ಬ ನಾಸ್ತಿಕನು ಒಳ್ಳೆಯ ಮನಸ್ಸಿನಿಂದ ಯೋಚಿಸಿದರೆ ಅವನಿಗೆ ಅಲ್ಲಾಹನ ಅಸ್ತಿತ್ವದ ಅರಿವು ಮೂಡಬಹುದಾಗಿದೆ. ಅವನಿಗೆ ಪ್ರಪಂಚದ ಸೃಷ್ಟಿಯು ಮೇಲೆ ಯೋಚಿಸಬೇಕಾಗಿದೆ. ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೇಳುವನು. ಖಾಲತ್ ರುಸೂಲುಹುಮ್ ಅಫಿಲ್ಲಾಹಿ ಶಕ್ಕುನ್ ಫಾತಿರಿಸ್ಸಮಾವಾತಿ ವಲ್‌ಅರ್‌ಝ್ (ಇಬ್ರಾಹೀಮ್–11) "ಅವರ ಸಂದೇಶವಾಹಕರು ಹೇಳಿದರು. ಆಕಾಶಗಳ ಮತ್ತು ಭೂಮಿಯ ಸೃಷ್ಟಿಕರ್ತನಾದ ಅಲ್ಲಾಹನ ಕುರಿತು ನಿಮಗೆ ಸಂಶಯವೇ? ಈ ವಚನದಲ್ಲಿ ಅಲ್ಲಾಹನ ಅಸ್ತಿತ್ವವನ್ನು ನಿರಾಕರಿಸುವವರಿಗೆ ಅಲ್ಲಾಹನು ಹೇಳುವನು. ಆಕಾಶಗಳ ಮತ್ತು ಭೂಮಿಯ ಸೃಷ್ಟಿಕರ್ತನ ಬಗ್ಗೆ ನಿಮಗೆ ಸಂಶಯವಿದೆಯೇ ಎಂದು. ಅಂದರೆ ಆಕಾಶ ಮತ್ತು ಭೂಮಿಯು ಅಲ್ಲಾಹನ ಆಜ್ಞೆಯ ಮೇರೆಗೆ ತಮ್ಮ ತಮ್ಮ ಕರ್ತವ್ಯಗಳನ್ನು ನಿರಂತರವಾಗಿ ನಿರ್ವಹಿಸುತ್ತಲೇ ಇವೆ. ಅದರ ಸೃಷ್ಟಿ ಮತ್ತು ಲಕ್ಷೋಪ ವರ್ಷಗಳಿಂದ ಅಲ್ಲಾಹನು ಅವರಿಗೆ ಆಜ್ಞಾಪಿಸಿದ ಎಂಬ ಕರ್ತವ್ಯಗಳನ್ನು ಉತ್ತಮ ರೀತಿಯಲ್ಲಿ ನಿರ್ವಹಿಸುತ್ತ ಹೋಗುವುದನ್ನು ನೋಡಿ ಅವನ ಅಸ್ತಿತ್ವದ ಮೇಲೆ ವಾಸ್ತವದ ಮೇಲೆ ಭರವಸೆ ಮೂಡುವುದಿಲ್ಲವೇ. ಒಂದು ಘಟನೆಯ ಅನ್ವಯ ಈ ವಿಷಯವನ್ನು ಇನ್ನೂ ಸರಳಗೊಳಿಸಬಹುದು.

ಪುರಾತನ ಕಾಲದಲ್ಲಿ ಒಬ್ಬ ನಾಸ್ತಿಕ ಅವಿಶ್ವಾಸಿ ಒಬ್ಬ ಮುಸಲ್ಮಾನ ಬಾದಶಾಹನ ಬಳಿಗೆ ಬಂದನು ಮತ್ತು ಹೇಳಿದನು. ನಾನು ದೇವಾಸ್ತಿತ್ವವನ್ನು ನಂಬುವುದಿಲ್ಲ. ನನ್ನ ವಿಶ್ವಾಸ ಪ್ರಕಾರ ಈ ಪ್ರಪಂಚ ತನ್ನಷ್ಟಕ್ಕೆ ಅಸ್ತಿತ್ವಕ್ಕೆ ಬಂದಿದೆ. ಅದರ ವ್ಯವಸ್ಥೆ ಸ್ವಯಂ ನಡೆಯುತ್ತಿದೆ. ಅವಿಶ್ವಾಸಿಯೂ ಬಾದಶಾಹನಿಗೆ ಹೇಳಿದ ಯಾವ ಪಂಡಿತನಿಗಾದರೂ ಕರೆಯಿರಿ. ನನ್ನೊಡನೆ ಮಾತನಾಡಲಿ ಅಂದ. ಹಾಗೆ ಬಾದಶಾಹನೂ ನದಿಯ ಇನ್ನೊಂದು ಬದಿಯಲ್ಲಿ ವಾಸಿಸುತ್ತಿದ್ದ ಓರ್ವ ಮುಸ್ಲಿಂ ಸಜ್ಜನನಿಗೆ ದರಬಾರಿನಲ್ಲಿ

ಹಾಜರಾಗಲು ಸಂದೇಶ ಕಳುಹಿಸಲಾಯಿತು. ಸಂದೇಶ ತಲುಪಿಸುವವರಿಂದ ಆ ಮುಸ್ಲಿಂ ಸಜ್ಜನರು ದರಬಾರಿನಲ್ಲಿ ಹಾಜರಾಗುವ ಕಾರಣ ಕೇಳಿದರು. ಅವನು ಆ ಅವಿಶ್ವಾಸಿಯ ಪ್ರಶ್ನೆಯ ಬಗ್ಗೆ ಹೇಳಿದರು. ಆ ಮುಸ್ಲಿಂ ಸಜ್ಜನರು ದರಬಾರಿನಲ್ಲಿ ಹಾಜರಾದರು. ಬರುತ್ತಲೇ ಅವನ ಉಪಸ್ಥಿತಿಯಲ್ಲಿ ಬಾದಶಾಹನನ್ನು ಸಂಬೋಧಿಸಿ ಹೇಳಿದರು. ಬಾದಶಾಹ ಸಲಾಮತ್ ಇಂದು ನನಗೆ ಒಂದು ವಿಚಿತ್ರ ಘಟನೆ ಎದುರಾಯಿತು. ಅದು ಹೀಗಿದೆ. ನಾನು ನಿಮ್ಮತ್ತ ಬರಲು ಒಂದು ಹಡಗಿನ ನಿರೀಕ್ಷೆಯಲ್ಲಿದ್ದೆ. ಆಕಸ್ಮತ್ತಾಗಿ ನದಿಯ ನೀರಿನಿಂದ ದೊಡ್ಡ ದೊಡ್ಡ ಕಟ್ಟಿಗೆಯ ಹಲಗೆಗಳು ಬಂದು ಬಿಟ್ಟವು. ಮತ್ತೆ ಅದು ತಂತಾನೆ ಪರಸ್ಪರ ಜೋಡಿಸಲ್ಪಟ್ಟವು. ಮತ್ತೆ ಕಬ್ಬಿಣದ ಸಲಾಕೆಗಳು ಬಂದವು. ಅದು ಜೋಡಲ್ಪಡುತ್ತಿದ್ದವು. ಮತ್ತೆ ಎಣ್ಣೆಗಳ ದೊಡ್ಡ ದೊಡ್ಡ ಪೆಟ್ಟಿಗೆಗಳು ನೀರಿನಿಂದ ಬಂದವು ಮತ್ತು ತಂತಾನೆ ಆ ಹಲಗೆಗಳಿಗೆ ಬಣ್ಣ ಹಚ್ಚಲು ತೊಡಗಿದವು. ಮತ್ತು ತಂತಾನೆ ಆ ಹಡಗು ತಯಾರಾಯಿತು. ನನ್ನ ಬಳಿ ದಡಕ್ಕೆ ಬಂದು ನಿಂತಿತು. ಮತ್ತೆ ತಾನು ಅದರಲ್ಲಿ ಕುಳಿತುಕೊಂಡೆ. ಮತ್ತೆ ಆ ಹಡಗು ಯಾವುದೇ ಅಂಬಿಗನಿಲ್ಲದೆ ನಡೆಯತೊಡಗಿತು. ಹೀಗೆ ಇನ್ನೊಂದು ದಡಕ್ಕೆ ಬಂದು ನಿಂತಿತು. ನಾನು ಅದರಿಂದ ಇಳಿದು ನಿಮ್ಮ ದರಬಾರಿನಲ್ಲಿ ಹಾಜರಾದೆನು.

ಆ ಅವಿಶ್ವಾಸಿಯು ನಾಸ್ತಿಕ ಮನುಷ್ಯನ ಈ ಕಥೆ ಕೇಳಿ ಸಿಟ್ಟಿಗೆ ಬಂದು ಬಾದಶಾಹನನ್ನು ಸಂಬೋಧಿಸಿ ಹೇಳಿದನು. ಈ ಹುಚ್ಚನಿಗೆ ನನ್ನೊಡನೆ ಚರ್ಚಿಸಲು ಕರೆದಿರುವರೆ ನೀವು? ಅವನಿಗೆ ಅಷ್ಟು ಅರಿಯುವುದಿಲ್ಲವೇ. ಕಟ್ಟಿಗೆಯ ಹಲಿಗೆಗಳು ತಂತಾನೆ ನೀರಿನಿಂದ ಹೇಗೆ ಬಂದವು ಮತ್ತು ಹಡಗು ತಯಾರಾಯಿತು? ಇದು ಸಾಧ್ಯವೇ ಇಲ್ಲ.

ಆ ಮುಸ್ಲಿಮ್ ಸಜ್ಜನ ಪಂಡಿತರು ಎದ್ದು ನಿಂತರು ಮತ್ತು ಬೌದ್ಧಿಕ ನೆಲೆಯಲ್ಲಿ ಆ ಅವಿಶ್ವಾಸಿಗೆ ಮನವರಿಕೆ ಮಾಡಿಕೊಟ್ಟರು. ನಿಮ್ಮ ಬುದ್ಧಿ ಒಂದು ಹಡಗನ್ನು ತಂತಾನೇ ಆಗಲಿಕ್ಕೆ ಸಮ್ಮತಿಸುವುದಿಲ್ಲವಾದರೆ, ಈ ಇಡೀ ಪ್ರಪಂಚ ಹೇಗೆ ತಂತಾನೆ ಅಸ್ತಿತ್ವಕ್ಕೆ ಬಂತು.

ವಾಸ್ತವವೇನೆಂದರೆ ಈ ಪ್ರಪಂಚದ ಒಬ್ಬ ಸೃಷ್ಟಿಕರ್ತನಿದ್ದಾನೆ. ಅವನು ಈ ಪ್ರಪಂಚವನ್ನು ಸೃಷ್ಟಿಸಿದ್ದಾನೆ ಮತ್ತು ನಡೆಸುತ್ತಿದ್ದಾನೆ. ಅತ್ಯಂತ ದೌರ್ಭಾಗ್ಯವಂತನಾಗಿದ್ದಾನೆ. ಆ ಮನುಷ್ಯ, ಅಲ್ಲಾಹನ ಅಸ್ತಿತ್ವದ ಜ್ಞಾನ, ಪರಿಜ್ಞಾನ ಪಡೆಯುತ್ತಿಲ್ಲ.

ಇದೇ ಬೌದ್ಧಿಕ ಸಾಕ್ಷ್ಯಯೊಂದಿಗೆ ಹಝ್ರತ್ ಮಸೀಹ್ ಮೌಊದ್(ಅ) ಮಾನವ ಕುಲಕ್ಕೆ ಮನವರಿಕೆ ಮಾಡಿಸುತ್ತ ಹೇಳುತ್ತಾರೆ.

ಓ ಬುದ್ಧಿವಂತ ಮನುಷ್ಯನೇ ನೀನು ಹೀಗೆ ಮಾಡದಿರು. ನಿನ್ನ ಪ್ರಭು ಆಶ್ರಯವಿಲ್ಲದೆ ಅಸಂಖ್ಯ ನಕ್ಷತ್ರಗಳನ್ನು ಹತ್ತಿಸಿದವನಾಗಿದ್ದಾನೆ. ಅವನು ಭೂಮ್ಯಾಕಾಶವನ್ನು ಶೂನ್ಯದಿಂದ ಸೃಷ್ಟಿಸಿರುವನು. ಅವನ ಮೇಲೆ ನೀನು ಸಂಶಯ ಪಡುವುದೇ" (ಕಿಶ್ತಿ ಎ ನೂಹ್, ರೂಹಾನಿ ಖಝಾಈನ್, ಸಂಪುಟ–19, ಪುಟ–21)

ಪುರಾತನ ಕಾಲದ ಸಂದೇಶವಾಹಕರಾದ ಹಝ್ರತ್ ನೂಹ್(ಅ) ತಮ್ಮ ಸಮುದಾಯಕ್ಕೆ ಈ ಕೆಳಗಿನ ಬೌದ್ಧಿಕ ಸಾಕ್ಷ್ಯಗಳೊಂದಿಗೆ ತಿಳಿ ಹೇಳಿದರು. **ಮಾಲಕುಂ ಲಾ ತರ್‌ಜೂನ ಲಿಲ್ಲಾಹಿ ವಖಾರನ್. ವಖದ್ ಕಲಖಕುಮ್ ಅತ್‌ವಾರ. ಅಲಮ್ ತರೌ ಕೈಫ ಖಲಖಲ್ಲಾಹು ಸಬ್‌ಅ ಸಮಾವಾತಿನ್ ತಬಾಖ. ವ ಜಅಲಲ್ ಖಮರ ಫೀಹಿನ್ನ ನೂರವ್ವಜಅಲಶ್ಶಮ್‌ಸ ಸಿರಾಜ,** (ನೂಹ್: 14–17) ನಿಮಗೇನಾಗಿದೆ? ನೀವು ಅಲ್ಲಾಹನ ಮಹಿಮೆಯನ್ನು ಗ್ರಹಿಸುವುದಿಲ್ಲ! ಅವನು ನಿಮ್ಮನ್ನು ಹಲವು ಹಂತಗಳಲ್ಲಿ ಸೃಷ್ಟಿಸಿದ್ದಾನೆ. ಅಲ್ಲಾಹನು ಏಳು ಆಕಾಶಗಳನ್ನು ಹೇಗೆ ಕ್ರಮಬದ್ಧವಾಗಿ ಸೃಷ್ಟಿಸಿರುವನೆಂದು ನೀವು ನೋಡಲಿಲ್ಲವೇ? ಅಲ್ಲಿ ಅವನು ಚಂದ್ರನನ್ನು ಪ್ರಕಾಶವಾಗಿಯೂ ಸೂರ್ಯನನ್ನು ಪ್ರದೀಪವಾಗಿಯೂ ಇರಿಸಿರುವನು.

ಆದರಣೀಯ ಓದುಗರೇ? ಇಲ್ಲಿ ಏಳು ಆಕಾಶಗಳ ವಿವರ ಇದೆ. ಅರಬಿ ಭಾಷೆಯಲ್ಲಿ ಏಳು ಸಂಖ್ಯೆಯು ಅತ್ಯಧಿಕವಾಗಿ ಮತ್ತು ಪರಿಪೂರ್ಣತೆಗಾಗಿ ಉಪಯೋಗಿಸಲಾಗುತ್ತದೆ.

ಚಂದ್ರವು ಮಂದ ಬೆಳಕು ನೀಡುತ್ತದೆ. ಚಂದ್ರನ ಬೆಳಕು ತನ್ನ ಸ್ವಂತದ್ದು ಅಲ್ಲ. ಅದು ಸೂರ್ಯದ ಪ್ರಕಾಶವನ್ನೇ ಸುಂದರವಾಗಿ ಉತ್ತಮ ರೀತಿಯಲ್ಲಿ ಪ್ರತಿಬಿಂಬಿಸುತ್ತಿದೆ. ಚಂದ್ರವು ನಮ್ಮಿಂದ ನಾಲ್ಕು ಲಕ್ಷ ಕಿ.ಮೀ ದೂರವಿದೆ.

ಸೂರ್ಯವು ನಮಗೆ ತೀಕ್ಷ್ಣವಾದ ಬೆಳಕು ಮತ್ತು ಬಿಸಿಲನ್ನು ನೀಡುತ್ತದೆ. ಭೂಮಿ ಮತ್ತು ಚಂದ್ರನ ನಡುವೆ ಇರುವ ವ್ಯಾಸ ಅದರಿಂದ ಮೂರುವರೆಪಟ್ಟು ಹೆಚ್ಚಾಗಿದೆ. ಭೂಮಿಯಲ್ಲಿರುವ ಭಾರಕ್ಕಿಂತ (ಮಾದ್ದ) ಮೂರು ಲಕ್ಷ ಪಟ್ಟು ಹೆಚ್ಚು ಭಾರ ಸೂರ್ಯನಲ್ಲಿದೆ. ಸೂರ್ಯನ ಮೇಲ್ಭಾಗದಲ್ಲಿ ನಮಗೆ ಕಂಡು ಬರುವ ಹಳದಿಮಟ್ಟ ಅದರ ಉಷ್ಣಾಂಶ ಆರು ಸಾವಿರ ಡಿಗ್ರಿಯಿದೆ ಸೂರ್ಯ ಮಧ್ಯದಲ್ಲಂತೂ ಉಷ್ಣಾಂಶ ಒಂದು ಕೋಟಿ ಡಿಗ್ರಿಗಿಂತ ಅಧಿಕವಾಗಿದೆ. ಪರಮಾಣು ವಿಕಿರಣದಿಂದ ಉಷ್ಣಾಂಶ ಹುಟ್ಟಿ ಬರುತ್ತದೆ. ಸೂರ್ಯನು ನಮ್ಮ ಭೂಮಿಯಿಂದ 15 ಕೋಟಿ ಕಿ.ಮೀ ದೂರವಿದೆ.

ಯೋಚಿಸಬೇಕಾಗಿರುವ ವಿಷಯವೇನೆಂದರೆ ಒಂದು ಸಾಧಾರಣ ದೀಪ ಮೂಡಲಿಕ್ಕೂ ದೀಪ ಮಾಡುವವನ ಅಗತ್ಯವಿರುತ್ತದೆ. ಸೂರ್ಯ ಮತ್ತು ಚಂದ್ರನಂತಹ ಮಹೋನ್ನತ ಪ್ರಕಾಶ ನೀಡುವಂತಹ ವಸ್ತುಗಳು ಹೇಗೆ ತಂತಾನೆ ಸೃಷ್ಟಿಯಾದವು? ವಿವೇಕ ಉಳ್ಳವರು ಕೇವಲ ಇದೇ ಒಂದು ಪುರಾವೆಯಿಂದ ದೇವಾಸ್ತಿತ್ವವನ್ನು ಒಪ್ಪಿಕೊಳ್ಳಬಹುದಾಗಿದೆ.

**ಲೋಕ ಸೃಷ್ಟಿಯ ಬೌದ್ಧಿಕ ಸಾಕ್ಷ್ಯ:**

ಸೂರ ಯಾಸೀನ್‌ನಲ್ಲಿ ಅಲ್ಲಾಹನು ಸೌರಮಂಡಲ ಕುರಿತು ತನ್ನ ಅಸ್ತಿತ್ವದ ಪುರಾವೆ ಹೀಗೆ ಒದಗಿಸಿದೆ. **ವ ಆಯತುಲ್ಲಹುಮುಲ್ಲೈಲು ನಸ್‌ಲಖು ಮಿಹುನ್ನಹಾರ ಫ ಇಝಾ ಹುಮ್ ಮುಝ್‌ಲಿಮೂನ. ವಶ್ಶಮ್‌ಸು ತಜ್ರಿ ಲಿಮುಸ್ತಖರ್‍ರಿಂ ಲಹಾ ಝಾಲಿಕ ತಖ್ದೀರುಲ್ ಅಝೀಝಿಲ್ ಅಲೀಮ್. ವಲ್ ಖಮರ ಖದ್ದರ್‌ನಾಹು ಮನಾಝಿಲ ಹತ್ತಾ ಆದ ಕಲ್‌ಉರ್‌ಜೂನಿಲ್ ಖದೀಮ್. ಲಶ್ಶಮ್‌ಸು ಸಾಬಿಖುನ್ನಹಾರಿ ವ ಕಿಲ್ಲು ಫೀ ಫಲಕಿನ್ ಯಸ್ಬಹೂನ್** (ಯಾಸೀನ್: 41) ಆ ರಾತ್ರಿ ಸಹ ಅವರಿಗೊಂದು ದೃಷ್ಟಾಂತ, ಅದರಿಂದ ನಾವು ಹಗಲನ್ನು ನೀಗಿಸುತ್ತೇವೆ. ಆಗ ಅವರು ಅದೋ ಅಂಧಕಾರದಲ್ಲಿರುತ್ತಾರೆ. ಸೂರ್ಯ ಅದರ ನಿಶ್ಚಿತ ಗುರಿಯೆಡೆಗೆ ಚಲಿಸುತ್ತದೆ. ಅದು ಪ್ರತಾಪಶಾಲಿಯೂ, ಸರ್ವಜ್ಞನೂ ಆದವನ ವಿಧಿಪ್ರಕಾರವಾಗಿದೆ. ಚಂದ್ರನಿಗೆ ನಾವು ಕೆಲವು ಅಂಶಗಳನ್ನು ನಿರ್ಣಯಿಸಿದ್ದೇವೆ. ಹಾಗೆ ಅದು (ಕೊನೆಗೆ) ಖರ್ಜೂರ ಮರದ ಹಳೆಯ ಕೊಂಬೆಯಂತಾಗುತ್ತದೆ. ಸೂರ್ಯನು ಚಂದ್ರನನ್ನು ತಲುಪುವುದು ಅಸಾಧ್ಯ. ರಾತ್ರಿಯು ಹಗಲನ್ನು ಸಹ ಹಿಂದೆ ಹಾಕಲಾರದು. ಎಲ್ಲವೂ ನಿರ್ಧಿಷ್ಟ ಪಥದಲ್ಲಿ ಸಂಚರಿಸುತ್ತವೆ.

ಲೋಕಸೃಷ್ಟಿ ಮತ್ತು ಅದರ ನಿರಂತರ ಚಲನೆಯನ್ನು ಬೌದ್ಧಿಕ ಪುರಾವೆಯಾಗಿ ವಿವರಿಸುತ್ತ ಅಲ್ಲಾಹನು **"ಊಲುಲ್ ಅಲ್ಬಾಬ್"** ಅಂದರೆ ವಿವೇಕವಂತರಿಗೆ ಕರೆ ನೀಡುತ್ತ ಹೇಳುತ್ತಾನೆ:

**"ಇನ್ನಫೀ ಖಲಖಿಸಮಾವಾತಿ ವಲ್‌ಅರ್‌ಝಿ ವಖ್ತಿಲಾಫಿಲ್ಲೈಲಿ ವನ್ನಹಾರಿ ಲಆಯಾತಿಲ್ಲಿ ಊಲಿಲ್ ಅಲ್‌ಬಾಬ್** (ಆಲಿ ಇಮ್ರಾನ್–191) ಹಗಲಿನಂತಹ ರಾತ್ರಿಯ ಬರುವಿಕೆ ಮತ್ತು ರಾತ್ರಿಯ ನಂತರ ಹಗಲು ಅಲ್ಲಾಹನ ಅಸ್ತಿತ್ವದ ಮೇಲೆ ದೊಡ್ಡ ಪುರಾವೆಯಾಗಿದೆ. ಭೂಮಿಯು ಗೋಳಾಕಾರವಾಗಿದೆ ಎಂದು ನಾವು ಅರಿತಿದ್ದೇವೆ ಮತ್ತು ಭೂಮಿಯ ತನ್ನ ಅಕ್ಷಯದ ಮೇಲೆ ಸುತ್ತುತ್ತಿದೆ.

ಭೂಮಿಯ ಯಾವ ಭಾಗ ಸೂರ್ಯ ಕಡೆ ಇರುತ್ತದೆಯೋ ಅಲ್ಲಿ ಹಗಲಾಗಿರುತ್ತದೆ ಮತ್ತು ಇತರ ಭಾಗದಲ್ಲಿ ರಾತ್ರಿಯಾಗಿರುತ್ತದೆ. ಎಷ್ಟು ಉತ್ತಮವಾಗಿ ಭೂಮಿ ಚಲಿಸುತ್ತದೆ ಎಂದರೆ ಅದರ ಧಕ್ಕೆಯೂ ನಮಗೆ ಗೋಚರವಾಗುವುದಿಲ್ಲ. ಒಂದು ದೀರ್ಘ ಅವಧಿಯವರೆಗೆ ಜನರು ಭೂಮಿ ಸುತ್ತುತ್ತಿಲ್ಲ. ಸೌರ ಮಂಡಲವೇ ಅದನ್ನು ಸುತ್ತುತ್ತಿದೆ ಎಂದು ಭಾವಿಸಿದ್ದರು. ನೋಡಲು ಹಾಗೆಯೇ ಭಾಸವಾಗುತ್ತದೆ.

ಒಂದು ಬುಗುರಿಯನ್ನು ನಾವು ಸುತ್ತಿಸುತ್ತೇವೆ. ಅದು ಸ್ವಲ್ಪ ಹೊತ್ತು ತನ್ನ ಪಥದಲ್ಲಿ ಸುತ್ತಿ ಬೀಳುತ್ತದೆ. ಆದರೆ ನಮ್ಮ ಭೂಮಿ ಶತಕೋಟಿ ವರ್ಷಗಳಿಂದ ಸುತ್ತುತ್ತಿದೆ ಮತ್ತು ಸುತ್ತುವುದು ನಿಲ್ಲಿಸಿಲ್ಲ. ಸುತ್ತುವ ವೇಗದಲ್ಲೂ ಯಾವ ವ್ಯತ್ಯಾಸ ಬಂದಿಲ್ಲ. ಆದರೆ ತೀರ ಲಘು ಪ್ರಮಾಣದ ವ್ಯತ್ಯಾಸವಿದೆ. ಅದರ ಸುತ್ತುವ ವೇಗ ಕಡಿಮೆ ಆಗುತ್ತಿದೆ. ಆದರೆ ಕೇವಲ ಒಂದು ಶತಮಾನದಲ್ಲಿ ಸುಮಾರು ಒಂದು ಸೆಕೆಂಡಿನ ಸಾವಿರ ಭಾಗದಷ್ಟು, ಇದು ನಮ್ಮ ಸಂಶೋಧನೆಯ ಫಲವಾಗಿದೆ. ಅದರಿಂದ ನಮಗೆ ಭೂಮಿ ಮತ್ತು ಚಂದ್ರರ ಪರಸ್ಪರ ಸಂಬಂಧದ ಅರಿವಾಗುತ್ತದೆ. ನಮಗೆ ಇದು ಸಹ ತಿಳಿಯಿತು. ಕೇವಲ ಭೂಮಿ ತನ್ನ ಅಕ್ಷದ ಮೇಲೆ ಸುತ್ತುತ್ತಿಲ್ಲ. 24 ಗಂಟೆಯಲ್ಲಿ ಅದರ ಒಂದು ಸುತ್ತು (Rotation) ಪೂರ್ಣವಾಗುತ್ತದೆ. ಬದಲು ಅದು ಸೂರ್ಯನ ಸುತ್ತಲೂ ಸುತ್ತುತ್ತಿದೆ. ಸೂರ್ಯನ ಸುತ್ತ ಒಂದು ಸುತ್ತು ಹಾಕಲು ಒಂದು ವರ್ಷ ಹಿಡಿಯುತ್ತದೆ. 30 ಕಿ.ಮೀ ಪ್ರತಿ ಸೆಕೆಂಡಿನ ವೇಗದಲ್ಲಿ ಸುತ್ತುತ್ತಿದೆ. ಆದರೆ ಈ ಸುತ್ತುವಿಕೆಯಿಂದಲೂ ನಮಗೆ ಯಾವುದೆ ಧಕ್ಕೆ ಇದೆ ಎಂದು ಭಾವಿಸುವುದಿಲ್ಲ. ಅದಾಗ್ಯೂ ಅದರ ಒಂದು ನಿಶ್ಚಿತವಾದ ಪರಿಣಾಮ ಕಾರಣ ಸಿಗುವುದೇನೆಂದರೆ ಒಂದು ವರ್ಷದ ನಡುವೆ ಸೂರ್ಯ 12 ಬುರುಜುಗಳಿಂದ ಹಾಗೂ ಒಂದು ವರ್ಷ ನಂತರ ಮತ್ತೆ ತಮ್ಮ ಮೊದಲಿನ ಸ್ಥಾನಕ್ಕೆ ಬಂದುಬಿಡುತ್ತದೆ.

ಸೌರಮಂಡಲ ಒಂದು ಅತ್ಯಂತ ಬೃಹತ್ ವ್ಯವಸ್ಥೆ ಅಂದರೆ ಗ್ಯಾಲಕ್ಸಿ ವ್ಯವಸ್ಥೆಗಳ ಭಾಗವಾಗಿದೆ. 20ನೇ ಶತಮಾನದಲ್ಲಿ ಈ ಸಂಶೋಧನೆ ಹೊರ ಬಂತು. ಸೂರ್ಯವು ತನ್ನ ಎಲ್ಲ ಸೌರಮಂಡಲದ ಜೊತೆಗೂಡಿ ನಮ್ಮ ಗ್ಯಾಲಕ್ಸಿ ಕೇಂದ್ರದ ಸುತ್ತ 200 ಕಿ.ಮೀ ಪ್ರತಿ ಸೆಕೆಂಡ್‌ಗಿಂತ ಹೆಚ್ಚು ವೇಗದಲ್ಲಿ ಸುತ್ತುತ್ತಿದೆ. ಗ್ಯಾಲಕ್ಸಿ ಕೇಂದ್ರ ಸುತ್ತ ಒಂದು ಸುತ್ತು ಹಾಕಲು 20 ಕೋಟಿ ವರ್ಷಗಳಾಗುತ್ತವೆ. ಸೂರ್ಯನ ಜೊತೆ ನಾವೆಲ್ಲರೂ ಸಹ ಅದೇ ವೇಗದಿಂದ ಗ್ಯಾಲಕ್ಸಿ ಕೇಂದ್ರ ಸುತ್ತ ಸುತ್ತುತಿದ್ದೇವೆ. ನಿರಂತರ Non stop ಪ್ರಯಾಣ ಮಧ್ಯೆಯೂ ಯಾವ ದಣಿವು ಅನುಭವಿಸುವುದಿಲ್ಲ. ಭೂಮಿಯ ಆಯಸ್ಕಾಂತ ಶಕ್ತಿ ನಮಗೆ ಅತ್ತಿತ್ತ ಆಗಲು ಬಿಡುವುದಿಲ್ಲ. ದೃಢವಾಗಿ ಭೂಮಿಯ ಮೇಲೆ ಇರಿಸುತ್ತದೆ. ಇದು ಅಲ್ಲಾಹನ ಕಾರ್ಯವಾಗಿದೆ. ಅವನು ಪ್ರತಿ ವಸ್ತುವನ್ನೂ ಭದ್ರವಾಗಿಸಿದ್ದಾನೆ. ಮೋಟಾರ್ ಕಾರು, ರೈಲು, ವಿಮಾನ ಎಲ್ಲವು ಚಾಲಕನನ್ನು ಬಯಸುತ್ತವೆ. ನಾವು ಹೇಗೆ ಹೇಳಲು ಸಾಧ್ಯ. ಭೂಮಿ, ಸೂರ್ಯ, ಚಂದ್ರ ಮತ್ತು ಇತರ ವಸ್ತುಗಳನ್ನು ಚಲಿಸುವವನು ಯಾವ ದೇವನು ಇಲ್ಲ ಎಂದು.

ಪ್ರಾರ್ಥನೆಯ ಸ್ವೀಕೃತಿಯ ಮೂಲಕ ಬೌದ್ಧಿಕ ಸಾಕ್ಷ್ಯಧಾರಗಳು

ಒಂದು ಅತ್ಯಂತ ಪ್ರಮುಖ ಬೌದ್ಧಿಕ ಪುರಾವೆಯಾಗಿದೆ. ನಮಗೆ ಪವಿತ್ರ ಖುರ್‌ಆನ್‌ನಿಂದ ಅಲ್ಲಾಹನ ಅಸ್ತಿತ್ವದ ಕುರಿತು ಲಭಿಸುತ್ತದೆ. ಅದು ಅವನ ಪ್ರಾರ್ಥನೆ ಸ್ವೀಕಾರದ ವಿಧಾನವಾಗಿದೆ. ಯಾವಾಗಲೆಲ್ಲ ಮನುಷ್ಯನು ಗಾಬರಿಗೊಂಡು ದೇವನ ಮುಂದೆ ಪ್ರಾರ್ಥನೆ ಮಾಡುತ್ತಾನೆ. ಅದನ್ನು ಅವನು ಸ್ವೀಕರಿಸುತ್ತಾನೆ ಈ ಮಾತು ಯಾವುದೇ ವಿಶೇಷ ಕಾಲಕ್ಕೆ ಸೀಮಿತಗೊಂಡಿಲ್ಲ. ಎಲ್ಲ ಕಾಲದಲ್ಲೂ ಕಾಣಬಹುದಾಗಿದೆ. ಅಂದ ಹಾಗೆ ಅಲ್ಲಾಹನು ಹೇಳಿದನು. ವ ಇಝು ಸಅಲಕ ಇಬಾದಿ ಅನ್ನಿ ಫಿನ್ನಿ ಖರೀಬ್ ಉಜೀಬು ದಅವತದ್ದಾಇ ಇಝಾ ದಆನ್ ಫಲ್‌ಯಸ್ತಜೀಬು ಲೀ ವಲ್‌ಯುಮಿನೂ ಬೀ ಲಅಲ್ಲಹುಮ್ ಯರ್‌ಶುದೂನ್ (ಅಲ್‌ಬಖರ –187) ಅಂದರೆ "ನನ್ನ ಬಗ್ಗೆ ನನ್ನ ದಾಸರು ನಿನ್ನೊಡನೆ ಕೇಳಿದರೆ (ಹೇಳು, ಖಂಡಿತವಾಗಿಯೂ ನಾನು ಸಮೀಪದಲ್ಲೇ ಇದ್ದೇನೆ. ನನ್ನನ್ನು ಕರೆದು ಪ್ರಾರ್ಥಿಸುವಾಗ ಪ್ರಾರ್ಥಿಸುವವನ ಪ್ರಾರ್ಥನೆಗೆ ನಾನು ಉತ್ತರ ನೀಡುವೆನು. ಆದ್ದರಿಂದ ಅವರು ಸತ್ಪಥವನ್ನು ಪಡೆಯಲಿಕ್ಕಾಗಿ ನನ್ನ ಕರೆಗೆ ಓಗೊಡಲಿ ಮತ್ತು ನನ್ನ ಮೇಲೆ ನಂಬಿಕೆ ಇರಿಸಲಿ. ಈಗ ಯಾರಾದರು

ಪ್ರಶ್ನಿಸಿದರೆ ಅಲ್ಲಾಹನು ಪ್ರಾರ್ಥನೆ ಸ್ವೀಕರಿಸುತ್ತಾನೆ ಎಂದು ಹೇಗೆ ತಿಳಿಯುವುದು, ಅದು ಒಂದು ಆಕಸ್ಮಿಕ ಕ್ರಿಯೆ ಆಗಿದೆ. ಕೆಲವು ಪ್ರಾರ್ಥನೆ ಮಾಡುವವರ ಕಾರ್ಯಗಳು ಆದರೆ ಕೆಲವರದ್ದು ಆಗಿರುವುದಿಲ್ಲ. ಎಲ್ಲಾ ಪ್ರಾರ್ಥನೆಗಳು ಸ್ವೀಕಾರವಾಗುತ್ತಿದ್ದರೆ ಒಂದು ಮಾತಿತ್ತು. ಆದರೆ ನಾವು ನೋಡುತ್ತಿದ್ದೇವೆ. ಹೆಚ್ಚಿನ ಜನರ ಪ್ರಾರ್ಥನೆಗಳು ಸ್ವೀಕಾರ ಆಗುತ್ತಿಲ್ಲ. ಇದರಿಂದ ಅದೇ ಪರಿಣಾಮ ಮುಂಬರುತ್ತದೆ. ಯಾವ ಪ್ರಾರ್ಥನೆಗಳು ಸ್ವೀಕಾರವಾದವು. ಯಾವ ಕಾರ್ಯಗಳು ಆದವು. ರೋಗಿಗಳು ಶಮನ ಹೊಂದಿದರು. ಅದು ಆಕಸ್ಮಿಕವಾದುದೆ? ಅದರ ಉತ್ತರವೇನೆಂದರೆ ಪ್ರಾರ್ಥನೆ ಸ್ವೀಕಾರವು ಒಂದು ದೃಷ್ಟಾಂತ ಹೊಂದಿರುತ್ತದೆ. ಅಂದ ಹಾಗೆ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ. ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ ಸಾಹಿಬ್ ಮಸೀಹ್ ಮೌಊದ್(ಅ) ದೇವಾಸ್ತಿತ್ವಕ್ಕೆ ಈ ಪುರಾವೆಯನ್ನು ಪ್ರಸ್ತುತಪಡಿಸಿದ್ದರು. ಕೆಲವು ಅಪಾಯಮಟ್ಟಕ್ಕೆ ತಲುಪಿರುವಂತಹ ರೋಗಿಗಳನ್ನು ಆರಿಸಿಕೊಂಡು ಒಂದು ತಂಡ ವೈದ್ಯರ ಸುಪರ್ಧಿಗೆ ನೀಡಿದರೆ ಒಂದು ತಂಡ ನನ್ನ ಸುಪರ್ಧಿಗೆ ಹಂಚಿಕೊಡಿ. ನಾನು ಅವರಿಗಾಗಿ ದುಆ (ಪ್ರಾರ್ಥನೆ) ಮಾಡುವೆನು. ಮತ್ತೆ ನೋಡುವ ಯಾರ ರೋಗಿಗಳು ಗುಣ ಹೊಂದುತ್ತವೆ ಎಂದು. (ದಸ್ ದಲಾದುಲ್ ಹಸ್ತಿ ಬಾರಿ ಎ ತಆಲ, ಪುಟ-21)

ಈಗ ಈ ಪರೀಕ್ಷೆಯ ವಿಧಾನದಲ್ಲಿ ಸಂಶಯವಿರುವುದಾದರೇನು, ಚಿಕಿತ್ಸೆ ಇಲ್ಲದಂತಹ ರೋಗಿ ಶಮನ ಹೊಂದಿದ ಬಗ್ಗೆ ಒಂದು ಪುರಾವೆ ಏನೆಂದರೆ ಹಝ್ರತ್ ಮಸೀಹ್ ಮೌಊದ್(ಅ) ರವರ ಕಾಲದಲ್ಲಿ ಒಬ್ಬ ವಿದ್ಯಾರ್ಥಿ ದಖಿನ್ ನಿವಾಸಿ, ಅಬ್ದುಲ್ ರಹ್ಮಾನ್ ಹೈದರಾಬಾದ್ ಅವರ ಮಗ ಅಬ್ದುಲ್ ಕರೀಮ್ ಶಿಕ್ಷಣಕ್ಕಾಗಿ ಖಾದಿಯಾನಿಗೆ ಬಂದಿದ್ದನು. ಖಾದಿಯಾನ್ ವಾಸದ ನಡುವೆ ಒಂದು ದಿನ ಅವನಿಗೆ ಹುಚ್ಚು ನಾಯಿ ಕಡಿಯಿತು. ಆ ಕಾಲದಲ್ಲಿ ಇದಕ್ಕೆ ಮರಣ ಖಚಿತವೆನ್ನುತ್ತಿದ್ದರು. ಆದರೆ ಹಝ್ರತ್ ಮಸೀಹ್ ಮೌಊದ್(ಅ) ಅಬ್ದುಲ್ ಕರೀಮ್‌ರನ್ನು ಕಸೋಲಿ (ಜಿಲ್ಲಾ ಸೋಲನ್, ಹಿಮಾಚಲ ರಾಜ್ಯ) ಚಿಕಿತ್ಸೆಗಾಗಿ ಕಳುಹಿಸಿದರು. ಅಲ್ಲಿ ಅವನ ಚಿಕಿತ್ಸೆಯಾಯಿತು. ಅವನು ಅಲ್ಲಿಂದ ಸ್ವಾಸ್ಥ್ಯ ಪಡೆದು ಖಾದಿಯಾನ್‌ಗೆ ಮರಳಿ ಬಂದನು. ಕೆಲವು ದಿನಗಳ ನಂತರ ಅವನ ಮೇಲೆ ಹುಚ್ಚುತನದ ಪ್ರಭಾವ ಕಂಡುಬಂತು. ಕೂಡಲೇ ಕಸೋಲಿ ವೈದ್ಯರಿಗೆ ಕೇಳಲಾಯಿತು. ವೈದ್ಯರು ಟೆಲಿಗ್ರಾಂ ಮೂಲಕ ಉತ್ತರ ನೀಡಿದರು. Sorry nothing can be done for Abdul Kareem" ವಿಷಾದದ ಸಂಗತಿಯಾಗಿದೆ. ಅಬ್ದುಲ್ ಕರೀಮ್‌ಗೋಸ್ಕರ ಏನು ಮಾಡಲು ಸಾಧ್ಯವಿಲ್ಲ.

ಹಝ್ರತ್ ಮಸೀಹ್ ಮೌಊದ್(ಅ) ರವರು ಇಂತಹ ಚಿಕಿತ್ಸೆ ಇಲ್ಲದಂತಹ ರೋಗಿಗೆ ದುಆ ಮಾಡಿದರು. ಮತ್ತು ಅವನು ಸ್ವಸ್ಥನಾದನು.

ವೈದ್ಯರು ಯಾವ ರೀತಿ ಚಿಕಿತ್ಸೆ ಸಾಧ್ಯವಿಲ್ಲ ಎಂದು ಕೈಚೆಲ್ಲಿದಂತಹ ಒಬ್ಬ ರೋಗಿ ದುಆ ಮಾತ್ರದಿಂದ ಸ್ವಸ್ಥನಾದನು. ಇದು "ಅಲ್ಲಾಹನಿದ್ದಾನೆ." ಎಂಬುದಕ್ಕೆ ಸಾಕ್ಷ್ಯವಲ್ಲವೇ. ಅವನು ಪ್ರಾರ್ಥನೆಗಳನ್ನು ಸ್ವೀಕರಿಸುವವನಾಗಿದ್ದಾನೆ.

ಯಾವ ಮನುಷ್ಯನು ಅಲ್ಲಾಹನ ಅಸ್ತಿತ್ವದ ಪುರಾವೆ ಬಯಸುತ್ತಾನೋ ಅವನು ಪರಿಶುದ್ಧ ಮನಸ್ಸಿನಿಂದ ಅಲ್ಲಾಹನ ಮುಂದೆ ಪ್ರಾರ್ಥಿಸಬೇಕಾಗಿದೆ. ಅಲ್ಲಾಹನು ಸ್ವಯಂ ನಿಮಗೆ ಜ್ಞಾನ ನೀಡುವನು. ಬುದ್ಧಿ ಅಷ್ಟೇ ಅಲ್ಲ. ಅವನ ಹೃದಯವು ತೃಪ್ತಿಯಾಗುವುದು.

**ಮುಂಜಾಗ್ರತೆಗಾಗಿ ಸಾಕ್ಷ್ಯಗಳು:**

ಕೆಲವೊಮ್ಮೆ ಲೋಕದಲ್ಲಿ ಕೆಲವು ಕಾರ್ಯಗಳನ್ನು ನಮ್ಮ ವ್ಯಾಪ್ತಿಗೆ ಅಥವಾ ನಮ್ಮ ಸಾಮರ್ಥ್ಯಕ್ಕೆ ಎಟಕುವುದಿಲ್ಲ ಎಂದಾದರೆ ಮುಂಜಾಗ್ರತೆ ನೆಲೆಯಲ್ಲಿ ಅದನ್ನು ಮಾಡಲು ಸಿದ್ಧರಾಗುತ್ತೇವೆ. ಉದಾಹರಣೆಗೆ ನಾವು ರಾತ್ರಿಯ ಸಮಯ ಯಾವುದೇ ಕಾಡಿನಲ್ಲಿ ಡೇರೆ ಹಾಕಿದರೆ, ಕಾಡಿನ ಈ ಭಾಗದಲ್ಲಿ ಯಾವ ಕ್ರೂರ ಪ್ರಾಣಿಯ ಅಥವಾ ಡಕಾಯಿತರ ಭಯವಿಲ್ಲದಿದ್ದರೂ ನಾವು ಮುಂಜಾಗ್ರತೆ ಕ್ರಮವಾಗಿ ಕಾವಲುಗಾರನ ವ್ಯವಸ್ಥೆ ಮಾಡಿಕೊಳ್ಳುತ್ತೇವೆ. ಯಾವ ಅಪಾಯವ ಇಲ್ಲದೆ ಇದ್ದರು. ಮುಂಜಾಗ್ರತೆಯಿಂದ ಅಪಾಯದ ಸಾಧ್ಯತೆ ಇದೆ ಎಂದು ಊಹಿಸಿ. ಹಾಗೇನಾದರೂ ಆದರೆ ಕ್ರಮ ಕೈಗೊಳ್ಳಲು ಜಾಗೃತರಾಗಿರುತ್ತೇವೆ. ಒಟ್ಟಿನಲ್ಲಿ ಮುಂಜಾಗ್ರತೆ ಕ್ರಮವಾಗಿ ಇಂತಹ ವ್ಯವಸ್ಥೆಗಳು ಲೋಕದಲ್ಲಿ ನಡೆಯುತ್ತವೆ. ಎಲ್ಲರಿಗೂ ಈ ಮತು ತಿಳಿದಿದೆ.

ಈಗ ಈ ತತ್ವದನ್ವಯ ನಾವು ದೇವಾಸ್ತಿತ್ವ ನಿಮಿತ್ತ ತತ್ವದ ಮೇಲೆ ಒಂದು ದೃಷ್ಟಿ ಹಾಯಿಸೋಣ, ಅಲ್ಲಾಹನ ಮೇಲೆ ವಿಶ್ವಾಸ ಹೊಂದುವುದು. ವಿಶ್ವಾಸ ಹೊಂದುವುದಕ್ಕಿಂತ ಉತ್ತಮವಾಗಿದೆ. ಅದು ನಮಗೆ ಅತ್ಯಂತ ಶಾಂತಿಪೂರ್ಣ ಮತ್ತು ಮುಂಜಾಗ್ರತೆ ವಿಧಾನವಾಗಿದೆ ಎಂದು ನಮ್ಮ ವಿವೇಕ ಒಪ್ಪುವಂತಹ ಮಾತಾಗಿದೆ. ಒಂದು ವೇಳೆ ದೇವನಲ್ಲಿ ಎಂದಾದರೂ, ವಿಶ್ವಾಸ ಹೊಂದುವುದು ಯಾವ ಕಾರಣಕ್ಕೂ ಹಾನಿ ಉಂಟು ಮಾಡುವುದಿಲ್ಲ. ಆದರೆ ದೇವನಿದ್ದಾನೆಂದಾದರೆ (ಮತ್ತು ಅವನು ಖಂಡಿತವಾಗಿ ಇದ್ದಾನೆ) ಆಗ ನಮ್ಮ ವಿಶ್ವಾಸ ಹೊಂದಿರುವುದು ನಿಸ್ಸಂಶಯವಾಗಿಯೂ ಲಾಭದಾಯಕ ಮತ್ತು ಪರಿಣಾಮಕಾರಿಯಾಗುವುದು.

ಹೇಳುತ್ತಾರೆ. ಒಬ್ಬರು ಹಝ್ರತ್ ಅಲಿ(ರ) ಅವರೊಡನೆ ಕೇಳಿದರು. ಅಲ್ಲಾಹನಿದ್ದಾನೆಂಬುದಕ್ಕೆ ಏನು ಪುರಾವೆ ಇದೆ? ಅವರು ಪ್ರಶ್ನಿಸುವವನಿಗೆ ಸರಳವಾಗಿ ಇದ್ದಾನೆಂದು ಇದೇ ಉತ್ತರ ಕೊಟ್ಟರು. ನೋಡಿರಿ. ಒಂದು ವೇಳೆ ದೇವನಿಲ್ಲ ಎಂದಾದರೆ ನಂಬುವವರು ನಂಬದಿರುವವರು ಎಲ್ಲರೂ ಸಮಾದಿಯಾಗಿದ್ದಾರೆ. ಯಾರಿಗೆ ಏನೂ ನಷ್ಟವಿಲ್ಲ ಆದರೆ ದೇವನಿದ್ದಾನೆಂದಾದರೆ ಚೆನ್ನಾಗಿ ತಿಳಿದುಕೊಳ್ಳಿರಿ. ನಿರಾಕರಿಸುವವರಿಗೆ ಉಳಿಗಾಲವಿಲ್ಲ.

ಹಝ್ರತ್ ಅಖದಸ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಕೇವಲ ಬೌದ್ಧಿಕ ಪುರಾವೆಗಳು ಧರ್ಮದ ಸತ್ಯತೆಗಾಗಿ ಪೂರ್ಣರೂಪದ ಸಾಕ್ಷ್ಯಕ್ಕಾಗಿ ಸಾಕಾಗುವುದಿಲ್ಲ. ಮತ್ತೆ ಯಾರೇ ಬರಲಿ ಮೊಹರು (seal) ಮಾಡಲು ಆಗುವುದಿಲ್ಲ ಎಂದೇನಿಲ್ಲ. ಅಂದರೆ ಮೋಸಗೊಳಿಸಬಹುದು ಎಂದರ್ಥ. ಇದು ಸಾಮಾನ್ಯ ಜನರು ಸಹ ತಿಳಿಯುವಂತಹ ವಿಷಯವಾಗಿದೆ. ಆದರೂ ಈ ತೀರ್ಪು ನೀಡುವವರು ಒಂದು ಗ್ರಂಥದಲ್ಲಿ ಬೌದ್ಧಿಕ ಮಾತುಗಳಿವೆ. ಅದು ವಾಸ್ತವವಾಗಿ ದೇವವಾಣಿ ಹೊಂದಿದೆಯೇ, ಇಲ್ಲವೇ ಅಥವಾ ಇನ್ನಾವುದೇ ಗ್ರಂಥದಿಂದ ಕದ್ದು ಬರೆಯಲಾಗಿದೆಯೇ ಎಂದು. ಅದು ಒಂದು ವೇಳೆ ಕದ್ದು ಬರೆದಿಲ್ಲ ಎಂದೇ ಭಾವಿಸಿಕೊಳ್ಳಿ ಆದರೂ ದೇವಾಸ್ತಿತ್ವಕ್ಕೆ ಪುರಾವೆ ಎಂದು ಹೇಳಲು ಹೇಗೆ ಸಾಧ್ಯ ಮತ್ತು ಅದರಿಂದ ಒಬ್ಬ ವಿದ್ಯಾರ್ಥಿಯು ಹೇಗೆ ತೃಪ್ತನಾಗಲು ಸಾಧ್ಯ.

ಆ ಬೌದ್ಧಿಕ ಮಾತುಗಳು ನಿಶ್ಚಯವಾಗಿಯೂ ಅಲ್ಲಾಹನ ವಚನಗಳಾಗಿವೆ ಎನ್ನಲು ತೃಪ್ತಿ ದೊರೆಯುವುದಿಲ್ಲ. ಅದು ಎಲ್ಲ ತಪ್ಪುಗಳಿಂದ ಮುಕ್ತವಾಗಿದೆ ಎಂದು ಹೇಳಲು ಆಗುವುದಿಲ್ಲ. ಆದುದರಿಂದ ಧರ್ಮವು ಕೇವಲ ಕೆಲವು ಬೌದ್ಧಿಕ ಅಥವಾ ತತ್ವಗಳ ಆಧಾರವಾಗಿ ತನ್ನ ಸತ್ಯತೆಯ ಕಾರಣಗಳನ್ನು ಹೇಳುವುದಾದರೆ, ದೈವಿಕ ದೃಷ್ಟಾಂತಗಳನ್ನು ಮತ್ತು ಪವಾಡಗಳನ್ನು ತೋರಿಸಲು ಅಶಕ್ತನಾದರೆ ಇಂತಹ ಧರ್ಮದ ಅನುಯಾಯಿ ಮೋಸ ಹೊಂದಿದವನು ಅಥವಾ ಮೋಸಗಾರನು ಮತ್ತು ಅಂಧಕಾರದಲ್ಲಿ ಸಾಯುವನು.

ಒಟ್ಟಿನಲ್ಲಿ ಕೇವಲ ಬೌದ್ಧಿಕ ನೆಲೆಯಲ್ಲಿ ದೇವಾಸ್ತಿತ್ವ ನಿಶ್ಚಯವಾಗಿ ಸಾಬೀತುಪಡಿಸಲು ಆಗುವುದಿಲ್ಲ. ಎಲ್ಲಿಯವರೆಗೆ ಒಂದು ಧರ್ಮ ದೇವಾಸ್ತಿತ್ವವನ್ನು ನಿಶ್ಚಿತ ರೂಪದಲ್ಲಿ ಸಾದರಪಡಿಸಲು ಶಕ್ತನಾಗುವುದಿಲ್ಲವೋ ಅಲ್ಲಿಯವರಗೆ ಆ ಧರ್ಮ ನಂಬಲು ಸಾಧ್ಯವಾಗಿರುವುದಿಲ್ಲ.

ಇಂತಹ ಧರ್ಮವನ್ನು ನಂಬುವವರು ದೌರ್ಭಾಗ್ಯವಂತರು, ಇಂತಹ ಪ್ರತಿಯೊಂದು ಧರ್ಮವು ತನ್ನ ಹಣೆಯ ಮೇಲೆ ಶಾಪದ ಕಲೆ ಹೊಂದಿರುವನು. ಅದು ಮನುಷ್ಯನಿಗೆ ದೇವಜ್ಞಾನದವರೆಗೆ ತಲುಪಿಸಲು ಸಾಧ್ಯವಿಲ್ಲ. ಅದರಿಂದ ದೇವನನ್ನು ಕಂಡು ತನ್ನ ಆತ್ಮ ಅಂಧಕಾರಗಳನ್ನು ಆಧ್ಯಾತ್ಮಿಕತೆಯಲ್ಲಿ ಪರಿವರ್ತಿಸಲು ಸಾಧ್ಯವಿಲ್ಲ. ಹೊಸ ವಿಶ್ವಾಸ ಚೈತನ್ಯ ಪಡೆಯಲು ಸಾಧ್ಯವಿಲ್ಲ. ಕೇವಲ ಬಾಯಿ ಉಪಚಾರದ ಮಾತುಗಳಿಂದ ಒಂದು ಪರಿಶುದ್ಧ ಜೀವನ ಪರಿಶುದ್ಧ ಜೀವನ ಪಡೆಯಲು ಸಾಧ್ಯವಿಲ್ಲ. (ಬರಾಹೀನೇ ಅಹ್ಮದಿಯಾ, ಸಂಪುಟ-5, ರೂಹಾನಿ ಖಝಾಈನ್ ಸಂಪುಟ-21, ಪುಟ-60)

**ಪುಟ ಸಂಖ್ಯೆ 01ರ ಉಳಿದ ಭಾಗ**

ಈ ಕಾರ್ಯವು ಅವರ ಅಚಲ ವಿಶ್ವಾಸದ ಮೇಲೆ ಬಹು ದೊಡ್ಡ ಪ್ರಕಾಶವನ್ನು ಬೀರುವಂತಿದೆ. (ನಬಿಯೋಂ ಕಾ ಸರ್ದಾರ್, ಹಝ್ರತ್ ಮುಸ್ಲಿಹ್ ಮೌಊದ್(ರ) ಪುಟ 46)

ಇನ್ನೊಂದು ಘಟನೆ ಸಹ ಏಕದೇವನ ಪ್ರಚಾರಕ್ಕಾಗಿ ತೋರಿದ ತ್ಯಾಗದ ಮೇಲೆ ಬೆಳಕನ್ನು ಚೆಲ್ಲುತ್ತದೆ. ಸಯ್ಯದನಾ ಹಜ್‌ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ.

ಈ ಜನರು ಪಾಪಿಗಳಾಗಿದ್ದಾರೆ, ಬಹುದೇವಾರಾಧಕರಾಗಿದ್ದಾರೆ. ಶಕ್ರುಲ್ ಬರಿಯಾ (ಅತಿ ನಿಕೃಷ್ಟ ಜೀವಿಗಳ) ಮೂಢರಾಗಿರುವರು. ಶೈತಾನನ ಸಂತತಿಯಾಗಿರುವರು ಮತ್ತು ಅವರ ಆರಾಧ್ಯರು ವಖೂದುನಾರ್ ಹಾಗೂ ನರಕವಾಸಿಗಳಾಗಿದ್ದಾರೆ ಎಂಬ ವಚನಗಳು ಅವತರಿಸಿದಾಗ ಅಬೂ ತಾಲಿಬ್ ಹಝ್ರತ್ ರಸೂಲುಲ್ಲಾಹ್(ಸ) ರವರನ್ನು ಕರೆಸಿ ಹೇಳಿದರು. ಓ ನನ್ನ ಸಹೋದರ ಪುತ್ರನೇ!! ಈಗ ನಿನ್ನ ಖಂಡನಾ ಪದ್ಧತಿಯಿಂದ ಸಮುದಾಯವು ತೀರ ಪ್ರಚೋದಿತಗೊಂಡಿದೆ ಮತ್ತು ನಿನ್ನನ್ನು ಹತ್ಯೆ ಮಾಡಲು ಹೇಸುವುದಿಲ್ಲ. ನಿನ್ನ ಜೊತೆಯಲ್ಲಿ ನನ್ನನ್ನು ಸಹ ನಾಶ ಮಾಡಬಯಸುತ್ತಾರೆ. ನೀನು ಅವರ ವಿವೇಕವಂತರನ್ನು ಮೂಢರು ಎಂದು ಕರೆದೆ. ಅವರ ಪೂರ್ವಜರನ್ನು ಶಕ್ರುಲ್ ಬರಿಯ (ಅತಿ ನಿಕೃಷ್ಟ ಜೀವಿಗಳು) ಎಂದು ಕರೆದೆ ಮತ್ತು ಅವರ ಗೌರವಾನ್ವಿತ ಆರಾಧ್ಯರನ್ನು ನರಕವಾಸಿಗಳು, ನರಕದ ವಸ್ತುಗಳು ಎಂಬ ಹೆಸರಿನಿಂದ ಕರೆದೆ. ಸಾಮಾನ್ಯವಾಗಿ ಅವರೆಲ್ಲರನ್ನು ಪಾಪಿಗಳು ಮತ್ತು ಶೈತಾನನ ಸಂತತಿ ಹಾಗೂ ದುಷ್ಟರೆಂದು ಕರೆದಿರುವೆ. ನಾನು ನಿನ್ನ ಒಳಿತಿನ ದೃಷ್ಟಿಯಿಂದ ಹೇಳುತಿದ್ದೇನೆ. ತನ್ನ ನಾಲಿಗೆ ಹತೋಟಿಯಲ್ಲಿಡು ಮತ್ತು ಖಂಡನೆಯಿಂದ ದೂರವಿರು. ಇಲ್ಲವಾದರೆ ಅವರನ್ನು ಎದುರಿಸುವ ಶಕ್ತಿ ನನ್ನಲ್ಲಿಲ್ಲ. ಹಝ್ರತ್ ರಸೂಲುಲ್ಲಾಹ್(ಸ) ಉತ್ತರ ನೀಡಿದರು. ಓ ನನ್ನ ಕಾಕ" ಇದು ಖಂಡನೆ ಅಲ್ಲ. ಬದಲು ವಾಸ್ತವವನ್ನು ತಿಳಿಸುತ್ತಿದ್ದೇನೆ ಮತ್ತು ಸರಿಯಾದ ಸಮಯದಲ್ಲಿ ಸರಿಯಾದುದನ್ನೇ ಹೇಳುತ್ತಿದ್ದೇನೆ ಮತ್ತು ನಾನು ಅದೇ ಕಾರ್ಯಕ್ಕಾಗಿ ಕಳುಹಿಸಲ್ಪಟ್ಟಿರುವೆನು. ಅದರಿಂದ ನಾನು ಕೊಲ್ಲಲ್ಪಟ್ಟರೂ ಸಂತೋಷದಿಂದ ಆ ಮರಣವನ್ನು ನಾನು ಸ್ವೀಕರಿಸುವೆನು.

(ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಈ ವಿಷಯವು ಅಂದರೆ ಅಬೂತಾಲಿಬರ ಘಟನೆ ಗ್ರಂಥಗಳಲ್ಲಿ ಬರೆಯಲಾಗಿದೆ. ಆದರೆ ಇವೆಲ್ಲ ಬರಹ

ದೇವವಾಣಿಯ ಮೂಲಕ ಅಲ್ಲಾಹನು ಈ ವಿನೀತರ ಹೃದಯದಲ್ಲಿ ಅವತರಿಸಿರುವನು. ಇದರ ಲವಲೇಶವೂ ನನ್ನ ಕಡೆಯಿಂದ ಇಲ್ಲ).

ನನ್ನ ಜೀವನ ಇದಕ್ಕಾಗಿಯೇ ಮೀಸಲಾಗಿದೆ. ನಾನು ಜೀವಭಯದಿಂದ ಸತ್ಯ ಘೋಷಣೆಯಿಂದ ನಿಲ್ಲಲಾರೆನು. ಮತ್ತು ಓ ನನ್ನ ಚಿಕ್ಕಪ್ಪನವರೆ, ನಿಮಗೆ ನಿಮ್ಮ ದುರ್ಬಲತೆ ಅಥವಾ ಕಷ್ಟಗಳ ಭಾವನೆ ಹೊಂದಿದವರಾದರೆ ನೀವು ನನ್ನನ್ನು ತಮ್ಮ ಆಶ್ರಯ ನೀಡುವುದರಿಂದ ಹಿಂದೆ ಸರಿಯಿರಿ. ನಾನು ಅಲ್ಲಾಹನ ಮೇಲೆ ಭರವಸೆ ಹೊಂದಿ ಹೇಳುತ್ತಿದ್ದೇನೆ. ನನಗೆ ನಿಮ್ಮ ಅವಶ್ಯಕತೆ ಇದೆ. ನಾವು ಅಲ್ಲಾಹನ ಆಜ್ಞೆಗಳನ್ನು ತಲುಪಿಸುವ ಕಾರ್ಯದಿಂದ ವಿಮುಖನಾಗಲಾರೆನು. ನನಗೆ ನನ್ನ ಅಲ್ಲಾಹನ ಆಜ್ಞೆಗಳು ನನ್ನ ಜೀವಕ್ಕಿಂತ ಅತಿ ಹೆಚ್ಚು ಪ್ರಿಯವಾಗಿವೆ. ಅಲ್ಲಾಹನ ಬಯಕೆ ಇದ್ದರೆ ನಾನು ಈ ಮಾರ್ಗದಲ್ಲಿಯೇ ಮರಣ ಹೊಂದಿದರೂ ಮತ್ತೆ ಬದುಕಿಯೂ ಇದೇ ಮಾರ್ಗದಲ್ಲಿ ಮತ್ತೆ ಮತ್ತೆ ಸಾವನ್ನು ಬಯಸುವೆನು. ಇದು ನನಗೆ ಭಯದ ವಿಷಯವಲ್ಲ. ಬದಲು ನನಗೆ ಸಂತೋಷದ ವಿಷಯವಾಗಿದೆ. ನಾನು ಅವನ ಮಾರ್ಗದಲ್ಲಿ ದುಃಖವನ್ನು ಎದುರಿಸ ಬಯಸುತ್ತೇನೆ. ಹಝ್ರತ್ ರಸೂಲುಲ್ಲಾಹ್(ಸ) ಈ ಭಾಷಣ ಮುಗಿಸಿದ ನಂತರ ಸತ್ಯದ ಜ್ಯೋತಿಯನ್ನು ಕಂಡು ಅಬೂತಾಲಿಬ್ ಅವರ ಕಣ್ಣುಗಳಿಂದ ನೀರು ಸುರಿಯಿತು ಮತ್ತು ಹೇಳಿದರು. ನಾನು ನಿನ್ನ ಈ ಉನ್ನತ ದೆಸೆಯಿಂದ ಅಜ್ಞಾನದಲ್ಲಿದ್ದೆ. ನಿನ್ನ ರೂಪವೇ ಬೇರೆಯಾಗಿದೆ. ನಿನ್ನ ವೈಭವವೇ ಬೇರೆಯಾಗಿದೆ. ಹೋಗು ನೀನು ನಿನ್ನ ಕೆಲಸ ಮಾಡುತ್ತಿರು. ನಾನು ಎಲ್ಲಿಯವರೆಗೆ ಜೀವಿತನಾಗಿರುವೆನು. ನನ್ನ ಶಕ್ತ್ಯಾನುಸಾರ ನಿನಗೆ ಸಹಾಯ ನೀಡುವೆನು" (ಇಝಾಲಾ ಅವಹಾಮ್ . .)

ಹಝ್ರತ್ ರಸೂಲುಲ್ಲಾಹ್(ಸ) ತನ್ನ ಸಮುದಾಯಕ್ಕೆ ನೀಡಿದ ಏಕದೇವನ ಪಾಠವು ಅವರ ಜನ್ಮದಿಂದ ಕೊನೆಯವರೆಗೆ ಜೀವನದ ಯಾವ ಹಂತವನ್ನು ಸಹ ಅಲ್ಲಾಹನ ಸ್ಮರಣೆಯಿಂದ ಮುಕ್ತನಾಗಿ ಬಿಡಲಿಲ್ಲ. ಅವರ ಈ ನುಡಿ ಅಲ್ಲಾಹನ ಪ್ರೀತಿಯಿಂದ ಎಷ್ಟೊಂದು ತುಂಬಿ ತುಳುಕುವಂತಿದೆ. ಅವರ ಅಂದಾಜು ಸಹ ಹಾಕಲು ನಮ್ಮಿಂದ ಸಾಧ್ಯವಾಗಲಿಕ್ಕಿಲ್ಲ. ಅವರು ಹೇಳುತ್ತಾರೆ. "ನಮಾಝ್ ನನ್ನ ಕಣ್ಣಿನ ಶಮನವಾಗಿದೆ. ಇಡೀ ರಾತ್ರಿಯೆಲ್ಲ ನನ್ನ ಪರಿಪಾಲಕನ ಸ್ಮರಣೆಯಲ್ಲಿ ಪ್ರೀತಿ ಸಲ್ಲಾಪದಲ್ಲಿ ಕಳೆಯುತ್ತಿದ್ದರು ಮತ್ತು ಅವರ ಈ ಆಧ್ಯಾಪನೆ ಅಂತೂ ತುಂಬ ಅದ್ಭುತಕರವಾಗಿದೆ. ಒಂದು ಸಂದರ್ಭದಲ್ಲಿ ಅವರು ಆಯಿಶಾರೊಡನೆ ಹೇಳುತ್ತಾರೆ. "ನನ್ನ ಕಣ್ಣುಗಳು ಮಲಗಿದ್ದರೂ ನನ್ನ ಹೃದಯವು ಮಲಗಿರುವುದಿಲ್ಲ." ಅವರು ತಮ್ಮ ಜೀವ. ಜೀವನದಾತನಿಗೆ ಅರ್ಪಿಸುವ ಸಮಯದಲ್ಲಿ ಕೊನೆಯ ಉಪದೇಶವಾಗಿ ಹೇಳುತ್ತಾರೆ. ಒಬ್ಬನೇ ದೇವನನ್ನು ಆರಾಧಿಸಬೇಕು. ಯಹೂದ್ಯರ ರೀತಿಯಲ್ಲಿ ಬಹುದೇವಾರಾಧನೆಯಲ್ಲಿ ತೊಡಗಬಾರದು. ನನ್ನ ಸಮಾಧಿಯನ್ನು ಪೂಜಾಸ್ಥಳವನ್ನಾಗಿ ಮಾಡಬಾರದು.

ಸಯ್ಯದ್‌ನಾ ಹಝ್ರತ್ ಖಲೀಫತುಲ್ ಮಸೀಹ್ ದ್ವಿತೀಯರು(ರ) ಹೇಳುತ್ತಾರೆ. "ಅಲ್ಲಾಹನ ಪ್ರೀತಿಯ ಮಟ್ಟ ಯಾವ ರೀತಿಯದ್ದಾಗಿತ್ತೆಂದರೆ, ಕೆಲ ಸಮಯಕ್ಕಾಗಿ ಮೋಡಗಳು ಬಂದರೆ ಅವರು ತನ್ನ ನಾಲಿಗೆಯ ಮೇಲೆ ವರ್ಷದ ಹನಿಗಳನ್ನು ಪಡೆದು ಹೇಳುತ್ತಿದ್ದರು. "ಇದು ನನ್ನ ಅಲ್ಲಾಹನ ತಾಜಾ ಅನುಗ್ರಹವಾಗಿದೆ."

ಸಭೆಯಲ್ಲಿ ಕುಳಿತು ಕೊಂಡಿದ್ದರೆ ಅಸ್ತಗ್ಫಾರ್ ಮಾಡುತ್ತಿದ್ದರು. (ಅಲ್ಲಾಹನಿಂದ ಕ್ಷಮಾಪಣೆ ಬಯಸುತ್ತಿದ್ದರು) ಅಂತೆಯೇ ಯಾವಾಗಲೂ ಸಹ ಅಸ್ತಗ್ಫಾರ್‌ನಲ್ಲಿ ತೊಡಗಿಕೊಂಡಿರುತ್ತಿದ್ದರು. ಏಕೆಂದರೆ ಅವರ ಸಮುದಾಯ ಮತ್ತು ಅವರ ಸಂಬಂಧಿತರೆಲ್ಲರೂ ಅಲ್ಲಾಹನ ಪ್ರಕೋಪದಿಂದ ಉಳಿದುಕೊಳ್ಳಬೇಕೆಂದು ಮತ್ತು ಅಲ್ಲಾಹನ ಕ್ಷಮೆ ಪಡೆಯಬೇಕೆಂದು, ಎಲ್ಲ ಸಮಯಕ್ಕೂ ಅಲ್ಲಾಹನ ಮುಂದೆ ಹಾಜರಾಗುವ ಭಾವ ಹೊಂದಿರುತ್ತಿದ್ದರು.

ಅಲ್ಲಾಹನ ಸಾನಿಧ್ಯವು ಎಷ್ಟೊಂದು ಬಯಸುತ್ತಿತ್ತೆಂದರೆ ಯಾವಾಗಲೂ ಅವರು ಪ್ರಾರ್ಥಿಸುತ್ತಿದ್ದರು. ಅಲ್ಲಾಹುಮ್ಮಜ್‌ಅಲ್

ಅಂದರೆ ಓ, ನನ್ನ ರಬ್ (ಪರಿಪಾಲಕನೇ) ನನ್ನ ಹೃದಯದಲ್ಲೂ ನಿನ್ನ ಪ್ರಕಾಶ ತುಂಬು, ಮತ್ತು ನನ್ನ ಬಲಭಾಗದಲ್ಲೂ ನಿನ್ನ ಪ್ರಕಾಶ ಇರಲಿ, ನನ್ನ ಎಡಭಾಗದಲ್ಲೂ ಮತ್ತು ಹೊರಗಿನಿಂದಲೂ ಒಟ್ಟಾರೆ ಎಲ್ಲ ರೀತಿಯಿಂದ ಅಲ್ಲಾಹನ ಪ್ರೀತಿಯನ್ನು ಯಾಚಿಸಿದರು ಅಲ್ಲಾಹನ ಆರಾಧನೆಯಲ್ಲಿ ಅವರು ಸರಳತೆ ಎಷ್ಟೊಂದು ಇಷ್ಟಪಡುತ್ತಿದ್ದರೆಂದರೆ, ಮಸೀದಿಯಲ್ಲಿ ಅಲ್ಲಿ ಸರಿಯಾದ ರೀತಿಯಲ್ಲಿ ನೆಲಹಾಸಿಗೆ ಇರಲಿಲ್ಲ. ಅದರ ಮೇಲೆ ಯಾವ ವಸ್ತ್ರ ಸಹ ಇರಲಿಲ್ಲ. ಅವರು ನಮಾಝ್ ಮಡುತ್ತಿದ್ದರು ಮತ್ತು ಮಾಡಿಸುತ್ತಿದ್ದರು. ಹಲವು ಸಲ ಹೀಗೂ ಆಗುತಿತ್ತು. ಮಳೆಯ ಕಾರಣದಿಂದ ಮಾಳಿಗೆ ಸೋರಿದರೆ ರಸೂಲುಲ್ಲಾಹ್(ಸ) ರವರ ದೇಹ ಕೆಸರು ಮತ್ತು ನೀರಿನಿಂದ ತೇವಗೊಳ್ಳುತ್ತಿದ್ದವು. ಆದರೆ ಅವರು ಸಂಕೋಚಿಸದೇ ಆರಾಧನೆಯಲ್ಲಿ ಮಗ್ನರಾಗುತ್ತಿದ್ದರು. ಅವರ ಹೃದಯದಲ್ಲಿ ಈ ಭಾವನೆಯನ್ನು ಸಹ ಬರುತ್ತಿರಲಿಲ್ಲ. ತನ್ನ ದೇಹ ಮತ್ತು ಬಟ್ಟೆಗಳ ಸುರಕ್ಷತೆಗೋಸ್ಕರ ನಮಾಝನ್ನು ಮುಂದೂಡಬಹುದು ಅಥವಾ ಬೇರೆ ಸ್ಥಳದಲ್ಲಿ ಹೋಗಿ ನಮಾಝ್ ನಿರ್ವಹಿಸಬೇಕು ಎಂದು.

ತಮ್ಮ ಸಹಾಬರ ಆರಾಧನೆಗಳತ್ತವೂ ಗಮನಕೊಡುತ್ತಿದ್ದರು. ಒಂದು ಸಂದರ್ಭದಲ್ಲಿ ಹಝ್ರತ್ ಅಬ್ದುಲ್ಲ ಬಿನ್ ಉಮರ್(ರ) ವಿನ ಬಗ್ಗೆ ಅವರು ಅತ್ಯಂತ ಸಜ್ಜನರು ಮತ್ತು ಪರಿಶುದ್ಧ ಮನುಷ್ಯರಾಗಿದ್ದರು, ಅವರು ಹೇಳಿದರು. ಅಬ್ದುಲ್ ಬಿನ್ ಉಮರ್(ರ) ತಹಜ್ಜುದ್ ನಮಾಝ್ ಸಹ ಕ್ರಮಬದ್ಧವಾಗಿ ಮಾತಾಡುವವರಾದರೆ ಎಷ್ಟು ಒಳ್ಳೆಯದಿತ್ತು. ಈ ಮಾತಿನ ಸುದ್ದಿ ಹಝ್ರತ್ ಅಬ್ದುಲ್ಲ ಬಿನ್ ಉಮರ್(ರ) ರವರಿಗೆ ತಲುಪಿತು. ಅವರು ಆ ದಿನದಿಂದ ಪ್ರಮಾಣಿಕವಾಗಿ ತಹಜ್ಜುದ್ ನಮಾಝ್ ನಿರ್ವಹಿಸಲು ಪ್ರಾರಂಭಿಸಿದರು. (ಅದೇ ಪುಟ 274)

ಅಲ್ಲಾಹನ ಮೇಲೆ ಭರವಸೆಯ ಸ್ಥಿತಿ ಹೇಗಿತ್ತೆಂದರೆ, ಒಬ್ಬ ವ್ಯಕ್ತಿ ಅವರನ್ನು ಒಬ್ಬಂಟಿಯಾಗಿ ಕಂಡು ಅವರ ಮೇಲೆ ಖಡ್ಗ ಎತ್ತಿ ಹೇಳಿದ. ಈಗ ನಿಮಗೆ ನನ್ನಿಂದ ರಕ್ಷಿಸುವವರಾರು? ಆ ಸಮಯ ಅವರು ನಿರಾಯುಧರಾಗಿದ್ದರು. ಅವರು ಮಲಗಿದ್ದರಿಂದ ಏನೂ ಮಾಡಲು ಸಾಧ್ಯವಿರಲಿಲ್ಲ. ಅವರು ಅತ್ಯಂತ ಸಮಾಧನ ಹಾಗೂ ಶಾಂತಿಯಿಂದ ಉತ್ತರ ನೀಡಿದರು. "ಅಲ್ಲಾಹ್," ಈ ಪದವು ಎಷ್ಟೊಂದು ದೃಢತೆಯಿಂದ ಭರವಸೆಯಿಂದ ಅವರ ಬಾಯಿಂದ ಹೊರಡಿತ್ತೆಂದರೆ ಆ ಅವಿಶ್ವಾಸಿಗನ ಹೃದಯ ಸಹ ಅವರ ವಿಶ್ವಾಸದ ಉನ್ನತೆ ಹಾಗೂ ದೃಢತೆಯನ್ನು ನಿರಾಕರಿಸಲಾಗಲಿಲ್ಲ ಮತ್ತು ಅವನ ಕೈಯಿಂದ ಆ ಖಡ್ಗ ಬಿದ್ದು ಹೋಯಿತು. ಅವರ ಹತ್ಯೆ ಬಯಸಿದವನು ಈಗ ಅವರ ಮುಂದೆ ಅಪರಾಧಿಯಂತೆ ನಿಂತುಕೊಂಡನು. (ಅದೆ ಪುಟ 270)

**ಲೋಕದ ಮಹೋನ್ನತ ಸುಧಾರಕ**

ವಾಸ್ತವವೇನೆಂದರೆ ಲೋಕದ ಮಹೋನ್ನತ ಸುಧಾರಕನಾದವನೇ ಎಲ್ಲ ನಬಿಯವರಲ್ಲಿ ಶ್ರೇಷ್ಠ ಎನಿಸಿಕೊಳ್ಳಲು ಅರ್ಹನಾಗಿರುತ್ತಾನೆ. ಅಂದರೆ ಅವನಿಂದಾಗಿ ಲೋಕದ ಎಲ್ಲ ಗೊಂದಲಗಳು ದೂರವಾಗಿ ಸುಧಾರಣೆ ಗೊಂಡವು. ಅವನು ಕಳೆದುಹೋದ ಏಕದೇವತ್ವವನ್ನು ಮತ್ತೊಮ್ಮೆ ಭೂಮಿಯ ಮೇಲೆ ಸ್ಥಾಪಿಸಿದರು. ಅದು ಎಲ್ಲ ಮಿಥ್ಯ ಧರ್ಮಗಳನ್ನು ತನ್ನ ಸಾಕ್ಷ್ಯಗಳೊಂದಿಗೆ ಸೋಲಿಸಿ ವಿಜಯ ಸಾಧಿಸಿದರು. ಪ್ರತಿಯೊಬ್ಬ ಮಾರ್ಗಭ್ರಷ್ಟನ ಸಂಶಯಗಳನ್ನು ನಿವಾರಿಸಿದರು. ಅವರು ಪ್ರತಿಯೋರ್ವ ಅವಿಶ್ವಾಸಿಯ ಸಂಶಯಗಳನ್ನು ದೂರ ಮಾಡಿದರು. ಮತ್ತು ನಿಜವಾದ ಮುಕ್ತಿಯ ಸಾಧನೆಗಳನ್ನು ಒದಗಿಸಿಕೊಟ್ಟರು. ಅದು ಯಾವನೇ ನಿರಪರಾಧಿಯನ್ನು ಗಲ್ಲಿಗೇರಿಸುವ ಮೂಲಕ ಅಥವಾ ದೇವನನ್ನು ಅವನ ಆದಿ ಮತ್ತು ಅಂತ್ಯ ಸ್ಥಳದಿಂದ ಬದಿಗೆ ಸರಿಸಿ ಓರ್ವ ಮಹಿಳೆಯ ಉದರದಲ್ಲಿ ಹಾಕುವ ಅವಶ್ಯಕತೆ ಇಲ್ಲ. ಸತ್ಯವಾದ ಶಿಕ್ಷಣದಿಂದ ಪುನಶ್ಚೇತನಗೊಳಿಸಿದರು. (ಬರಾಹೀನ್ ಅಹ್ಮದಿಯಾ, ರೂಹಾನಿ ಖಝಾಯಿನ್, ಸಂಪುಟ–1, ಪುಟ–97, ಅಡಿಟಿಪ್ಪಣಿ)

ಉನ್ನತ ದರ್ಜೆಯ ಏಕ ರೀತಿಯ ಪರಿಶುದ್ಧ ಅಂತರಂಗ ಹೊಂದಿದ ನಬಿ" ಹಝ್ರತ್ ರಸೂಲುಲ್ಲಾಹ್(ಸ) ಉನ್ನತ ದರ್ಜೆಯ ಏಕ ರೀತಿಯ ಪರಿಶುದ್ಧ ಅಂತರಂಗ ಹೊಂದಿದ ಮತ್ತು ಅಲ್ಲಾಹನಿಗಾಗಿ ತ್ಯಾಗ ಮಾಡುವ ಹಾಗೂ ಸೃಷ್ಟಿಯ ಭರವಸೆ ಹೊಂದಿದವರಾಗಿದ್ದರು. ಅವರು ಅಲ್ಲಾಹನ ಸಂಪ್ರೀತಿ ಮತ್ತು ಸಂತುಷ್ಟಿಯಲ್ಲಿ ಮಗ್ನನಾಗಿ ತನ್ನನ್ನು ಅರ್ಪಣೆಗೈದು ಏಕದೇವತ್ವದ ಪ್ರಚಾರದಿಂದ ಎದುರಾಗುವ ಬಹುದೇವರಾಧನೆಗಳ ಉಪದ್ರವಗಳನ್ನು ಲೆಕ್ಕಿಸಲಿಲ್ಲ. (ಬರಾಹಿನೆ ಅಹ್ಮದಿಯಾ, ರೂಹಾನಿ ಖಝಾಯಿನ್, ಸಂಪುಟ–1, ಪುಟ 111)

ಹಝ್ರತ್ ರಸೂಲುಲ್ಲಾಹ್(ಸ) ರವರ ಮಹೋನ್ನತ ಸ್ಥಾನ ನಮ್ಮ ನಬಿ(ಸ) ಸತ್ಯ ಘೋಷಣೆಯಲ್ಲಿ ಓರ್ವ ಮಹೋನ್ನತ ಸುಧಾರಕರಾಗಿದ್ದರು. ಅವರು ಕಳೆದುಹೋದ ಸತ್ಯವನ್ನು ಮರಳಿ ಲೋಕಕ್ಕೆ ತಂದರು. ಈ ಹೆಮ್ಮೆಯಲ್ಲಿ ನಮ್ಮ ನಬಿ(ಸ) ರವರನ್ನು ಹೊರತ್ತು ಯಾರು ಸಹಭಾಗಿಗಳಲ್ಲ. ಅವರು ಇಡೀ ಲೋಕವನ್ನು ಒಂದು ರೀತಿಯ ಅಂಧಕಾರದಲ್ಲಿ ಕಂಡರು ಮತ್ತು ಅವರ ಆಗಮನದಿಂದ ಆ ಅಂಧಕಾರವು ಪ್ರಕಾಶದಲ್ಲಿ ಪರಿವರ್ತಿತಗೊಂಡಿತು. ಅವರು ಆಗಮಿಸಿದ ಸಮುದಾಯವನ್ನು ಪೂರ್ಣ ಪ್ರಮಾಣದಲ್ಲಿ ಬಹುದೇವಾರಾದನೆಯ ವಸ್ತ್ರಗಳನ್ನು ಕಳಚಿ ಹಾಕುವವರೆಗೂ ವಿರಮಿಸಲಿಲ್ಲ. (ಲೆಕ್ಚರ್ ಸಿಯಾಲ್ಕೋಟ್, ರೂಹಾನಿ ಖಝಾಯಿನ್ ಸಂ. 20 ಪುಟ 206)

ಅಲ್ಲಾಹನು ನಮ್ಮ ಹೃದಯಗಳಲ್ಲಿ ಹಝ್ರತ್ ರಸೂಲುಲ್ಲಾಹ್(ಸ) ಅವರ ಪ್ರೀತಿ ಉಂಟು ಮಾಡುವಂತಾಗಲಿ ಮತ್ತು ಅದರ ಫಲವಾಗಿ ಅವರ ಹೆಜ್ಜೆಗಳನ್ನು ಅನುಸರಿಸುತ್ತ ಪರಿಪೂರ್ಣ ರೀತಿಯಲ್ಲಿ ಅವರನ್ನು ಅನುಸರಿಸುವ ಭಾಗ್ಯ ದಯಪಾಲಿಸಲು. ಆಮೀನ್ (**ಮನ್ಸೂರ್ ಅಹ್ಮದ್ ಮಸ್ರೂರ್**).

*******************

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.



ಸೌಥ್ ಹಾಲ್‌ನ ದಾರುಸ್ಸಲಾಮ್ ಮಸೀದಿಯ ಒಂದು ಸುಂದರ ನೋಟ



ದಿನಾಂಕ 23-02-2020ರಂದು ಹುಝೂರ್[ಅತಬಿಅ]ರವರು
ದಾರುಸ್ಸಲಾಮ್ ಮಸೀದಿಯನ್ನು ಉದ್ಘಾಟಿಸಿದರು





ದಾರುಸ್ಸಲಾಮ್ ಮಸೀದಿಯ ಉದ್ಘಾಟನಾ ಸಮಾರಂಭದಲ್ಲಿ ಜಾಗತಿಕ ಅಹ್ಮದಿಯ ಮುಸ್ಲಿಮ್ ಜಮಾಅತ್ತಿನ ಪಂಚಮ ಖಲೀಫರ ಸಂಬೋಧನೆ






'ದಾರುಸ್ಸಲಾಮ್' ಮಸೀದಿಯ ಉದ್ಘಾಟನಾ ಸಮಾರಂಭದಲ್ಲಿ ಗಣ್ಯವ್ಯಕ್ತಿಗಳ ಹುಝೂರ್[ಅತಬಿಅ]ರವರೊಂದಿಗಿನ ಭೇಟಿ






22-12-2019ರಂದು ಬ್ರಿಟನ್‌ನ ಮಜ್‌ಲಿಸ್ ಖುದ್ದಾಮುಲ್ ಅಹ್ಮದಿಯದ ಖಾಯಿದ್‌ಗಳನ್ನು ಉದ್ದೇಶಿಸಿ ಹುಝೂರ್[ಅತಬಿಅ]ರವರ ಸಂಬೋಧನೆ.

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

**EDITOR**
TARIQ AHMED IDRIS.
Mobile : +91 8050330779
Website : akhbarbadrqadian.in
: www.alislam.org/badr
E-mail :
kannadabadar@gmail.com

ಕನ್ನಡ ಬದರ್ ವಾರ ಪತ್ರಿಕೆ Weekly **BADAR** Qadian
Qadian - 143516 Distt. Gurdaspur (Pb.) INDIA
Vol No.1, Thursday, 24,31 December 2020, Issue No. 50-51

**MANAGER**
SHAIKH MUJAHID AHMAD.
Mobile : +91 99153 79255
e-mail: managerbadrqnd@gmail.com

**SUBSCRIPTION**
ANNUAL: Rs. 500/-

## ಒಂದು ಹದೀಸಿನಲ್ಲಿ ಪ್ರವಾದಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಅಲ್ಲಾಹನ ಗುಣನಾಮಗಳ ಬಗ್ಗೆ ಹೇಳುತ್ತಾರೆ

ಹಝ್ರತ್ ಅಬೂ ಝರ್(ರ) ವರದಿ ಮಾಡುತ್ತಾರೆ, ಪ್ರವಾದಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಅಲ್ಲಾಹನ ಕಡೆಯಿಂದ ಹೀಗೆ ತಿಳಿಸಿದರು ಅವರು ಹೇಳುತ್ತಾರೆ: ಅಲ್ಲಾಹನು ಹೀಗೆ ನುಡಿದಿದ್ದಾನೆ – ಎಲೈ ನನ್ನ ದಾಸರೇ!! ನಾನು ನನ್ನ ಅಸ್ತಿತ್ವದಲ್ಲಿ ಹಿಂಸೆಯನ್ನು ನಿಷಿದ್ಧಗೊಳಿಸಿದ್ದೇನೆ. ನಾನು ನಿಮ್ಮಲ್ಲಿ ಯಾರನ್ನು ಸರಿಯಾದ ಮಾರ್ಗದಲ್ಲಿ ನಡೆಸಿದ್ದೇನೋ ಅವರ ಹೊರತು ನೀವೆಲ್ಲರು ದಾರಿತಪ್ಪಿದವರಾಗಿದ್ದೀರಿ. ಆದ್ದರಿಂದ ನನ್ನ ಬಳಿ ಮಾರ್ಗದರ್ಶನವನ್ನು ಯಾಚಿಸಿರಿ. ನಾನು ನಿಮಗೆ ಮಾರ್ಗದರ್ಶನ ನೀಡುವೆನು. ಓ ನನ್ನ ದಾಸರೇ!! ನೀವೆಲ್ಲರು ಹಸಿವಿನಲ್ಲಿದ್ದೀರಿ ನಾನು ತಿನ್ನಿಸುವವರನ್ನು ಹೊರತುಪಡಿಸಿ. ಆದ್ದರಿಂದ ನನ್ನಿಂದ ಮಾತ್ರ ಜೀವನಾಧಾರವನ್ನು ಯಾಚಿಸಿರಿ. ನಾನು ನಿಮ್ಮೆಲ್ಲರಿಗೂ ಜೀವನಾಧಾರವನ್ನು ನೀಡುವೆನು. ಓ ನನ್ನ ದಾಸರೇ!! ನೀವೆಲ್ಲರು ನಗ್ನರಾಗಿದ್ದೀರಿ ನಾನು ಒದಗಿಸಿದ ಉಡುಪನ್ನು ಉಡಿಸುವವರನ್ನು ಹೊರತುಪಡಿಸಿ. ಆದ್ದರಿಂದ ನನ್ನಿಂದ ಮಾತ್ರ ಉಡುಪುಗಳನ್ನು ಯಾಚಿಸಿರಿ. ನಾನು ನಿಮಗೆ ಉಡುಪುಗಳನ್ನು ತಲುಪಿಸುವೆನು. ಓ ನನ್ನ ದಾಸರೇ!! ನೀವು ಹಗಲು ರಾತ್ರಿ ತಪ್ಪುಗಳನ್ನು ಮಾಡಿದರೂ ಸಹ ನಾನು ನಿಮ್ಮನ್ನು ಕ್ಷಮಿಸುವೆನು. ಆದ್ದರಿಂದ ನನ್ನಿಂದ ಮಾತ್ರ ಕ್ಷಮಾದಾನವನ್ನು ಯಾಚಿಸಿರಿ. ನಾನು ನಿಮ್ಮನ್ನು ಕ್ಷಮಿಸುವೆನು. ಓ ನನ್ನ ದಾಸರೇ!! ನೀವು ನನಗೆ ಯಾವ ಹಾನಿ ಉಂಟು ಮಾಡಲು ಸಾಧ್ಯವಿಲ್ಲ. ಹಾನಿವುಂಟು ಮಾಡಲು ಬಯಸಿದರೂ ಮಾಡಲು ಸಾಧ್ಯವಿಲ್ಲ. ಅದೇ ರೀತಿ ನೀವು ನನಗೆ ಯಾವ ಲಾಭ ತಲುಪಿಸಲು ಸಾಧ್ಯವಿಲ್ಲ. ಲಾಭ ತಲುಪಿಸಲು ಪ್ರಯತ್ನಿಸಿದರೂ ತಲುಪಿಸಲು ಸಾಧ್ಯವಿಲ್ಲ. ಓ ನನ್ನ ದಾಸರೇ!! ನಿಮ್ಮ ಮುಂದೆ ಬರುವವರು ಮತ್ತು ನಿಮ್ಮ ಪೂರ್ವಜರೂ ಎಲ್ಲರೂ ಉತ್ತಮ ಭಯಭಕ್ತಿವುಳ್ಳವವರಾದರೂ ನನ್ನ ಪ್ರಭುತ್ವದಲ್ಲಿ ಯಾವುದೇ ರೀತಿಯ ವೃದ್ಧಿ ಆಗುವುದಿಲ್ಲ. ಅದೇ ರೀತಿ ಓ ನನ್ನ ದಾಸರೇ!! ನಿಮ್ಮ ಮುಂದೆ ಬರುವವರು ಹಾಗೂ ನಿಮ್ಮ ಪೂರ್ವಜರೂ ಎಲ್ಲರೂ ಎಲ್ಲಂಕ್ಕಿಂತ ಹೆಚ್ಚು ಕೆಟ್ಟ ನಡವಳಿಕೆವುಳ್ಳವವರಾದರೂ ನನ್ನ ಪ್ರಭುತ್ವದಲ್ಲಿ ಯಾವುದೇ ರೀತಿಯ ಹಾನಿವುಂಟು ಮಡಲು ಸಾಧ್ಯವಿಲ್ಲ. ಓ ನನ್ನ ದಾಸರೇ!! ನಿಮ್ಮ ಎಲ್ಲಾ ಪೂರ್ವಜರೂ ಹಾಗೂ ಮುಂದೆ ಬರುವವರೂ ಒಂದು ಮೈದಾನದಲ್ಲಿ ಸೇರಿ ನನ್ನಿಂದ ತಮ್ಮ ಅವಶ್ಯಕತೆಗಳನ್ನು ಭಯಸಿದ್ದರೆ ನಾನು ಎಲ್ಲರ ಅವಶ್ಯಕತೆಗಳನ್ನು ಪೂರೈಸಿದರೂ ಸಹ ನನ್ನ ಖಜಾನೆಯಿಂದ ಒಂದು ಸಮುದ್ರದಲ್ಲಿ ಒಂದು ಸೂಜಿ ಹಾಕಿ ಎತ್ತಿದರೆ ಯಾವ ರೀತಿ ಸಮುದ್ರದ ನೀರು ಕಡಿಮೆ ಆಗುವುದಿಲ್ಲವೋ ಅಷ್ಟು ಕಡಿಮೆ ಆಗುವುದಿಲ್ಲ. ಓ ನನ್ನ ದಾಸರೇ!! ಇದು ನಾನು ಮಾಡಿರುವ ನಿಮ್ಮೆಲ್ಲರ ಕರ್ಮಗಳ ಲೆಕ್ಕಚಾರವಾಗಿದೆ. ನಾನು ಅವುಗಳಿಗೆ ತಕ್ಕ ಪ್ರತಿಫಲ ನೀಡುವೆನು.

**(ಮುಸ್ಲಿಮ್ ಕಿತಾಬುಲ್ ಬರ್ರಿ ವಸ್ಸಿಲ ಬಾಬ್ ತಹ್ರೀಮುಝ್ಝುಲ್ಮ್, ಹದೀಖತುಸ್ಸಾಲಿಹೀನ್ ಹದೀಸ್–12)**

## ತೌಹೀದೆ ಹಖೀಖಿ (ಯಥಾರ್ಥ ಏಕದೇವತ್ವ)

ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು:

ನೆನಪಿರಲಿ ಅಲ್ಲಾಹನು ನಮ್ಮಿಂದ ಬಯಸುವ ಯಥಾರ್ಥ ಏಕದೇವತ್ವ ಯಾವುದೆಂದರೆ ಅದು ನಮ್ಮ ಮುಕ್ತಿಗೆ ಸಂಬಂಧಿಸಿದ್ದಾಗಿದೆ. ಅದೇನೆಂದರೆ ಅಲ್ಲಾಹನನ್ನು ಅವನ ಅಸ್ತಿತ್ವದಿಂದ, ಅದು ವಿಗ್ರಹವಾಗಲಿ, ಮನುಷ್ಯರಾಗಲಿ, ಸೂರ್ಯನಾಗಲಿ, ಚಂದ್ರನಾಗಲಿ, ಅಥವಾ ಸ್ವಯಂ ತನ್ನ ಆತ್ಮ ಅಥವಾ ತನ್ನ ಪ್ರಯತ್ನಗಳು ಮತ್ತು ಯಾವುದೇ ತರಹದ ಮೋಸಗಾರಿಕೆಯಿಂದ ಹೊರತಾಗಿರಬೇಕು. ಅವನ ಸಮಕ್ಷಮ ಯಾರನ್ನು ಸಹ ಸರ್ವ ಸಮರ್ಥನೆಂದು ಭಾವಿಸದಿರುವುದು. ಯಾರು ಸಹ ಅವನ ಹೊರತು ಅನ್ನದಾತನಲ್ಲ, ಮಾನ ಅಪಮಾನ ಮಾಡುವವನಲ್ಲ, ಯಾರು ಸಹಭಾಗಿ, ಸಹಯೋಗಿ ಅಲ್ಲ, ಅಲ್ಲದೆ ತನ್ನ ಪ್ರೀತಿ ಅವನೊಂದಿಗೆ ಮಾತ್ರ ಬಾಗಬೇಕು, ಅವನಿಂದ ಮಾತ್ರ ತಮ್ಮೆಲ್ಲ ಭರವಸೆಗಳನ್ನು ಹೊಂದಬೇಕು, ಅವನನ್ನು ಮಾತ್ರ ಭಯಪಡಬೇಕು. ಅಂತೂ ಯಾವುದೇ ಏಕದೇವತ್ವ (ತೌಹೀದ್) ಈ ಮೂರು ವಿಧಗಳ ಹೊರತಾಗಿ ಪರಿಪೂರ್ಣವಾಗಿರಲು ಸಾಧ್ಯವಿಲ್ಲ. ಮೊದಲನೆಯದಾಗಿ ಅಸ್ತಿತ್ವದ ನೆಲೆಯಲ್ಲಿ ಏಕತ್ವ ಅಂದರೆ ಅವನ ಅಸ್ತಿತ್ವದ ಎದುರಿನಲ್ಲಿ ಎಲ್ಲ ಅಸ್ತಿತ್ವಗಳು ಶೂನ್ಯ ಮಾತ್ರ ಎಂದು ಪರಿಗಣಿಸಬೇಕು. ಮತ್ತು ಎಲ್ಲವೂ ನಾಶಹೊಂದುವಂತಹದ್ದು ಹಾಗೂ ಅವರ ಅಸ್ತಿತ್ವ ಮಿಥ್ಯ ರೂಪದ್ದು ಎಂದು ಪರಿಗಣಿಸಬೇಕು, ಎರಡನೇಯದಾಗಿ ಗುಣನಾಮಗಳ ನೆಲೆಯಲ್ಲಿ ಏಕತ್ವ, ಅಂದರೆ ಪಾಲನೆ ಪೋಷಣೆ ಮತ್ತು ದೇವತ್ವ ಗುಣನಾಮಗಳು ಅವನಲ್ಲಿ ಮಾತ್ರ ಸರ್ವಸ್ವವಾಗಿದೆ ಅವನ ಆಧೀನ ಕರ್ಮಚಾರಿಯಂತೆ ದೃಢ ವಿಶ್ವಾಸ ಹೊಂದಬೇಕು, ಮೂರನೇಯದಾಗಿ ತನ್ನ ಪ್ರೀತಿ ಮತ್ತು ನಿಷ್ಠೆ ಪ್ರಮಾಣಿಕತೆಯ ನೆಲೆಯಲ್ಲಿ ಏಕತ್ವ ಅಂದರೆ ಪ್ರೀತಿ ಸ್ನೇಹ ಇತ್ಯಾದಿ ಎಲ್ಲ ಗುಣಗಳಲ್ಲಿ ಆರಾಧನೆಯಲ್ಲಿ ಅವನ ಸಹಭಾಗಿಯನ್ನಾಗಿ ಮಾಡಬಾರದು ಬದಲು ಅವನಲ್ಲ ಅವನಿಗಾಗಿಯೇ ಸಮರ್ಪಿತರಾಗಿರಬೇಕು.

**(ಸಿರಾಜುದ್ದೀನ್ ಈಸಾಈ ಕೆ ಚಾರ್ ಸವಾಲೋಂ ಕೆ ಜವಾಬ್, ರೂಹಾನಿ ಖಝಾಈನ್, ಸಂಪುಟ–12, ಪುಟ–349)**

Printed & Published by: Jameel Ahmed Nasir On Behalf Of Nigran Board Of Badar, Name Of Owner: Nigran Board Of Badar. And Printed at Fazle-Umar Printing Press, Harchowal Road, Qadian. Dist. Gurdaspur-143516, Punjab. And Published at Office Of Weekly Badar Mohalla Ahmadiyya, Qadian. Dist. Gurdaspur-143516, Punjab. INDIA. Editor: Tariq Ahmed Idris.